# ಸಂವಾದ

ಫೆಬ್ರವರಿ ೨೦೦೪
ರೂ. ೨೦/-

- ಜೊತೆಗಿರುವನೇ ಚಂದಿರ ?
- ನೀರಿನ ಖಾಸಗೀಕರಣ
- ಬಿಎಸ್ಪಿ ಮುಂದಿರುವ ಆಯ್ಕೆಗಳು

## ಬಸವಣ್ಣನವರ ಪರ್ಯಾಯ ಸಮಾಜ

# ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೪
ಫೆಬ್ರವರಿ ೨೦೦೪

ಸಂಪಾದಕ :
ಇಂದೂಧರ ಹೊನ್ನಾಪುರ



ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ
ಕೆ.ಪಿ. ದೊಡ್ಡಿ ಶಿವರಾಂ



ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
ದೂರವಾಣಿ: ೨೩೨೮೭೯೪೩ / ೨೩೨೮೧೬೬೭

PRINTED AND PUBLISHED BY
**S.R. GOVINDU**
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
PHONE : 23287943, 23281667

**EDITOR :**
**INDUDHARA HONNAPURA**


## ಒಳಪುಟಗಳಲ್ಲಿ...




- ❑ ಪತ್ರಗಳು ೩
- ❑ ಮೇರಾ ಭಾರತ್ ಮಹಾನ್ ೪
- ❑ ಅಂತರಂಗ ೫
- ❑ ಅಂಬೇಡ್ಕರ್: ಗಾಂಧೀಕರಣದ ಅಪಾಯಗಳು ೬
  - ○ ಸಣ್ಣಂಗಿ ರಾಜ
- ❑ ಜೊತೆಗಿರುವನೇ ಚಂದಿರ ೮
  - ○ ಸುಜಾತ ಕುಮಟಾ





- ❑ ನೀರಿನ ಖಾಸಗೀಕರಣ ೧೦
  - ○ ಮ.ಶ್ರೀ ಮುರಳಿಕೃಷ್ಣ
- ❑ ಬಸವಣ್ಣನವರ ಪರ್ಯಾಯ ಸಮಾಜ ೧೨
  - ○ ರಂಜಾನ್ ದರ್ಗಾ
- ❑ ದ್ವೇಷ ಬಿಟ್ಟು ದೇಶ ಕಟ್ಟು ೧೬
  - ○ ಪ್ರೊ॥ ಜಿ. ಎಚ್. ನಾಯಕ್
- ❑ ಪೂನಾ ಒಡಂಬಡಿಕೆ ೧೮
  - ○ ಸಿ. ಹರಕುಮಾರ್
- ❑ ದಲಿತರ ಇತಿಹಾಸ, ಸಂಸ್ಕೃತಿ, ಪರಂಪರೆ ೨೦
  - ○ ಎಸ್.ಎಸ್. ಹಿರೇಮಠ
- ❑ ಮಧ್ಯರಾತ್ರಿಯಲ್ಲಿ ಹುಟ್ಟಿದ ಮಗು ೨೬
  - ○ ವೈ. ಮರಿಸ್ವಾಮಿ
- ❑ ಸ್ತ್ರೀಸಮುದಾಯಗಳು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು ೨೮
  - ○ ಡಿ. ಡೊಮಿನಿಕ್
- ❑ ಧರ್ಮಗಳ ಮೂಲ ಹುಡುಕುತ್ತಾ... ೩೨
  - ○ ಸ್ವಾಮಿ ವಿವೇಕಾನಂದ
- ❑ ಶನಿದೇವ ಮತ್ತು ಕಾಗೆ ಪುರಾಣ ೩೪
  - ○ ರಮೇಶ್ ಸಂಕ್ರಾಂತಿ
- ❑ ಬಿಎಸ್ಪಿ ಮುಂದಿರುವ ಆಯ್ಕೆಗಳು ೩೬
  - ○ ಚಂದ್ರಭಾನ್ ಪ್ರಸಾದ್

ಕವನಗಳು :


- ❑ ಕ್ರಿಯೆ-ಪ್ರ(ತಿ)ಕ್ರಿಯೆ ೨೫
- ❑ ಕಗ್ಗೊಲೆಯ ಅಂಗಳದಲ್ಲಿ ೩೫
- ❑ ಕತ್ತಲೆ ಗರ್ಭದೊಳಗಿನ ೪೫



*ಮುಖಪುಟ ಕಲೆ: ಎಂ.ಬಿ. ಪಾಟೀಲ್, ವಿನ್ಯಾಸ: ರಾಥೋಡ್*


(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

# ನಕ್ಸಲೀಯರ ಹಾದಿ, ನ್ಯಾಯಕ್ಕೆ ದಾರಿಯೇ?

ಪ್ರೀತಿಯ ಸಂಪಾದಕರೇ,

ಪಾರ್ವತಿ ಮತ್ತು ಹಾಜಿಮರನ್ನು ಕೊಂದ ಸರ್ಕಾರಕ್ಕೆ ಯಾವ ಶಿಕ್ಷೆ ವಿಧಿಸಬೇಕು ಹಾಗೂ ಯಾರು ಶಿಕ್ಷೆ ವಿಧಿಸಬೇಕೆಂದು ತುಂಬಾ ಚಿಂತಿಸುತ್ತಿದ್ದೇನೆ. ಪಾರ್ವತಿ, ಹಾಜಿಮಾರ ದಾರಿಯಿಂದ ಇಂಥ ಕೊಲೆಗಡುಕ ಸರ್ಕಾರಗಳನ್ನು ಶಿಕ್ಷಿಸಲು ಸಾಧ್ಯವಿಲ್ಲ ಅನ್ನಿಸುತ್ತಿದೆ. ಸೇಡಿಗೆ-ಸೇಡು ಎಂದೂ ಯಾರಿಗೂ ನ್ಯಾಯ ನೆಮ್ಮದಿಯನ್ನು ಒದಗಿಸಲಾರದು. ಒದಗಸಿದ ಇತಿಹಾಸ ನಮಗಂತೂ ತಿಳಿದಿಲ್ಲ.

ನಕ್ಸಲೀಯರ ಬಗೆಗೆ ನನಗೆ ತುಂಬಾ ಪ್ರೀತಿ-ಅನುಕಂಪ ಇದೆ. ಅವರ ತ್ಯಾಗಕ್ಕೆ ಎಣೆ ಇಲ್ಲ. ಆದರೆ ಅವರು ತಮ್ಮ ಶ್ರಮ- ಶಕ್ತಿಯನ್ನು ಇನ್ನೂ ರಚನಾತ್ಮಕವಾಗಿ ಪ್ರಜಾಸತ್ತಾತ್ಮಕವಾಗಿ ಬಳಸಿಕೊಂಡರೆ ಹೊಸದನ್ನು ಸಾಧಿಸಬಹುದು. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಜನರನ್ನು ಎಚ್ಚರಿಸಿ ಭಂಡ ಸರ್ಕಾರಗಳನ್ನು ಕಿತ್ತೆಸೆದು, ಜನಪರ ಸರ್ಕಾರ ರಚಿಸಿದರೆ ಎಲ್ಲ ಬಡವರೂ ನೆಮ್ಮದಿಯಾಗಿರಬಹುದು.

## ಪತ್ರಾಗಾರ

ಸಶಸ್ತ್ರ ಹೋರಾಟವೇ ಉತ್ತರವೆಂದು ಹೊರಟರೆ ಅದಕ್ಕೆ ಕೊನೆಮೊದಲಿಲ್ಲವಾಗುತ್ತದೆ. ನೋವು ದುಃಖ ಸದಾ ಬಡವರ ಪಾಲಿಗೆ ಇರುತ್ತದೇನೋ. ಈ ಬಗೆಗೆ ನಕ್ಸಲೀಯ ಬಂಧುಗಳು ಯೋಚಿಸಿದರೆ ಒಳ್ಳೆಯದು. ಪಾರ್ವತಿ, ಹಾಜಿಮಾರಿಗೆ ನನ್ನ ತುಂಬು ಹೃದಯದ ಶ್ರದ್ಧಾಂಜಲಿಗಳು.

**ಕಿರಣ್ ಪಾಟೀಲ, ಜಮಖಂಡಿ**

## ಬಿ.ಎಸ್.ಪಿ. ದಾರಿ

ಗೌರವಾನ್ವಿತ ಸಂಪಾದಕರೇ,

ಚಂದ್ರಭಾನ್ ಪ್ರಸಾದರ 'ದಲಿತ್ ಡೈರಿ' ಚೆನ್ನಾಗಿ ಮೂಡಿ ಬರುತ್ತಿದೆ. ಬಹುಜನ ಸಮಾಜ ಪಕ್ಷ ತನ್ನ ಉದ್ದೇಶಗಳಿಗೆ ಅನುಗುಣವಾಗಿ ನಡೆಯುತ್ತಿದೆಯೇ ಎಂಬ ಸಂಶಯ ಈಗೀಗ ನನಗೆ ಉಂಟಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಅಧಿಕಾರ ಹಿಡಿಯಲು ಮತ್ತು ಉಳಿಸಿಕೊಳ್ಳಲು ಅದು ಹಿಡಿದ ಹಾದಿ ಸರಿಯಾದದ್ದೇನಲ್ಲ. ಆದರೂ ದಲಿತರಿಗೆ ಅದಕ್ಕಿಂತ ಉತ್ತಮ ಪಕ್ಷ ಬೇರೆ ಯಾವುದಿದೆ? ಎಲ್ಲ ದಲಿತರೂ ಅದರಲ್ಲಿ ಸೇರಿ ಅದನ್ನು ಒಳ್ಳೆ ದಾರಿಯಲ್ಲಿ ಮುನ್ನಡೆಸಬೇಕು ಎಂಬುದೇ ನನ್ನ ವಿನಂತಿ.

**ಆರ್. ರಾಜಶೇಖರ್, ಆನೇಕಲ್, ಬೆಂಗಳೂರು**

## ಚಿಂತನೆ ಬದಲಾಗಬೇಕು

ಗೌರವಾನ್ವಿತ ಇಂದೂಧರ ಅವರಿಗೆ,

ನವೆಂಬರ್ ಮತ್ತು ಡಿಸೆಂಬರ್ 'ಸಂವಾದ'ದಲ್ಲಿ ಪ್ರಕಟವಾದ ಬಿ.ವಿ. ವೀರಭದ್ರಪ್ಪನವರ ವಿಚಾರಗಳು ಅಂಬೇಡ್ಕರ್ ಚಿಂತನೆಯ ನೆಲೆಯಲ್ಲಿ ದಲಿತರು ಕಂಡುಕೊಳ್ಳಬಹುದಾದ ಹೊಸ ದಾರಿಗಳನ್ನು ತೆರೆದು ತೋರಿಸಿವೆ.

ಖಾಸಗೀಕರಣ, ಜಾಗತೀಕರಣ, ಕೋಮುವಾದೀಕರಣ ಮೊದಲಾದ ಅಮಾನುಷ ಬೆಳವಣಿಗೆಗಳ ನಡುವೆ ದಲಿತರು ಬದುಕುವ ದಾರಿ ಎಂದರೆ ಆರ್ಥಿಕ ಚಟುವಟಿಕೆಗಳಿಗೆ ತೊಡಗಿಸಿಕೊಳ್ಳುವುದು. ಸರ್ಕಾರದ ಮುಂದೆ ಕೈಕಟ್ಟಿ ಇನ್ನೂ ಶತಮಾನ ನಿಂತರೂ ದಲಿತರಿಗೆ ಏನೂ ಸಿಕ್ಕುವುದಿಲ್ಲ. ಅಂಬೇಡ್ಕರರ ಮುಂದಾಲೋಚನೆಗಳನ್ನು ದಲಿತರು ಭಾವನಾತ್ಮಕವಾಗಿ ತಪ್ಪು ವ್ಯಾಖ್ಯಾನ ಮಾಡುತ್ತಾ ತಮಗೆ ತಾವೇ ಗೋರಿ ತೋಡಿಕೊಳ್ಳುತ್ತಿದ್ದಾರೆ.

ದಲಿತ ಬುದ್ಧಿಜೀವಿ, ಚಿಂತಕರು, ಹೋರಾಟಗಾರರು ಇದನ್ನು ಮನಗಾಣದಿದ್ದರೆ ದೊಡ್ಡ ಅಪರಾಧಿಗಳಾಗುತ್ತಾರೆ.

**ಶಶಿಕಲಾ ನಾಗರಾಜಯ್ಯ, ತುಮಕೂರು**

## ಅರಿವಿನ ವಿಸ್ತಾರ ಬಯಸುವ ಎಲ್ಲರ ಕೈಪಿಡಿ

ಹಿರಿಯರಾದ ಇಂದೂಧರ ಹೊನ್ನಾಪುರ ಅವರಿಗೆ ವಂದನೆಗಳು,

'ಸಂವಾದ' ನಾನು ಕಂಡ ಅತ್ಯಂತ ಉತ್ತಮ ಪತ್ರಿಕೆಯಾಗಿದೆ. ವಿದ್ಯಾರ್ಥಿಯಾಗಿದ್ದಾಗ ನಿಮ್ಮ 'ಸುದ್ದಿಸಂಗಾತಿ' ಓದುತ್ತಿದ್ದೆ. 'ಸಂವಾದ', 'ಸಂಗಾತಿ'ಗಿಂತಲೂ ಹೆಚ್ಚಿನ ತೃಪ್ತಿಯನ್ನು ನನಗೆ ತಂದುಕೊಟ್ಟಿದೆ. ಬಹುಷಃ ಮಾರುಕಟ್ಟೆಯಲ್ಲಿ ಉಳಿದುಕೊಳ್ಳಲು ನೀವು ಆಗ ಹೆಣಗಾಡುತ್ತಿದ್ದಿರೇನೋ. 'ಸಂವಾದ'ದಲ್ಲಿ ಆ ಯಾವ ಒತ್ತಡಗಳೂ ಇಲ್ಲ ಅನಿಸುತ್ತಿದೆ. ಅರಿವಿನ ವಿಸ್ತಾರ ಬಯಸುವ ಎಲ್ಲರ ಕೈಪಿಡಿಯಾಗಿ 'ಸಂವಾದ' ಬೆಳೆಯುತ್ತಿದೆ. ತಮಗೆ ಹಾಗೂ ಪ್ರಕಾಶನದ ಹೊಣೆ ಹೊತ್ತಿರುವ 'ಸ್ಫೂರ್ತಿಧಾಮ'ಕ್ಕೆ ಅನಂತ ವಂದನೆಗಳು,

ಪ್ರೀತಿಯಿಂದ

**ಡಾ|| ಕೆ.ಆರ್. ನಾರಾಯಣಸ್ವಾಮಿ, ಬೆಂಗಳೂರು**

## ಝೆನ್ ಝಲಕ್

ಪ್ರೀತಿಯ ಇಂದೂಧರ ಅವರೆ,

ಝೆನ್ ಕಥೆಗಳು ನನ್ನನ್ನು ಮೂಕಳನ್ನಾಗಿಸಿವೆ. ಪ್ರತಿ ಕಥೆ ಅಂತರಾಳಕ್ಕಿಳಿದು ನನ್ನ ವಿವೇಚನಾ ಶಕ್ತಿಯನ್ನು ನಡುಗಿಸುತ್ತಿದೆ. ಪ್ರಕಟಿಸುತ್ತಿರುವ ನಿಮಗೆ, ಕನ್ನಡಕ್ಕೆ ತಂದ ಸುಬ್ಬಣ್ಣ ಅವರಿಗೆ ಧನ್ಯವಾದಗಳು.

**ಬಿ.ಆರ್. ಸುಮಿತ್ರ, ಬೆಂಗಳೂರು**

## ದಲಿತ ಚಳವಳಿಯ ಇನ್ನೊಂದು ಹೆಸರೇ ಬಸವ ಚಳವಳಿ

ಸಂಪಾದಕರಿಗೆ ವಂದನೆಗಳು,

ಡಾ|| ಬಸವರಾಜ ಸಬರದ ಅವರ 'ಬಸವ ಚಳವಳಿಯೊಳಗಿನ ದಲಿತ ಚಳವಳಿ' ಅತ್ಯುತ್ತಮವಾಗಿದೆ. ನಿಜವಾಗಿ ಹೇಳಬೇಕೆಂದರೆ ಬಸವ ಚಳವಳಿ ಎಂಬುದೇ ಇಲ್ಲ. ಅದು ಪೂರ್ಣಪ್ರಮಾಣದ ದಲಿತ ಚಳವಳಿ. ಕೋಮುವಾದಿಗಳ, ಪುರೋಹಿತರ ಕುತಂತ್ರಕ್ಕೆ ಬಲಿಯಾದ ವೀರಶೈವರು ಅದನ್ನು ಜಾತಿ ಚಳವಳಿ ಮಾಡಿಕೊಂಡಿದ್ದಾರೆ. ಅದಕ್ಕೆ ವಿಷಾದ ಪಡಬೇಕಷ್ಟೆ.

ಬಸವಣ್ಣನವರ ಉದಾತ್ತ ಆದರ್ಶಗಳನ್ನು ಸಮಾಜದಲ್ಲಿ ಪ್ರತಿಬಿಂಬಿಸಬೇಕಾದ ವೀರಶೈವ ಮಠಗಳು, ಜಾತಿವ್ಯವಸ್ಥೆಯ ಗೂಡಾಗಿವೆ. ವೀರಶೈವರಲ್ಲೂ ಪುರೋಹಿತಶಾಹಿಯ ಎಲ್ಲ ಅಸಮಾನತೆಗಳು ಯಥಾವತ್ತಾಗಿ ಮುಂದುವರಿದಿವೆ. ಮೇಲು-ಕೀಳು ಎಂಬ ತತ್ವವೇ ಇಂಥ ಮಠಗಳ ಆಸ್ತಿಯಾಗಿದ್ದು ಬಸವಣ್ಣ ಬೀದಿಪಾಲಾಗಿದ್ದಾರೆ.

ಬಸವಣ್ಣನವರ ಬದುಕು ಹಾಗೂ ಆದರ್ಶಗಳನ್ನು ಇನ್ನಾದರೂ ವೀರಶೈವರು ಪಾಲಿಸಬೇಕೆಂದು ವಿನಂತಿಸುತ್ತೇನೆ.

**ಗುರುಶಾಂತಪ್ಪ, ನಂಜನಗೂಡು**


## ಸಂವಾದ ಚಂದಾ ವಿವರ

| ಬಿಡಿ ಪ್ರತಿ ರೂ. ೨೦/- | ೧ ವರ್ಷಕ್ಕೆ | ೩ ವರ್ಷಕ್ಕೆ | ೫ ವರ್ಷಕ್ಕೆ |
|---|---|---|---|
| ೧.ವಿದ್ಯಾರ್ಥಿಗಳು/ ಕಾರ್ಯಕರ್ತರಿಗೆ | ರೂ. ೧೦೦/- | ರೂ. ೩೦೦/- | ರೂ. ೫೦೦/- |
| ೨.ನೌಕರರು ಮತ್ತು ವೃತ್ತಿಪರರಿಗೆ | ರೂ. ೨೦೦/- | ರೂ. ೫೦೦/- | ರೂ. ೮೦೦/- |
| ೩.ಸಂಘ-ಸಂಸ್ಥೆಗಳು, ಉದ್ಯಮಿಗಳಿಗೆ | ರೂ. ೨೪೦/- | ರೂ. ೬೦೦/- | ರೂ. ೧೦೦೦/- |
| ೪.ವಿಶೇಷ ಹಿತೈಷಿ ಚಂದಾದಾರರಿಗೆ | ರೂ. ೫೦೦/- | ರೂ. ೧೫೦೦/- | ರೂ. ೨೫೦೦/- |

ಆಜೀವ ಚಂದಾ ರೂ. ೫,೦೦೦/-, ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು.

# ಬಗರ್‌ಹುಕುಂ ರೈತನಿಗೆ ಥಳಿತ–ಕೊಟ್ಟಿಗೆ ದಹನ

**ಶಿವಮೊಗ್ಗ, ಡಿ. ೧೪-** ಬಗರ್‌ಹುಕುಂ ಜಾಗದ ವಿವಾದದಲ್ಲಿ ಬಡರೈತನೋರ್ವನಿಗೆ ಗ್ರಾಮಸ್ಥರ ಒಂದು ಗುಂಪು ತೀವ್ರವಾಗಿ ಥಳಿಸಿ, ಬಳಿಕ ರಾತ್ರಿ ಕೊಟ್ಟಿಗೆ ಮತ್ತು ಹುಲ್ಲಿನ ಬಣವೆಯನ್ನು ಸುಟ್ಟು ಹಾಕಿದ ಘಟನೆ ಭದ್ರಾವತಿ ತಾಲೂಕಿನ ಹುಣಸೆಘಟ್ಟದಲ್ಲಿ ನಡೆದಿದೆ.

ತೀವ್ರ ಹೊಡೆತ ತಿಂದ ರೈತ ವಿರೂಪಾಕ್ಷಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಭದ್ರಾವತಿ ತಾಲೂಕು ತಹಶೀಲ್ದಾರ್ ಗಣಪತಿಭಟ್ಟ ಮತ್ತು ಆರ್.ಎಫ್.ಓ. ಪುಟ್ಟೇಗೌಡ ಸಮ್ಮುಖದಲ್ಲಿಯೇ ರೈತನನ್ನು ಗ್ರಾಮಸ್ಥರು ಥಳಿಸಿದ್ದು ಇದಕ್ಕೆ ಶಾಸಕರ ಚಿತಾವಣೆಯೇ ಕಾರಣ ಎಂದು ರಾಜ್ಯ ರೈತಸಂಘ ಆರೋಪಿಸಿದೆ.

**ಘಟನೆ ಹಿನ್ನೆಲೆ:** ಹುಣಸೆಘಟ್ಟದಲ್ಲಿ ವಿರೂಪಾಕ್ಷಪ್ಪ ಎಂಬ ರೈತರು ೧.೨೦ ಎಕರೆ ಜಾಗದಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದರು. ಈ ಜಾಗದ ಕುರಿತು ವಿವಾದ ಉಂಟಾಗಿ ನ್ಯಾಯಾಲಯದ ಮೆಟ್ಟಲೇರಿತ್ತು.

ವಿವಾದ ನ್ಯಾಯಾಲಯದಲ್ಲಿ ಇರುವಾಗಲೇ ಗುರುವಾರ ಶಾಸಕರ ಆದೇಶದ ಮೇರೆಗೆ ತಹಶೀಲ್ದಾರ್ ಮತ್ತು ಆರ್.ಎಫ್.ಓ. ಸ್ಥಳಕ್ಕೆ ಬಂದು ಗ್ರಾಮಸ್ಥರ ಸಮ್ಮುಖದಲ್ಲಿ ತಕ್ಷಣ ಎಲ್ಲವನ್ನೂ ಬಿಟ್ಟು ನಡೆಯುವಂತೆ ವಿರೂಪಾಕ್ಷಪ್ಪನಿಗೆ ಆದೇಶ ನೀಡಿದರು. ಇದನ್ನು ವಿರೂಪಾಕ್ಷಪ್ಪ ನಿರಾಕರಿಸಿದಾಗ ಹೊಡೆಯುವಂತೆ ಗ್ರಾಮಸ್ಥರಿಗೆ ಹೇಳಿದರು. ಗ್ರಾಮಸ್ಥರು ತಹಶೀಲ್ದಾರ್ ಎದುರಿನಲ್ಲಿಯೇ ವಿರೂಪಾಕ್ಷಪ್ಪನನ್ನು ತೀವ್ರವಾಗಿ ಥಳಿಸಿದರು.

ತೀವ್ರವಾಗಿ ಗಾಯಗೊಂಡ ವಿರೂಪಾಕ್ಷಪ್ಪನನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಶುಕ್ರವಾರ ಬೆಳಗಿನ ಜಾವ ಗ್ರಾಮದ ಗುಂಪು ವಿರೂಪಾಕ್ಷಪ್ಪನ ಮನೆಗೆ ಬಂದು ಕೊಟ್ಟಿಗೆ ಮತ್ತು ಹುಲ್ಲಿನ ಗೊಣಬೆಗೆ ಬೆಂಕಿ ಹಾಕಿತು. ತಕ್ಷಣ ಅಗ್ನಿಶಾಮಕ ದಳದವರು ಆಗಮಿಸಿ ಹೆಚ್ಚಿನ ಅನಾಹುತವನ್ನು ತಪ್ಪಿಸಿದರು ಎಂದು ವಿರೂಪಾಕ್ಷಪ್ಪನ ಪತ್ನಿ ಗಾಯತ್ರಿ ಭದ್ರಾವತಿ ಗ್ರಾಮಾಂತರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ತಮ್ಮ ಪತಿಯನ್ನು ಥಳಿಸಿದ ಘಟನೆ ಹಿನ್ನೆಲೆಯಲ್ಲಿ ತಮ್ಮ ಮನೆ ಬಳಿ ಪೊಲೀಸ್ ಕಾವಲನ್ನು ಹಾಕಲಾಗಿತ್ತು. ಆದಾಗೂ ಈ ಘಟನೆ ನಡೆದಿದೆ ಎಂದು ಹೇಳಿರುವ ಅವರು ಕೃಷ್ಣಪ್ಪ, ಅಬ್ಬಾಸ್, ಯೋಗೇಶ್‌ಗೌಡ, ಕಾಂತಗೌಡ, ಚಂದ್ರಗೌಡ ಅವರುಗಳ ಮೇಲೆ ದೂರು ನೀಡಿದ್ದಾರೆ.

(ಉದಯವಾಣಿ)

## ಜಾತಿ ನಿಂದನೆ: ಟಿಡಿಪಿ ಶಾಸಕನಿಗೆ ಜೈಲು

**ಮಚಲಿಪಟ್ಟಣ, ಡಿ. ೧೮ (ಯುಎನ್ಐ)-** ಆಡಳಿತ ಪಕ್ಷ ಟಿಡಿಪಿಯ ಶಾಸಕ ಕೋಟಗಿರಿ ಹನುಮಂತರಾವ್ ಅವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ (ತಡೆ) ಕಾಯ್ದೆಯಡಿಯಲ್ಲಿ ವಿಶೇಷ ನ್ಯಾಯಾಲಯವು ಎರಡು ವರ್ಷಗಳ ಸಾದಾ ಜೈಲು ಶಿಕ್ಷೆ ಮತ್ತು ೨,೫೦೦ ರೂಪಾಯಿ ದಂಡ ವಿಧಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ವ್ಯಕ್ತಿ ಸುಬ್ರಾಯ ಪ್ರಸಾದ್ ಅವರಿಗೆ ಬುಧವಾರ ಶಿಕ್ಷೆ ವಿಧಿಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ದೊರೆಸ್ವಾಮಿ, ಹೈಕೋರ್ಟ್‌ಗೆ ಮೊರೆಹೋಗಲು ರಾವ್‌ಗೆ ಡಿಸೆಂಬರ್ ೩೦ರವರೆಗೆ ಜಾಮೀನು ನೀಡಿದ್ದಾರೆ. ಈ ಶಾಸಕರು ನಾಲ್ಕು ಬಾರಿ ದಲಿತರನ್ನು ಅವರ ಜಾತಿ ಹೆಸರು ತೆಗೆದು ನಿಂದಿಸಿದ್ದರ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡಲಾಗಿತ್ತು.

(ಪ್ರಜಾವಾಣಿ)

## ದಲಿತ-ಒಕ್ಕಲಿಗರ ಸಂಘರ್ಷ

**ಹಾಸನ, ಡಿ.೩೦-** ಗ್ರಾಮದಲ್ಲಿನ ಎರಡು ಎಕರೆ ಗ್ರಾಮ ಠಾಣಾ ಜಾಗ ಸಂಬಂಧ ದಲಿತರು ಮತ್ತು ಒಕ್ಕಲಿಗರ ನಡುವೆ ಸೋಮವಾರ ರಾತ್ರಿ ಘರ್ಷಣೆ ಉಂಟಾಗಿ ಪರಸ್ಪರ ಮನೆಗಳ ಮೇಲೆ ಕಲ್ಲು ತೂರಿರುವ ಪ್ರಕರಣ ಚಿಕ್ಕಬೆಳತಿ ಗ್ರಾಮದಲ್ಲಿ ನಡೆದಿದೆ.

(ಕನ್ನಡಪ್ರಭ)




## ರಾಜಸ್ತಾನದಲ್ಲಿ ಇನ್ನೂ ದಲಿತರಿಗೆ ದೇಗುಲ ಪ್ರವೇಶ ನಿಷೇಧ

**ಜೈಪುರ, ಜ ೧೩ (ಪಿಟಿಐ)-** ರಾಜಸ್ತಾನದ ನಾಥದ್ವಾರದಲ್ಲಿರುವ ಪ್ರಸಿದ್ಧ ಶ್ರೀನಾಥಜೀ ದೇಗುಲದೊಳಗೆ ಸವರ್ಣೀಯರಿಂದ ದಲಿತ ರಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ ಎಂದು ದಲಿತ ಸಂಘಟನೆಯೊಂದು ಆರೋಪಿಸಿದೆ.

ಮಾನವ ಹಕ್ಕುಗಳ ದಲಿತ ಸಂಸ್ಥೆಯ ೩೫ ಮಂದಿ ಸ್ವಯಂ ಸೇವಕರು ಜನವರಿ ೨ರಂದು ಈ ದೇವಸ್ಥಾನಕ್ಕೆ ದರ್ಶನಾರ್ಥಿಗಳಾಗಿ ತೆರಳಿದಾಗ ಉಚ್ಚ ವರ್ಗದ ಹಿಂದುಗಳು ಅವರನ್ನು ದೇಗುಲ ಪ್ರವೇಶಿಸದಂತೆ ತಡೆದರು ಎಂದು ಸಂಘಟನೆಯ ಸಂಚಾಲಕ ಪಿ.ಎಲ್. ಮಿಮ್ರೋಥ್ ಇಲ್ಲಿ ಇಂದು ವರದಿಗಾರರೆದುರು ದೂರಿದರು.

ನಾಥದ್ವಾರ ಪಟ್ಟಣದ ಮೂಲಕ ತೆರಳು ತ್ತಿದ್ದ ದಲಿತ ಸಂಘಟನೆಯ ಕಾರ್ಯಕರ್ತರು ಶ್ರೀನಾಥನ ದರ್ಶನ ಪಡೆಯಲು ಬಯಸಿ ದಾಗ ಅವರಿಗೆ ಪ್ರವೇಶ ನಿರಾಕರಿಸಿಲಾಯಿತು. ದರ್ಶನ ಪಡೆಯುವುದಾಗಿ ಅವರೆಲ್ಲ ಸ್ಥಳೀಯ ಪೊಲೀಸರಿಗೆ ಮುಂಚಿತವಾಗಿಯೇ ತಿಳಿಸಿದ್ದರು ಎಂದು ಅವರು ಹೇಳಿದರು.

(ಪ್ರಜಾವಾಣಿ)

## ನಿಂದನೆಯ ಮಾತು: ಮಕ್ಕಳಿಗೆ ವಿಷ ನೀಡಿ ತಾಯಿ ಆತ್ಮಹತ್ಯೆ

**ನೆಲಮಂಗಲ, ಡಿ. ೬-** ನೆರೆಹೊರೆಯವರ ನಿಂದನೆ ಮಾತು ಕೇಳಲಾರದೆ ನೊಂದು ತನ್ನ ಮಕ್ಕಳಿಗೆ ವಿಷ ನೀಡಿದ ತಾಯಿ ಸಾವಿಗೆ ಶರಣಾಗಿರುವ ಘಟನೆ ತಾಲೂಕಿನ ದಾಸೇನಹಳ್ಳಿಯಿಂದ ವರದಿಯಾಗಿದೆ. ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವವರನ್ನು ಮಂಜುಳ(೩೪), ಮೋಹನ್(೮) ಮತ್ತು ಪವಿತ್ರ(೨) ಎಂದು ಗುರ್ತಿಸಲಾಗಿದೆ.

ಮೃತ ಮಂಜುಳ ಅವರನ್ನು ಎದುರು ಮನೆಯವರು ಪ್ರತಿ ನಿತ್ಯ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರೆನ್ನಲಾಗಿದೆ. ಮಗ ಮೋಹನ್ ಎರಡನೇ ತರಗತಿಯಲ್ಲಿ ಓದುತ್ತಿದ್ದು ಊಟ ನೀಡುವ ನೆಪದಲ್ಲಿ ಕರೆ ತಂದು ಟೀಯಲ್ಲಿ ವಿಷ ಬೆರೆಸಿ ಕುಡಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

(ಕನ್ನಡ ಪ್ರಭ)

## ವರದಕ್ಷಿಣೆ ಹಿಂಸೆ ವಿರುದ್ಧ ಸಿಡಿದೆದ್ದ ಮಹಿಳೆ

**ಹುಬ್ಬಳ್ಳಿ:** ವರದಕ್ಷಿಣೆ ಕಿರುಕುಳ ತಾಳಲಾರದೇ ಸಿಡಿದೆದ್ದ ಮಹಿಳೆಯೊಬ್ಬರು ಪ್ರಾಣಾಪಾಯದಿಂದ ಪಾರಾಗಿ ಬಂದು ಪೊಲೀಸ್ ಠಾಣೆಗೆ ದೂರು ನೀಡುವ ಮೂಲಕ ಸಿಡಿದೆದ್ದ ಘಟನೆ ನಗರದಲ್ಲಿ ನಡೆದಿದೆ.

ಉಣಕಲ್ ಗ್ರಾಮದ ನಿವಾಸಿ ಸುಜಾತಾ ಭೀಮಶಿ ತಿಪ್ಪೋಜಿ ಎಂಬ ಮಹಿಳೆ ಪತಿ, ಮಾವ, ಅತ್ತೆ ನಾದಿನಿಯ ಕಿರುಕುಳಕ್ಕೆ ಒಳಗಾಗಿದ್ದು ಹಿಂಸೆ ತಾಳಲಾರದೇ ಅಲ್ಲಿಂದ ತಪ್ಪಿಸಿಕೊಂಡು ಮಹಿಳಾ ಠಾಣೆಗೆ ದೂರು ನೀಡಿದಳು. ನೊಂದ ಮಹಿಳೆಯ ದೂರನ್ನು ದಾಖಲು ಮಾಡಿಕೊಂಡಿರುವ ಪೊಲೀಸರು ಈ ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಂಡಿದ್ದಾರೆ. ಈ ಆರೋಪಿಗಳು ತಲೆತಪ್ಪಿಸಿಕೊಂಡಿದ್ದು ಅವರ ಬಂಧನಕ್ಕೆ ಜಾಲ ಬೀಸಿದ್ದಾರೆ. ಕಳೆದ ಮೂರು ವರ್ಷಗಳ ಹಿಂದೆ ಸುಜಾತಾ ಅವರ ವಿವಾಹ ಭೀಮಶಿ ಜತೆ ನಡೆದಿತ್ತು. ಮದುವೆ ಕಾಲಕ್ಕೆ ೫೦ ಸಾವಿರ ರೂಪಾಯಿ ನಗದು, ೪ ತೊಲೆ ಚಿನ್ನ, ೫ ಸಾವಿರ ರೂಪಾಯಿ ಜವಳಿ ನೀಡಲಾಗಿತ್ತು. ಆದರೆ ೫ ತೊಲೆ ಚಿನ್ನ ತರುವಂತೆ ಒತ್ತಾಯಿಸಿ ತರದಿದ್ದರೆ ಸೀಮೆಎಣ್ಣೆ ಹಾಕಿ ಸುಡುವ ಬೆದರಿಕೆ ಹಾಕಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ. ತನ್ನನ್ನು ಮನೆಯಿಂದ ಹೊರಹಾಕಿದ್ದರು ಎಂದೂ ಈ ಮಹಿಳೆ ತಿಳಿಸಿದ್ದಾಳೆ.

(ಉದಯವಾಣಿ)

ಸಂಪಾದಕೀಯ

ಅಂತರಂಗ

# ಪ್ರಕಾಶಿಸುತ್ತಿದೆ 'ಭಂಡ ಭಾರತ'!

ಭಾರತ ಪ್ರಕಾಶಿಸುತ್ತಿದೆ! ಭಂಡ ವಾಜಪೇಯಿ ಸಂತಾನದ ಹೊಸ ಘೋಷಣೆ ಇದು. ಹಿಂದೊಮ್ಮೆ ಹದಿಮೂರು ದಿನಗಳ ಹದಿಮೂರನೇ ಪ್ರಧಾನಿಯಾಗಿದ್ದ, ವಾಜಪೇಯಿ ಅವರ ಹನ್ನೊಂದು ಪಕ್ಷಗಳ ಇಂದಿನ ಭಂಡ ಸರ್ಕಾರ, ಐದು ವರ್ಷ ಪೂರೈಸುತ್ತಿರುವ ವಿಜಯೋನ್ಮಾದದ ಆಚರಣೆ ಎಲ್ಲ ಮಾಧ್ಯಮಗಳಲ್ಲಿ ಅದ್ದೂರಿಯಿಂದ ನಡೆಯುತ್ತಿದೆ. ವಿದ್ಯುನ್ಮಾನ ಮಾಧ್ಯಮಗಳಲ್ಲಂತೂ ಕಣ್ಣು ಕೋರೈಸುವಂತ ಪ್ರಕಾಶ! ಜಾಗತಿಕ ನಕ್ಷೆಯಲ್ಲಿ ಭಾರತದ ಭೂಪಟಕ್ಕೀಗ ಹೊಳೆಯುವ ಬಣ್ಣ!

ಮಾನವಂತ ಜನ ಭಾರತದಲ್ಲಿ ಇಲ್ಲವೆಂದೇ ಈ ವಾಜಪೇಯಿ ಸಂತತಿ ತಿಳಿದಂತಿದೆ. ಅಧಿಕಾರ ಹಿಡಿದ ಕ್ಷಣದಿಂದಲೇ ಭಾರತವನ್ನು ಶಿಲಾಯುಗದತ್ತ ಕೊಂಡೊಯ್ಯುವ ಎಲ್ಲಾ ಷಡ್ಯಂತ್ರಗಳನ್ನು ಆರಂಭಿಸಿದ ವಾಜಪೇಯಿ ಸರ್ಕಾರ, ಅಧಿಕಾರವನ್ನು ಪೂರ್ಣಗೊಳಿಸುತ್ತಿರುವ ಈ ದಿನದವರೆಗೆ ಸಾಧಿಸಿದ್ದೇನು ಅನ್ನುವುದನ್ನು ನಿರ್ವಂಚನೆಯಿಂದ ವಿಮರ್ಶಿಸುವ ಗೋಜಿಗೇ ಹೋಗುತ್ತಿಲ್ಲ. ಕೇವಲ ಭಂಡತನ ಮತ್ತು ಆಷಾಡಭೂತಿತನವೇ ಭಾರತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯ ಎಂದು ಸಾಬೀತುಪಡಿಸಲು ಹೆಣಗುತ್ತಿರುವುದೇ ಹೆಚ್ಚಾಗಿದೆ.

ಪಿ.ವಿ.ನರಸಿಂಹರಾಯ ಎಂಬ ಕಾಂಗ್ರೇಸ್ ಪುರೋಹಿತನಿಂದ ಆರಂಭವಾದ ಭಾರತದ ಪ್ರಕಾಶ ವಾಜಪೇಯಿ-ಅಡ್ವಾಣಿ ಮೂಲಕ ಬಾಬರಿ ಮಸೀದಿ ಕೆಡುವುದರಿಂದ ಹಿಡಿದು, ಪೋಕ್ರಾನ್‌ನಲ್ಲಿ ಅಣುಬಾಂಬ್ ಸಿಡಿಸಿ, ಭಯೋತ್ಪಾದನೆ ಉಂಟುಮಾಡುವಲ್ಲಿ ಯಶಸ್ವಿಯಾಯಿತು. ಗುಜರಾತಿನಲ್ಲಿ ಸಹಮಾನವರ ನೆತ್ತರು ಚೆಲ್ಲಿ, ಹಸುಕಂದಮ್ಮಗಳನ್ನು ಬೆಂಕಿಯಲ್ಲಿ ಸುಟ್ಟು ಆನಂದಿಸಿತು. ಗುಜರಾತಿನಲ್ಲಿ ಹತ್ತಿಸಿದ ಬೆಂಕಿಯ ಪ್ರಕಾಶವಂತೂ ಇಡೀ ಲೋಕದಲ್ಲೆಲ್ಲಾ ಪ್ರಕಾಶಿಸುತ್ತಿದೆ!

ಅಧಿಕಾರಕ್ಕೆ ಬಂದ ಆರಂಭದಲ್ಲೇ ವಾಜಪೇಯಿ ಅವರು ಕನಿಷ್ಟ ಒಂದು ಕೋಟಿ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಯುವ ಜನರಿಗೆ ಭರವಸೆಗಳನ್ನು ನೀಡಿದ್ದರು. ಭಜರಂಗದಳದ ಮೂಲಕ ಈಗ ಆ ಭರವಸೆ ಸಾಕಾರಗೊಂಡಿದೆ. ದೇಶದ ರಕ್ತನಾಳಗಳಂತಿದ್ದ ಸಾರ್ವಜನಿಕ ಉದ್ದಿಮೆಗಳನ್ನೆಲ್ಲಾ ಒಂದೊಂದಾಗಿ ಮುಚ್ಚುತ್ತಾ, ನಿರುದ್ಯೋಗಿ ಯುವ ಸಮೂಹವನ್ನು ಸೃಷ್ಟಿಸುತ್ತಾ, ಅವರನ್ನೆಲ್ಲ ಭಜರಂಗಿಗಳನ್ನಾಗಿ ಪರಿವರ್ತಿಸಿ ಇಡೀ ದೇಶದಲ್ಲೆಲ್ಲಾ ಕಪಿ ಸೈನ್ಯ ಕಟ್ಟುವ ಕೆಲಸ ಭರದಿಂದ ನಡೆಯುತ್ತಿದೆ. ಈ ಕಪಿ ಸೈನ್ಯ ದೇಶಾದ್ಯಂತ ನಡೆಸುತ್ತಿರುವ 'ದಹನ'ದ ಪ್ರಕಾಶ ಕೂಡ ಜಗತ್ತಿನಲ್ಲೆಲ್ಲಾ ಹಬ್ಬುತ್ತಿದೆ! ಭಾರತ ಹಿಂದೆಂದೂ ಕಾಣದಷ್ಟು ಪ್ರಕಾಶಿಸುತ್ತಿದೆ!!

ಇಡೀ ದೇಶದಲ್ಲಿ ದಲಿತರ ಮೇಲಿನ ಹಲ್ಲೆಗಳು ಹೆಚ್ಚತೊಡಗಿವೆ. ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ಅಲ್ಪಸಂಖ್ಯಾತರಂತೂ ಜೀವಭಯದಿಂದ ತತ್ತರಿಸಿ ಹೋಗಿದ್ದಾರೆ. ದೇಶದ ಜನ ಇಂದಿಗೂ ಅನ್ನ-ಆಹಾರಗಳಿಲ್ಲದೆ ಪರಿತಪಿಸುತ್ತಿದ್ದಾರೆ. ಬಡತನದ ರೇಖೆ ಮೇಲ್ಮುಖವಾಗಿ ಬೆಳೆಯುತ್ತಿದೆ. ೧೯೯೧ರಿಂದೀಚೆಗೆ ಸರಿಸುಮಾರು ಶೇ. ೧೩ರಷ್ಟು ಬಡತನ ದೇಶದಲ್ಲಿ ಹೆಚ್ಚಾಗಿದೆ ಎಂದು ಲೋಕಸಭೆಯಲ್ಲಿಯೇ ಒಪ್ಪಿಕೊಳ್ಳಲಾಗಿದೆ. ಜನ ಮಳೆ ಬಂದರೆ ಸಾಯುತ್ತಾರೆ. ಬಿಸಿಲಿಗೆ ಸಾಯುತ್ತಾರೆ. ಚಳಿಗೆ ಸಾಯುತ್ತಾರೆ. ಹೊದಿಯಲು ಬಟ್ಟೆಯಿಲ್ಲ, ವಾಸಿಸಲು ಮನೆ ಇಲ್ಲ, ಓಡಾಡಲು ರಸ್ತೆಗಳಿಲ್ಲ, ಕುಡಿಯಲು ನೀರಿಲ್ಲ, ವಿದ್ಯುತ್ ಅಂತೂ ಕೇಳಲೇಬೇಡಿ. ಆದರೂ ಭಾರತ ಪ್ರಕಾಶಿಸುತ್ತಿದೆ!

ನಾಚಿಕೆಯ ಸಂಗತಿ ಎಂದರೆ ಇಂಥ ಸ್ಥಿತಿಯಲ್ಲೂ ಭಾರತ ದುರ್ಬಲರ-ಅಸಹಾಯಕರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣದಲ್ಲಿ ಕಡಿತ ಮಾಡಿ ಅಂತರರಾಷ್ಟ್ರೀಯ ಮಾನಿಟರಿಗೆ ನಿಧಿ ಸಾಲ ನೀಡಿದೆ! ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯೊಂದಕ್ಕೆ ಸಾಲ ನೀಡುವ ಮೂಲಕ ಭಾರತ ಮುಂದುವರೆದ ರಾಷ್ಟ್ರಗಳ ಸಾಲಿಗೆ ಸೇರಲು ಕಾಯುತ್ತಿದೆ. ಅಮೆರಿಕಾ, ಬ್ರಿಟನ್ ಮೊದಲಾದವುಗಳ ಪಟ್ಟಿಯಲ್ಲಿ ಸೇರಲು ಹಾತೊರೆಯುತ್ತಿದೆ. ಚಿನ್ನ-ಬೆಳ್ಳಿ ಬೆಲೆಗಳು ಆಕಾಶಕ್ಕೆ ಜಿಗಿದಿವೆ. ಷೇರು ಪೇಟೆಯಲ್ಲಂತೂ ಸೂಚ್ಯಂಕ ಹಿಂತಿರುಗಿ ನೋಡುತ್ತಲೇ ಇಲ್ಲ. ಇನ್ಫೋಸಿಸ್, ರಿಲಯನ್ಸ್‌ಗಳ ಬಾವುಟಗಳು ಎವರೆಸ್ಟ್ ನೆತ್ತಿಯನ್ನು ಮುಟ್ಟುತ್ತಿವೆ. ಹಾಗಾಗಿ ಭಾರತ ಪ್ರಕಾಶಿಸುತ್ತಿದೆ!

ದೇಶದ ಜನರನ್ನು ಸರ್ಕಾರ ಮೂರ್ಖರೆಂದು ತಿಳಿದಂತಿದೆ. ಸಾವಿರ ಬಾರಿ ಸುಳ್ಳು ಹೇಳಿದರೆ ಅದೇ ನಿಜವಾಗುತ್ತದೆ ಎಂಬ ಬಗೆಗೆ ಸರ್ಕಾರಕ್ಕೆ ತುಂಬಾ ನಂಬಿಕೆ ಇದ್ದಂತಿದೆ. ಅದಕ್ಕೆ ನಿರಂತರವಾಗಿ ಸುಳ್ಳು ಹೇಳುವುದನ್ನೇ ಕಾಯಕ ಮಾಡಿಕೊಂಡಿದೆ. ಎಲ್ಲದಕ್ಕೂ ಶನೇಶ್ವರನೇ ಹೊಣೆ ಎಂಬಂತೆ ದೇಶದ ಎಲ್ಲ ಅವಘಡಗಳಿಗೂ ಮುಸ್ಲಿಮರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತಿದೆ. ದೇವರು-ಧರ್ಮದ ಹೆಸರಿನಲ್ಲಿ ಅಮಾಯಕ ಜನರನ್ನು ಭಾವನಾತ್ಮಕವಾಗಿ ಕೆರಳಿಸಿ, ಸರ್ಕಾರದ ಎಲ್ಲಾ ಬಿಕ್ಕಟ್ಟುಗಳನ್ನು, ವೈಫಲ್ಯಗಳನ್ನು ಮರೆಮಾಚಲಾಗುತ್ತಿದೆ. ಪ್ರಜ್ಞಾವಂತರು ಹಾಗೂ ಮಾನವಂತರ ಕೈಲಿರಬೇಕಾದ ದೇಶದ ಆಡಳಿತವನ್ನು ಹುಸಿ ಧಾರ್ಮಿಕ ಢಂಬಾಚಾರಿಗಳು ಹಾಗೂ ಕೊಲೆಗಡುಕ ಮತಾಂಧರ ಕೈಗೆ ವಹಿಸಿಕೊಡಲಾಗುತ್ತಿದೆ. ಪುರಾಣದ ಕಾಗಕ್ಕ-ಗುಬ್ಬಕ್ಕನ ಕಥೆಗಳನ್ನು ಮಕ್ಕಳಿಗೆ ಇತಿಹಾಸವೆಂದು ಬೋಧಿಸುವ ಪಿತೂರಿ ನಡೆಯುತ್ತಿದೆ. ಒಡಕು ಸಂಸ್ಕೃತಿಯ ಆಚಾರ್ಯರುಗಳನ್ನು ಇಡೀ ದೇಶದ ಸಾಂಸ್ಕೃತಿಕ ವಕ್ತಾರರೆಂದು ಬಿಂಬಿಸಲಾಗುತ್ತಿದೆ. ಆದ್ದರಿಂದಲೇ ಭಾರತ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಕಾಶಿಸುತ್ತಿದೆ!

ಮಾನ್ಯ ವಾಜಪೇಯಿ ಅವರೇ, ನಿಮ್ಮ ಹುಸಿ ಸಾಧನೆಗಳು, ಹುಸಿ ಧಾರ್ಮಿಕತೆಗಳು, ಹುಸಿ ಬೆದರಿಕೆಗಳಿಂದಲೇ ಭಾರತ ಪ್ರಕಾಶಿಸುತ್ತದೆ ಎಂದರೆ ನಿಮ್ಮ ಬಗ್ಗೆ ಕನಿಕರಪಡಬೇಕಾಗುತ್ತದೆ. ಇಲ್ಲವೇ ಎಂಥ ಭಂಡರು ಎಂದು ಹೇಸಿಗೆ ಪಡಬೇಕಾಗುತ್ತದೆ. ಯಾವುದೇ ದೇಶ ಮುಂದುವರೆದಿದೆ ಎಂದರೆ ಅದು ಕಾಣಬೇಕಾಗಿದ್ದು ಆ ದೇಶದ ಹಳ್ಳಿಗಳಲ್ಲಿ, ಕೊಳೆಗೇರಿಗಳಲ್ಲಿ, ರೈತನ-ಕೂಲಿಕಾರನ ಮುಖದಲ್ಲಿ, ಷೇರುಪೇಟೆಯ ಸೂಚ್ಯಂಕದಲ್ಲಲ್ಲ. ಕನಿಷ್ಟ ಇಷ್ಟು ತಿಳುವಳಿಕೆ ಇಲ್ಲದವನೊಬ್ಬ ಭಾರತದ ಪ್ರಧಾನಿಯಾದನಲ್ಲ ಎಂಬುದೇ ಅತ್ಯಂತ ದುಃಖದ ಸಂಗತಿ. ಇದು ಬುದ್ಧ- ಬಸವ-ಅಲ್ಲಮರಂಥ ಮಹಾಮಾನವಂತರು ಹುಟ್ಟಿದ ನೆಲ. ಅಂಥ ಪರಂಪರೆ ಮುಂದುವರೆಸಲಾಗದಿದ್ದರೆ ಬೇಡ, ಹಾಳುಗೆಡವಬೇಡಿ ಎಂದಷ್ಟೇ ವಿನಂತಿ.

○ ಇಂದೂಧರ ಹೊನ್ನಾಪುರ

## ವೇದಿಕೆ

**ಭಾರತವು ಕಳೆದ ಶತಮಾನದಲ್ಲಿ ಕಂಡ ಮಹಾನ್ ದಾರ್ಶನಿಕರಾದ ಗಾಂಧೀ-ಅಂಬೇಡ್ಕರ್ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಂತ ಬದ್ಧ ದ್ವೇಷಿಗಳೆಂಬ ವಾದ ಒಂದೆಡೆಯಿದ್ದರೆ, ಮತ್ತೊಂದೆಡೆ ಗಾಂಧೀ-ಅಂಬೇಡ್ಕರ್ ವಾದಗಳಲ್ಲಿ ಸಾಮ್ಯತೆಯನ್ನು ಗುರುತಿಸುವ ಪ್ರಯತ್ನವೂ ಅಲ್ಲಲ್ಲಿ ನಡೆಯುತ್ತಿದೆ. ಆಕ್ಟೋಬರ್ ಸಂಚಿಕೆಯ ಸಂವಾದದಲ್ಲಿ ಪ್ರಕಟಿಸಿದ್ದ ಗಾಂಧಿ-ಅಂಬೇಡ್ಕರ್ ಮುಖಾಮುಖಿ ಲೇಖನವನ್ನು ಕುರಿತು ಓದುಗರೊಬ್ಬರು ಇಲ್ಲಿ ಪ್ರತಿಕ್ರಿಯಿಸಿದ್ದಾರೆ. ಆರೋಗ್ಯ ಪೂರ್ಣ ಚರ್ಚೆಗೆ ಆಸ್ಪದ ಮಾಡಿಕೊಡುತ್ತಿರುವ 'ಸಂವಾದ'ದ ಈ ಚರ್ಚೆಯಲ್ಲಿ ತಾವೂ ಸಹ ಭಾಗವಹಿಸಬಹುದು.**

○ಸಣ್ಣಂಗಿ ರಾಜ

# ಅಂಬೇಡ್ಕರ್ : ಗಾಂಧೀಕರಣದ ಅಪಾಯಗಳು

**ಕ**ಳೆದ ಸಂಚಿಕೆಯಲ್ಲಿ ಪತ್ರಿಕೆಯ ಮುಖಪುಟ ಲೇಖನವಾದ 'ದೇಶೀವಾದದ ನೆಲೆಗಳ ಹಿನ್ನೆಲೆಯಲ್ಲಿ ಗಾಂಧಿ-ಅಂಬೇಡ್ಕರ್ ಮುಖಾಮುಖಿ' ಎಂಬ ತಲೆಬರಹದಡಿ ಪ್ರಕಟವಾದ ಸಿ.ಬಿ.ಹೊನ್ನಯ್ಯನವರ ಲೇಖನಕ್ಕೆ ನನ್ನ ದೊಂದು ಪ್ರತಿಕ್ರಿಯೆ. ಹೊನ್ನಯ್ಯನವರು ಗಾಂಧಿ-ಅಂಬೇಡ್ಕರ್‌ರವರ ಭಿನ್ನ ನೆಲೆಗಳನ್ನು ವಿವರಿಸುತ್ತಲೇ, ಅಂಬೇಡ್ಕರ್ ಕಾಂಗ್ರೇಸ್‌ನೊಂದಿಗೆ ರಾಜಿಮಾಡಿಕೊಂಡರು, ದಲಿತರಿಗೆ ಅಂಬೇಡ್ಕರ್ ವಾದದಷ್ಟೆ ಗಾಂಧಿವಾದವು ಸಹ ಪ್ರಸ್ತುತವೆಂದು ಹೇಳುವ ರೀತಿಯಲ್ಲಿಯೇ ಅವರ ಒಟ್ಟಾರೆ ಲೇಖನ ಧ್ವನಿಸುತ್ತದೆ.

ತಮ್ಮ ಲೇಖನದಲ್ಲಿ ಹೊನ್ನಯ್ಯನವರೇ ಹೇಳುವಂತೆ, ಕಟ್ಟಾ ಹಿಂದೂ ಸನಾತನಿಯಾದ ಗಾಂಧಿ, ಮಹಾವೀರನ ಜೈನಧರ್ಮದ ವೈಪರೀತ್ಯ ಸಿದ್ಧಾಂತಗಳಾದ ಉಪವಾಸ, ಸತ್ಯಾಗ್ರಹ, ಅಸಹಕಾರ, ಬಹಿಷ್ಕಾರ ಮುಂತಾದ ಪ್ರಬಲ ಅಸ್ತ್ರಗಳನ್ನು ಪ್ರಯೋಗಿಸಿ ದೇಶಕ್ಕೆ 'ಸ್ವಾತಂತ್ರ್ಯ' ತಂದುಕೊಟ್ಟರೆಂಬುದನ್ನು ಯಾರೂ ಮರೆಯಬಾರದಂತೆ.

ಆದರೆ ಬ್ರಾಹ್ಮಣಶಾಹಿ ಸನಾತನಿಗಳ ವರ್ಣಾಶ್ರಮ ಪದ್ಧತಿಯ ಶ್ರೇಣೀಕೃತ ವ್ಯವಸ್ಥೆಯಲ್ಲಿನ ಶೂದ್ರರು, ದಲಿತರು, ಅಸ್ಪೃಶ್ಯರು, ಪಂಚಮರು (ಗಾಂಧಿ ಹೇಳುವಂತೆ ಹರಿಜನರು) ಶಾಶ್ವತವಾಗಿ ಊರ ಹೊರಗೆ ಹಂದಿ, ನಾಯಿ, ಕತ್ತೆ, ನರಿ, ಪಶು, ಪಕ್ಷಿಗಳಿಗಿಂತ ಕೀಳಾಗಿ ಬದುಕಿದಂತಹ ದೇಶದ ಜನಸಂಖ್ಯೆಯ ಶೇ. ೮೦ಕ್ಕೂ ಅಧಿಕ ಸಂಖ್ಯೆಯ ಅಸ್ಪೃಶ್ಯರಾದಂತಹ ನಾನು ಮತ್ತು ನನ್ನವರ ಪರವಾಗಿ ತಮ್ಮ ಜೀವಿತಾವಧಿಯಲ್ಲೆ ಗಾಂಧಿಯು ಒಂದೇ ಒಂದು ಸಲವಾದರೂ ತಮ್ಮ ರಾಜಕೀಯ ಅಸ್ತ್ರಗಳಾದ ಉಪವಾಸ, ಸತ್ಯಾಗ್ರಹ, ಅಸಹಕಾರ, ಬಹಿಷ್ಕಾರಗಳಂತಹ ಪ್ರಬಲ ಅಸ್ತ್ರಗಳನ್ನು ಬಳಕೆ ಮಾಡಿದ ದಾಖಲೆಗಳೇ ಇಲ್ಲ. ಆದರೂ ಗಾಂಧಿ ಹರಿಜನೋದ್ಧಾರಕ, ಮೇಲಾಗಿ ಮಹಾತ್ಮ. ಹಾಗಾದರೆ ನಮ್ಮ ಮಹಾತ್ಮರು ನಡೆಸಿದ 'ಸ್ವಾತಂತ್ರ್ಯ' ಚಳವಳಿ ದೇಶದ ಶೇ.೮೦ರಷ್ಟು ಜನಕ್ಕೋ ಅಥವಾ ೨೦%ರಷ್ಟು ಜನಕ್ಕೋ ಎಂಬುದು ಸ್ಪಷ್ಟ

ಇನ್ನೊಂದು ಬಹಳ ಮುಖ್ಯವಾದ ಸಂಗತಿ ಪ್ರಪ್ರಥಮ ಬಾರಿಗೆ ಅಸ್ಪೃಶ್ಯರೇ ನಡೆಸಿದಂತಹ ಕೇರಳದ ಗುರುವಾಯೂರು ದೇವಾಲಯ ಪ್ರವೇಶ ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧಿ ಸವರ್ಣೀಯರ ಮನವೊಲಿಸೋಣವೆಂದರೇ ಹೊರತು, ಅಸ್ಪೃಶ್ಯರಿಗೆ ನೈತಿಕ ಬೆಂಬಲ ನೀಡಲಿಲ್ಲ. ಅಸ್ಪೃಶ್ಯತೆ ಆಚರಣೆ ನಿಷೇಧ ಮಸೂದೆಯನ್ನು ಶಾಸನ ಸಭೆಯಲ್ಲಿ ಅಂಗೀಕರಿಸುವ ಸಂದರ್ಭದಲ್ಲಿ ಅದನ್ನು ಅಂಗೀಕರಿಸಲು ಒತ್ತಡ ಸಹ ಹಾಕಲಿಲ್ಲ. ೧೯೩೨ರ ಪೂನಾ ಒಪ್ಪಂದ ಸಂದರ್ಭದಲ್ಲಿ ಗಾಂಧಿ ಉಪವಾಸ ಕೂರುತ್ತಾರೆ. ಹಠಹಿಡಿದು ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುತ್ತಾರೆ. ಅಸ್ಪೃಶ್ಯರ ನೋವು, ಅಸಮಾನತೆ, ದೌರ್ಜನ್ಯಗಳ ಅರಿವಿದ್ದರೂ ಕೂಡ ಅವರು ಏಕೆ? ಏನೂ ಮಾಡಲಿಲ್ಲ ಎಂಬುದು ಪ್ರಶ್ನಾರ್ಹ.

ಸವರ್ಣೀಯ ಜಾತಿಯಿಂದ ಬಂದ ಗಾಂಧಿ ಅಸ್ಪೃಶ್ಯರ ಸಮಸ್ಯೆಗಳನ್ನು, ಅಸ್ಪೃಶ್ಯತೆಯನ್ನು ಮೇಲ್ಮಟ್ಟದಲ್ಲಿ ನೋಡಿ ಅಯ್ಯೋ...ಪಾಪ...ಅಸ್ಪೃಶ್ಯತೆ ಕಳಂಕ ಎಂದು ಪಶ್ಚಾತ್ತಾಪ ಪಡುತ್ತಾರೆ. ಮನಃಪರಿವರ್ತನೆ, ಅನುಕಂಪದಿಂದ ಅದನ್ನು ನಿವಾಸಿರಿಕೊಳ್ಳಬೇಕು, ಎಂದರಲ್ಲದೆ ವರ್ಣಾಶ್ರಮ ಪದ್ಧತಿಯಲ್ಲಿ ತಪ್ಪಿಲ್ಲ. ಆದರೆ ಅಸ್ಪೃಶ್ಯತೆ ಮಾಡಬಾರದು, ಇವರ ಅನುಕಂಪವು ಸಹ ಅಂಬೇಡ್ಕರ್ ಮತ್ತು ಅವರ ವರ್ಗದ ಜನರು ಹೋರಾಟದ ತೀವ್ರತೆಯಿಂದ ತೋರಿಸಿದರೇ ಹೊರತು ಗಾಂಧಿಯೇ ಎಂದೂ ಸಹ ಅಸ್ಪೃಶ್ಯರ ಕುರಿತು ಜಾತಿಯ ಏಣಿಶ್ರೇಣಿಗಳ ಕುರಿತು ಚಿಂತಿಸಿದ್ದಿಲ್ಲ.

ಅಂತರ್‌ಜಾತಿ ವಿವಾಹದ ಕುರಿತು ಗಾಂಧಿ ಹೇಳುವ ರೀತಿ ಜಾತಿಯ ಪಾವಿತ್ರತೆ ಹಾಳಾಗುತ್ತದೆ ಎಂಬಂತಿದೆ. ಆದ್ದರಿಂದ ಅಂತರ್‌ಃಜಾತಿ ವಿವಾಹ ಆಗಬಾರದು ಎಂದು ಅವರು ಹೇಳುತ್ತಾರೆ. ಗಾಂಧಿ ಜಾತಿ ವ್ಯವಸ್ಥೆಗೆ, ವರ್ಣಾಶ್ರಮ ಪದ್ಧತಿಗಳಿಗೆ ಸೂಚಿಸುವ ಪರಿಹಾರ ಇದು. ಇದೇ ರೀತಿಯ ಪರಿಹಾರಗಳನ್ನು ಬಡತನ, ಆರ್ಥಿಕ ಅಸಮಾನತೆಗಳಿಗೂ ಸೂಚಿಸುತ್ತಾರೆ.

ಸ್ವಕಲ್ಪಿತ, ಬ್ರಾಹ್ಮಣಶಾಹಿ ಸನಾತನಿ, ಹಿಂದೂ ಧರ್ಮದ ಅಸಮಾನತೆಗಳ ಏಣಿಶ್ರೇಣಿಗೆ ಸಿಲುಕಿ ಜಾತಿವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ಸ್ವತಃ ಅನುಭವಿಸಿದಂತಹ ಅಂಬೇಡ್ಕರ್, ಸಮಸ್ಯೆಗಳಿಗೆ ಮೂಲಭೂತ ಪರಿಹಾರಗಳನ್ನು ಸೂಚಿಸುತ್ತಾರೆ. ಸಮಸ್ಯೆಗಳ ಮೂಲವನ್ನು ಗ್ರಹಿಸಿ ಪರಿಹಾರಗಳಿಗೆ ನಾವೇನು ಮಾಡಬೇಕು ಎಂದು, ಜನ ಸಮುದಾಯದೊಳಗೆ ತಾವು ಒಬ್ಬರಾಗಿದ್ದ ಅಂಬೇಡ್ಕರ್, ಜಾತಿವ್ಯವಸ್ಥೆಯ ಸಂಪೂರ್ಣ ನಾಶವಾಗಬೇಕಾದರೆ ಹಿಂದೂ ಧರ್ಮನಾಶವಾಗಬೇಕು. ಅದು ಯಾವುದೇ ಬೆಲೆ ತೆತ್ತಾದರೂ ಸರಿಯೇ ನಾವು ನಾಶಗೊಳಿಸಲೇಬೇಕು ಎಂದು ಹೇಳಿದ್ದಾರೆ. 'ಹಿಂದೂವಾಗಿ ಹುಟ್ಟಿರುವೆ, ಹಿಂದೂವಾಗಿ ಮಾತ್ರ ಸಾಯಲಾರೆ' ಎಂದು ಹೇಳಿರುವುದು ಸಹ ಈ ಹಿನ್ನೆಲೆಯಲ್ಲಿಯೇ. ಅಂಬೇಡ್ಕರ್‌ರವರು ಸಮಸ್ಯೆಗಳಿಗೆ ಸೂಚಿಸುವ ಪರಿಹಾರಗಳು ಜನರ ಪರಿಹಾರಗಳೇ ಹೊರತು ವ್ಯಕ್ತಿ ಪ್ರೇರಿತ ಪರಿಹಾರಗಳನ್ನು ಯಾವತ್ತೂ ಸೂಚಿಸಲಿಲ್ಲ. ಇದೇ ಗಾಂಧಿ ಮತ್ತು ಅಂಬೇಡ್ಕರ್‌ರಿಗೂ ಇರುವಂತಹ ಬಹಳ ದೊಡ್ಡ ವ್ಯತ್ಯಾಸ.

ಕರ್ನಾಟಕದ ಐತಿಹ್ಯದಲ್ಲೇ ಬಹಳ ಮಹತ್ತರ ವಾದಂತಹ ೮೦ರ ದಶಕದ ಕಾಲಘಟ್ಟದಲ್ಲಿನ ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್ ಚಳವಳಿ ಹಾಗೂ ಆಂಧ್ರದ ನಕ್ಸಲೀಯ ಚಳವಳಿಯ ಪ್ರಭಾವದಿಂದ ಜನನ ಪಡೆದ ದಲಿತ ಚಳವಳಿ ಯಾವ ಸೈದ್ಧಾಂತಿಕ ನೆಲೆಗಳಿಲ್ಲದೆ ಹಲವು ವಾದ, ವಾದಿಗಳ, ಗೊಂದಲದ ಗೂಡಾಗಿ ದಿಕ್ಕು ದೆಸೆಗಳಿಲ್ಲದೆ, ದುಡಿಯುವ ಜನ ಸಮುದಾಯಗಳನ್ನು ಅಡ್ಡ ಉದ್ದ ಹಾದಿಗಳ ತಿರುವುಗಳಿಗೆ ತಂದು ನಿಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಗಾಂಧಿ ಹಾಗೂ ಅಂಬೇಡ್ಕರ್ ಒಂದೇ ನಾಣ್ಯದ ಎರಡು ಮುಖಗಳು ಎಂದು ಹೇಳುವಂತಹ ಜನರು ನಮ್ಮ ನಡುವೆ ಇದ್ದಾರೆ.

೧೯೮೩ರಲ್ಲಿ ದಲಿತಚಳವಳಿ 'ಗಾಂಧಿ'ಚಿತ್ರವನ್ನು ಬಹಿಷ್ಕರಿಸಿದಾಗ ದಲಿತ ಚಳವಳಿಯ ಮುಂಚೂಣಿ ನಾಯಕರಾದ ದೇವನೂರು ಮಹಾದೇವ ಚಿತ್ರವನ್ನು ಬಹಿಷ್ಕರಿಸಬಾರದೆಂದು ಲೇಖನ ಬರೆಯುತ್ತಾರೆ. ನಾನು ಚಿತ್ರ ನೋಡಿದೆ ಆಕಾಶಕ್ಕೆ ಮೂರು ಗೇಣು ಕಡಿಮೆ ಇತ್ತು ಎಂದು ಅಭಿಪ್ರಾಯ ಪಡುತ್ತಾರೆ. ಮತ್ತೋರ್ವರು ಮಾರ್ಕ್ಸ್‌ನನ್ನು ಕುರಿತು ಪದ್ಯ ಬರೆಯುತ್ತಾರೆ. ಹಲವು ನಾಯಕರು ಹೇಳುತ್ತಿರುವಂತೆ ನಾವು ಅಂಬೇಡ್ಕರ್ ಹೋರಾಟವನ್ನು, ಮಾರ್ಕ್ಸ್‌ವಾದವನ್ನು ಸಹ ಗಾಂಧಿ ಮಾರ್ಗದ ನೆಲೆಯಲ್ಲಿ ಅರ್ಥೈಸುತ್ತೇವೆ. ಆ ನೆಲೆಯಲ್ಲಿ ಹೋರಾಟವನ್ನು ಮುನ್ನಡೆಸುತ್ತೇವೆಂದು ಹೇಳುವುದು ಹೋರಾಟದ ನಿಶಸ್ತ್ರೀಕರಣಗೊಳಿಸುವುದಾಗಿದೆ. ಜನರು ನೋವು ಅಸಮಾನತೆಗಳನ್ನು ಸಹಿಸಿಕೊಂಡು ಹೋರಾಟವನ್ನು ಅಸ್ತ್ರವಾಗಿ ಬಳಸಬಾರದು. ಅಹಿಂಸೆಯ ಬೋಧನೆಯನ್ನು ಕೇಳಬೇಕು. ಮಹಾದೇವರವರೇ ಹೇಳುವಂತೆ, ದಲಿತ ಚಳವಳಿ ಶತ್ರುವನ್ನು ಕ್ಷಮಿಸುವಂತಹ ಉನ್ನತ ಹಂತ ತಲುಪಿದೆಯಂತೆ. ಎಂತಹ ದೌರ್ಜನ್ಯ ನಡೆಸಿದರೂ ಕರುಣೆಯಿಂದ ಕ್ಷಮಿಸಬೇಕು. ಹೋರಾಟ, ಚಳವಳಿ ಸರಿಯಲ್ಲವಂತೆ. ಗಾಂಧಿ ನೆಲೆಯಲ್ಲಿ ನಮ್ಮ ಹೋರಾಟವೆಂದರೆ ಅದು ಪ್ರಭುತ್ವದೊಂದಿಗೆ ರಾಜಿಯೇ ಹೊರತು ಬೇರೇನು ಅಲ್ಲ. ಇಂತಹ

**ಸ್ವಕಲ್ಪಿತ, ಬ್ರಾಹ್ಮಣಶಾಹಿ ಸನಾತನಿ, ಹಿಂದೂ ಧರ್ಮದ ಅಸಮಾನತೆಗಳ ಏಣಿಶ್ರೇಣಿಗೆ ಸಿಲುಕಿ ಜಾತಿವ್ಯವಸ್ಥೆ ಯಲ್ಲಿನ ಸಮಸ್ಯೆಗಳನ್ನು ಸ್ವತಃ ಅನುಭವಿಸಿದಂತಹ ಅಂಬೇಡ್ಕರ್, ಸಮಸ್ಯೆಗಳಿಗೆ ಮೂಲಭೂತ ಪರಿಹಾರಗಳನ್ನು ಸೂಚಿಸುತ್ತಾರೆ. ಸಮಸ್ಯೆಗಳ ಮೂಲವನ್ನು ಗ್ರಹಿಸಿ ಪರಿಹಾರಗಳಿಗೆ ನಾವೇನು ಮಾಡಬೇಕು ಎಂದು, ಜನ ಸಮುದಾಯದೊಳಗೆ ತಾವು ಒಬ್ಬರಾಗಿದ್ದ ಅಂಬೇಡ್ಕರ್, ಜಾತಿವ್ಯವಸ್ಥೆಯ ಸಂಪೂರ್ಣ ನಾಶವಾಗಬೇಕಾದರೆ ಹಿಂದೂ ಧರ್ಮನಾಶವಾಗಬೇಕು. ಅದು ಯಾವುದೇ ಬೆಲೆ ತೆತ್ತಾದರೂ ಸರಿಯೇ ನಾವು ನಾಶಗೊಳಿಸಲೇಬೇಕು ಎಂದು ಹೇಳಿದ್ದಾರೆ.**

ವೈರುಧ್ಯಗಳ ಸಂದರ್ಭದಲ್ಲಿ ದಲಿತ ಚಳವಳಿಯ ನಾಯಕರು, ದಲಿತ ಬರಹಗಾರರು ಸಹ ಅತ್ತ ಪೂರ್ಣಕ್ರಾಂತಿಕಾರಿಯೂ ಅಲ್ಲದೆ ಇತ್ತ ಸಂಪ್ರದಾಯದ ಸ್ಥಗಿತವೂ ಆಗದೆ ಪೂರ್ಣ ಅಧ್ಯಯಶೀಲವೂ ಆಗದೆ ಉಳಿದುಬಿಟ್ಟಿದೆ.

ದಲಿತ ಜಗತ್ತಿನೊಳಗಿನ, ಅಸ್ಪೃಶ್ಯತೆಯ ಚಿಪ್ಪಿನೊಳಗೆ ಅಪಾರ ಸಾಂಸ್ಕೃತಿಕ ವೈವಿಧ್ಯತೆ, ಮಾನವೀಯತೆ ಇದೆ. ದಲಿತರಿಗೆ ಯಾವ ಅನುಕಂಪವೂ ಅಗತ್ಯವಿಲ್ಲ, ನಮ್ಮನ್ನು ನಮ್ಮ ಸಾಂಸ್ಕೃತಿಕ ಶ್ರೇಷ್ಟತೆಯನ್ನು, ಆರ್ಥಿಕ ಬಡತನ ಮತ್ತು ಮೈಲಿಗೆಯ ಪರಿಕಲ್ಪನೆಯಲ್ಲಿ ಮುಚ್ಚಿ ಹಾಕಲಾಗಿದೆ. ಬದುಕಿನ ಶ್ರೇಷ್ಟತೆಯನ್ನು ಜಗತ್ತಿಗೆ ತೋರಿಸಲು ಮುಂದಡಿ ಇಟ್ಟ ಹಿರಿಯ ದಲಿತ ನಾಯಕರು, ಸ್ವಂತ ಜನರಿಗೆ ಪರಿಕೀಯರಾಗಿದ್ದಾರೆ

ಸಿ.ಬಿ.ಹೊನ್ನಯ್ಯನವರೇ ಹೇಳುವಂತೆ ಅಂಬೇಡ್ಕರ್ ಕಾಂಗ್ರೆಸ್‌ನೊಂದಿಗೆ ರಾಜಿ ಮಾಡಿಕೊಂಡರು ಎಂಬ ಆರೋಪ ಸರಿಯಾದ ಕ್ರಮವಲ್ಲ. ಕಾಲ ಮತ್ತು ಪರಿಸ್ಥಿತಿಯ ಒತ್ತಡಗಳನ್ನು ನೋಡಿ ಅನಿವಾರ್ಯತೆ ಇದ್ದಾಗ ಮಾತ್ರ ಅಂಬೇಡ್ಕರ್ (ಅದನ್ನು ರಾಜಿ ಎಂದು ಕರೆಯಲಾಗದು) ರಾಜಿ ಮಾಡಿಕೊಂಡರೇ ಹೊರತು ಗಾಂಧಿಯಂತ ರಾಜಿ ಮನೋಭಾವನೆಯವರು ಖಂಡಿತ ಅಲ್ಲವೆಂಬುದು ನನ್ನ ಖಚಿತ ಅಭಿಪ್ರಾಯ.

ಇಂದು ಅಂಬೇಡ್ಕರ್‌ರವರ ಒಟ್ಟಾರೆ ವ್ಯಕ್ತಿತ್ವವನ್ನೇ ಗಾಂಧಿಕರಣಗೊಳಿಸುವಂತಹ ಹುನ್ನಾರ ಯಾವ ಕಾರಣಗಳಿಗಾಗಿ ನಡೆಯುತ್ತಿದೆ ಎಂಬುದು ಸ್ಪಷ್ಟ ಇಂದು ದಲಿತ ಚಳವಳಿ ಹಿಡಿದಿರುವ ದಾರಿಗಳೇ ಬಹಳ ಮುಖ್ಯವಾದ ಕಾರಣಗಳಾಗಿ ನಮ್ಮ ಕಣ್ಣ ಮುಂದಿವೆ. ೮೦ರ ದಶಕದಲ್ಲಿ ನಡೆಯುತ್ತಿದ್ದಂತಹ ದೌರ್ಜನ್ಯ ವಿರೋಧಿ ಹೋರಾಟಗಳು, ಭೂಹೋರಾಟಗಳು ಇಂದು ಇಲ್ಲವಾಗಲು ಸಹ ಗಾಂಧಿಯ ಪ್ರಭಾವ ಇಲ್ಲವೆಂದು ಹೇಳಲಾಗದು. ಸರ್ಕಾರಗಳೊಂದಿಗೆ ರಾಜಿ, ಸಂಧಾನ, ಸವರ್ಣೀಯರ ಮನಃಪರಿವರ್ತನೆ ಚಳವಳಿಯ ತೀವ್ರತೆಯನ್ನು ಕಡಿಮೆಮಾಡಿಕೊಳ್ಳಬೇಕು, ಮೀಸಲಾತಿಯೇ ನಮ್ಮ ಅಂತಿಮಗುರಿ, ಗಾಂಧಿ ಮಾರ್ಗದಲ್ಲಿ ನಾವು ಚಳವಳಿ ನಡೆಸೋಣ, ನಮ್ಮ ಕಷ್ಟಗಳನ್ನು ನೋಡಿ ಮೇಲು ವರ್ಗದ ಜನ ಅನುಕಂಪ ತೋರಿಸುತ್ತಾರೆಂಬ ತಿಳುವಳಿಕೆ ಬಂದು ನಿಂತಿದೆ.

೮೦ರ ದಶಕದಲ್ಲಿ ದೌರ್ಜನ್ಯ ವಿರೋಧಿ ಚಳವಳಿ ನಡೆಯುತ್ತದೆ ಎಂದರೆ ಸಾಕು ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳಂತೆ ಜನ ಬಂದು ಸೇರುತ್ತಿದ್ದುದು ಈಗ ಇತಿಹಾಸವಾಗಿದೆ. ಸಾವಿರಾರು ಜನರಿಗೆ ಹೋರಾಟದ ಚೈತನ್ಯ, ಮಾನಸಿಕ ಸ್ಥೈರ್ಯ ಮತ್ತು ಉಳ್ಳವರ ಎದೆಗಳಲ್ಲಿ ನಡುಕು ಹುಟ್ಟಿಸಿದ್ದು ಅಂಬೇಡ್ಕರ್ ತಂದುಕೊಟ್ಟ ಹೋರಾಟದ ಸ್ಫೂರ್ತಿಯೇ ಹೊರತು ಗಾಂಧಿ ತಂದುಕೊಟ್ಟದಲ್ಲ ಎಂಬುದು ಸ್ಪಷ್ಟ

ಗುಡಿಸಲುಗಳು ಗುಡುಗುತ್ತಿವೆ, ಬಂಗಲೆಗಳು ನಡುಗುತ್ತಿವೆ ಎಂದ ಚಳವಳಿ, ಇಂದು ಸಮಾಜಕಲ್ಯಾಣ ಇಲಾಖೆ, ತಾಲೂಕು ಕಛೇರಿ, ಜಿಲ್ಲಾ ಪಂಚಾಯತಿ ಕಛೇರಿಗಳಿಗೆ ಸೀಮಿತವಾಗಿದೆ. ಗುಡಿಸಲಿಂದ ತಾಲೂಕು ಕಛೇರಿಗೆ ನಮ್ಮ ಚಳವಳಿ ಮೀಸಲಾಗಿದೆ. ಚಳವಳಿಯ ಹೆಸರಿನ ಅನೇಕರು ಭ್ರಷ್ಟಾತೀ ಭ್ರಷ್ಟರಾಗಿ ಹೋಗುತ್ತಿದ್ದಾರೆ. ಪ್ರತಿಭಟನೆ, ಚಳವಳಿ, ಹೋರಾಟಗಳನ್ನು ಎಷ್ಟು ದಿನ ಅಂತ ಮಾಡುವುದು. ಬದಲಿಗೆ ದೌರ್ಜನ್ಯ ನಡೆದಿದೆ, ಸತ್ತವ್ಯಕ್ತಿ ಸತ್ತ, ಮರಳಿ ಬರಲಾರ ಪರಿಹಾರ ಎಷ್ಟು ಕೊಡುತ್ತಾರೆ ಎಂದು ಯೋಚಿಸಿ ಕಾಲಿಗೆ ಇಷ್ಟು, ಕೈಗೆ ಇಷ್ಟು, ಅತ್ಯಾಚಾರಕ್ಕೆ ಇಷ್ಟು, ತಲೆಗೆ ಇಷ್ಟು ಸಾಕು ಎಂದು ನಮ್ಮ ಜೀವದ ಬೆಲೆಯನ್ನು ನಮ್ಮ ನಾಯಕರೇ ನಿರ್ಧರಿಸುವಂತಹ ದುರಂತದಲ್ಲಿ ನಮ್ಮ ಸಮುದಾಯವಿಂದು ಕಂಗಾಲಾಗಿದೆ.

ಪ್ರತಿಯೊಬ್ಬರಿಗೂ ಮಿತಿಗಳಿರುತ್ತವೆ. ಅಂಬೇಡ್ಕರ್‌ರವರಿಗೂ ಮಿತಿಗಳಿದ್ದಾಗ್ಯೂ ಸಹ ಶಕ್ತಿ ಮೀರಿ ಹೋರಾಡಿದ್ದಾರೆ, ಶ್ರಮಿಸಿದ್ದಾರೆ. ಅಸ್ಪೃಶ್ಯತೆಯ ಪ್ರಶ್ನೆಯನ್ನು ಭಾರತದ ಪ್ರಜಾತಂತ್ರದ ಪ್ರಮುಖ ಪ್ರಶ್ನೆಯಾಗಿಸಿಕೊಂಡು ಪರಿಹಾರಕ್ಕೆ ಒತ್ತು ನೀಡಿದ್ದಾರೆ. ದಲಿತ ಸಮುದಾಯವನ್ನು ಜಾಗೃತಿಗೊಳಿಸಿದ್ದಾರೆ. ಮೀಸಲಾತಿಗಾಗಿ ಶ್ರಮಿಸಿದ್ದಾರೆ. ಬ್ರಾಹ್ಮಣವಾದದ



**ಸವರ್ಣೀಯ ಜಾತಿಯಿಂದ ಬಂದ ಗಾಂಧಿ ಅಸ್ಪೃಶ್ಯರ ಸಮಸ್ಯೆಗಳನ್ನು, ಅಸ್ಪೃಶ್ಯತೆಯನ್ನು ಮೇಲ್ಮಟ್ಟದಲ್ಲಿ ನೋಡಿ ಅಯ್ಯೋ...ಪಾಪ... ಅಸ್ಪೃಶ್ಯತೆ ಕಳಂಕ ಎಂದು ಪಶ್ಚಾತ್ತಾಪ ಪಡುತ್ತಾರೆ. ಮನಃಪರಿವರ್ತನೆ, ಅನುಕಂಪದಿಂದ ಅದನ್ನು ನಿವಾಸಿರಿಕೊಳ್ಳಬೇಕು, ಎಂದರಲ್ಲದೆ ವರ್ಣಾಶ್ರಮ ಪದ್ಧತಿಯಲ್ಲಿ ತಪ್ಪಿಲ್ಲ. ಆದರೆ ಅಸ್ಪೃಶ್ಯತೆ ಮಾಡಬಾರದು, ಇವರ ಅನುಕಂಪವು ಸಹ ಅಂಬೇಡ್ಕರ್ ಮತ್ತು ಅವರ ವರ್ಗದ ಜನರು ಹೋರಾಟದ ತೀವ್ರತೆಯಿಂದ ತೋರಿಸಿದರೇ ಹೊರತು ಗಾಂಧಿಯೇ ಎಂದೂ ಸಹ ಅಸ್ಪೃಶ್ಯರ ಕುರಿತು ಜಾತಿಯ ಏಣಿಶ್ರೇಣಿಗಳ ಕುರಿತು ಚಿಂತಿಸಿದ್ದಿಲ್ಲ.**

ಬಂಡತನವನ್ನು ಬಯಲಿಗೆಳೆದಿದ್ದಾರೆ. ಹಿಂದೂ ಧರ್ಮದ ಕಟ್ಟುಪಾಡುಗಳನ್ನು ಮುರಿದಷ್ಟು ಒಬ್ಬ ವ್ಯಕ್ತಿ ಏನೆಲ್ಲಾ ಸಾಧಿಸಬಹುದು ಎಂಬುದನ್ನು ತೋರಿಸಿ, ಕಾಂಗ್ರೆಸ್ ಮತ್ತು ಗಾಂಧಿಯ ಹರಿಜನೋದ್ಧಾರದ ಮುಖವಾಡವನ್ನು ಕಳಚಿ ಹಾಕಿದ್ದಾರೆ.

ನಾವಿಂದು ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ಸರಿಯಾಗಿ ಗ್ರಹಿಸಿ ಅಂಬೇಡ್ಕರ್‌ರವರ ಗಾಂಧೀಕರಣದ ಅಪಾಯದ ಹುನ್ನಾರಗಳನ್ನು ಅರಿತು ದಲಿತ ಸಮುದಾಯ ಗಳ ಮುಂದಿರುವ ಹೊಸ ಸವಾಲುಗಳಿಗೆ ಅಂಬೇಡ್ಕರ್ ವಿಚಾರಧಾರೆಯನ್ನು, ಅವರ ಆಲೋಚನೆಗಳನ್ನು ನಾವು ಹುಟ್ಟು ಹಾಕಬೇಕಾಗಿದೆ. □

# ಜೊತೆಗಿರುವನೆ ಚಂದಿರ?

ಈ ದಿನ ಪವಿತ್ರ ರಂಜಾನ್, ಬೆಳಿಗ್ಗೆ ಏಳುತ್ತಿದ್ದ ಹಾಗೆ ಮಗ ಅಮರ್ 'ಈದ್-ಮುಬಾರಕ್ ಅಮ್ಮ' ಎಂದು ಹೇಳಿದ. 'ನಿನಗೂ ಅಷ್ಟೆ' ಎಂದೆ. ಬಹಳ ದಿನದಿಂದ ಎರಡು ಪ್ಯಾಂಟ್ ಬೇಕು ಅಂತ ಹಠ ಹಿಡಿದಿದ್ದ, ಹಬ್ಬದ ನೆವದಲ್ಲಿ ಎರಡು ಪ್ಯಾಂಟ್ ತೆಗೊ ಅಂತ ದುಡ್ಡು ಕೊಟ್ಟೆ. ಮಗಳಿಗೆ ಶುಭ ಹಾರೈಸಿ ಕಚೇರಿಗೆ ಹೊರಟೆ, ಜೋರಾಗಿ ಶಬ್ದ ಮಾಡುತ್ತಾ ಹೊರಟ ಆಟೋದಲ್ಲಿ ತಣ್ಣಗೆ ಗಾಳಿ ಬೀಸುತ್ತಿತ್ತು, ಮನಸ್ಸು ನೆನಪುಗಳ ಬೆನ್ನ ಹಿಡಿದಿತ್ತು.

೮೩-೮೪ರ ಅವಧಿಯಲ್ಲಿ ಉಮರಬ್ಬ ಕಾಂಗ್ರೆಸ್ ಪಕ್ಷಕ್ಕೆ ಒಬ್ಬ ಪ್ರಮುಖ ನಾಯಕ. ಎಸ್.ವಿಶ್ವನಾಥ್, ಶ್ರೀನಿವಾಸ್ ಪ್ರಸಾದ್ ಈ ಮೂವರದು ಅತ್ಯಂತ ಆತ್ಮೀಯ ಸಂಬಂಧ ಜೊತೆಗೆ ಅತ್ಯಂತ ಪ್ರಾಮಾಣಿಕವಾದ ಸಾಮಾಜಿಕ ಕಾಳಜಿಯ ಮನೋಭಾವ. ಆ ದಿನಗಳಲ್ಲಿ ರಾಜಕೀಯ ಸಮರ ಇದ್ದಿದ್ದು ನಿಜವಾದ ಎಡಪಂಥೀಯ ಧೋರಣೆ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ನಡುವಿನ ಸೈದ್ಧಾಂತಿಕ ತಿಕ್ಕಾಟ. ಆ ದಿನಗಳಲ್ಲಿ ಕೋಮುಗಲಭೆಯ ಘಟನೆಗಳಿಗೆ ಅಷ್ಟಾಗಿ ಅಸ್ಪದವಿರಲಿಲ್ಲ. ಹಾಗೆಂದರೆ ಎಲ್ಲೊ ಅಲ್ಲೊಮ್ಮೆ ಇಲ್ಲೊಮ್ಮೆ ಕೋಮುಗಲಭೆ ಘಟನೆಗಳು ನಡೆದಿಲ್ಲ ಅಂತೇನಿಲ್ಲ.

ನನ್ನ ಮತ್ತು ಉಮರಬ್ಬನ ನಡುವಿನ ಸಂಬಂಧ ಮಾನಸಿಕ ಹಾಗೂ ವೈಚಾರಿಕವಾಗಿದ್ದರಿಂದ ನಮ್ಮ ಹಾಗೂ ನಮ್ಮ ಕುಟುಂಬಗಳ ನಡುವೆ ಹಿಂದು-ಮುಸ್ಲಿಂ ಎಂಬ ಧಾರ್ಮಿಕ ವ್ಯತ್ಯಾಸ ಕಂಡೇಯಿಲ್ಲ. ಆದರೆ ಪರಿಸ್ಥಿತಿ ಬದಲಾಗುತ್ತಿದೆ, ಹೆಜ್ಜೆ ಹೆಜ್ಜೆಗೂ ರಾಜಕಾರಣಿಗಳು, ಕೋಮುವಾದಿಗಳು ನಮ್ಮಂತಹವರ ಹಾಗೂ ನನ್ನ ಮಕ್ಕಳಾದ ಅಮರ್ ಹಾಗೂ ಅನುಷಾಳಂತವರ ಬದುಕನ್ನು ಮಾನಸಿಕವಾಗಿ ಹೊಸಕಿ ಹಾಕಲು ಪ್ರತಿ ದಿನ ಹುನ್ನಾರ ಮಾಡುತ್ತಿದ್ದಾರೆ. ಧರ್ಮವೆಂಬ ತೀರ ವೈಯಕ್ತಿಕ ವಿಚಾರ ಸಾರ್ವಜನಿಕ ಸಂಭ್ರಮವಾಗುತ್ತಿದೆ. ಇತ್ತೀಚೆಗೆ ನಡೆದ ಗಲಭೆಯೊಂದರಲ್ಲಿ ಉಮರಬ್ಬನ ಊರಿನಲ್ಲಿಯೆ ಅಮಾಯಕರ ಮನೆಗೆ ನುಗ್ಗಿ ಮನೆಯಲ್ಲಿದ್ದವರ ಮೇಲೆ ಮಾರಾಕಾಸ್ತ್ರಗಳ ಪ್ರಯೋಗ ಮಾಡಿದರು. ಮತ್ತೆ ಪ್ರತೀಕಾರಕ್ಕೆ ಪ್ರತೀಕಾರ ಉತ್ತರವಾಗುತ್ತಲೇಯಿದೆ. ಸದಾ ಜಾಗೃತವಾಗಿರುವ ಧಾರ್ಮಿಕ ದ್ವೇಷ ಸಮಾಜದ ಪ್ರೀತಿ-ವಿಶ್ವಾಸಗಳನ್ನೆಲ್ಲಾ ದಮನ ಮಾಡುತ್ತಿದೆ.

ಹಾಗಾದರೆ ಎಲ್ಲಿಯವರೆಗೆ ಬಹುಸಂಖ್ಯಾತ ಜನರು ಈ ಅಲ್ಪಸಂಖ್ಯಾತ ಕೋಮುವಾದಿಗಳ ಭಯದಲ್ಲಿ ನರಳಬೇಕು? ದಿನ ಬೆಳಗಾದರೆ ಹೊಟ್ಟೆ ಪಾಡಿಗಾಗಿ ಕೂಲಿ ಮಾಡುವ, ದುಡಿಯುವ ಜನರ ಬಾಳಿಗೆ ಕೊಳ್ಳಿಯಿಡುವ ಕೆಲಸವನ್ನು ಎಷ್ಟು ದಿನದವರೆಗೆ ಈ ಕೋಮುವಾದಿಗಳು ಮುಂದುವರೆಸುತ್ತಾರೆ? ಎಲ್ಲೆಡೆಗಿಂತ ಸಾಮರಸ್ಯದ ವಿಷಯದಲ್ಲಿ ಹೆಸರುವಾಸಿಯಾಗಿದ್ದ ಮಲೆನಾಡಿನ ಹಸಿರ ಪರಿಸರಕ್ಕೆ ಕಾಡ್ಗಿಚ್ಚು ಹಬ್ಬಿಸಲು ಎಲ್ಲಾ ರೀತಿಯ ರಾಜಕೀಯ ಶಕ್ತಿಯನ್ನು ಬಳಸುತ್ತಿರುವ ಈ ಅಧಿಕಾರದಾಹಿಗಳಿಗೆ ಕಡಿವಾಣ ಹಾಕುವ ಶಕ್ತಿ ನಮ್ಮ ಸರ್ಕಾರಕ್ಕೆ ಇಲ್ಲವೆ?

ಭ್ರಷ್ಟಾಚಾರ, ಛಾಪಾಕಾಗದ, ಆನ್‌ಲೈನ್ ಲಾಟರಿ ಹಾಗೂ ಬೆಂಗಳೂರನ್ನು ಸಿಂಗಾಪುರ ಮಾಡುವ ಹವಣಿಕೆಯಲ್ಲಿ ಕಾಂಗ್ರೆಸ್ ಸರ್ಕಾರವು ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಎಷ್ಟರ ಮಟ್ಟಿಗೆ ಆಸಕ್ತಿ ವಹಿಸಿದೆ? ಇದು ಸರ್ಕಾರದ ಜವಾಬ್ದಾರಿಯಲ್ಲವೆ? ಗಲಭೆಗಳಾದಾಗ ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸ್ ಶಕ್ತಿಯನ್ನು ಉಪಯೋಗಿಸುವ ಈ ಸರ್ಕಾರ ಎಂದಾದರೂ ಸಾಮಾಜಿಕ ಕಾಳಜಿಯುಳ್ಳ ಬುದ್ಧಿಜೀವಿಗಳು, ನಾಗರಿಕರನ್ನು ಒಂದೆಡೆ ಸೇರಿಸಿ ಈ ಸಮಸ್ಯೆಯ ಬಗ್ಗೆ ಗಂಭೀರವಾಗಿ ಆಲೋಚಿಸಿದೆಯೆ?

ಬಿಜೆಪಿಯ ಅನಂತ್‌ಕುಮಾರ್‌ನಂತಹ ರಾಜಕೀಯ ನಾಯಕರು ಕರ್ನಾಟಕದ ಮೋದಿಯಾಗಲು ಹವಣಿಸುತ್ತಿದ್ದಾರೆ. ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ರಾಜಕಾರಣಿಗಳಿಗೆ ತಮ್ಮ ಜನರಿಗೆ Educate ಮಾಡಲು ಹಾಗೂ ಅವರನ್ನು ಪ್ರಜ್ಞಾವಂತರಾಗಿ ಮಾಡುವ ಯಾವುದೇ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವ ಮನಸ್ಸಿಲ್ಲ. ಹೀಗಾದರೆ ಈ ದೇಶದ ಒಟ್ಟಾರೆ ಬದುಕಿನ ಗತಿ ಏನು?

ಗೆಳೆಯ ಜಯಂತ ಕಾಯ್ಕಿಣಿ ತನ್ನ 'ಜೊತೆಗಿರುವನೆ ಚಂದಿರ' ಎನ್ನುವ ನಾಟಕದಲ್ಲಿ ಈ ಸಮಸ್ಯೆಯನ್ನು ಅತ್ಯಂತ ಸುಂದರ ವಾಗಿ ಮನಸ್ಸಿಗೆ ತಾಕುವಂತೆ ಹೇಳಿದ್ದಾರೆ. ಪ್ರೀತಿ ಮತ್ತು ಸಾಮರಸ್ಯ ತುಂಬಿದ್ದ ಸಣ್ಣ ಹಳ್ಳಿಯೊಂದು ಕೋಮುಗಲಭೆಯ ಕಾರಣಕ್ಕಾಗಿ ಸ್ಮಶಾನವಾಗುತ್ತದೆ. ಪ್ರೀತಿಸಿದ ಮನಸ್ಸುಗಳು ಬದುಕಿಗಾಗಿ ನೆಲೆಯನ್ನರಸಿ ವಲಸೆ ಹೋಗುತ್ತದೆ. ಬಡ ಮುಸ್ಲಿಂ ಕುಟುಂಬದ ಗಂಡ ಹೆಂಡಿರು ತಮ್ಮ ಮೂಲ ಬೇರುಗಳನ್ನು ಕಡಿದುಕೊಂಡು ಊರೇ ಬಿಡುತ್ತಾರೆ.

ಇಷ್ಟೆಲ್ಲಾ ಹೇಳುತ್ತಿರುವುದಕ್ಕೆ ಕಾರಣ ಭವಿಷ್ಯದಲ್ಲಿ ಚಿಕ್ಕಮಗಳೂರೆಂಬ ತಣ್ಣನೆಯ ಜಿಲ್ಲೆಯಲ್ಲಿ ಕೋಮು ಸಾಮರಸ್ಯಕ್ಕೆ ಹೆಸರಾದ ಬಾಬಾಬುಡನ್ ಗಿರಿಯ ತಪ್ಪಲಲ್ಲಿ ಕೋಮುವಾದಿಗಳು ನಡೆಸಬೇಕೆಂದಿರುವ ಮಾರಣ ಹೋಮದ ತಯಾರಿಯ ಬಗ್ಗೆ. ಹಿಂದೂಗಳಂತೆ ಮುಸ್ಲಿಮರೂ ಸನಾತನ

## ಕಾಳಜಿ

**ಹಿಂದೂಗಳಂತೆ ಮುಸ್ಲಿಮರೂ ಸನಾತನ ಚಿರಂತನ ದೇವರಲ್ಲಿ ನಂಬಿಕೆಯಿಟ್ಟವರು. ಧರ್ಮ ಪ್ರತಿಯೊಬ್ಬನ ವೈಯಕ್ತಿಕ ಆಚರಣೆ. ಇದನ್ನು ಸಾರ್ವಜನಿಕ ವಿಷಯವನ್ನಾಗಿ ಪ್ರಚೋದಿಸಿ ರಾಜಕಾರಣಕ್ಕೆ ಬಳಸಿಕೊಳ್ಳುವ ಜನರ ಬಗ್ಗೆ ಎಚ್ಚರಿಕೆ ವಹಿಸಿ ಧರ್ಮ ಮೀರಿದ 'ಪ್ರೀತಿ'ಯ ಆರಾಧಕರಾದ ಸೂಫಿ ಸಂತರ ಸ್ಥಳಗಳನ್ನೇ ಆಯ್ಕೆ ಮಾಡುತ್ತಾ ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮತಗಳಿಸುವ ತಂತ್ರಗಾರಿಕೆಯಾಗಿ ಕೋಮುಗಲಭೆಗಳನ್ನು ಬಳಸಿಕೊಳ್ಳುವ ಚಾತುರ್ಯ ಭಾರತದಂತಹ ದೇಶದಲ್ಲಿ ಎಲ್ಲೊ ಅಲ್ಲೊಮ್ಮೆ-ಇಲ್ಲೊಮ್ಮೆ ಯಶಸ್ವಿಯಾಗಬಹುದು. ಆದರೆ ಅದು ಸದಾ ಕಾಲ ಸಾಧ್ಯವಿಲ್ಲ.**

❍ ಸುಜಾತ ಕುಮಟಾ

ಚಿರಂತನ ದೇವರಲ್ಲಿ ನಂಬಿಕೆಯಿಟ್ಟವರು. ಧರ್ಮ ಪ್ರತಿಯೊಬ್ಬನ ವೈಯಕ್ತಿಕ ಆಚರಣೆ. ಇದನ್ನು ಸಾರ್ವಜನಿಕ ವಿಷಯವನ್ನಾಗಿ ಪ್ರಚೋದಿಸಿ ರಾಜಕಾರಣಕ್ಕೆ ಬಳಸಿಕೊಳ್ಳುವ ಜನರ ಬಗ್ಗೆ ಎಚ್ಚರಿಕೆ ವಹಿಸಿ ಧರ್ಮ ಮೀರಿದ 'ಪ್ರೀತಿ'ಯ ಆರಾಧಕರಾದ ಸೂಫಿ ಸಂತರ ಸ್ಥಳಗಳನ್ನೇ ಆಯ್ಕೆ ಮಾಡುತ್ತಾ ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು ಮತಗಳಿಸುವ ತಂತ್ರಗಾರಿಕೆಯಾಗಿ ಕೋಮುಗಲಭೆಗಳನ್ನು ಬಳಸಿಕೊ ಳ್ಳುವ ಚಾತುರ್ಯ ಭಾರತದಂತಹ ದೇಶದಲ್ಲಿ ಎಲ್ಲೊ ಅಲ್ಲೊಮ್ಮೆ-ಇಲ್ಲೊಮ್ಮೆ ಯಶಸ್ವಿಯಾಗಬಹುದು. ಆದರೆ ಅದು ಸದಾ ಕಾಲ ಸಾಧ್ಯವಿಲ್ಲ.

ಮೊನ್ನೆ ಸಂವಾದ ಕಾರ್ಯಕ್ರಮವೊಂದರಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಹತ್ತಿರ ಈ ಬಗ್ಗೆ ಪ್ರಸ್ತಾಪಿಸಿದಾಗ 'ಒಂದಷ್ಟು ಜನ ಮತಾಂಧ ಮುಸ್ಲಿಮರು ಒಂದಷ್ಟು ಜನ ಭಜರಂಗಿಗಳು ಹೊಡ್ದಾಡ್ಕಂಡು ಸಾಯ್ಲಿ ಅವಾಗ ಎಲ್ಲಾ ಸರಿಯಾಗುತ್ತೆ'. ಆದರೆ ನನ್ನ ಪ್ರಶ್ನೆ ಈ ಸಮಸ್ಯೆ ಅವರಿಬ್ಬರಿಗೆ ಸೀಮಿತವಾಗಿದೆಯೇ?

---

**ಸೂರ್ಯ-ಚಂದ್ರ ಎರಡು ಧರ್ಮದ ಸಂಕೇತ. ಇವರಿಬ್ಬರಿಂದಲೇ ದಿನರಾತ್ರಿಗಳಾಗಲು ಸಾಧ್ಯ. ಇವರಿಬ್ಬರಲ್ಲಿ ಒಬ್ಬರಿಲ್ಲ ದಿದ್ದರೂ ದಿನ ಪೂರ್ಣಗೊಳ್ಳು ವುದಿಲ್ಲ. ಈಗ ಪ್ರಜ್ಞಾವಂತರಾದ ನೀವೆ ಹೇಳಿ 'ಜೊತೆಗಿರುವನೆ ಚಂದಿರ'?**

---

ಯಾವುದೋ ದೇಶದ ಸಂತನೊಬ್ಬ ತಂದ ಕಾಫಿ ಬೀಜ ದಿಂದ ಇಡೀ ಚಿಕ್ಕಮಗಳೂರು ಜಿಲ್ಲೆ ಶ್ರೀಮಂತವಾಗಿದೆ. ಕಾಫಿಯ ಪರಿಮಳದ ಜೊತೆಗೆ ಹಬೆಯಾಡುವ ಬೆಚ್ಚನೆಯ ಪ್ರೀತಿ ಎಲ್ಲಾ ಜಾತಿ ಧರ್ಮಗಳ್ನು ಮೀರಿದ್ದು. ಇಂತಹ ಪ್ರದೇಶದಲ್ಲಿ ನಡೆಯುತ್ತಿರುವ ಗಲಭೆಯ ಬಗ್ಗೆ ತೇಜಸ್ವಿ ಯಂತವರು ಹೆಚ್ಚಿನ ಜವಾಬ್ದಾರಿ ವಹಿಸಬೇಕು ಎನ್ನುವುದು ಸಾರ್ವಜನಿಕರ ಅಭಿಪ್ರಾಯ.

ಈ ದೇಶ ಸಾವಿರಾರು ಉಪ ಸಂಸ್ಕೃತಿಯಿರುವ, ಬಹುಮುಖಿ ಧಾರೆ. ಈ ತತ್ವದಲ್ಲಿಯೆ ಈ ದೇಶದ ದೃಢತೆಯಿರುವುದು. ಸುಟ್ಟು ಬೂದಿಯಾದರು ಪುನರ್‌ಸೃಷ್ಟಿಯ ಶಕ್ತಿಯನ್ನು ಹೊಂದಿರುವ ಈ ದೇಶದ ಬೇರುಗಳು ಯಾವುದೇ ರೀತಿಯ ಏಕಮುಖೀ ಸಂಸ್ಕೃತಿಯ ಆಕ್ರಮಣವನ್ನು ಯಶಸ್ವಿ ಯಾಗಿ ತಡೆಯಬಲ್ಲವು. ಬಹುಸಂಖ್ಯಾತ ಹಿಂದೂಗಳು ಎಂದು ಹೇಳು ತ್ತಲೇ ಸಮಾಜದ ಮೇಲಸ್ತರದಲ್ಲಿರುವ ಮೇಲ್ಜಾತಿಯ ಅಲ್ಪಸಂಖ್ಯಾತರು ಸಾಮಾಜಿಕ ನ್ಯಾಯವನ್ನು ನೆಲಸಮ ಮಾಡಿ ರಾಜಕೀಯ ಗದ್ದುಗೆಯನ್ನು ಪಡೆಯಲು ತಯಾರಿ ನಡೆಸಿದ್ದರೆ ಅದೊಂದು ಸುಂದರ ಭ್ರಮೆಯ ಪರಮಾವಧಿ.

ಸೂರ್ಯನು ಹಿಂದೂಧರ್ಮದ ಸಂಕೇತವಾದರೆ ಚಂದಿರ ಮುಸ್ಲಿಂ ಧರ್ಮದ ಸಂಕೇತ. ಇವರಿಬ್ಬರಿಂದಲೇ ದಿನರಾತ್ರಿ ಗಳಾಗಲು ಸಾಧ್ಯ. ಇವರಿಬ್ಬರಲ್ಲಿ ಒಬ್ಬರಿಲ್ಲದಿದ್ದರೂ ದಿನ ಪೂರ್ಣಗೊಳ್ಳುವುದಿಲ್ಲ, ಈಗ ಪ್ರಜ್ಞಾವಂತರಾದ ನೀವೆ ಹೇಳಿ 'ಜೊತೆಗಿರುವನೆ ಚಂದಿರ'? ಮುಸ್ಲಿಂ ಉಗ್ರವಾದಿಗಳ ಹೆಸರಲ್ಲಿ ಅಮೆರಿಕ ನಡೆಸುತ್ತಿರುವ ಸಾಮ್ರಾಜ್ಯಶಾಹಿ ಮನೋ ಧರ್ಮವು ಇದೇ ಅಲ್ಲವೆ? □


# ಸಂವಾದ

## 'ಸಂವಾದ'ಕ್ಕೆ 'ಸಹಾಯಕ'ರು ಬೇಕಾಗಿದ್ದಾರೆ.

'ಸಂವಾದ' ಪ್ರಕಾಶನ ಮತ್ತು ಮಾಸಪತ್ರಿಕೆಯಲ್ಲಿ ಕೆಲಸ ಮಾಡಲು ಪೂರ್ಣಾವಧಿ 'ಸಹಾಯಕ'ರು ಬೇಕಾಗಿದ್ದಾರೆ. ಕರಡು ತಿದ್ದುವುದು, ಲೇಖಕರನ್ನು ಭೇಟಿ ಮಾಡುವುದು, ಪ್ರಸಾರ ಮತ್ತು ಮುದ್ರಣ ಕೆಲಸಗಳನ್ನು ನಿರ್ವಹಿಸುವುದು ಇವೇ ಮೊದಲಾದ ಕೆಲಸಗಳನ್ನು 'ಸಹಾಯಕ'ರು ಮಾಡಬೇಕಾಗುತ್ತದೆ. ಆಯ್ಕೆಯಾದವರಿಗೆ ಆಕರ್ಷಕ ವೇತನ ನೀಡಲಾಗುವುದು. ಶೈಕ್ಷಣಿಕ ಅರ್ಹತೆ ಮುಖ್ಯವಲ್ಲ. ಕನ್ನಡ ಭಾಷೆ ಮತ್ತು ಬರವಣಿಗೆಯಲ್ಲಿ ಪ್ರಭುತ್ವ ಇರುವವರಿಗೆ ಆದ್ಯತೆ ನೀಡಲಾಗುವುದು. ಡಿ.ಟಿ.ಪಿ ತಿಳುವಳಿಕೆ ಅಗತ್ಯ. ಆಸಕ್ತರು ಕೂಡಲೇ ಸಂಪಾದಕರನ್ನು ಕೆಳಕಂಡ ವಿಳಾಸದಲ್ಲಿ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಬಹುದು.

ಇಂದೂಧರ ಹೊನ್ನಾಪುರ, ನಂ. ೪೦೨, ೧ನೇ ಮುಖ್ಯರಸ್ತೆ, ೨ನೇ ಬ್ಲಾಕ್,
ಹೆಚ್‌ಬಿಆರ್ ಬಡಾವಣೆ, ಬೃಂದಾವನ ನಗರ, ಬೆಂಗಳೂರು - ೫೬೦ ೦೪೩
ದೂರವಾಣಿ: ೦೮೦-೨೫೪೪೦೫೦೬, ಮೊಬೈಲ್ : ೯೪೪೮೦-೪೮೩೦೬


## ಮೈಸೂರು ವಿಶ್ವವಿದ್ಯಾಲಯ ಪತ್ರಿಕೋದ್ಯಮ ವಿಭಾಗ ಮತ್ತು 'ಸಂವಾದ' ಓದುಗರ ಬಳಗ, ಮೈಸೂರು ಇವರ ಆಶ್ರಯದಲ್ಲಿ

**ಸಂವಾದಕ್ಕೆ ಒಂದು ವರ್ಷ ತುಂಬಿದ ನೆನಪಿಗಾಗಿ ವಿಚಾರ ಸಂಕಿರಣ**

ಫೆಬ್ರವರಿ ೧, ೨೦೦೪ ಬೆಳಿಗ್ಗೆ ೧೦-೩೦ಕ್ಕೆ
ಸ್ಥಳ: ಎ.ವಿ.ಆರ್.ಸಿ. ಸಭಾಂಗಣ, ಮಾನಸ ಗಂಗೋತ್ರಿ, ಮೈಸೂರು

ಆಶಯ ಭಾಷಣ : ಇಂದೂಧರ ಹೊನ್ನಾಪುರ, ಸಂಪಾದಕರು, 'ಸಂವಾದ'
ಅಧ್ಯಕ್ಷತೆ : ಪ್ರೊ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು, ಮೈಸೂರು
ಉದ್ಘಾಟನೆ : ಪ್ರೊ|| ಎಲ್. ಬಸವರಾಜು, ಖ್ಯಾತ ವಿದ್ವಾಂಸರು, ಮೈಸೂರು

**ವಿಚಾರ ಮಂಡನೆ:**

| | |
|---|---|
| ೧. 'ಸಂವಾದ' ಒಲವು-ನಿಲುವು- | ಡಿ.ಎಸ್. ನಾಗಭೂಷಣ, ಖ್ಯಾತ ಚಿಂತಕರು, ಸಹಾಯಕ ನಿರ್ದೇಶಕರು, ಆಕಾಶವಾಣಿ, ಮೈಸೂರು |
| ೨. ಅಲಕ್ಷಿತ ವರ್ಗಗಳು ಹಾಗೂ ಮಾಧ್ಯಮದ ಬದ್ಧತೆ- | ಎನ್. ಉಷಾರಾಣಿ, ನಿರ್ದೇಶಕರು, ಎ.ವಿ.ಆರ್.ಸಿ., ಮೈಸೂರು |
| ೩. ಪತ್ರಿಕೋದ್ಯಮದ ಆತಂಕಗಳು ಮತ್ತು ಸವಾಲುಗಳು- | ರಾಜಶೇಖರ ಕೋಟಿ, ಸಂಪಾದಕರು, ಆಂದೋಲನ, ಮೈಸೂರು |
| ೪. ಪತ್ರಿಕೋದ್ಯಮ ಶಿಕ್ಷಣ-ವೃತ್ತಿ ಮತ್ತು ಉದ್ಯಮ- | ಪ್ರೊ|| ಮಹೇಶ್ಚಂದ್ರಗುರು, ಮುಖ್ಯಸ್ಥರು, ಪತ್ರಿಕೋದ್ಯಮ ವಿಭಾಗ, ಮೈಸೂರು ವಿ.ವಿ. |

ವಿಚಾರ ಸಂಕಿರಣದ ನಂತರ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಿಂದ
**'ಸಂಪಾದಕರೊಂದಿಗೆ ಸಂವಾದ'**

**ನೀವೂ ಬನ್ನಿ, ಗೆಳೆಯರನ್ನೂ ಕರೆತನ್ನಿ**

## ಪ್ರಾಸ್ತಾವ

**ಜಾಗತೀಕರಣ ಮತ್ತು ಖಾಸಗೀಕರಣದ ಕರಾಳ ಛಾಯೆ ಇಡೀ ವಿಶ್ವವನ್ನೇ ವ್ಯಾಪಿಸುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಈ ಕರಣಗಳು ಪ್ರತಿಪಾದಿಸುವ ನೀತಿಗಳಿಂದ ಮಾತ್ರ ಭವ್ಯ ಭಾರತದ ಉದ್ಧಾರ ಸಾಧ್ಯ ಎಂಬ ಭ್ರಮೆಯಲ್ಲಿರುವ ಭಾರತದಲ್ಲಿನ ಸರ್ಕಾರಗಳ ನೇತೃತ್ವ ಹೊತ್ತ ಹೊಣೆಗೇಡಿಗಳು, ವಿದೇಶೀ ಕಂಪನಿಗಳನ್ನು ರತ್ನಗಂಬಳಿ ಹಾಸಿ ಕರೆದು ದೇಶೀಯ ಒಡೆತನದ ಅಗತ್ಯ ಕ್ಷೇತ್ರಗಳೆಲ್ಲವನ್ನೂ ಖಾಸಗೀ ವ್ಯಕ್ತಿಗಳ ಕೈವಶ ಮಾಡುತ್ತಿರುವುದು ದುರಂತ. ಅದೂ ಸಾಲದೆ ಇದೀಗ ದಿನಬಳಕೆಯ ನೀರನ್ನೂ ಸಹ ಖಾಸಗೀಕರಿಸುವ ಹುನ್ನಾರಕ್ಕೆ ಕೈ ಹಾಕಿದ್ದು ಅದರ ಒಳಿತು-ಕೆಡುಕಗಳನ್ನು ಕುರಿತ ವಿವರ ಇಲ್ಲಿದೆ.**

○ಮ.ಶ್ರೀ. ಮುರಳಿಕೃಷ್ಣ

# ನೀರಿನ ಖಾಸಗೀಕರಣ

ಗಾಳಿ ಹಾಗೂ ನೀರು ನಿಸರ್ಗದ ಅದ್ಭುತ ಮತ್ತು ಅನನ್ಯ ಕೊಡುಗೆಗಳು. ಮಾನವನ ಜೀವನದಲ್ಲಿ ಅವುಗಳು ಎಂತಹ ಮಹತ್ತರ ಪಾತ್ರ ವಹಿಸುತ್ತವೆ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಅವುಗಳಿಲ್ಲದೆ ಮಾನವನೇ ಏಕೆ, ಯಾವ ಪ್ರಾಣಿಯೂ ಜೀವಿಸಲು ಅಸಾಧ್ಯ. ಕೆಲವು ದಶಕಗಳ ಹಿಂದೆ, ನೀರು ಹಾಗೂ ಗಾಳಿಯನ್ನು ಮಾರುತ್ತಾರೆ ಎಂದು ಯಾರಾದರೂ ಹೇಳಿದರೆ, ಅದು ನಂಬಲಸಾಧ್ಯವಾದ ವಿಚಾರವಾಗಿತ್ತು. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ನೀರನ್ನು ಖಾಸಗೀಕರಿಸಿ, ಮಾರಾಟ ಮಾಡಲು ಸನ್ನದ್ಧವಾಗಿದೆ. ಕಳೆದ ವರ್ಷ ಅದು ರಾಷ್ಟ್ರೀಯ ಆರೋಗ್ಯ ನೀತಿಯನ್ನು ಪ್ರಕಟಿಸಿತು. ಆರೋಗ್ಯ ಸಂರಕ್ಷಣೆಯನ್ನು ಖಾಸಗೀಕರಿಸುವುದಕ್ಕೆ ಅದರಲ್ಲಿ ಒತ್ತು ನೀಡಲಾಗಿತ್ತು. ಪ್ರಾಥಮಿಕ ಆರೋಗ್ಯ ಸಂರಕ್ಷಣೆಯನ್ನು ಈ ಪ್ರಕ್ರಿಯೆಗೆ ಒಳಪಡಿಸಿದ್ದು ಗಮನಾರ್ಹ. ಇದರಿಂದ ಇಡೀ ಸಾರ್ವತ್ರಿಕ ಆರೋಗ್ಯ ಸಂರಕ್ಷಣೆಯ ಮೂಲ ವ್ಯವಸ್ಥೆ ಧೂಳಿಪಟವಾಗು ವುದು ಖಂಡಿತ. ಖಾಸಗಿ ಆಸ್ಪತ್ರೆಗಳ ತೋಳಗಳಿಗೆ ಭೂರಿ ಭೋಜನ ನೀಡುತ್ತದೆ ಈ ನಿರ್ಧಾರ. ಹಾಗೆಯೇ ಅಸಂಖ್ಯಾತ ಬಡವರು ಪ್ರಾಥಮಿಕ ಆರೋಗ್ಯ ಸೌಲಭ್ಯಗಳಿಂದ ವಂಚಿತರಾಗಿ ಖಾಸಗಿ ಆಸ್ಪತ್ರೆಗಳ ಸುಲಿಗೆಯ ದಾಳಗಳಾಗುತ್ತಾರೆ. ಹಣ ನೀಡಲಾಗದವರು ಮರಣವನ್ನಪ್ಪುತ್ತಾರೆ.

ರಾಷ್ಟ್ರೀಯ ಜಲ ನೀತಿ ಪ್ರಕಟವಾದದ್ದೂ ೨೦೦೨ರಲ್ಲೇ. ಶಿಕ್ಷಿತರಲ್ಲೂ ಅನೇಕ ಮಂದಿಗೆ ಪ್ರಪಂಚದ ಅನೇಕ ಭಾಗಗಳಲ್ಲಿ ನೀರಿನ ತೀವ್ರ ಅಭಾವವಿದೆಯೆಂದು ತಿಳಿದಿಲ್ಲ. ಏಷಿಯಾ ಹಾಗೂ ಆಫ್ರಿಕಾ ಖಂಡಗಳಲ್ಲಂತೂ ಬೆಳೆಯುತ್ತಿರುವ ಜನ ಸಂಖ್ಯೆ, ಕೃಷಿ ಚಟುವಟಿಕೆಗಳಿಗೆ ಅಪಾರ ಪ್ರಮಾಣದ ನೀರಿನ ಬಳಕೆ, ಅಂತರ್ಜಲದ ಮಟ್ಟದಲ್ಲಿ ತೀವ್ರ ಇಳಿಮುಖ ಮುಂತಾದವು ಆತಂಕಕಾರಿ ಅಂಶಗಳಾಗಿವೆ. ಅತಿ ಹೆಚ್ಚಿನ ಕೈಗಾರಿಕೀಕರಣಗೊಂಡ ರಾಷ್ಟ್ರಗಳಿಂದ ಮಾಲಿನ್ಯ ಜಾಸ್ತಿಯಾಗುತ್ತಿದ್ದು ಅದರ ಪರಿಣಾಮದಿಂದ ವಾತಾವರಣ ಬಿಸಿಯಾಗುತ್ತಿರುವುದು ಕಳವಳಕಾರಿ ಬೆಳವಣಿಗೆ. ಇನ್ನೊಂದೆಡೆ ಕುಡಿಯುವ ನೀರಿಗಾಗಿ ಹಾಹಾಕಾರ ಕ್ರಮೇಣ ಹೆಚ್ಚಾಗುತ್ತಿರುವುದೂ ಗಮನಾರ್ಹ. ಕೆಲವು ಐರೋಪ್ಯ ರಾಷ್ಟ್ರಗಳಲ್ಲಿ ಈ ವರ್ಷ ಉಷ್ಣ ತರಂಗಗಳಿಂದ ದಿನದ ತಾಪಮಾನ ೪೦-೫೦° ಗಳಷ್ಟು ಏರಿತು. ಅನೇಕ ಜನರು ಇದರಿಂದ ಬಾಧಿತರಾಗಿ ಅಸು ನೀಗಿದರು. ನಮ್ಮ ರಾಜ್ಯದಲ್ಲೂ ಕಳೆದ ಮೂರು ವರ್ಷಗಳಿಂದ ಬರಗಾಲ ಜನರನ್ನು ಕಂಗೆಡಿಸಿದೆ. ಎಲ್ಲೆಲ್ಲೂ ಕುಡಿಯುವ ನೀರಿಗೆ ತತ್ವಾರ. ಇತರ ರಾಜ್ಯಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಹೀಗಿರಬೇಕಾದರೆ, ಮೇ ತಿಂಗಳಲ್ಲಿ ಕುಡಿಯುವ ನೀರಿನ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಖಾಸಗಿ ಕ್ಷೇತ್ರವನ್ನು ಸ್ವಾಗತಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡುವುದರ ಬಗ್ಗೆ ರಾಜ್ಯ ಸರ್ಕಾರಗಳಿಗೆ ಸೂಚನೆಗಳನ್ನು ನೀಡಿದೆ ಕೇಂದ್ರ ಸರ್ಕಾರ. ಆದರೆ ಖಾಸಗೀಕರಣದ ವೆಚ್ಚವೆಲ್ಲಾ ಬೀಳುವುದು ಗ್ರಾಹಕರ ಮೇಲೇ. ಈಗಾಗಲೇ ರಾಜ್ಯಗಳು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿವೆ. ಆದ್ದರಿಂದ ಅವು ಕುಡಿಯುವ ನೀರಿನ ಯೋಜನೆಗಳಿಗೆ ಸಹಾಯಧನ ನೀಡದೇ ಇರುವ ಸಂದರ್ಭಗಳೇ ಜಾಸ್ತಿ. ಈಗಿರುವ ನೀರಿನ ದರಕ್ಕಿಂತ ಗ್ರಾಹಕರು ಸುಮಾರು ಹತ್ತು ಪಟ್ಟು ಜಾಸ್ತಿ ನೀಡಬೇಕಾಗುವುದೆಂದು ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಖಾತೆಯ ಅಧಿಕಾರಿಗಳ ಒಂದು ಅಂದಾಜು. ಅಸಂಖ್ಯಾತ ಬಡವರು, ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಕುಡಿಯುವ ನೀರು ಗಗನ ಕುಸುಮವಾದರೆ ಅಚ್ಚರಿಯಿಲ್ಲ. ಇದರಿಂದ ಅವರು ಅನೇಕ ಬಗೆಯ ಬವಣೆಗಳಿಗೆ, ರೋಗ ರುಜಿನಗಳಿಗೆ ಬಲಿಯಾಗುವುದಂತು ದಿಟ.

ಬೇರೆ ದೇಶಗಳಲ್ಲಿ ನೀರಿನ ಖಾಸಗೀಕರಣದಿಂದ ಆಗಿರುವ ಋಣಾತ್ಮಕ ಪರಿಣಾಮಗಳತ್ತ ಗಮನ ಹರಿಸದೆ, ಸರ್ಕಾರ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿರುವುದು ದುರಂತವೇ ಸರಿ. ಬೊಲೀವಿಯಾದಲ್ಲಿ ಖಾಸಗೀಕರಣದಿಂದ ನೀರಿನ ದರಗಳು ಸಿಕ್ಕಾಪಟ್ಟೆ ಏರಿದವು. ಜನರು ದಂಗೆಯೆದ್ದರು. ಗ್ರೀನ್ ವಿಚ್ ವಿಶ್ವವಿದ್ಯಾನಿಲಯದ ಸಮೀಕ್ಷೆಯೊಂದರ ಪ್ರಕಾರ ಖಾಸಗೀಕರಣದಿಂದ ಹೆಚ್ಚಾದ ನೀರಿನ ದರಗಳ ವಿರುದ್ಧ ಜರ್ಮನಿ, ಫಿಲಿಪೈನ್ಸ್, ಬ್ರೆಜ್ಹಿಲ್, ಕೆನ್ಯಾ, ಅರ್ಜೆಂಟೈನಾ ಮುಂತಾದ ರಾಷ್ಟ್ರಗಳಲ್ಲಿ ವ್ಯಾಪಕ ಪ್ರತಿಭಟನೆಯ ಪ್ರದರ್ಶನಗಳು ಜರುಗಿವೆ.

ನೀರು ನಿಸರ್ಗದ ಕೊಡುಗೆ. ಆದರೆ ಅದನ್ನು ಶುದ್ಧಗೊಳಿಸಿ, ಮನೆಗಳಿಗೆ ವಿತರಣೆ ಮಾಡುವಾಗ ಆಗುವ ಖರ್ಚು ಅಧಿಕ. ಅನೇಕ ನಗರಸಭೆ, ಪುರಸಭೆಗಳು ಸಂಪನ್ಮೂಲಗಳ ಕೊರತೆಯಿಂದ ಬಳಲುತ್ತಿವೆ. ಜನ ಸಂಖ್ಯೆಯ ಉಬ್ಬರದಿಂದ ಕುಡಿಯುವ ನೀರಿನ ಬೇಡಿಕೆಗಳು ಅಧಿಕವಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಈ ಸಂಸ್ಥೆಗಳಿಗೆ ಹಣ ಎಲ್ಲಿಂದ ಬರುತ್ತದೆ ಎಂಬುದು ಖಾಸಗೀಕರಣವನ್ನು ಸಮರ್ಥಿಸುವವರ ವಾದ. ಆದರೆ ಕಾನೂನು ಪ್ರಕಾರ ನೀಡಬೇಕಾದ ತೆರಿಗೆಗಳ ಒಂದು ಭಾಗವನ್ನೇ ರಾಜ್ಯ ಸರ್ಕಾರಗಳು ನೀಡದಿರುವಾಗ, ಅವು ಈ ವಿಷಯದಲ್ಲಿ ನಾಗರಿಕ ಸಂಸ್ಥೆಗಳಿಗೆ ಸಹಾಯ ಹಸ್ತ ಚಾಚುತ್ತವೆಯೇ?

ಒಂದು ವರದಿಯ ಪ್ರಕಾರ ಫ್ರಾನ್ಸ್‌ನ ಸೂಯೇಜ್ ಕಂಪನಿಯ ಅಂಗ ಸಂಸ್ಥೆಯಾದ ಡೆಗ್ರಿಮಾಂಟ, ದೆಹಲಿ ಹಾಗೂ ಇತರ ಐದು ನಗರಗಳಿಗೆ

ಪ್ರತ್ಯೇಕ ಯೋಜನೆಗಳನ್ನು ತಯಾರಿಸಿದೆ. ಇವು ಬಹು ರಾಷ್ಟ್ರೀಯ ಕಂಪನಿಗಳು.

ದೆಹಲಿಯ ಸೋನಿಯಾ ವಿಹಾರ್ ಟ್ರೀಟ್‌ಮೆಂಟ್ ಪ್ಲಾಂಟನ್ನು ಯೋಜಿಸಿರುವ ಈ ಕಂಪನಿ ಅದನ್ನು ಕಟ್ಟಿ ೭-೧೦ ವರ್ಷಗಳ ನಿಗದಿತ ಅವಧಿಯವರೆಗೆ ಕಾರ್ಯ ನಿರ್ವಹಿಸುತ್ತದೆ. ಈ ಅವಧಿಯಲ್ಲಿ ಪ್ರತಿ ವರ್ಷ ರೂ. ೧೦ ಕೋಟಿ ಲಾಭವನ್ನು ಗ್ಯಾರಂಟಿಯಾಗಿ ನೀಡಿದೆ ಸರ್ಕಾರ. ಇದು ವಿದ್ಯುಚ್ಛಕ್ತಿಯ ವಿತರಣೆಗಾಗಿ ಮಹಾರಾಷ್ಟ್ರದ ಅಮೇರಿಕ ಮೂಲದ ಎನ್ರಾನ್ ಕಂಪನಿಯ ಜೊತೆ ಮಾಡಿಕೊಂಡ ಒಪ್ಪಂದದ ರೀತಿಯಲ್ಲೇ ಇದೆ ಎನ್ನಬಹುದು. ಇತರ ಕೆಲವು ಬಹುರಾಷ್ಟ್ರೀಯ ಕಂಪನಿಗಳು ನೀರಿನ ಕ್ಷೇತ್ರಕ್ಕೆ ನುಗ್ಗಲು ತಯಾರಾಗಿವೆ. ಆದರೆ ಅವು ಎದುರು ನೋಡುತ್ತಿರುವುದು ಈ ಕ್ಷೇತ್ರದಲ್ಲಿ ಆಗಬೇಕಾಗಿರುವ ಆರ್ಥಿಕ ಸುಧಾರಣೆಗಳನ್ನು. ಏಕೆಂದರೆ ಈ ಸುಧಾರಣೆಗಳ ಹೆಸರಿನಲ್ಲಿ ಪೌರ ಸಂಸ್ಥೆಗಳು ನೀರಿನ ದರವನ್ನು ಜಾಸ್ತಿ ಮಾಡಿದಾಗ ಮಾತ್ರ ಅವು ಇಲ್ಲಿ ತಳವೂರಲು ಆಸಕ್ತಿ ತೋರಿಸುತ್ತವೆ.

ಹೀಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ದೃಷ್ಟಿಕೋನ ದಲ್ಲಿ ಜನರಿಗೆ ವಿತರಿಸುವ ಕುಡಿಯುವ ನೀರು ಒಂದು ಕರ್ತವ್ಯ ವಾಗಿ ಉಳಿದಿಲ್ಲ. ಅದು ನೀರನ್ನು ಒಂದು ವಾಣಿಜ್ಯ ಉತ್ಪನ್ನ ವಾಗಿ ಪರಿಗಣಿಸುತ್ತದೆ ವಿನಹ ನೈಸರ್ಗಿಕ ಸಂಪನ್ಮೂಲವೆಂದಲ್ಲ. ಸದಾ ಖಾಸಗೀಕರಣ ಮಂತ್ರ ಜಪಿಸುವ ಈ ಸರ್ಕಾರದಿಂದ ಇನ್ನೇನನ್ನು ಬಯಸಲು ಸಾಧ್ಯ? ಖಾಸಗಿ ಹಾಗೂ ಬಹು ರಾಷ್ಟ್ರೀಯ ಕಂಪನಿಗಳಿಗೆ ರತ್ನಗಂಬಳಿ ಹಾಸಿ ಸ್ವಾಗತ ನೀಡುತ್ತಿರುವುದ ರಿಂದ ಈ ಕ್ಷೇತ್ರದಲ್ಲಿ ಲಾಭಗಳಿಸುವಿಕೆಯೇ ಪ್ರಧಾನವಾಗಿ ಮೆರೆಯುವುದ ರಲ್ಲಿ ಸಂದೇಹವಿಲ್ಲ. ದಿನದಿಂದ ದಿನಕ್ಕೆ ನೀರಿನ ಅಭಾವದ ಬವಣೆ ಉಲ್ಬಣ ವಾಗುತ್ತಿರುವುದು ಸತ್ಯ. ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಜನರು ದೂರ (೨-೩ಕಿ.ಮೀ) ನಡೆಯುತ್ತಿರುವುದು ಸಾಮಾನ್ಯ ಸಂಗತಿ.

ಈಗಾಗಲೇ ನಮ್ಮ ರಾಷ್ಟ್ರದ ಹಲವೆಡೆ ಸರ್ಕಾರದ ಈ ಜಲ ನೀತಿಯ ವಿರುದ್ಧ ವ್ಯಾಪಕ ಪ್ರತಿಭಟನೆಗಳಾಗಿವೆ. ಕೇರಳದಲ್ಲಿ ಕೋಕೋಕೋಲಾ ಕಂಪನಿಯ ಘಟಕವೊಂದಕ್ಕೆ ಅಧಿಕ ಪ್ರಮಾಣದಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಇದರ ಪರಿಣಾಮ ಆ ಪ್ರದೇಶದ ಜನರಿಗೆ ಕುಡಿಯುವ ನೀರಿನ ತೀವ್ರ ಕೊರತೆ. ಅದೇ ರಾಜ್ಯದಲ್ಲಿ ಸರ್ಕಾರ ಒಂದು ಬಹುರಾಷ್ಟ್ರೀಯ ಕಂಪನಿಗೆ ನೀರನ್ನು ಮಾರಾಟ ಮಾಡುವ ಗುತ್ತಿಗೆ ನೀಡಿತ್ತು.

ಈ ಎರಡು ಘಟನೆಗಳ ವಿರುದ್ಧ ಎಡಪಕ್ಷಗಳು ಹಾಗೂ ಇತರ ಕೆಲವು ಜನಪರ, ಪುರೋಗಾಮಿ ಸಂಘಟನೆ ಗಳು ಬೀದಿಗಿಳಿದು ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡವು. ಕೊನೆಗೆ ಸರ್ಕಾರ ಪ್ರತಿಭಟನಾಕಾರರ ಬೇಡಿಕೆ ಗಳಿಗೆ ಮಣಿಯಬೇಕಾಯಿತು.

ಕೇಂದ್ರ ಸರ್ಕಾರದ ನೀರಿನ ಖಾಸಗೀಕರಣ ನೀತಿಯಿಂದ ರಾಷ್ಟ್ರದ ಬಹುಸಂಖ್ಯಾತ ಜನರಿಗೆ ಗಂಡಾಂತರ ತಪ್ಪಿದ್ದಲ್ಲ. ಆದ್ದರಿಂದ ಈ ನೀತಿಯನ್ನು ಹಿಮ್ಮೆಟ್ಟಿಸಬೇಕು. ಅದು ಅನಿ ವಾರ್ಯ ಆದರೆ ಅದು ಸಾಕಾರಗೊಳ್ಳುವುದು ವಿಸ್ತೃತವಾದ, ಬಹುಮುಖ ಜನಾಂದೋಳನದಿಂದ ಮಾತ್ರ. □

# ಸಮಾನತೆಗಾಗಿ ಹಿಂದೂ ಧರ್ಮ ಶುದ್ಧಿಯಾಗಬೇಕು

ಮನುಸ್ಮೃತಿಯನ್ನು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಸುಟ್ಟುಹಾಕಿದ್ದರು. ಬಹುಜನ ಸಮಾಜ ಪಕ್ಷದ ಧುರೀಣರಾದ ಮಾಯಾವತಿ ಮತ್ತು ಕಾನ್ಶಿರಾಂ ಕೆಲವು ಸವರ್ಣೀಯರನ್ನು ಮನುವಾದಿಗಳೆಂದು ಹೀಯಾಳಿಸುವುದುಂಟು. ದೇಶದ ಶೇಕಡ ೮೫ರಷ್ಟು ಜನಸಂಖ್ಯೆಯಿರುವ ಶೂದ್ರ ಹಿಂದುಗಳು ಮನುಸ್ಮೃತಿಯನ್ನು ಏಕೆ ಖಂಡಿಸುತ್ತಾರೆ ಎಂಬುದು ಬಹಳಷ್ಟು ಮಂದಿಗೆ ತಿಳಿದಿಲ್ಲ. ಮನುಸ್ಮೃತಿ ಹಿಂದು ಧರ್ಮಗ್ರಂಥಗಳಲ್ಲಿ ಅತಿ ಪ್ರಮುಖವಾದ ಕೃತಿ. ಯಾವುದೇ ಧರ್ಮಗ್ರಂಥ ಜನರಿಗೆ ಮಾರ್ಗದರ್ಶನ, ಶಾಂತಿ, ಸಮಾನತೆ ಮತ್ತು ಆಧ್ಯಾತ್ಮಿಕತೆ ಯನ್ನು ಬೋಧಿಸಬೇಕು. ಆದರೆ ಮನುಸ್ಮೃತಿ ಹೇಳುವುದು ಮನುಷ್ಯರೆಲ್ಲ ಸಮಾನರಲ್ಲ-ಕೆಲವು ಜಾತಿಯವರು ದೈವ ಸಮಾನರು ಉಳಿದ ವರೆಲ್ಲ ಪ್ರಾಣಿಗಳಿಗಿಂತ ಕೀಳಾದವರೆಂದು.

ಸೃಷ್ಟಿಕರ್ತನಾದ ಬ್ರಹ್ಮನು ತನ್ನ ಮುಖದಿಂದ ಬ್ರಾಹ್ಮಣನನ್ನು, ಭುಜದಿಂದ ಕ್ಷತ್ರಿಯನನ್ನು, ತೊಡೆಯಿಂದ ವೈಶ್ಯನನ್ನು ಮತ್ತು

## ಜಿಜ್ಞಾಸೆ

ಪಾದದಿಂದ ಶೂದ್ರನನ್ನು ನಿರ್ಮಿಸಿದ. ಬ್ರಾಹ್ಮಣ, ವೈಶ್ಯ ಮತ್ತು ಕ್ಷತ್ರಿಯರ ಸೇವೆ ಮಾಡುವುದೇ ಶೂದ್ರನ ಕರ್ತವ್ಯ. ಧರ್ಮ ಹಾಗೂ ವಿದ್ಯೆ ಗೌರವವನ್ನು ಪಡೆಯುವ ಸಾಧನಗಳು. ಬ್ರಾಹ್ಮಣನಿಗೆ ಜ್ಞಾನದಿಂದ, ಕ್ಷತ್ರಿಯನಿಗೆ ವೀರತನದಿಂದ, ವೈಶ್ಯನಿಗೆ ಧನ ಧಾನ್ಯದಿಂದ ಶ್ರೇಷ್ಠತೆ ಲಭಿಸಿದರೆ, ಶೂದ್ರನಿಗೆ ವಯಸ್ಸಿನಿಂದ ಮಾತ್ರವೇ ಲಭ್ಯ. ಅನಿವಾರ್ಯ ಸಂದರ್ಭವಿದ್ದಾ ಗಲೂ ಸಹ ಮೇಲ್ಜಾತಿಯವರು ಶೂದ್ರ ಸ್ತ್ರೀಯರನ್ನು ಪ್ರಥಮ ಹೆಂಡತಿಯಾಗಿ ಸ್ವೀಕರಿಸಬಾರದು. ಶೂದ್ರರ ಸ್ಪರ್ಶದಿಂದ ಬ್ರಾಹ್ಮಣನ ಭೋಜನವು ಹಾಳಾಗುತ್ತದೆ. ಶೂದ್ರನಿಗೆ ವಿದ್ಯಾಭ್ಯಾಸ ಮತ್ತು ಧರ್ಮೋಪದೇಶ ಕಲಿಸಬಾರದು. ಹೀಗೆ ಮಾಡಿದವನು ನರಕಕ್ಕೆ ಹೋಗುತ್ತಾನೆ. ಶೂದ್ರನ ಸನ್ನಿಧಿಯಲ್ಲಿ ವೇದಾಧ್ಯಯನ ಮಾಡಬಾರದು. ಶೂದ್ರನೊಡನೆ ಪ್ರಯಾಣ ಮಾಡಬಾರದು. ಮೇಲ್ಜಾತಿ ಯವರ ಹೆಣವನ್ನು ಶೂದ್ರ ಮುಟ್ಟಿದರೆ ಸ್ವರ್ಗ ಸಿಗುವುದಿಲ್ಲ. ಶೂದ್ರನು ರಾಜನಿಗೆ ಧರ್ಮ ವಿಚಾರವನ್ನು ಉಪದೇಶಿಸಲು ಅರ್ಹನಲ್ಲ. ಯಾವ ರಾಜ್ಯದಲ್ಲಿ ಶೂದ್ರನು ಧರ್ಮವಿಚಾರ ಮಾಡುತ್ತಾನೋ ಆ ರಾಜ್ಯದಲ್ಲಿ ಕಷ್ಟಗಳುಂಟಾಗುತ್ತವೆ. ಯಾವ ರಾಜ್ಯ ಶೂದ್ರರಿಂದಲೇ ತುಂಬಿರುತ್ತದೆಯೋ ಅದು ಬೇಗ ನಾಶ ಹೊಂದುತ್ತದೆ.

ಶೂದ್ರನು ಮೇಲ್ಜಾತಿಯವನ್ನು ಬೈದರೆ ಅವನ ನಾಲಿಗೆ ಯನ್ನು ಕತ್ತರಿಸಬೇಕು. ಮೇಲ್ಜಾತಿಯವರ ಹೆಸರುಗಳನ್ನೆತ್ತಿ ಬೈದ ಶೂದ್ರನ ಬಾಯಿಗೆ ೧೦ ಅಂಗುಲದ ಕಾದ ಕಬ್ಬಿಣದ ಸಲಾಕೆ ಯನ್ನಿಡಬೇಕು. ಯಾವ ಅಂಗಾಂಗಗಳಿಂದ ಶೂದ್ರನು ಮೇಲ್ಜಾತಿಯವರನ್ನು ಹೀಯಾಳಿಸುತ್ತಾನೋ ಆ ಅಂಗವನ್ನು ಕತ್ತರಿಸಬೇಕು. ಒಡೆಯನು ಶೂದ್ರನನ್ನು ಬಿಡುಗಡೆ ಮಾಡಿ ದರೂ ಸಹ, ಸೇವಕ ವೃತ್ತಿಯೇ ಅವನ ಕರ್ತವ್ಯವಾದ್ದರಿಂದ ಅವನು ಬಿಡುಗಡೆ ಹೊಂದಲಾರನು. ಬ್ರಾಹ್ಮಣನು ಶೂದ್ರನ ಸಂಪತ್ತನ್ನು ಹಿಂದು ಮುಂದು ನೋಡದೇ ಪಡೆಯಬಹುದು. ಏಕೆಂದರೆ ಸೇವಕನಿಗೆ ತನ್ನದೆನ್ನುವುದೇನೂ ಇಲ್ಲ. ಶೂದ್ರ ಸ್ತ್ರೀಯರನ್ನು ಸಂಭೋಗಿಸಿದಾಗ ಹುಟ್ಟುವ ಮಕ್ಕಳಿಗೆ ಆಸ್ತಿಯ ಪಾಲು ಕೊಡುವ ಅವಶ್ಯಕತೆ ಇಲ್ಲ. ಬ್ರಾಹ್ಮಣ ಲಾಂಛನಗಳಾದ ಜನಿವಾರ ತಲೆಜುಟ್ಟು ಇತ್ಯಾದಿಗಳನ್ನು ಧರಿಸಿದ ಶೂದ್ರನಿಗೆ ಶಿಕ್ಷೆಯಾಗಬೇಕು.

ಮೇಲ್ಜಾತಿಯವರ ಸೇವೆ ಮಾಡುವುದರಿಂದ ಶೂದ್ರರಿಗೆ ಉತ್ತಮ ಜನ್ಮ ಪ್ರಾಪ್ತವಾಗುತ್ತದೆ. ಧನಾರ್ಜನೆ ಮಾಡುವ ಶಕ್ತಿ ಸಾಮರ್ಥ್ಯಗಳಿದ್ದರೂ ಸಹ ಶೂದ್ರನು ಧನವನ್ನು ಗಳಿಸ ಬಾರದು. ಹಣ ಸಂಪಾದನೆ ಮಾಡಿದರೆ ಬ್ರಾಹ್ಮಣನನ್ನು ಕಡೆ ಗಣಿಸುತ್ತಾನೆ. ಕೀಳು ಜಾತಿಯವರು ಊರ ಹೊರಗೆ ವಾಸಿಸ ಬೇಕು. ಒಳ್ಳೆಯ ಪಾತ್ರೆಗಳಲ್ಲಿ ಅಡಿಗೆ ಮಾಡಬಾರದು. ಇವರು ನಾಯಿ-ಕತ್ತೆಗಳಂತಹ ಕೆಳ ಮಟ್ಟದ ಪ್ರಾಣಿಗಳನ್ನಷ್ಟೆ ಸಾಕ ಬೇಕು. ಒಡಕು ಮಣ್ಣಿನ ಪಾತ್ರೆಗಳಲ್ಲಿ ಊಟ ಮಾಡಬೇಕು. ಹೆಣದ ಮೇಲಿನ ಬಟ್ಟೆಗಳನ್ನು ಉಡಬೇಕು. ಕಬ್ಬಿಣದ ಬಳೆ ಇತ್ಯಾದಿಗಳು ಇವರ ಆಭರಣಗಳು. ಈ ಕೆಳಜಾತಿಯವರು ತಮ್ಮ ಹಣೆಗೆ ಗುರುತಿನ ಚಿನ್ಹೆ ಹಾಕಿಸಿಕೊಂಡು ಹಗಲು ಹೊತ್ತಲ್ಲಿ ಮಾತ್ರ ಕೆಲಸಕ್ಕಾಗಿ ಊರಲ್ಲಿ ಸಂಚರಿಸಬಹುದು. ಅನಾಥರಾದವರು ಸತ್ತರೆ ಅಂಥಹವರ ಶವಗಳನ್ನು ಹೊರ ಹಾಕಬೇಕು. ಇಹಪರಗಳಲ್ಲಿ ಶ್ರೇಯಸ್ಸನ್ನು ಬಯಸುವ ಶೂದ್ರನು ಬ್ರಾಹ್ಮಣರ ಸೇವೆ ಮಾಡಬೇಕು. ಬ್ರಾಹ್ಮಣ ಸೇವೆಯೇ ಶೂದ್ರನ ವಿಶಿಷ್ಟಕರ್ತವ್ಯ.

ಶೂದ್ರ ಹಿಂದುಗಳಿಗೆ ಸವರ್ಣೀಯ ಹಿಂದುಗಳ ಸಂಸ್ಕೃತಿ-ಸಂಪ್ರದಾಯಗಳ ಬಗ್ಗೆ ಅಪಾರ ಗೌರವವಿದೆ. ಆದರೆ ಧರ್ಮ ಪರಿಪಾಲನೆಯ ಹೆಸರಿನಲ್ಲಿ ನಿಮ್ಮ ವರ್ಗಗಳನ್ನು ಹೀಯಾಳಿ ಸುವ ಕೃತ್ಯ ತೀರ ಅಪಮಾನಕಾರಿ. ಇತಿಹಾಸದ ಪಠ್ಯಪುಸ್ತಕ ಗಳನ್ನೇ ತಲೆಕೆಳಗು ಮಾಡಿ ಬರೆಸುವ ಈ ಕಾಲದಲ್ಲಿ ಧರ್ಮ ಗ್ರಂಥಗಳನ್ನು ತಿದ್ದುಪಡಿ ಮಾಡುವುದು ಕಷ್ಟದ ಕೆಲಸವೇನಲ್ಲ. ಶಾಂತಿ, ಸಮಾನತೆ, ಆತ್ಮಶುದ್ಧಿ, ಶುಚಿತ್ವಗಳ ಬಗ್ಗೆ ಮಾತ ನಾಡುವ ಸವರ್ಣೀಯರು ಮನುಸ್ಮೃತಿಯಂಥಹ ಧರ್ಮ ಗ್ರಂಥಗಳಲ್ಲಿ ಬಹುಸಂಖ್ಯಾತ ಹಿಂದುಗಳಾದ ಶೂದ್ರರನ್ನು ಹೀಯಾಳಿಸುವ ಭಾಗಗಳನ್ನು ತೆಗೆದು ಹಾಕಿ ಅವರ ಮನ್ನಣೆಗೆ ಪಾತ್ರರಾಗುವಲ್ಲಿ ಪ್ರಯತ್ನ ಪಟ್ಟಿಲ್ಲ. ಬದಲಿಗೆ ದುರ್ಬಲ ತಳ ಹದಿಯ ಮೇಲೆ ಕಟ್ಟಿದ ಮುರುಕಲು ಮನೆಗೆ ಸವರ್ಣೀಯರು, ಕೆಳಜಾತಿಯವರು ಧರ್ಮಪರಿವರ್ತನೆಯ ಮೂಲಕ ಸಮಾ ನತೆಯನ್ನು ಸಾಧಿಸಲು ಹೊರಟಾಗ ಅದನ್ನು ಸಹ ವಿರೋಧಿ ಸುತ್ತಿದ್ದಾರೆ. ಸವರ್ಣೀಯರಷ್ಟೇ ಇರುವ ಹಿಂದು ಸಮಾಜ ಇತರರನ್ನು ಹಿಮ್ಮೆಟ್ಟಿಸಲಾರದೆಂಬುದು ಕಾಶ್ಮೀರಿ ಪಂಡಿತರು ಪಡುತ್ತಿರುವ ಬವಣೆಯಿಂದ ಅರಿವಾಗುತ್ತದೆ. ಶೂದ್ರ ಹಿಂದು ಗಳು ತಮ್ಮ ಪ್ರಾಣ ತ್ಯಾಗವಾದರೂ ಮಾಡಿ ಧರ್ಮರಕ್ಷಣೆ ಮಾಡಬಲ್ಲರು. ಆದರೆ ಎಲ್ಲದರಲ್ಲೂ ಶುದ್ಧಿ ಬಯಸುವ ಸವರ್ಣೀಯ ಹಿಂದುಗಳು, ಹಿಂದು ಧರ್ಮ ಶುದ್ಧಿಯ ಕಾರ್ಯವನ್ನು ಬೇಗ ಕೈಗೊಂಡು ಸಮಸ್ತ ಹಿಂದು ಧಾರ್ಮಿ ಕರ ಆಧ್ಯಾತ್ಮಿಕ ಶಾಂತಿ, ಸಮಾನತೆ ಮತ್ತು ಒಗ್ಗಟ್ಟನ್ನು ಕಾಣಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ.

○ಜಿ. ಪಾಂಡುನಾಯಕ್

ಅವಲೋಕನ

# ಬಸವಣ್ಣನವರ ಪರ್ಯಾಯ ಸಮಾಜ

**ಹನ್ನೆರಡನೇ ಶತಮಾನದ ಬಸವ ಚಳವಳಿ ಅನೇಕ ಮೌಲ್ಯಗಳನ್ನು, ಪ್ರಜ್ಞೆ ಮತ್ತು ಸರ್ವ ಸಮಾನತೆಯನ್ನು ಎತ್ತಿ ಹಿಡಿದ ಆದರ್ಶ ಚಳವಳಿ. ಅದುವರೆಗೆ ಇನ್ನಿಲ್ಲದಂತೆ ತುಳಿತಕ್ಕೊಳಗಾಗಿದ್ದ ತಳಸಮುದಾಯಗಳಲ್ಲಿ ಆತ್ಮಗೌರವವನ್ನು ಮೂಡಿಸಿದ ಬಸವಣ್ಣನವರು ಭವಿ ಮತ್ತು ಭಕ್ತ ವರ್ಗಗಳಲ್ಲಿ ಆಧ್ಯಾತ್ಮಿಕ ಪ್ರಕ್ರಿಯೆಯನ್ನು ಜಾರಿಗೆ ತಂದು, ಪರ್ಯಾಯ ಸಮಾಜವೊಂದನ್ನು ಕಟ್ಟಲು ನಡೆಸಿದ ಪ್ರಯತ್ನಗಳು ಅನುಕರಣೀಯ.**

○ ರಂಜಾನ್ ದರ್ಗಾ

'ಭೇರುಂಡನ ಪಕ್ಷಿಗೆ ದೇಹ ಒಂದೇ.
ತಲೆ ಎರಡರ ನಡುವೆ ಕನ್ನವಡ ಕಟ್ಟಿ
ಒಂದು ತಲೆಯಲ್ಲಿ ಹಾಲನೆರೆದು,
ಒಂದು ತಲೆಯಲ್ಲಿ ವಿಷವನೆರೆದಡೆ
ದೇಹವೊಂದೇ ವಿಷ ಬಿಡುವುದೇ ಅಯ್ಯಾ?
ಲಿಂಗದಲ್ಲಿ ಪೂಜೆಯ ಮಾಡಿ ಜಂಗಮದಲ್ಲಿ
ನಿಂದೆಯ ಮಾಡಿದಡೆ
ನಾ ಬೆಂದೆ ಕಾಣಾ, ಕೂಡಲಸಂಗಮದೇವಾ'

ಬಸವಣ್ಣನವರ ಆಧ್ಯಾತ್ಮಿಕ ಭೌತಿಕವಾದ ಮಹತ್ವವನ್ನು ಸಾರುವ ವಚನವಿದು. ಗಂಡಭೇರುಂಡ ಪಕ್ಷಿಯ ಕಾವ್ಯಪ್ರತಿಮೆಯ ಮೂಲಕ ಅವರು ಆಧ್ಯಾತ್ಮಿಕ ಜಗತ್ತು ಮತ್ತು ಭೌತಿಕ ಜಗತ್ತಿನ ಮೂಲ ಒಂದೇ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಭೇರುಂಡನ ಎರಡೂ ತಲೆಗಳ ಮಧ್ಯೆ ಕನ್ನಡವ (ಪರದೆ) ಕಟ್ಟಿ ಒಂದು ಕಡೆ ಹಾಲು ಮತ್ತು ಇನ್ನೊಂದು ಕಡೆ ವಿಷ ಎರೆದರೆ ಅವೆರಡೂ ಒಂದೇ ಜಠರದಲ್ಲಿ ಕೂಡಿ ಎಲ್ಲವೂ ವಿಷವಾಗಿ ಪಕ್ಷಿ ಸಾಯುವುದರಲ್ಲಿ ಸಂಶಯವಿಲ್ಲ. ಅದೇ ರೀತಿ ಇಷ್ಟಲಿಂಗ ಪೂಜಿಸಿ ಜಂಗಮ(ಸಮಾಜ) ಲಿಂಗವನ್ನು ಕಡೆಗಣಿಸಿದರೆ, ಅಂದರೆ ಸಾಮಾಜಿಕ ಪ್ರಜ್ಞೆ ಇಲ್ಲದೆ ಬರೀ ಆಧ್ಯಾತ್ಮಿಕವಾಗಿ ಬದುಕಿದರೆ ಪ್ರಯೋಜನವಿಲ್ಲ ಎಂದು ಸೂಚಿಸಿದ್ದಾರೆ. .

ಆಧುನಿಕ ಮಾನವ, ಸಕಲ ಜೀವಾತ್ಮರಿಗೆ ಲೇಸನೆ ಬಯಸುತ್ತ ಜೀವಜಾಲ ಸಮತೋಲನವನ್ನು ಕಾಯ್ದುಕೊಂಡು ನೆಮ್ಮದಿಯ ಸಮಾಜಕ್ಕಾಗಿ ಕಾರ್ಯೋನ್ಮುಖನಾಗಿ ಮುನ್ನಡೆದರೆ ಬಸವಣ್ಣನವರ ೧೨ನೇ ಶತಮಾನದ ಪರ್ಯಾಯ ಸಮಾಜವನ್ನು ತಲುಪಲು ಸಾಧ್ಯವಿದೆ. ಹೀಗೆ ಮುನ್ನಡೆಯುವುದೇ ಮೌನಕ್ರಾಂತಿ.

ವಿಜ್ಞಾನ ಮತ್ತು ಆಧ್ಯಾತ್ಮಗಳನ್ನು ಒಂದುಗೂಡಿಸುವ ಯತ್ನ ೨೧ನೇ ಶತಮಾನದಲ್ಲಿ ಬಿರುಸಿನಿಂದ ಪ್ರಾರಂಭವಾಗಿದೆ. ಹೀಗಾಗದಿದ್ದರೆ ಮಾನವ ಕುಲಕ್ಕೆ ಭವಿಷ್ಯವಿಲ್ಲ ಎಂಬ ತೀರ್ಮಾನಕ್ಕೆ ಜೀವಕಾರುಣ್ಯದಿಂದ ಕೂಡಿದ ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ವಿಶ್ವದ ಅನೇಕ ಕಡೆಗಳಲ್ಲಿ ಯತ್ನಿಸುತ್ತಿದ್ದಾರೆ. ಆದರೆ ಬಸವಣ್ಣನವರು ೮೫೦ ವರ್ಷಗಳ ಹಿಂದೆಯೆ ಆಧ್ಯಾತ್ಮಿಕ ಜಗತ್ತಿನ ಸುಜ್ಞಾನ ಮತ್ತು ಭೌತಿಕ ಜಗತ್ತಿನ ವಿಜ್ಞಾನವನ್ನು ಒಂದುಗೂಡಿಸುವುದರ ಮೂಲಕ ಹೊಸತನ್ನು ಸಾಧಿಸಿದ್ದಾರೆ. ಈ ಸಂಗಮತತ್ವಕ್ಕೆ ಆಧ್ಯಾತ್ಮಿಕ ಭೌತಿಕವಾದವೆಂದೂ ಬಸವಾದ್ವೈತವೆಂದೂ ಕರೆಯಬಹುದು.

ಆಧ್ಯಾತ್ಮಿಕ ಭೌತಿಕವಾದದ ಪ್ರಕಾರ ಲಿಂಗಾಂಗ ಸಾಮರಸ್ಯವೆಂದರೆ ಆಧ್ಯಾತ್ಮಿಕ ಜಗತ್ತು ಮತ್ತು ಭೌತಿಕ ಜಗತ್ತಿನ ಮಧ್ಯೆ ಅದ್ವೈತ ಸಾಧಿಸುವ ಭೇರುಂಡ ತತ್ತ್ವವೇ ಆಗಿದೆ. ಇದೇ ಬಸವಾದ್ವೈತ.

ವ್ಯಷ್ಟಿ-ಸಮಷ್ಟಿ ಇಷ್ಟಲಿಂಗ-ಜಂಗಮಲಿಂಗ, ಮಾನವನ ಒಳಲೋಕ-ಹೊರಲೋಕ. ಆಧ್ಯಾತ್ಮಿಕ ಲೋಕ-ಭೌತಿಕ ಲೋಕ. ಆತ್ಮಜ್ಞಾನ-ವಿಜ್ಞಾನ ಇವುಗಳಲ್ಲಿ ಆದ್ವೈತವನ್ನು ಸಾಧಿಸುವುದರ ಮೂಲಕ ಮೇಲುಕೀಳುಗಳನ್ನು ಮೀರಿದ ಮಾನವೀಯ ಸಮಾಜದ ರಚನೆ ಮಾಡುವುದು ಬಸವಣ್ಣನವರ ಗುರಿಯಾಗಿತ್ತು. ಅವರು ಆ ನಿಟ್ಟಿನಲ್ಲಿ ಬಹಳಷ್ಟು ಸಾಧಿಸಿ ತೋರಿಸಿದರು.

ಸಾಂಪ್ರದಾಯಿಕವಾಗಿ ಬೆಳೆದು ಬಂದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ನೇರವಾಗಿ ಎದುರಿಸದೆ, ಆಧ್ಯಾತ್ಮಿಕ ಭೌತಿಕವಾದ ಹಿನ್ನೆಲೆಯಲ್ಲಿ ಸರ್ವಸಮಾನತೆಯ ಪರ್ಯಾಯ ಸಮಾಜವೊಂದನ್ನು ಮೌನಕ್ರಾಂತಿಯ ಮೂಲಕ ಹೇಗೆ ರಚಿಸಬೇಕು ಎಂಬುದನ್ನು ತೋರಿಸಿಕೊಟ್ಟವರು ಮಹಾನುಭಾವಿ ಬಸವಣ್ಣನವರು. ಬಸವಣ್ಣನವರ ಈ ಮೌನಕ್ರಾಂತಿ ಇಡೀ ವಿಶ್ವಕ್ಕೆ ಮಾದರಿಯಾಗಿದೆ.

ಹೊರ ಜಗತ್ತು ಮನುಷ್ಯನನ್ನು ಆಳುತ್ತದೆ ಎಂಬುದು ಆಧುನಿಕ ಚಿಂತನೆಯಾಗಿದೆ. ಒಳ ಜಗತ್ತು ಮನುಷ್ಯನನ್ನು ಆಳುತ್ತದೆ ಎಂಬುದು ಪುರಾತನ ಭಾವನೆಯಾಗಿದೆ. ಆದರೆ ಅಂತರಂಗ-ಬಹಿರಂಗ ಶುದ್ಧಿಯ ಮೂಲಕ ಒಳ ಮತ್ತು ಹೊರ ಜಗತ್ತುಗಳನ್ನು ಹೇಗೆ ಆಳಬೇಕು ಎಂಬುದನ್ನು ಬಸವಾದ್ವೈತ ಸೂಚಿಸುತ್ತದೆ.

ಬಸವಣ್ಣನವರು ಇಷ್ಟಲಿಂಗದ ಮೂಲಕ ವ್ಯಷ್ಟಿಪ್ರಜ್ಞೆ ಬೆಳೆಸಿದರು. ಕಾಯಕದ ಮೂಲಕ ಸಾಮಾಜಿಕ ಶಕ್ತಿ ವೃದ್ಧಿಯಾಗುವಂತೆ ಮಾಡಿದರು. ದಾಸೋಹದ ಮೂಲಕ ಸಮಷ್ಟಿ ಪ್ರಜ್ಞೆಯ ವಿಕಸನ ಮಾಡಿದರು. ಮಾನವನ ಆಂತರಿಕ ಜಗತ್ತು ಕಾಲಾತೀತವಾಗಿದೆ ಆದರೆ ಬಾಹ್ಯ ಜಗತ್ತು ಸದಾ ಚಲನಶೀಲವಾಗಿದೆ ಎಂಬುದರ ಅರಿವು ಮೂಡಿಸಿದರು.

ದಾಸೋಹ ಪ್ರಜ್ಞೆಯ ಕಾಯಕ ತತ್ವವು ಸಮಾಜೋ ಕೌಟುಂಬಿಕ ಅರ್ಥಶಾಸ್ತ್ರವಾಗಿದೆ. 'ಶರಣ ಸತಿ ಲಿಂಗ ಪತಿ' ಎಂದು ಹೇಳುವಲ್ಲಿ ಇಡೀ ವಿಶ್ವವೇ ಕುಟುಂಬಮಯವಾಗಿದೆ. ಕುಟುಂಬ ವ್ಯವಸ್ಥೆಯನ್ನು ಸಾವಕಾಶವಾಗಿ ಕಳೆದುಕೊಳ್ಳುತ್ತಿರುವ ಆಧುನಿಕ ಸಮಾಜ ಎಂಥ ದುರ್ಗತಿಯನ್ನು ತಲುಪಬಲ್ಲದು ಎಂಬುದಕ್ಕೆ ದೈನಂದಿನ ವಿದ್ಯಮಾನಗಳೇ ಸಾಕ್ಷಿಯಾಗಿವೆ.

ಬಸವಣ್ಣನವರು ಗುರು-ಲಿಂಗ-ಜಂಗಮನನ್ನು ದೇವರ ಮೂರು ಸ್ವರೂಪಗಳೆಂದು ಪರಿಗಣಿಸುವುದರ ಮೂಲಕ ಅರಿವು, ಅಂತಃಸಾಕ್ಷಿ ಮತ್ತು ಸಮಾಜಕ್ಕೆ ಇರುವ ಸಮಾನ ಮಹತ್ವವನ್ನು ತೋರಿಸಿಕೊಟ್ಟರು. ವೈದಿಕ ದೇವತೆಗಳು ಮತ್ತು ಕ್ಷುದ್ರ ದೇವತೆಗಳನ್ನು ಮೊದಲು ಮಾಡಿ ಛತ್ತೀಸ ಕೋಟಿ ದೇವತೆಗಳನ್ನೆಲ್ಲ ದೂರ ಸರಿಸಿ ಅಂತಃಸಾಕ್ಷಿಯೇ ದೇವರೆಂದು ಹೇಳಿಕೊಟ್ಟರು. ಭೌತಿಕ ಆಸೆಗಳಿಂದ ಹೊರಬಂದು ಕೆಳ ವರ್ಗೀಕರಣವಾಗುವ ಮತ್ತು ಹುಟ್ಟಿನ ಮೂಲದ ಅಹಂನಿಂದ ಹೊರ ಬಂದು ಕೆಳಜಾತೀಕರಣವಾಗುವ ಬಗೆಯನ್ನು ಹೇಳಿಕೊಟ್ಟರು. ನಮ್ಮೊಳಗೆ ಕ್ರಾಂತಿಯಾಗದೆ ಹೊರಗಡೆ ಕ್ರಾಂತಿ ಸಾಧ್ಯವಿಲ್ಲ ಎಂಬುದನ್ನು ಜಗತ್ತು ತಿಳಿಯುವಂತೆ ಮಾಡಿದರು. ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಮನುಷ್ಯರು ತಮ್ಮ ವರ್ಗ ಮತ್ತು ವರ್ಣಗಳಿಂದ ಪ್ರಾಮುಖ್ಯ ಪಡೆಯದೆ ಗುಣ ಮತ್ತು ಕ್ರಿಯೆಯ ಮೂಲಕ ಪ್ರಾಮುಖ್ಯ ಪಡೆಯುತ್ತಾರೆ.

**ಕಾಯಕಜೀವಿಗಳ ಸಮಾಜ:**

ನಮ್ಮ ಸಮಾಜ ಸಹಸ್ರಾರು ವರ್ಷಗಳಿಂದ ರೈತ ಕೇಂದ್ರಿತ ಸಮಾಜವಾಗಿತ್ತು. ಭೂಪಾಲರು ಮತ್ತು ಜಮೀನುದಾರರು ವಿಧಿಸಿದ ಸಾಮಜಿಕ ನಿಯಮಗಳನ್ನು ಬಡರೈತರೂ ಪಾಲಿಸಬೇಕಿತ್ತು. ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವ ರೀತಿಯಲ್ಲಿ ಆಯಾ ಪದ್ಧತಿಯ ಸ್ವಯಂ ಪರಿಪೂರ್ಣ ಸಮಾಜ ವ್ಯವಸ್ಥೆ ಗಟ್ಟಿಗೊಂಡಿತ್ತು. ಕಾಯಕ ಜೀವಿಗಳು ಜಾತಿ ಉಪಜಾತಿ ಜೀವಿಗಳಾಗಿ ಪರಿವರ್ತನೆಗೊಂಡರು. ಹಿಂದಿನಿಂದ ಬಂದ ರೈತ ಕೇಂದ್ರಿತ ಸಮಾಜದಲ್ಲೇ. ಒಟ್ಟಾರೆ ಕಾಯಕಜೀವಿಗಳ ಕೇಂದ್ರಿತ ಪರ್ಯಾಯ ಸಮಾಜವನ್ನು ಮೊದಲಿಗೆ ರಚಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಈ ರೀತಿಯ ಬದಲಾವಣೆಯಿಂದ ಸಮಾಜದಲ್ಲಿ ಚಿಂತನ-ಮಂಥನ ಪ್ರಾರಂಭವಾಯಿತು. ಪ್ರಶ್ನಿಸುವ ಮತ್ತು

> **ವಿಜ್ಞಾನ ಮತ್ತು ಆಧ್ಯಾತ್ಮಗಳನ್ನು ಒಂದುಗೂಡಿಸುವ ಯತ್ನ ೨೧ನೇ ಶತಮಾನದಲ್ಲಿ ಬಿರುಸಿನಿಂದ ಪ್ರಾರಂಭವಾಗಿದೆ. ಹೀಗಾಗದಿದ್ದರೆ ಮಾನವ ಕುಲಕ್ಕೆ ಭವಿಷ್ಯವಿಲ್ಲ ಎಂಬ ತೀರ್ಮಾನಕ್ಕೆ ಜೀವಕಾರುಣ್ಯದಿಂದ ಕೂಡಿದ ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ವಿಶ್ವದ ಅನೇಕ ಕಡೆಗಳಲ್ಲಿ ಯತ್ನಿಸುತ್ತಿದ್ದಾರೆ. ಆದರೆ ಬಸವಣ್ಣನವರು ೮೫೦ ವರ್ಷಗಳ ಹಿಂದೆಯೆ ಆಧ್ಯಾತ್ಮಿಕ ಜಗತ್ತಿನ ಸುಜ್ಞಾನ ಮತ್ತು ಭೌತಿಕ ಜಗತ್ತಿನ ವಿಜ್ಞಾನವನ್ನು ಒಂದುಗೂಡಿಸುವುದರ ಮೂಲಕ ಹೊಸತನ್ನು ಸಾಧಿಸಿದ್ದಾರೆ. ಈ ಸಂಗಮತತ್ವಕ್ಕೆ ಆಧ್ಯಾತ್ಮಿಕ ಭೌತಿಕವಾದವೆಂದೂ ಬಸವಾದ್ವೈತವೆಂದೂ ಕರೆಯಬಹುದು.**

ಸಮಾನತೆಯ ಪ್ರಜ್ಞೆ ಮೂಡಿಸುವ ಪರ್ಯಾಯ ಸಮಾಜ ರಚನೆಯ ರಹಸ್ಯವನ್ನು ಬಸವಣ್ಣನವರು ತಿಳಿಸಿ ಕೊಟ್ಟರು. ಬಸವಣ್ಣನವರ ಕಾಯಕ ತತ್ತ್ವ ಅರ್ಥಶಾಸ್ತ್ರ ಮತ್ತು ಪರಮಾರ್ಥ ಶಾಸ್ತ್ರದ ತಿರುಳನ್ನು ಒಳಗೊಂಡಿದೆ. ಕಾಯಕಕ್ಕೆ ದಾಸೋಹದ ಚೌಕಟ್ಟಿದೆ. ಈ ದಾಸೋಹದ ಕಟ್ಟಳೆ ಇಲ್ಲದಿದ್ದರೆ ಸತ್ಕ್ರಿಯೆಯಿಂದ ಗಳಿಸಿದ ಹಣ ಸಂಗ್ರಹವಾದರೂ ಅಹಂ ಸೃಷ್ಟಿಯಾಗುವುದು. ಸಮಾಜದಲ್ಲಿ ಮೇಲು ಕೀಳಿಗೆ ನಾಂದಿಯಾಗುವುದು. ಜನರು ತಮ್ಮ ತಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಗೆ ಅನುಗುಣವಾಗಿ ಭಿನ್ನ ವಾಗಿರಬಹುದು. ವೈವಿಧ್ಯವು ನಿಸರ್ಗದ ನಿಯಮವಾಗಿದೆ. ಆದರೆ ಆಧ್ಯಾತ್ಮಿಕತೆಯು ಅದರ ಅಭಿನ್ನರೂಪವಾಗಿದೆ. ದಾನ ಪಡೆಯುವವರು ದೈನ್ಯಭಾವ ತಾಳುತ್ತ ಹೋಗುವರು. ಕೊಡುವವರಲ್ಲಿ ಅಹಂಕಾರ ಸೃಷ್ಟಿಯಾಗುವ ಸಾಧ್ಯತೆಗಳಿವೆ. ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ದಾನಕ್ಕೆ ಸ್ಥಾನವಿಲ್ಲ. ಅದರ ಸ್ಥಾನದಲ್ಲಿ ದಾಸೋಹವಿದೆ. ದಾಸೋಹವು ಕೊಡುವವನಲ್ಲಿ ವಿನಮ್ರ ಭಾವವನ್ನೂ ಪಡೆದುಕೊಳ್ಳುವಲ್ಲಿ ಸಮತಾ ಭಾವವನ್ನೂ ಸೃಷ್ಟಿಸುತ್ತದೆ. ಪರ್ಯಾಯ ಸಮಾಜವಾದ ಶರಣ ಸಮಾಜದಲ್ಲಿ ಬೇಡುವವರು ಸಿಗದ ಕಾರಣ ಕೊಡುವವರು ಬಡವಾಗುತ್ತಿದ್ದರು.

**ಹೊಸ ಪ್ರಜ್ಞೆ:**

ಬಡ್ಡಿಯಿಂದ ಸೃಷ್ಟಿಯಾಗುವ ಹಣ ಎಲ್ಲ ಅನಿಷ್ಟಗಳ ಮೂಲ ಎಂಬುದನ್ನು ಬಸವಣ್ಣನವರು ಅರಿತಿದ್ದರು. ಬಸವಣ್ಣನವರ ವಿಮೋಚನಾ ಸಿದ್ಧಾಂತದಲ್ಲಿ ಉದ್ದಂಡ ವೃತ್ತಿಗೆ ಮತ್ತು ಬಡ್ಡಿ ಹಣಕ್ಕೆ ಅವಕಾಶವಿಲ್ಲ. ಬಸವಣ್ಣ ನವರು ಬಡವರಿಗೆ ಹೊಸ ಕಾಯಕ ಕೊಡಲಿಲ್ಲ, ಹೊಸ ಪ್ರಜ್ಞೆ ಕೊಟ್ಟರು. ಬೇರೆಯವರಿಗೆ ಸಮಸ್ಯೆಯುಂಟು ಮಾಡದ ಯಾವುದೇ ಕಾಯಕ ಕೀಳಲ್ಲ ಎಂದರು.

ಮಾನವ, ಒಳ ಮತ್ತು ಹೊರ ಜಗತ್ತುಗಳಲ್ಲಿ ಏಕಕಾಲಕ್ಕೆ ಬದುಕುವುದರಿಂದ ಎರಡೂ ಜಗತ್ತುಗಳನ್ನು ಸಮಾನವಾಗಿ ನೋಡಬೇಕು. ಹಾಗೆ ನೋಡುವ ಕ್ರಮವನ್ನು ಬಸವಣ್ಣನವರು ಬದುಕಿ ತೋರಿಸಿದರು.

ಬಸವಣ್ಣನವರು ಬಿಜ್ಜಳನ ರಾಜ್ಯಶಕ್ತಿಯನ್ನು ಪ್ರಶ್ನಿಸಲಿಲ್ಲ, ಆತನ ಸಮಾಜ ವ್ಯವಸ್ಥೆಗೂ ಭಂಗ ತರಲಿಲ್ಲ. ಅರ್ಥಸಚಿವರಾಗಿ, ಪ್ರಧಾನಿಯಾಗಿ ಬಿಜ್ಜಳನ ಭಂಡಾರ ತುಂಬಿ ತುಳುಕುವಂತೆ ಮಾಡಿದರು. ಕಾಯಕದ ಮಹತ್ವ ಸಾರಿ ಜನ ದುಡಿಮೆಯ ಮೂಲಕ ಸಮೃದ್ಧ ಜೀವನ ನಡೆಸುವಂತೆ ಮಾಡಿದರು. ಬಿಜ್ಜಳನ ಸಾಂಪ್ರದಾಯಿಕ ವ್ಯವಸ್ಥೆಗೂ ಅವರೇ ಮುಂದಾಳಾಗಿದ್ದರು. ಸೃಷ್ಟಿಯಾಗುತ್ತಿದ್ದ ಹೊಸ ಪರ್ಯಾಯ ಸಮಾಜಕ್ಕೂ ಅವರೇ ಮುಂದಾಳಾಗಿದ್ದರು. ಜಾಗತಿಕ ಇತಿಹಾಸದಲ್ಲಿ ಇಂಥ ಇನ್ನೊಂದು ಉದಾಹರಣೆ ಇಲ್ಲ! ಹೀಗೆ ತಾವು ವಿರೋಧಿಸುವ ವ್ಯವಸ್ಥೆಯನ್ನೂ ಸೃಷ್ಟಿಸುವ ವ್ಯವಸ್ಥೆಯನ್ನೂ ಏಕಕಾಲಕ್ಕೆ ನಿಭಾಯಿಸಿದ ಧೀರೋದಾತ್ತನಾಯಕರು ಬಸವಣ್ಣನವರು.

ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಇರುವಿಕೆಗೆ ಮತ್ತು ಬದುಕಿಗೆ ಸಮಾನ ಮಹತ್ವವಿತ್ತು. ಇರುವಿಕೆಯು ಭೌತಿಕ ಪ್ರಕ್ರಿಯೆಯಾದರೆ ಬದುಕು ಆಧ್ಯಾತ್ಮಿಕ ಪ್ರಕ್ರಿಯೆಯಾಗಿದೆ. ಹೀಗೆ ಬಸವಣ್ಣನವರ ತತ್ತ್ವವು ಈ ಬದುಕನ್ನು ಗೌರವಿಸುವ ತತ್ತ್ವವಾಗಿದೆ.

ಬಸವಣ್ಣನವರು ಸಮಾಜದಲ್ಲಿ ಭವಿ ಮತ್ತು ಭಕ್ತ ವರ್ಗಗಳನ್ನು ಗುರುತಿಸಿದರು. ಈ ಜಗತ್ತು ಭೋಗವಸ್ತು ಎಂದು ಭಾವಿಸುವವರು ಭವಿಗಳು. ಯಾವುದೇ ಜೀವಿಗೆ ತೊಂದರೆಯಾಗದಂತೆ ಬದುಕುತ್ತ ಕಾಯಕದ ಮೂಲಕ ಈ ಜಗತ್ತಿನ ವಸ್ತುಗಳನ್ನು ಹಿತಮಿತವಾಗಿ ಬಳಸಿಕೊಳ್ಳುತ್ತ ಅನಂತವಾದ ಆಧ್ಯಾತ್ಮಿಕ ಜಗತ್ತಿನ ಕಡೆಗೆ ಸಾಗುವವರು ಭಕ್ತರು.

ಬಸವ ಎಂದರೆ ಒಬ್ಬ ವ್ಯಕ್ತಿ ಅಲ್ಲ, ಮಂತ್ರ್ಯಕ್ಷರ ಮಂತ್ರ. ವ್ಯಕ್ತಿ ಕುಟುಂಬ, ಸಮಾಜ ಮತ್ತು ವಿಶ್ವವನ್ನು ಬೆಸೆಯುವ ಮಂತ್ರ. ಮೇಲು ಕೀಳುಗಳನ್ನು ಹೋಗಲಾಡಿಸುವ ಮಂತ್ರ.

ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಮಹಾದೇವ ಭೂಪಾಲ(ಮೋಳಿಗೆ ಮಾರಯ್ಯ)ರಂಥ ಶ್ರೀಮಂತರು ವಸ್ತು ಮೋಹದಿಂದ ಹೊರಬರುವವರು. ಆಯ್ದಕ್ಕಿ ಲಕ್ಕಮ್ಮರಂಥ ಬಡವರು ವಸ್ತು ಮೋಹಕ್ಕೆ ಒಳಗಾಗದೆ ಇರುವರು. ಎಲ್ಲರೂ ಎಲ್ಲ ಅಹಂಕಾರದಿಂದ ಹೊರಬಂದು ಪ್ರೇಮದ ಅತ್ಯುನ್ನತ ಮಟ್ಟವನ್ನು ತಲುಪುವರು. ಎಲ್ಲ ಶರಣರ ವಚನಗಳು ಅಂತರಂಗದ ಬೆಳಕಾಗಿವೆ. ಅನುಭವ ಮಂಟಪದಲ್ಲಿ ಎಲ್ಲರ ಬೆಳಕು ಒಂದಾಗಿ ಹಳೆಯ ಸಮಾಜದ ಒಳಗೆಯೆ ಪರ್ಯಾಯ ಸಮಾಜದ ಉದಯವಾಯಿತು.

**ಬದುಕುವ ಕಲೆ:**

ನಾವು ಹೇಗೆ ಅಸ್ತಿತ್ವದಲ್ಲಿರಬೇಕು, ಹೇಗೆ ಬದುಕ ಬೇಕು, ಹೇಗೆ ಮಾತನಾಡಬೇಕು, ಹೇಗೆ ಉಣಬೇಕು, ಹೇಗೆ ಉಡಬೇಕು. ಬದುಕಿಗೆ ಅನಿವಾರ್ಯವಲ್ಲದ ಐಹಿಕ ವಸ್ತುಗಳ ಮೋಹದಿಂದ ಹೇಗೆ ಹೊರಬರಬೇಕು. ಚಿಂತೆಯಿಂದ ಬಿಡಿಸಿಕೊಂಡು ಸಮಸ್ಯೆಗಳನ್ನು ಹೇಗೆ ಎದುರಿಸಬೇಕು. ಸಮಾಜದಲ್ಲಿ ಯಾವ ರೀತಿ ವ್ಯವಹರಿಸಬೇಕು, ದೇಶದ ಕಾನೂನನ್ನು ಯಾವ ರೀತಿ ಗೌರವಿಸಬೇಕು, ಮಾನವ ಏಕತೆಯನ್ನು ಹೇಗೆ ಸಾಧಿಸಬೇಕು. ಯಾವುದನ್ನು ಸ್ವರ್ಗ ಎಂದು ಸ್ವೀಕರಿಸಬೇಕು. ದ್ವೇಷಾಸೂಯೆಗಳಿಲ್ಲದೆ ಮತ್ತು ರಕ್ತಪಾತವಿಲ್ಲದೆ ನ್ಯಾಯಬದ್ಧವಾದ ಸಮಾಜವನ್ನು ಯಾವ ರೀತಿ ನಿರ್ಮಾಣ ಮಾಡಬೇಕು. ಅನಿಷ್ಟಗಳ ವಿರುದ್ಧ ಹೇಗೆ ಹೋರಾಡಬೇಕು, ನಮ್ಮೊಳಗೇ ಹೇಗೆ ಜಗಳವಾಡಬೇಕು ಮತ್ತು ನಮ್ಮ ಹೊರಗೆ ಹೇಗೆ ಸೌಹಾರ್ದ ಸಾಧಿಸಬೇಕು. ನಾವು ಏಕೆ ಗಳಿಸಬೇಕು, ಹೇಗೆ ಗಳಿಸಬೇಕು ಮತ್ತು ಹೇಗೆ ಖರ್ಚು ಮಾಡಬೇಕು, ಪಂಚ ಮಹಾಭೂತಗಳನ್ನು ಹೇಗೆ ಅರಿತುಕೊಳ್ಳಬೇಕು. ಹೇಗೆ ಸಹಿಸಿಕೊಳ್ಳಬೇಕು ಆತ್ಮಸ್ತುತಿಯ ಸೆಳೆತದಿಂದ ಹೇಗೆ ಪಾರಾಗಬೇಕು. ಒಳ್ಳೆಯದು ಕಂಡಲ್ಲಿ ಹೇಗೆ ಹೊಗಳಬೇಕು, ಕೆಟ್ಟದ್ದನ್ನು ಹೇಗೆ ತೆಗಳಬೇಕು, ಬದುಕಿನ ಎಲ್ಲ ಏರಿಳಿತಗಳನ್ನು ಹೇಗೆ ಸಹಿಸಿಕೊಳ್ಳಬೇಕು. ನಮ್ಮ ಹೆಂಡಿರು ಮಕ್ಕಳೊಂದಿಗೆ ಮತ್ತು ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕು. ನಮ್ಮ ಪ್ರವೃತ್ತಿಗಳನ್ನು ಹೇಗೆ ಬಳಸಿಕೊಳ್ಳಬೇಕು. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಹೇಗೆ ನಿರ್ಧರಿಸಬೇಕು, ನಮ್ಮನ್ನು ನಾವು ಹೇಗೆ ವಿಮರ್ಶೆಗೆ ಒಳಪಡಿಸಬೇಕು. ಬೇರೆಯವರನ್ನು ಹೇಗೆ ವಿಮರ್ಶೆ ಮಾಡಬೇಕು. ಯಾವ ರೀತಿ ಸತ್ಯ ನುಡಿಯಬೇಕು, ಯಾವ ರೀತಿ ಪಶ್ಚಾತ್ತಾಪ ಪಡಬೇಕು.

ಧಾರ್ಮಿಕತೆ ಯಾವುದು, ಧರ್ಮ ಯಾವುದು, ಆಧ್ಯಾತ್ಮ ಯಾವುದು, ಆತ್ಮಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಯೊಂದಿಗೆ ಪರಿಪೂರ್ಣವಾದ ವ್ಯಕ್ತಿತ್ವವನ್ನು ಹೇಗೆ ರೂಪಿಸಿಕೊಳ್ಳಬೇಕು. ಇಷ್ಟಲಿಂಗದ ಮೂಲಕ ಮಾನಸಿಕ ವ್ಯಕ್ತಿತ್ವ ಹೇಗೆ ಬೆಳೆಯುವುದು, ಇಡೀ ಸಮಾಜವೇ ಜಂಗಮಲಿಂಗವೆಂದು ಭಾವಿಸಿ ದಾಸೋಹದ ಮೂಲಕ ಸಾಮಾಜಿಕ ವ್ಯಕ್ತಿತ್ವವನ್ನು ಹೇಗೆ ಪಡೆಯುವುದು, ಶಿವಯೋಗದಿಂದ ಮಾನಸಿಕ ವ್ಯಾಯಾಮ ಯಾವ ರೀತಿಯಾಗುವುದು, ಮಾನಸಿಕ ಶಕ್ತಿಯು ಯಾವ ರೀತಿಯಲ್ಲಿ ದೈಹಿಕ ಮತ್ತು ಸಾಮಾಜಿಕ ಶಕ್ತಿಗಳನ್ನು ಸದ್ಬಳಕೆ ಮಾಡಿಕೊಳ್ಳುವುದು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೇಗೆ ಪಡೆಯುವುದು. ಹೊರಗಿನ ಕ್ರಾಂತಿಯನ್ನು ಸಾಧಿಸುವುದಕ್ಕಾಗಿ ಒಳಗಿನ ಕ್ರಾಂತಿ ಯಾವ ರೀತಿ ನಡೆಯಬೇಕು. ಹಳೆಯ ವ್ಯವಸ್ಥೆಗೆ ವಿಮುಖವಾಗಿ ಮತ್ತು ಪರ್ಯಾಯ ವ್ಯವಸ್ಥೆಯಲ್ಲಿ ಕಾರ್ಯೋನ್ಮುಖವಾಗಿ, ಸೈನಿಕರನ್ನು ಬಳಸದೆ ಮತ್ತು ಪ್ರತ್ಯಕ್ಷ ಹೋರಾಟ ವನ್ನೂ ಮಾಡದೆ ಪ್ರಜ್ಞಾಪೂರ್ವಕವಾದ ಮೌನ ಕ್ರಾಂತಿಯನ್ನು ಯಾವ ರೀತಿ ಮಾಡಬೇಕು. ತಾನು ತಾನಾಗಿ ನೋಡುವ ಆತ್ಮಮುಖಿ, ತಾನೇ ಸಕಲ ಜೀವಿಗಳಾಗಿ ನೋಡುವ ಜೀವಾತ್ಮಮುಖಿ, ತನ್ನನ್ನು ತಾನು ಸಮೂಹವಾಗಿ ನೋಡುವ ಸಂಗಾತ್ಮಮುಖಿ ಮತ್ತು ತನ್ನನ್ನು ತಾನು ಅನಂತ

ವಾಗಿ ನೋಡುವ ಪರಮಾತ್ಮಮುಖಿ ಹೇಗಾಗಬೇಕು. ಸಕಲ ಜೀವಾತ್ಮರಿಗೇ ಲೇಸನ್ನೇ ಬಯಸುತ್ತ ಹೇಗೆ ವಿಶ್ವಮಾನವರಾಗಿ ರೂಪುಗೊಳ್ಳಬೇಕು ಎಂಬುದನ್ನು ಬಸವಣ್ಣನವರು ನಮಗೆ ಕಲಿಸಿಕೊಟ್ಟರು. ಮಾನಸಿಕ ವ್ಯಕ್ತಿತ್ವ ಆತ್ಮಮುಖಿಯಾಗಿರುತ್ತದೆ. ಭೌತಿಕ ವ್ಯಕ್ತಿತ್ವ ಜೀವಾತ್ಮಮುಖಿಯಾಗಿರುತ್ತದೆ. ಸಾಮಾಜಿಕ ವ್ಯಕ್ತಿತ್ವ ಸಂಗಾತ್ಮಮುಖಿಯಾಗಿರುತ್ತದೆ. ವಿಶ್ವ ವ್ಯಕ್ತಿತ್ವ ಪರಮಾತ್ಮ ಮುಖಿಯಾಗಿರುತ್ತದೆ. ಇದೇ ಬಸವಣ್ಣನವರ ಅದ್ವಿತೀಯ ಬದುಕುವ ಕಲೆ (ಆರ್ಟ್ ಆಫ್ ಲಿವಿಂಗ್).

ಬಸವಣ್ಣನವರ ಪರ್ಯಾಯ ಸಮಾಜ ವಿಶ್ವಕ್ಕೇ ಮಾದರಿಯಾಗಿದೆ. ೧೨ನೆಯ ಶತಮಾನದ ವಿಶ್ವ ಇಂಥ ಒಂದು ಸಮಾಜ ವ್ಯವಸ್ಥೆಯ ಕನಸನ್ನೂ ಕಂಡಿರಲಿಲ್ಲ. ಬಸವಣ್ಣನವರು ಪರ್ಯಾಯ ಸಮಾಜದ ಕನಸನ್ನು ಕಂಡರು. ವರ್ಗ ಹೋರಾಟದ ಸಿದ್ಧಾಂತದೊಂದಿಗೆ ದೇಶದ ಗಡಿಗಳಿಲ್ಲದ ಮಾನವ ಸಮಾಜ ನಿರ್ಮಾಣವಾಗಬೇಕು ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದು ಇಂಥ ಸಮಾಜದ ಮುನ್ಸೂಚನೆಯೊಂದಿಗೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

**ಮೌನಕ್ರಾಂತಿಯ ಹರಿಕಾರ:**

ಕಮ್ಯೂನಿಸ್ಟರ ಹಾಗೆ ಪ್ರತ್ಯಕ್ಷ ವರ್ಗಹೋರಾಟ ಮಾಡದೇ ಹುತಾತ್ಮ ಭಗತ್‌ಸಿಂಗ್ ಹಾಗೆ ರಾಜ್ಯ ವ್ಯವಸ್ಥೆಯ ವಿರುದ್ಧ ಬಂಡೇಳದೆ ಅಥವಾ ಮಹಾತ್ಮಾ ಗಾಂಧೀಜಿಯವರ ಹಾಗೆ ಯಾವುದೇ ಅಸಹಕಾರ ಚಳುವಳಿಯನ್ನೂ ಹೂಡದೆ ಪರಂಪರಾಗತ ರಾಜ್ಯಶಕ್ತಿ ಮತ್ತು ಸಮಾಜ ವ್ಯವಸ್ಥೆಯ ಬಂಧದ ಒಳಗಡೆಯ ಪರ್ಯಾಯ ಸಮಾಜ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ರೂಪಿಸುವುದ ಮೂಲಕ ಅದ್ವಿತೀಯ ಮೌನಕ್ರಾಂತಿಗೆ ನಾಂದಿ ಹಾಡಿದವರು ಬಸವಣ್ಣನವರು. ಅವರ ಕ್ರಾಂತಿಯ ಅಂತಿಮ ಘಟ್ಟವನ್ನು ತಲುಪಿದ್ದರೆ ಬಿಜ್ಜಳನಂಥ ದೊರೆಗಳ ರಾಜ್ಯವ್ಯವಸ್ಥೆಯೂ ಮುಂದುವರಿಯುತ್ತಿರಲಿಲ್ಲ. ಜಡ್ಡುಗಟ್ಟಿದ ಸಮಾಜ ವ್ಯವಸ್ಥೆಯೂ ಇರುತ್ತಿರಲಿಲ್ಲ.

ಬಸವಣ್ಣನವರು ಪ್ರಧಾನಿಯಾಗಿ ಬಿಜ್ಜಳನ ರಾಜ್ಯಸತ್ತೆಯೊಳಗಿನ ಸಾಂಪ್ರದಾಯಿಕ ಸಮಾಜದ ಮೇಲ್ವಿಚಾರಕರಾಗಿದ್ದರು. ಅದೇ ಸಂದರ್ಭದಲ್ಲಿ ಶರಣ ಸಂಕುಲದ ಮಾರ್ಗದರ್ಶಿಯಾಗುವುದರ ಮೂಲಕ ನವ ಸಮಾಜದ ಮುನ್ಸೂಚಕರಾಗಿದ್ದರು. ಅವರ ಪರಿಕಲ್ಪನೆಯ ಪರ್ಯಾಯಸಮಾಜ ನವ ಸಮಾಜದ ಇಡೀ ವ್ಯವಸ್ಥೆ ತಾನೇ ತಾನಾಗಿ ಕರಗಿ ಹೋಗುವುದೆಂಬುದು ಆಳುವ ವರ್ಗದ ಅರಿವಿಗೆ ಬಂದ ಕೂಡಲೇ ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡವಾಯಿತು. ಕೆಳಜಾತಿಯ ಮಹಾಜ್ಞಾನಿ ಅಲ್ಲಮಪ್ರಭುಗಳು ಶೂನ್ಯ ಸಿಂಹಾಸನವೇರಿದಾಗಲೇ ಕಲ್ಯಾಣದ ಪಟ್ಟಭದ್ರರಿಗೆ, ಎಲ್ಲ ದೃಷ್ಟಿಯಿಂದಲೂ ಸಮೃದ್ಧರಾಗಿದ್ದ ತಮ್ಮ ನೆಲ ಕುಸಿಯುತ್ತಿರುವ ಅರಿವಾಯಿತು. ಸಮಗಾರ ಹರಳಯ್ಯ ಮತ್ತು ಮಧುವರಸರು ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಜಾತಿಸಂಕರಗೊಂಡು ಕೇವಲ ಶರಣ ರಾಗಿದ್ದರು. ಅವರ ಮಕ್ಕಳ ಮದುವೆ ಸಾಂಪ್ರದಾಯಿಕ ಸಮಾಜದವರಿಗೆ ಅಂತರ್ಜಾತೀಯ ವಿವಾಹವಾಗಿ ಕಂಡಿತು. ಅದನ್ನೇ ನೆಪಮಾಡಿಕೊಂಡ ಯಥಾಸ್ಥಿತಿ ವಾದಿಗಳು ಶರಣರ ಹತ್ಯೆ ಮಾಡಿದರು. ಶರಣರ ಹತ್ಯಾಕಾಂಡ ಮಧ್ಯಯುಗದ ಭಾರತದ ಇತಿಹಾಸದಲ್ಲಿ ದಾಖಲಾಗದೇ ಹೋದುದು ಮಾನವೀಯತೆಗೆ ಮಾಡಿದ ಅವಮಾನವಾಗಿದೆ. ಈ ಹತ್ಯಾಕಾಂಡವನ್ನೇ 'ಕಲ್ಯಾಣ ಕ್ರಾಂತಿ' ಎಂದು ರಮ್ಯವಾಗಿ

> **ಕಮ್ಯೂನಿಸ್ಟರ ಹಾಗೆ ಪ್ರತ್ಯಕ್ಷ ವರ್ಗ ಹೋರಾಟ ಮಾಡದೇ ಹುತಾತ್ಮ ಭಗತ್‌ಸಿಂಗ್ ಹಾಗೆ ರಾಜ್ಯ ವ್ಯವಸ್ಥೆಯ ವಿರುದ್ಧ ಬಂಡೇಳದೆ ಅಥವಾ ಮಹಾತ್ಮಾ ಗಾಂಧೀಜಿಯವರ ಹಾಗೆ ಯಾವುದೇ ಅಸಹಕಾರ ಚಳುವಳಿಯನ್ನೂ ಹೂಡದೆ ಪರಂಪರಾಗತ ರಾಜ್ಯಶಕ್ತಿ ಮತ್ತು ಸಮಾಜ ವ್ಯವಸ್ಥೆಯ ಬಂಧದ ಒಳಗಡೆಯ ಪರ್ಯಾಯ ಸಮಾಜ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ರೂಪಿಸುವುದ ಮೂಲಕ ಅದ್ವಿತೀಯ ಮೌನಕ್ರಾಂತಿಗೆ ನಾಂದಿ ಹಾಡಿದವರು ಬಸವಣ್ಣನವರು. ಅವರ ಕ್ರಾಂತಿಯ ಅಂತಿಮ ಘಟ್ಟವನ್ನು ತಲುಪಿದ್ದರೆ ಬಿಜ್ಜಳನಂಥ ದೊರೆಗಳ ರಾಜ್ಯವ್ಯವಸ್ಥೆಯೂ ಮುಂದುವರಿಯುತ್ತಿರಲಿಲ್ಲ. ಜಡ್ಡು ಗಟ್ಟಿದ ಸಮಾಜ ವ್ಯವಸ್ಥೆಯೂ ಇರುತ್ತಿರಲಿಲ್ಲ.**


ಕರೆಯುವ ಮೂಲಕ ತೃಪ್ತಿ ಪಡುವುದರ ಬದಲು ಮಾನವ ಕುಲದ ಈ ಮಹತ್ತರ ಘಟನೆ ಇತಿಹಾಸದಲ್ಲಿ ದಾಖಲಾಗದೇ ಇರಲು ಕಾರಣಗಳೇನು? ಸುಲಿಗೆ ವ್ಯವಸ್ಥೆಯ ಪ್ರತಿಪಾದಕರು ಈ ಘಟನೆ ತನ್ನ ನೈಜ ರೂಪದಲ್ಲಿ ದಾಖಲಾಗದಂತೆ ನೋಡಿಕೊಳ್ಳುವಲ್ಲಿ ಅದು ಹೇಗೆ ಯಶಸ್ಸು ಸಾಧಿಸಿದರು ಎಂಬುದನ್ನು ಕಂಡುಕೊಳ್ಳುವುದು ಸಕಲ ಜೀವಿಗಳ ಬಗ್ಗೆ ಗೌರವವಿರುವ ಸಂಶೋಧಕರ ಆದ್ಯ ಕರ್ತವ್ಯವಾಗಿದೆ.

ಅಲ್ಲಮ ಪ್ರಭುಗಳು ಕೊಂಡಾಡಿದಂತೆ ಬಸವಣ್ಣನವರು 'ಯುಗದ ಉತ್ಸಾಹ'ವಾಗಿದ್ದರು. ಉನ್ನತ ಪ್ರಜ್ಞೆಯ ಪ್ರತೀಕವಾಗಿದ್ದರು. 'ಕರ್ಣದಲಿ ಜನಿಸಿದವರುಂಟೆ ಜಗದಲಿ' ಎಂದು ಹೇಳುವ ವೈಜ್ಞಾನಿಕ ಮನೋಭಾವದವರಾಗಿದ್ದರು. 'ಕೂಡಲ ಸಂಗಮ ದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೋ' ಎಂದು ಕರ್ಮ ಸಿದ್ಧಾಂತವನ್ನು ಅಲ್ಲಗೆಳೆದರು. 'ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ, ಕೂಡಲ ಸಂಗಮದೇವಾ ಜಂಗಮಕ್ಕೆರೆದಡೆ ಸ್ಥಾವರ ನೆನೆಯಿತ್ತು' ಎಂದು ಹೇಳುವುದರ ಮೂಲಕ ಜಗದ ಸೇವೆಯೇ ಜಗದೀಶನಿಗೆ ಮಾಡುವ ಪೂಜೆ ಎಂಬ ಅರಿವು ಮೂಡಿಸಿದರು. 'ಲೋಕವಿರೋಧಿ ಶರಣನಾರಿಗಂಜುವವನಲ್ಲ' ಎಂದು ಮೇಲುಕೀಳುಗಳಿಂದ ತುಂಬಿ ತುಳುಕುತ್ತಿದ್ದ ಸಮಾಜಕ್ಕೆ ಸ್ಪಷ್ಟಪಡಿಸಿದರು. 'ಕುಲವನರಸುವರೇ ಶರಣರಲ್ಲಿ ಜಾತಿಸಂಕರವಾದ ಬಳಿಕ?' ಎಂದು ಪ್ರಶ್ನಿಸುವುದರ ಮೂಲಕ ಪರ್ಯಾಯ ಸಮಾಜದ ಅಡಿಪಾಯ ಹಾಕಿದರು. 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು' ಎಂದು ಎದೆತಟ್ಟಿ ಹೇಳಿದರು. 'ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು' ಎಂದು ಪರ್ಯಾಯ ಸಮಾಜದ ಸದಸ್ಯರಿಗೆ ಆದೇಶಿಸುವ ಮೂಲಕ, ಬಡ್ಡಿಯ ಕ್ರೌರ್ಯದ ವಿರಾಟ್ ಸ್ವರೂಪದ ಅರಿವು ತಮಗಿದೆ ಎಂಬುದನ್ನು ತೋರಿಸಿಕೊಟ್ಟರು. 'ವೇದ ಶಾಸ್ತ್ರ ಆಗಮಂಗಳನೋದಿದವರು ಹಿರಿಯರೇ? ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?' ಎಂದು ಹೇಳುವುದರ ಮೂಲಕ ಮೇಲ್ಜಾತಿ, ಮೇಲ್ವರ್ಗದವರ ಪ್ರತಿಭೆಗಿಂತ ಕೆಳಜಾತಿ, ಕೆಳವರ್ಗಗಳ ಪ್ರತಿಭೆ ಕಡಿಮೆಯೇನಿಲ್ಲ ಎಂದು ವಾದಿಸಿದ್ದರು. 'ಕಳ್ಳ ನಾಣ್ಯ ಸಲುಗೆಗೆ ಸಲ್ಲದು' ಎಂದು ಹೇಳುವುದರ ಮೂಲಕ ಒಂದು ವ್ಯವಸ್ಥೆಯಲ್ಲಿ ಇದ್ದಾಗ ಅದರ ಕಟ್ಟಳೆಗಳನ್ನು ಪಾಲಿಸಬೇಕು ಎಂಬುದನ್ನು ಸೂಚಿಸಿದ್ದರು. 'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವ ನಿಕ್ಕುವೆ' ಎಂದು ಹಳೆಯದರಲ್ಲಿಯ ಅಸಂಬದ್ಧತೆಯನ್ನು ಪ್ರಶ್ನಿಸಿದ್ದರು. ಅವರು ತಮ್ಮನ್ನು ಅಕ್ರಮ ಸಂತಾನದ ಪ್ರತೀಕವಾಗಿ ನೋಡಿಕೊಳ್ಳುವುದರ ಮೂಲಕ ಹೊಲೆ ಮಾದಿಗರಿಗೂ ಕಡೆಯಾಗಿ ನಿಂತು ಹುಟ್ಟಿನ ಮೂಲದ ಒಣ ಅಹಂಭಾವವನ್ನು ಅಲ್ಲಗೆಳೆದರು. 'ಹೊನ್ನಿನೊಳ ಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎಂದು ಹೇಳಿ ನರನ ಸಂಗ್ರಹ ಬುದ್ಧಿಯ ಹಿಂದಿರುವ ಸಾಮಾಜಿಕ ಕ್ರೌರ್ಯವನ್ನು ತೋರಿಸಿ ಕೊಟ್ಟರು. 'ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ? ಎನ್ನೊಳಗಿದ್ದು ನಿನ್ನ ತೋರಲಿಕ್ಕೆ ನೀನೇ ರೂಪಾದೆ' ಎಂದು ಅಂತಃಸಾಕ್ಷಿಯನ್ನೇ ದೇವರೆಂದು ಸೂಚಿಸಿದರು. ಇಷ್ಟಲಿಂಗವನ್ನು ಅಂತಃಸಾಕ್ಷಿಯ ಪ್ರತೀಕವಾಗಿ ಕಂಡರು. ಇಡೀ ವಿಶ್ವವನ್ನು ಜಂಗಮಲಿಂಗದ ರೂಪದಲ್ಲಿ ನೋಡಿದರು. ಹೀಗಾಗಿ ಬಸವಣ್ಣನವರಿಗೆ ಯಾರೂ ಹೊರಗಿನವರಾಗಲಿಲ್ಲ. 'ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ' ಎಂದು ಅವರು ಸ್ವರ್ಗದ ಭ್ರಮೆಯನ್ನು ಕಳೆಯುವುದರ ಜೊತೆಗೆ ಭೂಮಿಯ ಮಹತ್ವದ ಮನವರಿಕೆ ಮಾಡಿಕೊಟ್ಟರು.

ಇಂಥ ಒಬ್ಬ ಮಹಾನುಭಾವ ಕನ್ನಡದ ನೆಲದಲ್ಲಿ ಆಗಿ ಹೋದದ್ದು ನಮ್ಮ ಅಂತಃಕರಣದ ಆಳಕ್ಕೆ ಇಳಿಯುತ್ತಲೆ ಇಲ್ಲ ಎಂದೆನಿಸುತ್ತದೆ. ಏಕೆಂದರೆ ನಮ್ಮ ದೇಶ ಮತ್ತು ಜಗತ್ತು ಇಷ್ಟೊಂದು ಅಧೋಗತಿಗೆ ಇಳಿಯುತ್ತಿದ್ದರೂ ಮನುಕುಲದ ರಕ್ಷಣೆಗಾಗಿ 'ಬಸವ' ಎಂಬ ಮಂತ್ರ್ಯಕ್ಷರ ಮಂತ್ರವನ್ನೇಕೆ ನಾವು ಉಚ್ಚರಿಸುತ್ತಿಲ್ಲ?

ಬಸವಣ್ಣನವರ ಪರ್ಯಾಯ ಸಮಾಜ ಎಂಥ ರೂಪುರೇಷೆಗಳನ್ನು ಹೊಂದಿತ್ತು? ಇಂದಿನ ವರ್ತಮಾನದ ಬದುಕನ್ನು ಹಸನುಗೊಳಿಸಲು ಬಸವಣ್ಣನವರ ವಿಚಾರಧಾರೆಯನ್ನು ಹೇಗೆ ಬಳಸಿಕೊಳ್ಳಬೇಕು? ಎಂಬುದನ್ನು ತಿಳಿದು ಕೊಳ್ಳುವುದು

ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯವಾಗಿದೆ.

'ಬಸವ ರಾಜ್ಯದ ಸಿರಿಯು, ಬಸವ ಬಡವರ ನಿಧಿಯು, ಎಂದು ಜನಪದ ಕವಿಯೊಬ್ಬ ಮನದುಂಬಿ ಹಾಡಿದ್ದಾನೆ. ಈ ಹೊಗಳಿಕೆ ಎಷ್ಟೊಂದು ಅರ್ಥಗರ್ಭಿತವಾಗಿದೆ! ಬಸವಣ್ಣನವರು ಅರ್ಥಸಚಿವರಾಗಿ, ಪ್ರಧಾನಿಯಾಗಿ ಕರ್ತವ್ಯಚ್ಯುತರಾಗದೆ ಬಿಜ್ಜಳನ ಭಂಡಾರ ತುಂಬಿ ತುಳುಕುವಂತೆ ಮಾಡಿದ್ದಾರೆ. ಕಾಯಕದ ಮೂಲಕ ಮಾನವಶಕ್ತಿಯ ಪ್ರಜ್ಞೆ ಮೂಡಿಸಿ ಜನಕೋಟಿಯ ಮೈಮನ ಗಳನ್ನು ಆರೋಗ್ಯಕರವಾಗಿರುವಂತೆ ನೋಡಿಕೊಂಡಿದ್ದಾರೆ. ಬಸವಣ್ಣನವರ ಪರ್ಯಾಯ ಸಮಾಜ ವ್ಯವಸ್ಥೆಯಲ್ಲಿ ಮೇಲುಕೀಳುಗಳಿಲ್ಲ, ವರ್ಗ ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲ ಕೊಡುವವರುಂಟು. ಬೇಡುವವರಿಲ್ಲ, ಆತ್ಮಗೌರವವುಂಟು, ಅಹಂಕಾರವಿಲ್ಲ, ಅನುಭವದ ಮೂಲಕ ಅನುಭಾವವುಂಟು ಹೊರತಾಗಿ, ದುಡಿಯದೆ ಧ್ಯಾನಿಸುವ ಮೂಲಕ ಬರುವ ಅನುಭಾವವಲ್ಲ, ಕಾಯಕವೆಂಬುದು ಬಸವಣ್ಣನವರ ಪರ್ಯಾಯ ಸಮಾಜದ ಆಧಾರ

**ಬಸವಣ್ಣನವರ ಪರ್ಯಾಯ ಸಮಾಜ ವ್ಯವಸ್ಥೆಯಲ್ಲಿ ಮೇಲುಕೀಳುಗಳಿಲ್ಲ, ವರ್ಗ ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲ ಕೊಡುವವರುಂಟು. ಬೇಡುವವ ರಿಲ್ಲ, ಆತ್ಮಗೌರವವುಂಟು, ಅಹಂಕಾರವಿಲ್ಲ, ಅನುಭವದ ಮೂಲಕ ಅನುಭಾವವುಂಟು ಹೊರತಾಗಿ, ದುಡಿಯದೆ ಧ್ಯಾನಿಸುವ ಮೂಲಕ ಬರುವ ಅನುಭಾವವಲ್ಲ, ಕಾಯಕ ವೆಂಬುದು ಬಸವಣ್ಣನವರ ಪರ್ಯಾಯ ಸಮಾಜದ ಆಧಾರ ಸ್ತಂಭವಾಗಿದೆ. ಈ ಕಾಯಕಕ್ಕೆ ದಾಸೋಹದ ಜವಾಬ್ದಾರಿಯಿದೆ. ದಾಸೋಹ ಪ್ರಜ್ಞೆ ಇಲ್ಲದ ಕಾಯಕ ಕೂಡ ಹೊಸ ಸಮಾಜದ ಸೃಷ್ಟಿಗೆ ಸಹಾಯಕವಾಗದು. ದಾಸೋಹವು ಮಿಗುತಾಯ ಮೌಲ್ಯ ಸೃಷ್ಟಿಯಾಗದಂತೆ ನೋಡಿಕೊಳ್ಳುತ್ತದೆ. ಬಡ್ಡಿ ವ್ಯವವಹಾರಕ್ಕೆ ಕಡಿವಾಣ ಹಾಕುತ್ತದೆ.**

ಸ್ತಂಭವಾಗಿದೆ. ಈ ಕಾಯಕಕ್ಕೆ ದಾಸೋಹದ ಜವಾಬ್ದಾರಿಯಿದೆ. ದಾಸೋಹ ಪ್ರಜ್ಞೆ ಇಲ್ಲದ ಕಾಯಕ ಕೂಡ ಹೊಸ ಸಮಾಜದ ಸೃಷ್ಟಿಗೆ ಸಹಾಯಕವಾಗದು. ದಾಸೋಹವು ಮಿಗುತಾಯ ಮೌಲ್ಯ ಸೃಷ್ಟಿಯಾಗದಂತೆ ನೋಡಿಕೊಳ್ಳುತ್ತದೆ. ಬಡ್ಡಿ ವ್ಯವವಹಾರಕ್ಕೆ ಕಡಿವಾಣ ಹಾಕುತ್ತದೆ. ಆದರೆ ಸಂಪತ್ತಿನ ಸಂಗ್ರಹಣೆ ಮತ್ತು ಬಡ್ಡಿ ವ್ಯವಹಾರದ ಮೇಲೆ ಇಂದಿನ ಆಧುನಿಕ ಜಗತ್ತು ನಿಂತಿದೆ. ಸಂಪತ್ತಿನ ಶೇಖರಣೆ ಮತ್ತು ವಿಸ್ತರಣೆ ಮಾಡುವವರರಿಗೆ ಯಾವುದೇ ಮೌಲ್ಯಗಳಿಲ್ಲ, ಯಾವುದೇ ನಾಚಿಕೆ ಇಲ್ಲ, ಅವರಿಗೆ ಹಣವೇ ಮೌಲ್ಯ. ಆದಕ್ಕಾಗಿ ಅವರು ಯಾವುದೇ ದೇಶದ ಮೇಲೆ ಯುದ್ಧ ಮಾಡಬಲ್ಲರು. ಲಕ್ಷಾಂತರ ಮಕ್ಕಳ ಮತ್ತು ತಾಂಯಂದಿರನ್ನು ಕೊಲಬಲ್ಲರು. ಮಾನವನ ಪ್ರತಿಭೆ, ನಾಗರಿಕತೆ ಮತ್ತು ಪರಂಪರೆಯ ಪ್ರತೀಕವಾದ ಪುರಾತನ ಕಲಾತ್ಮಕ ಸ್ಮಾರಕಗಳನ್ನು ಧ್ವಂಸ ಮಾಡಬಲ್ಲರು. ಧರ್ಮಗಳ ದುರ್ಬಳಕೆಗೆ ಮುಂದಾಗಬಲ್ಲರು. ಧರ್ಮದ ಹೆಸರಿನಲ್ಲಿ ಕೋಮುಗಲಭೆಗಳನ್ನು ಸೃಷ್ಟಿಸಬಲ್ಲರು. ಭಯೋತ್ಪಾದನೆಯನ್ನು ಹಬ್ಬಿಸಬಲ್ಲರು. ಎಲ್ಲ ರೀತಿಯ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿ, ಕೊಲೆ, ಸುಲಿಗೆ ಮಾಡಬಲ್ಲರು. ಹೀಗೆ ಸಾಗುತ್ತ ಇಂದು ನಾವು ಯಾವ ಮಟ್ಟವನ್ನು ತಲುಪಿದ್ದೇವೆ ಎಂದರೆ ವಿಶ್ವದಲ್ಲಿ ಇಂದು ೩೫ ಸಾವಿರ ಪರಮಾಣು ಅಸ್ತ್ರಗಳಿವೆ. ಒಂದು ಪರಮಾಣು ಅಸ್ತ್ರ ಕ್ಷಣಾರ್ಧದಲ್ಲಿ ಸೃಷ್ಟಿಸುವ ಶಾಖ, ವಿಶ್ವದ ಇತಿಹಾಸದಲ್ಲಿ ಸಾಂಪ್ರದಾಯಿಕ ಅಸ್ತ್ರಗಳು ಸೃಷ್ಟಿಸಿದ ಒಟ್ಟು ಶಾಖಕ್ಕಿಂತ ಹೆಚ್ಚಿಗೆ ಇರುವುದು! ಇಂಥ ಇನ್ನೂ ೨,೧೦,೦೦ ಪರಮಾಣು ಅಸ್ತ್ರಗಳನ್ನು ತಯಾರಿಸುವಷ್ಟು ಸಂಪನ್ಮೂಲಗಳನ್ನು ಅಮೆರಿಕದಂಥ ಶ್ರೀಮಂತ ರಾಷ್ಟ್ರಗಳು ಸಂಗ್ರಹಿಸಿಟ್ಟಿವೆ. ಇದಲ್ಲದೆ ವಿಶ್ವದ ೬೪ ರಾಷ್ಟ್ರಗಳಲ್ಲಿ ೧೧ ಕೋಟಿ ನೆಲಬಾಂಬುಗಳನ್ನು ಹುಗಿದಿಡಲಾಗಿದೆ. ಇದರಿಂದ ಪ್ರತಿವರ್ಷ ೨೫ ಸಾವಿರಕ್ಕೂ ಹೆಚ್ಚು ಮಂದಿ ಸಾಯುತ್ತಾರೆ. ಅಷ್ಟೇ ಪ್ರಮಾಣದ ಜನ ಅಂಗವಿಕಲರಾಗುತ್ತಾರೆ. ಹೀಗೆ ನಾವು ಬೆಳೆಯ ಭೂಮಿಯಲ್ಲಿ ಪ್ರಳಯದ ಕಸವನ್ನು ತುಂಬಿದ್ದೇವೆ.

**ಪ್ರಜ್ಞಾಪ್ರಧಾನ ಸಮಾಜ...**

ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಭವಿಯೂ ಭಕ್ತನಾಗುತ್ತಾನೆ. ಐಹಿಕ ಬದುಕಿಗೆ ಆತ್ಮಜ್ಞಾನದ ಧಾರೆ ಎರೆಯುತ್ತಾನೆ. ಮಾನಸಿಕವಾಗಿ ಇಡೀ ಸಮೂಹವೇ ತಾನಾಗುತ್ತಾನೆ. ಜಾತಿ ಮನೆಯಿಂದ ಮಹಾಮನೆಗೆ ಸಾಗುತ್ತಾನೆ. ಬಹುದೇವತೆಗಳನ್ನು ತೊರೆದು ಏಕದೇವೋಪಾಸಕನಾಗುತ್ತಾನೆ. ಸ್ಥಾವರಲಿಂಗದಿಂದ ಇಷ್ಟಲಿಂಗಕ್ಕೆ ಹೊರಳುತ್ತಾನೆ. ಹೆಂಡಿರು ಮಕ್ಕಳ್ಳುಳ್ಳ ಶಿವನ ಸ್ಥಾನಲ್ಲಿಂದ ಅನಾದಿ, ಅನಂತ, ನಿರಾಕಾರ ಶಿವನ ಸ್ಥಾಪನೆ ಮಾಡುತ್ತಾನೆ. ಮಂದಿರಗಳನ್ನು ತೊರೆದು ಅನುಭವ ಮಂಟಪಕ್ಕೆ ಬರುತ್ತಾನೆ. ಕರ್ಮ ಸಿದ್ಧಾಂತ ಅಲ್ಲಗೆಳೆದು ಕಾಯಕ ಸಿದ್ಧಾಂತವನ್ನು ಸ್ವೀಕರಿಸುತ್ತಾನೆ. ದಾನಿ ಎನ್ನಿಸಿಕೊಳ್ಳುವ ಬದಲು ದಾಸೋಹಿ ಎನಿಸಿಕೊಳ್ಳುತ್ತಾನೆ. ರಾಜಪ್ರಭುತ್ವದ ಉಸಿರುಗಟ್ಟುವ ವಾತಾವರಣದಿಂದ ಹೊರಬಂದು ಪ್ರಜಾಪ್ರಭುತ್ವದ ಬಯಲಿನ ಕಡೆಗೆ ಸಾಗುತ್ತಾನೆ. ಒಳಗೆ ಸ್ಥಿತಪ್ರಜ್ಞನಾಗಿಯೂ ಹೊರಗೆ ಸ್ಥಿತಿಪ್ರಜ್ಞನಾಗಿಯೂ ಇರುತ್ತಾನೆ. ನಂಬಿಕೆ ಪ್ರಧಾನ ಸಮಾಜದಿಂದ ಪ್ರಜ್ಞಾಪ್ರಧಾನ ಸಮಾಜಕ್ಕೆ ಬಂದ ಕಾರಣ ಮಾತಿಲ್ಲದ ಸಮುದಾಯದ ಮಾತಾಗುತ್ತಾನೆ.

ಅಹಂಕಾರ ಭಾವ ಅಳಿಸಿ, ಸಮರ್ಪಣಾ ಭಾವ ಬೆಳೆಸುವುದು. ವೈಯಕ್ತಿಕವಾದುದನ್ನು ಸಾರ್ವತ್ರಿಕಗೊಳಿಸುವುದು. ಸಾರ್ವತ್ರಿಕವಾದುದನ್ನು ವೈಯಕ್ತಿಕಗೊಳಿಸುವುದು ಬಸವಾದ್ವೈತ. ಅವುಗಳಲ್ಲಿ ಅಭೇದ್ಯ ಕಲ್ಪಿಸುವುದು. ಕನಿಷ್ಠ ಅವಶ್ಯಕತೆಗಳ ಜೊತೆ ಬದುಕುವುದು. ಸರಳ ಬದುಕಿಗೆ ವಿರುದ್ಧವಾದ ವಸ್ತುಗಳನ್ನು ತ್ಯಜಿಸುವುದು, ದೇಹ ಮತ್ತು ಮನಸ್ಸಿಗೆ ಒಳ್ಳೆಯದಲ್ಲದ ಹವ್ಯಾಸಗಳಿಂದ ಹೊರಬರುವುದು ಬಸವಣ್ಣನವರ ಪರ್ಯಾಯ ಸಮಾಜ ನಿರ್ಮಾಣಕ್ಕೆ ಅವಶ್ಯವಾಗಿದೆ.

ಪರಿಪೂರ್ಣವಾಗಿ ಅಸಮಾನತೆಯ ವಿರೋಧಿಯಾಗಬೇಕೆ? ದಲಿತರು, ಮಹಿಳೆಯರು ಮತ್ತು ಬಡವರ ಪರವಾಗಬೇಕೆ? ಬಸವಮಾರ್ಗದಲ್ಲಿ ಮುನ್ನಡೆಯಿರಿ.

ಅಹಂಕಾರದಿಂದ ವಿಶ್ವನಾಶ. ದಯೆಯಿಂದ ವಿಶ್ವರಕ್ಷಣೆ–ಇದೇ ಬಸವಣ್ಣನವರು ಸಾರಿದ ಸತ್ಯ. □





ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.




ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು – ೫೬೦ ೦೯೧
ದೂರವಾಣಿ : ೩೨೮ ೭೯೪೩ / ೩೨೮ ೧೬೬೭

## ಪ್ರಚಲಿತ

**ಡಿಸೆಂಬರ್ ೬, ೨೦೦೩ರಿಂದ ಜನವರಿ ೧೦, ೨೦೦೪ರವರೆಗೆ ಮೈಸೂರಿನಲ್ಲಿ 'ದ್ವೇಷ ಬಿಟ್ಟು ದೇಶ ಕಟ್ಟು' ಎನ್ನುವ ಅಪರೂಪದ ಕಾರ್ಯಕ್ರಮ ನಡೆಯಿತು. ಮೈಸೂರಿನ ಎಲ್ಲ ಹಿರಿಯ ನಾಗರಿಕರು ಹಾಗೂ ಸಾಹಿತಿ-ಕಲಾವಿದರು ಸೇರಿ ಆಯೋಜಿಸಿದ್ದ ಈ ಕಾರ್ಯಕ್ರಮ ಕೋಮುವಾದಿಗಳಿಗೆ ನೀತಿ ಪಾಠವಾಯಿತು. ಸಮಾವೇಶದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಪ್ರೊ|| ಜಿ.ಎಚ್.ನಾಯಕ್ ಉದ್ಘಾಟನಾ ಸಮಾರಂಭದಲ್ಲಿ ಆಡಿದ ಪ್ರಾಸ್ತಾವಿಕ ಮಾತುಗಳು ಇಲ್ಲಿವೆ.**

**ಪ್ರೊ|| ಜಿ.ಎಚ್.ನಾಯಕ್**

# ದ್ವೇಷ ಬಿಟ್ಟು ದೇಶ ಕಟ್ಟು

ದ್ವೇಷ ಬಿಟ್ಟು ದೇಶ ಕಟ್ಟು: ಮೈಸೂರು ಸಮಾವೇಶದ ಉದ್ಘಾಟನೆ ಇಂದು ಇಲ್ಲಿ ಈಗ ಈ ವೇದಿಕೆ ಮೂಲಕ ಆಗುತ್ತಲಿದೆ. ಯಾವ ಧರ್ಮದವರ ಬಗ್ಗೆಯೇ ಆಗಲಿ ದ್ವೇಷ ಬೆಳೆಸಿಕೊಳ್ಳುವುದು ಮನುಷ್ಯತ್ವಕ್ಕೆ, ಮನುಷ್ಯ ಘನತೆಗೆ ಸಲ್ಲುವಂಥದಲ್ಲ. ದ್ವೇಷದಿಂದ ದೇಶ ಕಟ್ಟುವುದು ಸಾಧ್ಯವಿಲ್ಲ. ದ್ವೇಷದ ಗುಣ ಏನಿದ್ದರೂ ಕುಟ್ಟುವುದು, ಕೆಡಹುವುದು; ಕಟ್ಟುವುದಲ್ಲ. ಇಂಥ ಕುಟ್ಟುವ ಕೆಡಹುವ ಕ್ರಿಯೆ ಮತ್ತು ಮನೋಧರ್ಮದ ರಾಜಕೀಯವು ದೇಶದಲ್ಲಿ ದಿನೇ ದಿನೇ ವಿಜೃಂಭಿಸುತ್ತಲೇ ಹೋಗುತ್ತಿದೆ; ತೀವ್ರ ಆತಂಕವನ್ನು ಹುಟ್ಟಿಸುತ್ತಲೇ ಇದೆ.

ಶ್ರೀರಾಮ ಜನ್ಮಭೂಮಿ ಹೆಸರಿನಲ್ಲಿ ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಹಿಂದೂ ತೀವ್ರವಾದಿಗಳು ಕುಟ್ಟಿ ಕೆಡಹಿದ ೧೯೯೨ರ ಡಿಸೆಂಬರ್ ೬ನೆಯ ತಾರೀಖು ಒಂದು ಕರಾಳ ದಿನವಾಯಿತು. ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಕುಟ್ಟುವ ಕೆಡಹುವ ಕೆಟ್ಟ ರಾಜಕೀಯವು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಆ ದಿನದಿಂದಲೇ ಪ್ರಾರಂಭವಾಯಿತು.

ಆ ಕಾಲದಲ್ಲಿ ದೇಶದ ಅನೇಕ ಕಡೆಗಳಲ್ಲಿ ಕೋಮುಗಲಭೆಗಳಾದವು. ಶಾಂತಿಪ್ರಿಯರ ನೆಲೆಯಾದ ಈ ನಮ್ಮ ಮೈಸೂರಿನಲ್ಲಿಯೂ ಕೋಮುಗಲಭೆ ಉಂಟಾಗಿ ಕೊಲೆ ಸುಲಿಗೆಗಳೆಲ್ಲ ಆದವು. ಆ ದುಃಸ್ವಪ್ನದಂಥ ನೆನಪು ಈಗಲೂ ಮೈಸೂರಿನವರ ಮನಸ್ಸಿನಲ್ಲಿ ಕಾಡುವ ನೆನಪಾಗಿ ಉಳಿದುಕೊಂಡಿದೆ. ಆ ಕೋಮುಗಲಭೆಯ ಕಾಲದಲ್ಲಿ ಮೈಸೂರಿನ 'ಮಾನವ ಸೌಹಾರ್ದ ಸಮಿತಿ'ಯ ಆಶ್ರಯದಲ್ಲಿ ರಚಿತವಾದ ಶಾಂತಿ ಸಮಿತಿಯ ಸದಸ್ಯರಲ್ಲಿ ಒಬ್ಬನಾಗಿ ನಾನೂ ಕೆಲಸ ಮಾಡಿದ್ದೆ. ಮಿತ್ರರಾದ ಕೆ.ಎಂ. ಜಯರಾಮಯ್ಯನವರು ಆ ಸಮಿತಿಯ ಸಂಚಾಲಕರಾಗಿದ್ದರು. ಲತಾ ಮೈಸೂರು, ಎನ್.ಎಸ್. ಗೋಪಿನಾಥ್ ಮೊದಲಾದ ನಮ್ಮ ಕಿರಿಯ ಸ್ನೇಹಿತರೂ, ಡಾ|| ಎಸ್.ಎ.ಬಿ. ಪಾರ್ಶಿಯಾರಂಥ ಕೆಲವು ಹಿರಿಯರೂ ಆ ಶಾಂತಿ ಸಮಿತಿಯ ಸದಸ್ಯರಾಗಿದ್ದರು. ಆ ಕೋಮುಗಲಭೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಮೈಸೂರಿಗೆ ಪೊಲೀಸ್ ಕಮೀಷನರ್ ಆಗಿ ನೇಮಕಗೊಂಡು ವರ್ಗವಾಗಿ ಬಂದಿದ್ದ ನನಗೆ ಪೂರ್ವ ಪರಿಚಿತರಾಗಿದ್ದ ಡಾ|| ಅಜಯ್ ಕುಮಾರ್ ಸಿಂಗ್ ಅವರು ಗಲಭೆ ಪ್ರದೇಶಗಳಿಗೆ ಹೋಗಿ ಕೆಲಸ ಮಾಡಲೆಂದು ಶಾಂತಿ ಸಮಿತಿಯ ಸದಸ್ಯರಿಗೆ ವಿಶೇಷ 'ಪಾಸ್'ಗಳನ್ನು ನೀಡಿದ್ದರು, ಇಲಾಖೆಯ ಕಡೆಯಿಂದ ಅಗತ್ಯ ನೆರವನ್ನೂ ನೀಡಿ ಯುಕ್ತವಾದ ರೀತಿಯಲ್ಲಿ ಸಹಕರಿಸಿದ್ದರು. ಗಲಭೆ ಪೀಡಿತ ಮೊಹಲ್ಲಾಗಳಲ್ಲಿ ಶಾಂತಿ ಮೆರವಣಿಗೆಗಳನ್ನು ಸಂಘಟಿಸಲಾಗಿತ್ತು. ಪ್ರಗತಿ ಪರ ಮಹಿಳಾ ವೇದಿಕೆಯಾದ ಸಮತಾ ವೇದಿಕೆಯ ಸದಸ್ಯೆಯರೂ ಅಲ್ಪ ಸಂಖ್ಯಾತ ನಿರಾಶ್ರಿತ ಮಹಿಳೆಯರ ಶಿಬಿರಗಳಿಗೆಲ್ಲ ಹೋಗಿ ನೆರವು ನೀಡುವ ಸೇವಾಕಾರ್ಯ ಮಾಡಿದ್ದರು. ಹಾಗಾಗಿ ಕೋಮುಗಲಭೆಯ ಘೋರವನ್ನು, ಪಾತಕವನ್ನು ಹತ್ತಿರದಿಂದ ನೋಡಿ ಅರಿಯುವ ಅವಕಾಶ ಸ್ವಲ್ಪ ಮಟ್ಟಿಗೆ ನಮಗೆ ದೊರೆಯುವಂತಾಗಿತ್ತು.

ಈಗ ನಮ್ಮ ಕರ್ನಾಟಕದಲ್ಲಿಯೆ ಚಿಕ್ಕಮಗಳೂರಿನ ಬಾಬಾ ಬುಡನ್ ಗಿರಿಯ ದತ್ತಪೀಠವನ್ನು ಕರ್ನಾಟಕದ ಅಯೋಧ್ಯೆಯನ್ನಾಗಿ ಮಾಡುವುದಾಗಿ ರಾಜ್ಯ ಬಿಜೆಪಿ ಪಕ್ಷದ ಅನಂತಕುಮಾರ್ ಅವರು ಘೋಷಿಸಿದ್ದಾರೆ. ಜಾತಿ ಮತಾತೀತತೆಯ ಮಾತನಾಡುವ ಬುದ್ಧಿಜೀವಿಗಳಿಗೆ, ಜಾತಿ, ಮತ ಧರ್ಮ ನಿರಪೇಕ್ಷವಾದಿಗಳಿಗೆ (ಸೆಕ್ಯುಲರಿಸ್ಟರಿಗೆ) ಮರಣದಂಡನೆಯನ್ನು ಜನರು ನೀಡುತ್ತಾರೆ ಎಂದು ಹೇಳುವ ಮಟ್ಟಿನ ಪ್ರಚೋದನಾತ್ಮಕ ಭಾಷಣ ಮಾಡುತ್ತ ತಿರುಗುವ ತೊಗಾಡಿಯಾ (ನೋಡಿ: -'Hindutva storm will not be limited to Gujarat' : Togadia ಎಂಬ, ನೀನಾ ವ್ಯಾಸ್ ಅವರ ವರದಿ ಹಾಗೂ ಅದರೊಳಗೇ ಇರುವ 'Hindutva opponents will get death sentence' ಎಂಬ ಉಪ ಶೀರ್ಷಿಕೆ- ದಿ ಹಿಂದೂ ಪತ್ರಿಕೆ ೧೮-೧೨-೨೦೦೨) ಸಂಘಪರಿವಾರದ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ದತ್ತಪೀಠ ಸಂಬಂಧವಾದ ವಿವಾದ ವನ್ನು ಹುಟ್ಟು ಹಾಕಿದ್ದಲ್ಲದೆ, ನ್ಯಾಯಾಲಯವು ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವಂತೆ ಆದೇಶ ನೀಡಿರುವಾಗಲೂ ಅವರು ಅಂಥ ಬೆದರಿಕೆ ಹಾಕುವಷ್ಟು ಮುಂದಾಗಿರುವುದು ಅತ್ಯಂತ ಆತಂಕಕಾರಿಯಾದ, ಅಪಾಯಕಾರಿಯಾದ ಬೆಳವಣಿಗೆಯಾಗಿದೆ. ರಾಜ್ಯ ಸರ್ಕಾರವು ಕಾನೂನು ಸುವ್ಯವಸ್ಥೆಗೆ ಅಗತ್ಯವಾದ ಬಂದೋಬಸ್ತ್ ಮಾಡಿರುವುದಾಗಿ, ಸೂಕ್ತಕ್ರಮ ಕೈಗೊಂಡಿರುವುದಾಗಿ ಹೇಳುತ್ತಲೇ ಇದೆ. ಹಿಂದೂ ತೀವ್ರವಾದಿಗಳು ಬಾಬರಿ ಮಸೀದಿ ಕೆಡವಿದ ದಿನದಂದು ಕೂಡ ಉತ್ತರ ಪ್ರದೇಶ ರಾಜ್ಯ ಸರ್ಕಾರದ ಸರ್ಕಾರಿ ಬಂದೋಬಸ್ತ್ ಭರವಸೆ ಹಾಗೂ ಆ ಬಗ್ಗೆ ಕೇಂದ್ರದ ಕಾಂಗ್ರೆಸ್ ಸರ್ಕಾರದ ಆಶ್ವಾಸನೆ ಇದಕ್ಕಿಂತ ಕಡಿಮೆ ಏನಿರಲಿಲ್ಲ. ಈಗ ನ್ಯಾಯಾಲಯದ ಆದೇಶ ಇರುವಂತೆ ಆಗಲೂ ಇತ್ತು. ಆದರೆ ಧರ್ಮಾಂಧತೆ ಎಂತೆಂಥ ಅನಾಹುತಗಳನ್ನು ಮಾಡಿಸೀತು ಎಂದು ಮುಂದಾಗಿ ಹೇಳಬಲ್ಲವರಾರು?

ಆದ್ದರಿಂದ ಕರ್ನಾಟಕದ ನಾವು, ಅದರಲ್ಲಿಯೂ ಮೈಸೂರಿನ ನಾವು, ನೀವು ಎಲ್ಲ ಸೇರಿ ಹಿಂದಿನ ಕೆಟ್ಟ ಅನುಭವದಿಂದ ಮುಂಜಾಗ್ರತೆವಹಿಸಿ ನಮ್ಮನ್ನೂ ಸೇರಿಸಿಕೊಂಡು ಮೈಸೂರು ನಗರದ ಸಮಸ್ತ ಜನತೆಯ ಕ್ಷೇಮದ ಬಗ್ಗೆ ಚಿಂತನೆ ಮಾಡಬೇಕಾಗಿದೆ. 'ದ್ವೇಷ ಬಿಟ್ಟು ದೇಶ ಕಟ್ಟು' ಎಂಬ ಸಂದೇಶವನ್ನು ಈ ಮೂಲಕ ಸಂಬಂಧಪಟ್ಟ ಕೋಮುವಾದಿಗಳಿಗೆಲ್ಲ ರವಾನಿಸಲೆಂದು ಹಾಗೂ ಮೈಸೂರು ನಗರದ ಶಾಂತಿಪ್ರಿಯ ಜನತೆಯೆಲ್ಲ ಈ ವಿಷಯದಲ್ಲಿ ನಮ್ಮೊಡನೆ ದನಿಗೂಡಿಸಲೆಂದು ಈ ದ್ವೇಷ ಬಿಟ್ಟು ದೇಶ ಕಟ್ಟು ಮೈಸೂರು ಸಮಾವೇಶವನ್ನು ಸಂಘಟಿಸಿ ಅದರ ಉದ್ಘಾಟನೆಯ ಕಾರ್ಯಕ್ರಮವನ್ನು ಈ ದಿನ ಇಲ್ಲಿ ಹೀಗೆ ಇಟ್ಟುಕೊಂಡಿದ್ದೇವೆ. ಇದೇ ಸಂದರ್ಭದಲ್ಲಿ ಬೇರೆ ಬೇರೆ ವರ್ಗ, ವೃತ್ತಿಗಳಲ್ಲಿರುವ ಮೈಸೂರಿನ ಅರವತ್ತಕ್ಕಿಂತ ಹೆಚ್ಚು ಶಾಂತಿಪ್ರಿಯ ಹಿರಿಯ ನಾಗರಿಕರ ಶಾಂತಿ ಸಂದೇಶದ ಜನಜಾಗೃತಿ ಮನವಿ ಪತ್ರದ ಬಿಡುಗಡೆಯೂ ಆಗುತ್ತಿದೆ. ಮೈಸೂರಿನ ಹಿರಿಯ ನಾಗರಿಕರ ಶಾಂತಿರಕ್ಷಕ ದನಿ ಮೈಸೂರಿನ ಸಮಸ್ತ ಜನತೆಗೆ ಕೇಳಿಸಲಿ ಎಂಬುದು, ಮೈಸೂರಿನ ಹೊರಗೂ, ದೇಶದ ಎಲ್ಲೆಲ್ಲೂ ಈ ಸಾತ್ವಿಕ ದನಿಗೆ ಸಹಮತದ ದನಿ ಕೇಳಿಸುವಂತಾಗಲಿ, ಎಂಬುದೂ ನಮ್ಮ ಆಶಯವಾಗಿದೆ.

ತಾನು ಹುಟ್ಟಿ ಬೆಳೆದು ಬಂದ ಧರ್ಮ, ಜಾತಿ ಸಂಬಂಧವಾದ ನಂಬಿಕೆ ಉಳಿಸಿಕೊಳ್ಳುವುದು, ಬಿಡುವುದು ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರವರ ಸ್ವಂತದ ವಿಷಯ. ಅದಕ್ಕೆ ಅವರಿಗೆ ಆ ಹಕ್ಕು ಇದೆ. ಆದರೆ ಧರ್ಮ, ಜಾತಿ ಸಂಬಂಧವಾದ ತನ್ನ ನಂಬಿಕೆ, ನಿಷ್ಠೆ ಉಳಿಸಿಕೊಳ್ಳುವ ಮತ್ತು ಅದರಂತೆ ಬದುಕುವ ಹೆಸರಿನಲ್ಲಿ ಇತರರ ಧರ್ಮ, ಜಾತಿ ಸಂಬಂಧವಾದ ನಂಬಿಕೆ, ನಿಷ್ಠೆ ಹಕ್ಕುಗಳ ಮೇಲೆ ದುರಾಕ್ರಮಣ ಮಾಡುವುದಕ್ಕೆ ಯಾರಿಗೂ ಹಕ್ಕಿಲ್ಲ. ತಾನು ಹುಟ್ಟಿ ಬೆಳೆದು ಬಂಧ ಧರ್ಮ, ಜಾತಿಗಳಿಗೆ ಸೇರಿದವರಲ್ಲ ಎಂಬ ಕಾರಣಕ್ಕೆ ಇತರರ ಹಕ್ಕುಗಳ ಮೇಲೆ ಆಕ್ರಮಣ ಮಾಡಿ ಅವರ ನಂಬಿಕೆ, ನಿಷ್ಠೆಯನ್ನು ಅಪರಾಧವೆಂದು

ಭಾವಿಸುವುದು ಯುಕ್ತವಲ್ಲ. ಮಾನವ ಸಂಬಂಧದ ಬಗ್ಗೆ ನಮ್ಮ ದೇಶದ ಸಂವಿಧಾನ ಪ್ರಣೀತ ಸಮಾಜವಾದೀ ಜಾತಿಮತಧರ್ಮ ನಿರಪೇಕ್ಷ ಸಮಾಜ ಸಂಸ್ಕೃತಿ ನಿರ್ಮಾಣದ ಆಶಯ, ಆದರ್ಶದ ಬಗ್ಗೆ ಗೌರವ, ನಿಷ್ಠೆ ಇರುವ ಯಾರೂ ಹಾಗೆ ಮಾಡುವುದಿಲ್ಲ; ಮಾಡಬಾರದು. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಭೌಮತ್ವದ ಅಧಿಕಾರ ದೇಶದ ಜನತೆಯದು; ಸಮಸ್ತ ಜನತೆಯದು. ಸಂವಿಧಾನ ಮತ್ತು ಅದರ ವಿಧಿ ನಿಯಮಗಳು ದೇಶದ ಸಮಸ್ತ ಜನತೆಯು ದೇಶದ ಸಮಸ್ತ ಜನತೆಗೆ ಕೊಟ್ಟುಕೊಂಡದ್ದು. ಆ ಸಮಸ್ತ ಜನತೆಯ ಸಂಕಲ್ಪದ ಅಭಿವ್ಯಕ್ತಿ ದಾಖಲೆಯೇ ಸಂವಿಧಾನ. ಅದು ಕೇವಲ ಮುಸಲ್ಮಾನರದ್ದಲ್ಲ, ಕೇವಲ ಕ್ರೈಸ್ತರದ್ದಲ್ಲ ಅಥವಾ ಬೇರಾವುದೂ ಒಂದು ಮತಧರ್ಮದವರದ್ದೂ, ಜಾತಿಯವರದ್ದೂ, ಯಾವೊಂದು ನಿರ್ದಿಷ್ಟ ವಿಚಾರವಾದದವರದ್ದೂ ಅಲ್ಲ. ಅದು ಎಲ್ಲರದ್ದು; ದೇಶದ ಸಮಸ್ತರಿಗೂ ಸಂಬಂಧಪಟ್ಟದ್ದು. ಮತಧರ್ಮ, ಜಾತಿಗಳ ಬಗೆಗಿನ ನಿಷ್ಠೆಗಿಂತ ಸಂವಿಧಾನದ ಬಗೆಗಿನ ನಿಷ್ಠೆಗೆ ಪ್ರಥಮ ಮತ್ತು ಪರಮ ಆದ್ಯತೆ. ಇದನ್ನು ಎಲ್ಲರೂ ಎಲ್ಲ ಜಾತಿಮತಧರ್ಮಗಳಿಗೆ ಸೇರಿದವರೂ ತಿಳಿದು ನಡೆದುಕೊಳ್ಳಬೇಕು.

ತೀವ್ರ ಹಿಂದೂತ್ವವಾದಿಗಳು ಹಿಂದೂಪರ ದೃಷ್ಟಿಯನ್ನು ರಾಷ್ಟ್ರಪ್ರೇಮ, ರಾಷ್ಟ್ರಪ್ರೇಮದ ಜೊತೆ ತಳಕು ಹಾಕಿ ಮಾತನಾಡುತ್ತಾರೆ. ಅದು ಸರಿಯಾದ ಧೋರಣೆಯಲ್ಲ. ಇಡೀ ರಾಷ್ಟ್ರದ ಕ್ಷೇಮ, ಇಡೀ ರಾಷ್ಟ್ರದ ಪ್ರೇಮ ಮುಖ್ಯವಾಗಬೇಕು. ನಿಜವಾಗಿ ರಾಷ್ಟ್ರಪ್ರೇಮಿಯಾದವರಿಗೆ, ರಾಷ್ಟ್ರದ ಕ್ಷೇಮವನ್ನು ನಿಜವಾಗಿ ಬಯಸುತ್ತೇವೆ ಎಂಬುವವರಿಗೆ ಹಿಂದೂಗಳ ಪರವೆಂದೂ ಮುಸ್ಲಿಮರ ಪರವೆಂದೂ ಕ್ರೈಸ್ತರ ಪರವೆಂದೂ, ಬೇರಾವುದೂ ಒಂದು ಧರ್ಮದ ಪರವೆಂದೂ ಹೇಳಿಕೊಳ್ಳುವುದು ಸಾಧ್ಯವಾಗಲಾರದು; ಸಾಧ್ಯವಾಗಬಾರದು.

ದೇಶವೆಂದರೆ ಒಂದು ಭೌಗೋಳಿಕ ವ್ಯಾಪ್ತಿಯ ಭೂಭಾಗ ಮಾತ್ರ ಅಲ್ಲ, ಅದರ ನದಿನದಗಳಲ್ಲ, ಕಾಡುಮೇಡುಗಳಲ್ಲ, ಗುಡ್ಡಬೆಟ್ಟ ಪರ್ವತಶ್ರೇಣಿಗಳಲ್ಲ. ಅವೂ ಇವೆ ನಿಜ. ಆದರೆ ದೇಶವೆಂದರೆ ಮುಖ್ಯವಾಗಿ ರಾಷ್ಟ್ರದ ಜನ. ಜನ ಇಲ್ಲದಿದ್ದರೆ ಅದು ದೇಶವಾಗುವುದಿಲ್ಲ; ಪ್ರದೇಶ ಮಾತ್ರವಾಗುತ್ತದೆ. ರಾಷ್ಟ್ರದ ಕ್ಷೇಮವೆಂದರೆ ರಾಷ್ಟ್ರದಲ್ಲಿ ಇರುವ ಎಲ್ಲ ಜನರ ಕ್ಷೇಮ. ರಾಷ್ಟ್ರಪ್ರೇಮವೆಂದರೆ ರಾಷ್ಟ್ರದಲ್ಲಿ ಇರುವವರೆಲ್ಲರ ಬಗ್ಗೆ ಇರುವ ಪ್ರೇಮ. ಭಾರತದಲ್ಲಿ ಮುಸ್ಲಿಮರನ್ನು ಕ್ರೈಸ್ತರನ್ನು ದ್ವೇಷಿಸಿ ಕೇವಲ ಹಿಂದೂಗಳ ಪರ ಯೋಚಿಸುವವರು, ಕೇವಲ ಹಿಂದೂಗಳ ಪರ ಪ್ರೇಮ ತೋರಿಸುತ್ತೇವೆ ಎನ್ನುವವರು ರಾಷ್ಟ್ರಪ್ರೇಮದ ಬಗ್ಗೆ ನಿಜವಾದ ಕಾಳಜಿ ಇರುವವರಲ್ಲ, ಅಂಥವರು 'ಅಂಧ ರಾಷ್ಟ್ರೀಯವಾದಿಗಳು', ಅಂಥವರು ದೇಶ ಕಟ್ಟುವವರಲ್ಲ, ದ್ವೇಷ ಬಿತ್ತಿ ಬೆಳೆಯುವವರು. ಅಷ್ಟೆ ಹಿಂದೂಗಳನ್ನೂ ಕ್ರೈಸ್ತರನ್ನೂ ದ್ವೇಷಿಸಿ ಕೇವಲ ಮುಸ್ಲಿಮರ ಕ್ಷೇಮದಪರ ಯೋಚಿಸುವವರು ರಾಷ್ಟ್ರಕ್ಷೇಮದ ಬಗ್ಗೆ ನಿಜವಾದ ಕಾಳಜಿ ಇರುವವರಲ್ಲ, ಅಂಥವರೂ 'ಅಂಧ ರಾಷ್ಟ್ರೀಯವಾದಿಗಳೇ'. ಅವರೂ ದೇಶ ಕಟ್ಟುವವರಲ್ಲ ದ್ವೇಷ ಬಿತ್ತಿ ಬೆಳೆಯುವವರು.

ನಿಜವಾಗಿ ನೋಡಿದರೆ ಎಲ್ಲ ಧರ್ಮಗಳವರಲ್ಲಿಯೂ ಇಂಥವರು, ಇಂಥ ವಿಘ್ನಸಂತೋಷಿಗಳು ಕಡಿಮೆ; ತೀರಾ ಕಡಿಮೆ. ಆದರೆ ಆ ಕಡಿಮೆ ಜನವೇ ಜನರ ಮನಸ್ಸಿನಲ್ಲಿ ಧರ್ಮ

> **ನೆಮ್ಮದಿಯ ಬದುಕಿಗೆ ಕಾತರಿಸುವವರ, ಬಾಳಿನ ನೆಮ್ಮದಿಯನ್ನು ಕೆಡಿಸುವವರೆಲ್ಲ ಯಾವ ಧರ್ಮ, ಯಾವ ಕೋಮು, ಯಾವ ಜಾತಿಗೆ ಸೇರಿದವರೇ ಆಗಿರಲಿ ಅವರು ಖಂಡನಾರ್ಹರು. ಜನ ಅವರನ್ನು ಸಮಾಜ ಘಾತುಕರು, ಅಪರಾಧಿಗಳು ಎಂದು ಪರಿಗಣಿಸಬೇಕು. ಜನತೆ ಅಂಥ ಧೈರ್ಯ ಮಾಡದಂತೆ ಬುದ್ಧಿ ಹೇಳಬೇಕು, ಪ್ರಜಾ ಸತ್ತಾತ್ಮಕ, ಅಹಿಂಸಾತ್ಮಕ ವಿಧಾನದ ಮೂಲಕ ತಡೆಯಬೇಕು. ಅದನ್ನು ಕೇಳಿಸಿಕೊಳ್ಳದಿದ್ದರೆ ಕಾನೂನುಪಾಲನೆ ಮಾಡಬೇಕಾದವರಿಗೆ ಕೂಡಲೆ ತಿಳಿಸುವ ಧೈರ್ಯ, ಹೊಣೆಗಾರಿಕೆ ತೋರಿಸಬೇಕು.**

ದ್ವೇಷ, ಕೋಮುದ್ವೇಷ, ಜಾತಿದ್ವೇಷದ ಬೆಂಕಿ ಹಚ್ಚುವ ದೇಶದ್ರೋಹಿಗಳು; ಜನದ್ರೋಹಿಗಳು. ಶೇಕಡಾ ೯೯ರಷ್ಟು ಜನ, ಎಲ್ಲರೂ ಕೂಡಿಬಾಳುವ ನೆಮ್ಮದಿಯ ಬದುಕಿಗೆ ಕಾತರಿಸುವವರು, ಅಂಥವರ ಬಾಳಿನ ನೆಮ್ಮದಿಯನ್ನು ಕೆಡಿಸುವವರೆಲ್ಲ ಅವರು ಯಾವ ಧರ್ಮ, ಯಾವ ಕೋಮು, ಯಾವ ಜಾತಿಗೆ ಸೇರಿದವರೇ ಆಗಿರಲಿ ಅವರು ಖಂಡನಾರ್ಹರು. ಜನ ಅವರನ್ನು ಸಮಾಜ ಘಾತುಕರು, ಅಪರಾಧಿಗಳು ಎಂದು ಪರಿಗಣಿಸಬೇಕು. ಜನತೆ ಅಂಥ ಧೈರ್ಯ ಮಾಡದಂತೆ ಬುದ್ಧಿ ಹೇಳಬೇಕು, ಪ್ರಜಾಸತ್ತಾತ್ಮಕ, ಅಹಿಂಸಾತ್ಮಕ ವಿಧಾನದ ಮೂಲಕ ತಡೆಯಬೇಕು. ಅದನ್ನು ಕೇಳಿಸಿಕೊಳ್ಳದಿದ್ದರೆ ಕಾನೂನುಪಾಲನೆ ಮಾಡಬೇಕಾದವರಿಗೆ ಕೂಡಲೆ ತಿಳಿಸುವ ಧೈರ್ಯ, ಹೊಣೆಗಾರಿಕೆ ತೋರಿಸಬೇಕು.

ದೇಶದಲ್ಲಿ ಅಲ್ಪಸಂಖ್ಯಾತರಾದವರಿಗೆ ಅದರಲ್ಲಿಯೂ ಮುಖ್ಯವಾಗಿ ಮುಸ್ಲಿಮರಿಗೆ ಕಳೆದ ಒಂದು ಒಂದೂವರೆ ದಶಕಗಳಿಂದ ಸುರಕ್ಷಿತತೆಯ ಪ್ರಶ್ನೆ ತೀವ್ರವಾಗಿ ಕಾಡುತ್ತಿದೆ. ಆ ಕಾರಣ ಹೇಳಿಕೊಂಡು ಅಥವಾ ಆ ಕಾರಣಕ್ಕಾಗಿಯೆ ಅವರಲ್ಲಿಯೂ ಮತೀಯ ಮೂಲಭೂತವಾದವನ್ನು ಪ್ರತಿಪಾದಿಸುವ ಕೆಲವರು ಸಂಘಟಿತರಾಗುತ್ತಲೇ ಇದ್ದಾರೆ. 'ಸಿಮಿ' ಯಂಥ ಉಗ್ರವಾದೀ ಮುಸ್ಲಿಂ ವಿದ್ಯಾರ್ಥಿ ಸಂಘಟನೆಯವರು ಈ ದೇಶದ ಬಗ್ಗೆ ಹಾಗೂ ಈ ದೇಶದ ಮಹಾತ್ಮ ಎನಿಸಿಕೊಂಡಿರುವ, ಹಿಂದೂ-ಮುಸ್ಲಿಂ ಭಾವೈಕ್ಯಕ್ಕಾಗಿ ಜೀವಮಾನವಿಡೀ ದುಡಿದ, ಅದಕ್ಕಾಗಿ ಪ್ರಾಣಾರ್ಪಣೆಯನ್ನೂ ಮಾಡಿದ ಅಹಿಂಸಮೂರ್ತಿ ಮಹಾತ್ಮಾ ಗಾಂಧಿಯವರಂಥ ದೇಶನಾಯಕರ ಬಗ್ಗೆ ಕೂಡ ಸಿನಿಕ ಧೋರಣೆ, ಅಸಹನೆಯ ಭಾವನೆಯನ್ನು ಬೆಳೆಸಿಕೊಂಡಿದ್ದಾರೆ. (ನೋಡಿ: ಸಾಯಂತನ್ ಚಕ್ರವರ್ತಿಯವರ 'Nursury of Hate'ಎಂಬ ವರದಿ ಹಾಗೂ 'ಸಿಮಿ'ಯ ಸೆಕ್ರೆಟರಿ ಜನರಲ್ ಸಫ್ದಾರ್ ನಗೋರಿಯವರ ಸಂದರ್ಶನ-ಇಂಡಿಯಾ ಟುಡೇ ೨ ಏಪ್ರಿಲ್ ೨೦೦೧, ಪು ೩೮-೪೦, ೪೨) ಅವರೂ ದ್ವೇಷ, ಹಿಂಸೆಯನ್ನು ಪ್ರತಿಪಾದಿಸುತ್ತಿದ್ದಾರೆ. ಮುಸ್ಲಿಮರೂ ಸೇರಿದಂತೆ ಎಲ್ಲರೂ ಇಂಥ ಬೆಳವಣಿಗೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕು.

ದೇಶದಲ್ಲಿ ಇಂಥ ವಾತಾವರಣ ಇರುವುದರ ಜೊತೆಗೆ ಗಡಿಯಾಚೆಯಿಂದ ಪಾಕಿಸ್ತಾನವು ದುಷ್ಟ ತಂತ್ರ ಕುತಂತ್ರಗಳನ್ನು ಹೂಡಿ ಆತಂಕವಾದಿಗಳನ್ನು ಗಡಿಯೊಳಗ್ಗೆ ನುಗ್ಗಿಸಿ ಹಿಂಸಾಚಾರವನ್ನು ದಿನನಿತ್ಯದ ವ್ಯವಹಾರ ಎಂಬಂತೆ ಮಾಡಿ ಕೊಂಡು ಬಿಟ್ಟಿದೆ. ಕಾಶ್ಮೀರದಲ್ಲಿ ಹಿಂದೂ ಪಂಡಿತರ ಹತ್ಯೆ ಅವ್ಯಾಹತವಾಗಿ ನಡೆಯುತ್ತಲೇ ಇದೆ.

ತೀವ್ರ ಹಿಂದೂವಾದಿಗಳ ದ್ವೇಷ, ಹಿಂಸೆಯ ಚಟುವಟಿಕೆಗಳ ಬಗ್ಗೆ ಹೇಳಿದರೆ ದೇಶದೊಳಗಿನ ಮುಸ್ಲಿಮರಲ್ಲಿ ತೀವ್ರ ಮತೀಯವಾದಿಗಳು ಹಾಗೆ ಮಾಡುತ್ತಿಲ್ಲವೆ, ಗಡಿಯೊಳಕ್ಕೆ ನುಗ್ಗುತ್ತಿರುವ ಮುಸ್ಲಿಮರಾದ ಪಾಕಿಸ್ತಾನಿಗಳು ಹಾಗೆ ಮಾಡುತ್ತಿಲ್ಲವೆ ಎಂಬ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ಸುಲಭ ಉತ್ತರ ಹೇಳಿ ಸುಮ್ಮನಾಗಿಬಿಡುವಂಥ ಸ್ಥಿತಿ ಇಲ್ಲದಂಥ ಪೇಚಿಗೆ, ಸಂಕಟಕ್ಕೆ ಪ್ರಜ್ಞಾವಂತರಾದವರೆಲ್ಲ ನ್ಯಾಯವಂತರಾದ ಮುಸ್ಲಿಮರೆಲ್ಲ ಗುರಿಯಾಗುವಂತಾಗುತ್ತದೆ. ಯಾರೋ ಅಂಥ ಕೆಲವು ದುಷ್ಟರ ಕಾರಣದಿಂದಾಗಿ ಸಮಸ್ತ ನ್ಯಾಯವಂತ, ದೇಶಪ್ರೇಮಿ ಮುಸ್ಲಿಮರನ್ನು ಅನುಮಾನಿಸುವುದು ಅನ್ಯಾಯ, ಹಾಗೆಯೆ ಮುಸ್ಲಿಮರು ಕೂಡ ತೀವ್ರ ಹಿಂದೂವಾದಿಗಳ ಮುಸ್ಲಿಂ ವಿರೋಧಿ ರಾಜಕೀಯ ಚಟುವಟಿಕೆಗಳನ್ನು ಗಮನಿಸಿ ಎಲ್ಲ ಹಿಂದೂಗಳನ್ನೂ ಅನುಮಾನದಿಂದಲೇ ನೋಡುವುದು ಕೂಡ ಅನ್ಯಾಯ.

ಪಾಕಿಸ್ತಾನದ ಕಡೆಯಿಂದ ಆಕ್ರಮಣ ನಡೆಸಿ ಹಿಂಸೆಯಲ್ಲಿ ತೊಡಗಿರುವ ಆತಂಕವಾದಿಗಳೂ ಮುಸ್ಲಿಮರು; ಭಾರತದ ಮುಸ್ಲಿಮರೂ ಅವರೂ ಒಂದೇ ಮತಧರ್ಮಕ್ಕೆ ಸೇರಿದವರು ಎಂಬ ಒಂದೇ ಒಂದು ಕಾರಣಕ್ಕೆ ಮುಸ್ಲಿಮರ ದೇಶಭಕ್ತಿಯನ್ನೇ ದೇಶಪರ ನಿಷ್ಠೆಯನ್ನೇ ಅನುಮಾನಿಸಲು ಮುಂದಾಗುವುದು ಘೋರ ಅನ್ಯಾಯ. ಹಾಗೆ ಹೇಳಿಕೊಂಡು ತ್ರಿಶೂಲ ದೀಕ್ಷೆ ನೀಡುವುದನ್ನು, ಅಯೋಧ್ಯೆಯ ಕರಸೇವಕಪುರಂ, ಕಾಶಿ, ಮಥುರಾ, ಮೀರತ್ ಮೊದಲಾದ ಸ್ಥಳಗಳಲ್ಲಿ ಬಂದೂಕು ತರಬೇತಿ ನೀಡುವ ಶಿಬಿರಗಳನ್ನು ನಡೆಸುವುದನ್ನು ಹಿಂದೂ ಪರಿವಾದರವರು ಹಿಂದೂ ಧರ್ಮದ ರಕ್ಷಣೆಯ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವುದು ಸರಿಯಲ್ಲ (ನೋಡಿ: ದಿ ಟೈಮ್ಸ್ ಆಫ್ ಇಂಡಿಯಾ ಬಿಸ್ವಜೀತ್ ಬ್ಯಾನರ್ಜಿ ವರದಿ 'Bajrang Dal begins fire arms camp to protect Hinduism'೨೦ ಜೂನ್ ೨೦೦೦) ಹಾಗೆ ಮಾಡುವುದು ತಪ್ಪು. ಅದರಿಂದ ಕ್ರೂರ ಫ್ಯಾಸಿಸ್ಟ್ ಮನೋಧರ್ಮ ಬೆಳೆಯುವುದಕ್ಕೆ ಕಾರಣವಾಗುತ್ತದೆ. ಹಿಟ್ಲರ್‌ನ ಜರ್ಮನಿಯ ಕೆಟ್ಟ ಇತಿಹಾಸ ಭಾರತದಲ್ಲಿ ಪುನರಾವರ್ತನೆಯಾಗುವುದು ಬೇಡ. ಹಿಂದೂಗಳೂ, ಮುಸ್ಲಿಂ, ಕ್ರೈಸ್ತ ಧರ್ಮಗಳಿಗೆ ಸೇರಿದವರೂ, ಹುಟ್ಟಿದ ಕಾರಣಕ್ಕಾಗಿಯೇ ಆ ಮತಧರ್ಮ ಅಥವಾ ಯಾವುದೂ ಜಾತಿ ಮತಧರ್ಮದೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡದ ಜಾತಿಧರ್ಮನಿರಪೇಕ್ಷವಾದಿಗಳು (ಸೆಕ್ಯುಲರಿಸ್ಟ್)-ಎಲ್ಲರೂ ಕೂಡಿ ಬಾಳುವಂಥ ದೇಶವನ್ನು ಕಟ್ಟುವ ಸಂಕಲ್ಪವನ್ನು ಮಾಡೋಣ. ಸಂವಿಧಾನ ಪ್ರಣೀತ ಸಮಾಜವಾದೀ ಜಾತಿಧರ್ಮ ನಿರಪೇಕ್ಷ ಸಮಾಜ ಸಂಸ್ಕೃತಿ ಬಗೆಗಿನ ನಮ್ಮ ನಿಷ್ಠೆಯನ್ನು ದೃಢಪಡಿಸುವ ಸಂಕಲ್ಪ ಮಾಡೋಣ. □

ವಿಶ್ಲೇಷಣೆ

# ಪೂನಾ ಒಡಂಬಡಿಕೆ ಮತ್ತು ದಲಿತ ರಾಷ್ಟ್ರೀಯತೆ

**ಗಾಂಧಿ ಮತ್ತು ಅಂಬೇಡ್ಕರ್ ಯುಗದಲ್ಲಿ ಅವರಿಬ್ಬರ ನಡುವೆ ಆಗಿ ಹೋದ ಅನೇಕ ಐತಿಹಾಸಿಕ ಘಟನೆಗಳಲ್ಲಿ ೧೯೩೨ರ 'ಪೂನಾ ಒಡಂಬಡಿಕೆ' ಅತ್ಯಂತ ಮಹತ್ವದ್ದು. ಈ ದೇಶದ ಕೋಟ್ಯಾನುಕೋಟಿ ಅವಮಾನಿತರ ಬದುಕಿಗೆ ರಾಜಕೀಯ ಬರೆ ಎಳೆದ ಈ ಒಡಂಬಡಿಕೆಯ ಮೂಲಕ ಅಂದು ಅಂಬೇಡ್ಕರ್‌ರವರಲ್ಲಿ ಆದ ನೋವು ಮತ್ತು ದಲಿತರ ಬದುಕಿನಲ್ಲಾದ ರಾಜಕೀಯ ಬದಲಾವಣೆಗಳು ಚಿಂತನಾರ್ಹವಾದುವುಗಳು.**

○ಸಿ. ಹರಕುಮಾರ್

ಸೆಪ್ಟೆಂಬರ್ ೨೪, ೧೯೩೨ ಇಂಡಿಯಾದ ಅಸ್ಪೃಶ್ಯರ ಪಾಲಿಗೆ ರಾಜಕೀಯ ಹಕ್ಕುಗಳು ದಮನಗೊಂಡ ದಿನವೆಂಬುದನ್ನು ಇಲ್ಲಿ ಅತ್ಯಂತ ನಿಷ್ಠುರತೆಯಿಂದ ದಾಖಲಿಸಬೇಕಾಗಿದೆ. ಯಾಕೆಂದರೆ ಈ ದಿನದಂದು ಪೂನಾದ ಒಡಂಬಡಿಕೆಯು ಇತಿಹಾಸದಲ್ಲಿ 'ಪೂನಾ ಒಡಂಬಡಿಕೆ' (POONA PACT) ಎಂದೇ ದಾಖಲಿಸಲ್ಪಟ್ಟಿದೆ.

ಇತಿಹಾಸವನ್ನು ಬರೆದ ಕೆಲವರು ಇದನ್ನು 'ಪೂನಾ ಒಪ್ಪಂದ' ವೆಂದೇ ತಪ್ಪಾಗಿ ಬರೆದಿದ್ದಾರೆ. ಅದನ್ನೋದಿದ ಬಹುತೇಕ ದಲಿತ ಸಂಘಟಕರು ಹಾಗೂ ಬರಹಗಾರರು ಕೂಡಾ 'ಪೂನಾ ಒಪ್ಪಂದ'ವೆಂದೇ ಬಳಸುತ್ತಾ ಬಂದಿದ್ದಾರೆ. ಹಾಗಿದ್ದರೆ ಅದನ್ನು ಇಂಗ್ಲೀಷ್ ಭಾಷೆಯಲ್ಲಿ 'POONA AGREEMENT' ಎಂದು ಕರೆಯಬೇಕಾಗಿತ್ತು. ಆದರೆ ಅಂಬೇಡ್ಕರ್ 'PACT' ಎನ್ನುವ ಶಬ್ದವನ್ನು ಬಹಳ ಅರ್ಥಪೂರ್ಣವಾಗಿ ಬಳಸಿದ್ದಾರೆ. ಯಾಕೆಂದರೆ 'ಒಪ್ಪಂದ' ಎರಡು ವ್ಯಕ್ತಿಗಳ ನಡುವೆ ಏರ್ಪಡುವಂಥ ಪ್ರಕ್ರಿಯೆ. ಆದರೆ 'ಒಡಂಬಡಿಕೆ' ಎರಡು ರಾಷ್ಟ್ರಗಳ ನಡುವೆ ಏರ್ಪಡುವ ಪ್ರಕ್ರಿಯೆ. ಅಂದರೆ ಅಂಬೇಡ್ಕರ್ ಇಡೀ ಇಂಡಿಯಾದ ಅವಮಾನಿತ ಜನ ಸಮುದಾಯವನ್ನು ಒಂದೇ ಭೌಗೋಳಿಕ ಕಕ್ಷೆಯಲ್ಲಿ ತರುವ ಇರಾದೆಯನ್ನು ವ್ಯಕ್ತಪಡಿಸಿದ್ದಾರೆ. ಹಾಗಾಗಿ ಈ ಲೇಖನವನ್ನು ಕೂಡಾ 'ಪೂನ ಒಡಂಬಡಿಕೆ ಮತ್ತು ದಲಿತ ರಾಷ್ಟ್ರೀಯತೆ' ಎನ್ನುವ ಶಿರೋನಾಮೆ ನೀಡಲಾಗಿದೆ.

ಡಾ|| ಅಂಬೇಡ್ಕರ್ ತಮ್ಮ ಸುದೀರ್ಘ ಹೋರಾಟದ ವಿವಿಧ ಮಜಲುಗಳ ಪರಾಮರ್ಶೆಯ ತರುವಾಯ ಇಂಡಿಯಾದ ಅಸ್ಪೃಶ್ಯ ಸಮುದಾಯಕ್ಕೆ 'ಪ್ರತ್ಯೇಕ ಚುನಾಯಕ' ಗಳನ್ನು ನೀಡಿಬಿಟ್ಟಿದ್ದಾರೆ (Separate Electorates) ಹೆಚ್ಚೂ ಕಮ್ಮಿ ನನ್ನ ಹೋರಾಟದ ಶ್ರಮ ಸಾರ್ಥಕವಾದಂತೆಯೇ ಸರಿ ಎನ್ನುವ ಆತ್ಮವಿಶ್ವಾಸದೊಡನೆ ನವೆಂಬರ್ ೧೨, ೧೯೩೦ ರಂದು ಲಂಡನ್‌ನಲ್ಲಿ ಜರುಗಿದ ಹಾಗೂ ಬ್ರಿಟೀಷ್ ಆಡಳಿತ ಏರ್ಪಡಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಇಂಡಿಯಾದ ಅಸ್ಪೃಶ್ಯರ ಹಕ್ಕೊತ್ತಾಯಗಳನ್ನು ಮಂಡಿಸಲು ಅವಕಾಶ ದೊರಕಿದ್ದನ್ನು ಸಮರ್ಥವಾಗಿ ಬಳಸಿಕೊಂಡರು. ಅಂದಿನ ಸಭೆಯಲ್ಲಿ ರಚಿತಗೊಂಡ ಒಂಭತ್ತು ಸಮಿತಿಗಳಲ್ಲಿ ಪ್ರಮುಖವಾದ 'ಅಲ್ಪಸಂಖ್ಯಾತ ಸಮಿತಿ' (minority committee)ಗೆ ಅಸ್ಪೃಶ್ಯ ಸಮುದಾಯ, ಮುಸ್ಲಿಮರು ಹಾಗೂ ಆಂಗ್ಲೋ-ಇಂಡಿಯನ್ನರ ರಾಜಕೀಯ ಹಕ್ಕುಗಳ ಬಗ್ಗೆ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲು ಹಾಗೂ ಬ್ರಿಟೀಷ್ ಆಡಳಿತಕ್ಕೆ ಶಿಫಾರಸ್ಸು ನೀಡಲು ಅನುವು ಮಾಡಿಕೊಡಲಾಯಿತು.

ಅಲ್ಪಸಂಖ್ಯಾತ ಸಮಿತಿ ಮುಂದೆ ಅಂಬೇಡ್ಕರ್ ತಮ್ಮ ವಾದ ಮಂಡಿಸುತ್ತಾ 'ಶಾಸನ ಸಭೆಗಳಲ್ಲಿ ಅಸ್ಪೃಶ್ಯರು ತಮ್ಮದೇ ಆದ ಪ್ರತಿನಿಧಿಗಳನ್ನು ಹೊಂದಲು, ಅಸ್ಪೃಶ್ಯರು ತಮ್ಮ ಪ್ರತಿನಿಧಿಗಳನ್ನು ತಾವೇ ಆಯ್ಕೆ ಮಾಡಿಕೊಳ್ಳುವ ಪ್ರಾತಿನಿಧ್ಯ ನೀಡುವುದರಿಂದ ಸದರಿ ಸಮುದಾಯಕ್ಕಾಗುವ ಒಳಿತನ್ನು ವಿವರಿಸಿದರು'. ಅಂಬೇಡ್ಕರ್ ಮಂಡಿಸಿದ ಪ್ರಸ್ತಾವನೆಯಲ್ಲಿ ವೈಜ್ಞಾನಿಕ ತಳಹದಿಯನ್ನರಿತ ಬ್ರಿಟೀಷ್ ಸರ್ಕಾರ 'ಕೋಮುವಾರ ನಿರ್ಣಯ'(communcal Awards)ಗಳ ಮೂಲಕ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾಯಕಗಳನ್ನು ಎರಡು ರೀತಿಯ ಮತದಾನದ ಹಕ್ಕುಗಳನ್ನು ನೀಡಲಾಯಿತು. ಒಂದು- ಅಸ್ಪೃಶ್ಯರು ತಮ್ಮ ಅಸ್ಪೃಶ್ಯ ಪ್ರತಿನಿಧಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುವುದು, ಮತ್ತೊಂದು- ತಮ್ಮ ಮತವನ್ನು ಸಾರ್ವತ್ರಿಕ ಮತದಾನದಲ್ಲಿ ಬಳಸಿಕೊಳ್ಳುವ ವ್ಯವಸ್ಥೆಯನ್ನೂ ಸಹ ಕಲ್ಪಿಸಿಕೊಡಲಾಯಿತು.

ಬ್ರಿಟೀಷ್ ಸರ್ಕಾರ ಕೈಗೊಂಡ ಕೋಮುವಾರು ನಿರ್ಣಯ ಗಾಂಧಿಗೆ ರುಚಿಸಲಿಲ್ಲ. ಗಾಂಧಿ ಸದ್ದಿಲ್ಲದೇ ಕೊರಗಲು ಶುರು ಮಾಡಿದರು. ಬಹಳ ಕೊರಗಿನಿಂದಲೇ ಬ್ರಿಟೀಷ್ ಸರ್ಕಾರಕ್ಕೆ ಈ ರೀತಿ ಪತ್ರ ಬರೆದರು- 'separate Electorate will ensure them (untouchables) bondage in perpetuity. Do you want them to remain untouchables for ever? Morever, they are not minorities; they are Hindus. Therefore, they counld not have separate electorates.' ಜೊತೆಗೆ ಪ್ರತ್ಯೇಕ ಚುನಾಯಕ ನೀಡುವ ತೀರ್ಮಾನವನ್ನು ಕೈಬಿಡದಿದ್ದರೆ ಸಾಯುವ ತನಕ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಾಗಿ ಕೂಡಾ ಬ್ರಿಟೀಷ್ ಸರ್ಕಾರಕ್ಕೆ ಬೆದರಿಕೆ ಹಾಕುತ್ತಾರೆ.

ಗಾಂಧಿಯವರ ಅನ್ನ, ನೀರು ಬಿಡುವ ರಾಜಕೀಯಕ್ಕೆ ಸೊಪ್ಪು ಹಾಕದ ಬ್ರಿಟೀಷ್ ಸರ್ಕಾರ 'ಪ್ರತ್ಯೇಕ ಚುನಾಯಕಗಳನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಆದರೆ ಅದಕ್ಕೆ ಬದಲೀ ಪ್ರಸ್ತಾವನೆ ಬಂದಲ್ಲಿ ಮಾತ್ರ ಪರಿಶೀಲಿಸಲಾಗುವುದು' ಎಂದು ಹೇಳಿತು. ಅಂದು ಭಾರತದಾದ್ಯಂತ ಚಾಲ್ತಿಯಲ್ಲಿದ್ದ ಎಲ್ಲಾ ಪ್ರಮುಖ ಕಾಂಗ್ರೆಸ್ ನಾಯಕರು ಅಂಬೇಡ್ಕರ್‌ರವರ ಮೇಲೆ ತೀವ್ರವಾದ ಒತ್ತಡ ಹೇರಲಾರಂಭಿಸಿದರು. ಪೂನಾದ ಯರವಾಡ ಜೈಲಿನಲ್ಲಿದ್ದ ಗಾಂಧಿಯವರು ಆರಂಭಿಸಿದ್ದ ಉಪವಾಸ ಸತ್ಯಾಗ್ರಹದಿಂದ ಗಾಂಧಿಯವರನ್ನು ಬದುಕಿಸುವಂತೆ ಅಂಬೇಡ್ಕರ್‌ರವರಿಗೆ ದೇಶದೆಲ್ಲೆಡೆಯಿಂದ ಒತ್ತಾಯ ಬರಲಾರಂಭಿಸಿತು. ಕೊನೆಗೆ ಒಂದು ವೇಳೆ ಗಾಂಧಿ ಸತ್ತಿದ್ದೇ ಆದಲ್ಲಿ, ಗಾಂಧಿಯವರ ಸಾವಿನ ನಂತರ ತನ್ನ ಮುಗ್ಧ ಜನ ಸಮುದಾಯದ ಮೇಲೆ ಆಗುವ ಆಕ್ರಮಣಗಳ ಗಂಭೀರ ಪರಿಣಾಮಗಳ ಬಗ್ಗೆ ಚಿಂತಿಸಿದ ಅಂಬೇಡ್ಕರ್ ಕೊನೆಗೂ ರಾಜೀ ಸೂತ್ರಕ್ಕೆ ಒಪ್ಪಿಕೊಂಡರು. ಆ ರಾಜೀ ಸೂತ್ರವೇ 'ಪೂನಾ ಒಡಂಬಡಿಕೆ'ಯಾಗಿದೆ. ಅದರ ಪ್ರಕಾರ ಬ್ರಿಟೀಷ್ ಸರ್ಕಾರ ನೀಡಿದ್ದ ೭೮ ವಿಶೇಷ ಕ್ಷೇತ್ರಗಳ ಬದಲಿಗೆ ಹಾಲಿ ಜಾರಿಯಲ್ಲಿರುವ ೧೫೧ ಮೀಸಲು ಕ್ಷೇತ್ರಗಳನ್ನು ನೀಡಲಾಯಿತು. ಅಸ್ಪೃಶ್ಯರಿಂದ ನೇರವಾಗಿ ಆಯ್ಕೆಯಾಗುವ ೭೮ ಧೀರರ ಬದಲು, ಎಲ್ಲರಿಂದಲೂ ಆಯ್ಕೆಯಾಗುವ ೧೫೧ ರಾಜೀ ಅಭ್ಯರ್ಥಿಗಳನ್ನು ನೀಡಲು ಗಾಂಧಿ ಒಪ್ಪಿಕೊಂಡರು. ಮೀಸಲು ಕ್ಷೇತ್ರದ ಪ್ರತಿನಿಧಿಯೊಬ್ಬ ನಿಜಕ್ಕೂ ತನ್ನ ಸಮುದಾಯದ ಬಗ್ಗೆ ವಿಶೇಷ ಕಾಳಜಿಯನ್ನು ಕೆಲಸ ಮಾಡುವ ಎದೆಗಾರಿಕೆ ಇದ್ದಗ್ಯೂ, ತನ್ನನ್ನು ಆಯ್ಕೆ ಮಾಡಿರುವ ಇತರರ ಬಗ್ಗೆಯೂ ಭಯದಿಂದ ಇರಲೆಂಬ ಗಾಂಧಿಯವರ ದೂ(ದು)ರಾಲೋಚನೆ ಇಲ್ಲಿ ಕೆಲಸ ಮಾಡಿ ಯಶಸ್ವಿಯಾಯಿತು. ಅದು ಇಂದೂ ಸಹಾ ಮುಂದುವರೆದಿದೆ ಕೂಡಾ.

ಚಾರಿತ್ರಿಕ ಮೋಸಕ್ಕೊಳಗಾದ ಅಂಬೇಡ್ಕರ್‌ರವರ ಕನಸಿನ ಕೂಸಾದ 'ಪ್ರತ್ಯೇಕ ಚುನಾಯಕ'ದ ಪರಿಕಲ್ಪನೆ. ಅವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾದ ನಂತರ ಬೇರೆ ರೂಪದಲ್ಲಿ ಸಂವಿಧಾನಗೊಳಿಸಲ್ಪಟ್ಟಿತು. ಇದು ಪ್ರತ್ಯೇಕ ಚುನಾಯಕವಲ್ಲದಿದ್ದರೂ, ಅಸ್ಪೃಶ್ಯರು ತಮ್ಮ ಪ್ರತಿನಿಧಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುವ ವ್ಯವಸ್ಥೆಯನ್ನು ೧೯೫೨ರ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಜಾರಿಗೊಳಿಸಲ್ಪಟ್ಟಿತು. ಅದರ ಪ್ರಕಾರ ಎಲ್ಲೆಲ್ಲಿ ಅಸ್ಪೃಶ್ಯ ಜನಸಮುದಾಯ ಜಾಸ್ತಿಯಿರುತ್ತದೋ, ಅಲ್ಲಿ 'ದ್ವಿ-ಸದಸ್ಯ ಮತಕ್ಷೇತ್ರ' (Double member constituency-DMC)ವನ್ನಾಗಿ ರೂಪಿಸಲಾಯಿತು. ಅಂದರೆ ಒಬ್ಬ ಮೀಸಲು ಅಭ್ಯರ್ಥಿಯ ಜೊತೆಗೆ ಸಾಮಾನ್ಯ ವರ್ಗದ ಅಭ್ಯರ್ಥಿಯೂ ಸ್ಪರ್ಧಿಸುವುದು. ಮೀಸಲು ವರ್ಗದ ಅಭ್ಯರ್ಥಿಗೆ ಬರೀ ಅಸ್ಪೃಶ್ಯರು ಮಾತ್ರ ಮತ ಚಲಾಯಿಸುವುದು. ಸಾಮಾನ್ಯ ವರ್ಗದ ಅಭ್ಯರ್ಥಿಗೆ ಅಸ್ಪೃಶ್ಯರೂ

ಸೇರಿದಂತೆ ಎಲ್ಲರೂ ಮತ ಹಾಕುವ ವ್ಯವಸ್ಥೆಯನ್ನು ದ್ವಿ-ಸದಸ್ಯ ಮತಕ್ಷೇತ್ರ'ವೆಂದು ಜಾರಿಗೊಳಿಸಲಾಯಿತು. ಇದರಿಂದ ಅಸ್ಪೃಶ್ಯರು ತಮ್ಮ ಪ್ರತಿನಿಧಿಯನ್ನು ತಾವೇ ಆರಿಸಿಕೊಳ್ಳುವುದರ ಜೊತೆಗೆ ಸದರಿ ವರ್ಗದಿಂದ ಜನಪರ, ವರ್ಗದ ಅಭ್ಯರ್ಥಿಯು ಅಸ್ಪೃಶ್ಯರ ಮತ ಪಡೆಯಬೇಕಾದ ಅನಿವಾರ್ಯತೆ ಇದ್ದುದರಿಂದ, ಸಹಜವಾಗಿಯೇ ಆ ಸಮುದಾಯದ ಅಭಿವೃದ್ಧಿಗೆ ಶ್ರಮಿಸಬೇಕಾದ ಜವಾಬ್ದಾರಿ ಇತ್ತು. ಈ ವ್ಯವಸ್ಥೆಯಲ್ಲಿ ಎರಡೂ ವರ್ಗದ ಜನರ ನಡುವೆ ಮನಸ್ತಾಪ, ಕಲಹ ಬರುವ ಅವಕಾಶಗಳು ಈ ವ್ಯವಸ್ಥೆಯಿಂದ ತೀರಾ ಕಡಿಮೆಯಿತ್ತು. ಈ ವ್ಯವಸ್ಥೆಯಿಂದ ಎಲ್ಲಕ್ಕಿಂತ ಹೆಚ್ಚಾಗಿ ಇಂಡಿಯಾದಾದ್ಯಂತ ಅಸ್ಪೃಶ್ಯ ಸಮುದಾಯಗಳ ಭೌಗೋಳಿಕ ಕಕ್ಷೆಯ ಸ್ಪಷ್ಟ ರೂಪ ದೊರಕುತ್ತಿತ್ತು. ಸಾಮಾನ್ಯ ವರ್ಗದವರಿಗೂ ಕೂಡಾ ಈ ವ್ಯವಸ್ಥೆಯಿಂದ ಯಾವುದೇ ಅನಾನುಕೂಲತೆಗಳು ಇರಲಿಲ್ಲ.

ದ್ವಿ-ಸದಸ್ಯ ಮತಕ್ಷೇತ್ರ ಜಾರಿಯಿಂದ ಅಂಬೇಡ್ಕರ್ ಕಂಡಿದ್ದ ಕನಸುಗಳು ಜಾರಿಯಾಗುವ ಲಕ್ಷಣಗಳು ಗೋಚರಿಸತೊಡಗಿದವು. ೧೯೫೨ ಮತ್ತು ೧೯೫೭ರ ಸಾರ್ವತ್ರಿಕ ಚುನಾಯವಣೆಗಳಲ್ಲಿ ಉತ್ತಮ, ಸಮರ್ಥ ಅಸ್ಪೃಶ್ಯ ಪ್ರತಿನಿಧಿಗಳು ಆಯ್ಕೆಗೊಂಡರು. ಜೊತೆಗೆ ಸಾಮಾನ್ಯ ವರ್ಗದ ಕ್ಷೇತ್ರಗಳಲ್ಲಿ ಅಸ್ಪೃಶ್ಯರೂ ಆಯ್ಕೆಗೊಂಡ ನಿದರ್ಶನಗಳು ಕಂಡುಬಂದವು. ಸಾಮಾನ್ಯ ವರ್ಗದ ಕ್ಷೇತ್ರಗಳಲ್ಲಿ ಅಸ್ಪೃಶ್ಯರು ಆಯ್ಕೆಗೊಂಡ ನಂತರವಂತೂ, ಕಾಂಗ್ರೆಸ್‌ನ ಮೇಲ್ಜಾತಿ ರಾಜಕಾರಣಿಗಳಿಗೆ ತೀವ್ರತರವಾದ ಆಘಾತವುಂಟಾಯಿತು. ಉದಾಹರಣೆಗೆ, ಆಂಧ್ರ ಪ್ರದೇಶದ ಪಾರ್ವತಿಪುರಂ ಸಾಮಾನ್ಯ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಬಲಾಢ್ಯ ರಾಜಕಾರಣಿ ದಿವಂಗತ ವಿ.ವಿ.ಗಿರಿಯವರನ್ನು ಗುಡ್ಡಗಾಡು ಜನಾಂಗದ ಅಸ್ಪೃಶ್ಯ ಪ್ರತಿನಿಧಿಯೊಬ್ಬ ಸೋಲಿಸಿದ್ದು ಭಾರತದಾದ್ಯಂತ ವಿದ್ಯುತ್ ಸಂಚಾರ ಉಂಟು ಮಾಡಿತಲ್ಲದೆ, ಭಾರತದ ಮುಂದಿನ ರಾಜಕಾರಣದ ಸೂಕ್ಷ್ಮತೆಯನ್ನು ಹಾಗೂ ಸ್ಪಷ್ಟ ದಿಕ್ಕನ್ನು ವ್ಯಕ್ತಪಡಿಸಿತು. ಈ ಫಲಿತಾಂಶದಿಂದ ದಂಗುಬಡಿದ ಎಲ್ಲಾ ಕಾಂಗ್ರೆಸ್ಸಿಗರು ಈ ದ್ವಿ-ಸದಸ್ಯ ಮತಕ್ಷೇತ್ರವನ್ನು ರದ್ದುಪಡಿಸಲೇಬೇಕೆಂದು ಸರ್ಕಾರದ ಮೇಲೆ ತೀವ್ರತರವಾದ ಒತ್ತಡ ಹೇರಲಾರಂಭಿಸಿದರು. ಈ ಮಧ್ಯೆ ಪಾರ್ವತಿಪುರಂ ಕ್ಷೇತ್ರದ ಫಲಿತಾಂಶದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದ ವಿ.ವಿ.ಗಿರಿಯವರ ಅರ್ಜಿ ತಿರಸ್ಕರಿಸಲ್ಪಟ್ಟ ನಂತರವಂತೂ ಇನ್ನಷ್ಟು ಆಘಾತ ಉಂಟುಮಾಡಿತು.

ಈ ಎಲ್ಲಾ ಬೆಳವಣಿಗೆಗಳಿಂದ ದಿಗಿಲುಗೊಂಡ ಅಂದಿನ ಕಾಂಗ್ರೆಸ್ ಸರ್ಕಾರ, ಡಿಸೆಂಬರ್ ೧೯೬೦ರಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆ ಕರೆಯಿತು. ಒಟ್ಟು ೫೫೫ ಸಂಸದೀಯ ಸದಸ್ಯರ ಸಭೆಯಲ್ಲಿ ಕೇವಲ ೨೨೯ ಸದಸ್ಯರು ಮಾತ್ರ ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ದ್ವಿ-ಸದಸ್ಯ ಮತಕ್ಷೇತ್ರವನ್ನು ಸದ್ದುಗೊಳಿಸಬೇಕೆಂಬ ನಿರ್ಣಯವನ್ನು ಮಂಡಿಸಲಾಯಿತು. ನಿರ್ಣಯದ ಪರವಾಗಿ ೧೨೪ ಸದಸ್ಯರು ಹಾಗೂ ನಿರ್ಣಯದ ವಿರುದ್ಧವಾಗಿ ೯೫ ಸದಸ್ಯರು ಮತ ಚಲಾಯಿಸಿದರು. ೧೯೬೨ರ ಸಾರ್ವತ್ರಿಕ ಚುನಾವಣೆ ತೀರಾ ಸನಿಹದಲ್ಲಿದ್ದದ್ದರಿಂದ ಅಂದಿನ ಕಾಂಗ್ರೆಸ್ ಸರ್ಕಾರ 'Double Member Constituenceies(Abolition) Act, 1961' ಎನ್ನುವ ವಿಧೇಯಕವನ್ನು ಜನವರಿ, ೧೯೬೧ರಲ್ಲಿ ಸಂಸತ್‌ನಲ್ಲಿ ಮಂಡಿಸಿ ಒಪ್ಪಿಗೆ ಪಡೆದುಕೊಂಡರು. ಹೊಸ ವಿಧೇಯಕದ ಪ್ರಕಾರ ದ್ವಿ-ಸದಸ್ಯ ಕ್ಷೇತ್ರಗಳನ್ನು ಏಕ-ಸದಸ್ಯ ಕ್ಷೇತ್ರಗಳನ್ನಾಗಿ ಮಾರ್ಪಡಿಸಿ, ಅಸ್ಪೃಶ್ಯರು ಹೆಚ್ಚಾಗಿ ಕೇಂದ್ರೀಕೃತವಾಗಿರುವ ಕಡೆ ಮಾತ್ರ ಮೀಸಲು ಕ್ಷೇತ್ರಗಳನ್ನು ಜಾರಿಗೊಳಿಸಿದರು.

ತಾವು ಬದುಕಿರುವಾಗಲೇ ಅಸ್ಪೃಶ್ಯರಿಗೆ ರಾಜ್ಯಾಧಿಕಾರವನ್ನು ಕೊಡುವ ಸಲುವಾಗಿ ಅಂಬೇಡ್ಕರ್ ಕೈಗೊಂಡ ಎರಡು ಪ್ರಮುಖ ಆಯಾಮಗಳಿಗೆ ಪಾಳೇಗಾರಿಕೆ ಜಾತೀವಾದಿಗಳು ಭಾರೀ ಪೆಟ್ಟನ್ನು ನೀಡಿದರು. ಅಂದಿನಿಂದ ಇಂದಿನವರೆಗೂ ದೇಶ ಹನ್ನೆರಡು ಸಾರ್ವತ್ರಿಕ ಚುನಾವಣೆಗಳನ್ನು ಜರುಗಿಸಿದೆ. ಇಂದಿನ ಸ್ಥಿತಿಯಲ್ಲಿ ಮೀಸಲಾತಿ ಪ್ರತಿನಿಧಿಗಳು ತಮ್ಮ ಸಮುದಾಯಕ್ಕೆ ಯಾವ ರೀತಿ ನ್ಯಾಯ ಸಲ್ಲಿಸಬಹುದೆಂಬುದನ್ನು ನೋಡಿದ್ದೇವೆ. ಯಾಕೆಂದರೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡತ್ವ ಉಗ್ರ ಜಾತೀವಾದಿಗಳ ಕೈಯಲ್ಲೇ ಸ್ಥಿರೀಕರಣಗೊಂಡಿರುವುದರಿಂದ ಆಯಾಯ ಪಕ್ಷಗಳು ಅಧಿಕೃತ ಟಿಕೆಟ್‌ಗಳನ್ನು ನೀಡುವಾಗ ಎಂಥೆಂಥಾ ವ್ಯಕ್ತಿಗಳನ್ನು ಆರಿಸಿ ಮೀಸಲು ವ್ಯವಸ್ಥೆಯನ್ನು ಜರಿಯಲು ಅವಕಾಶ ಮಾಡಿಕೊಂಡಿದ್ದಾರೆಂಬುದನ್ನು ಮತ್ತೆ ವಿವರಿಸುವ ಅಗತ್ಯವಿಲ್ಲ.

ದುರಂತವೆಂದರೆ ಅಂಬೇಡ್ಕರ್ ಸಾವಿನ ನಂತರ ರೂಪುಗೊಂಡ ದಲಿತ ಸಂಘಟನೆಗಳಾಗಲೀ ಅಥವಾ ಮೀಸಲಾತಿ ಸವಲತ್ತಿನಡಿ ರಾಜಕೀಯ ಮಾಡಿಕೊಂಡೇ ಬರುತ್ತಿರುವ ಜನಪ್ರತಿನಿಧಿಗಳಾಗಲೀ ಅಂಬೇಡ್ಕರ್ ಕನಸಿನ ಪ್ರತ್ಯೇಕ ಚುನಾಯಿಕಗಳ ಬಗ್ಗೆ ಪ್ರಬಲ ಹೋರಾಟ ರೂಪಿಸಲು ಸಾಧ್ಯವಾಗದಿರುವುದು ಅಸ್ಪೃಶ್ಯ ಸಮುದಾಯದ ದುರಂತ. ನನ್ನ ಸ್ಥಾನ ಅಬಾಧಿತವಾದರೆ ಸಾಕು ಎನ್ನುವ ಪ್ರತಿನಿಧಿ ಹಾಗೂ ಯಾರು ಗೆದ್ದರೇನಂತೆ ಅಥವಾ ಯಾರೇ ಸೋತರೂ ಅವರು ನಮ್ಮವರು ತಾನೇ ಎನ್ನುವ ಮತದಾರರ ನಡುವೆ ಇನ್ನೆಂಥ ಪ್ರಬಲ ಹೋರಾಟ ರೂಪುಗೊಳ್ಳಲು ಸಾಧ್ಯ? ಎಂಬುದನ್ನು ಪ್ರತಿಯೊಬ್ಬ ಅಂಬೇಡ್ಕರ್‌ವಾದಿಯೂ ಚಿಂತಿಸುವ ಅಗತ್ಯವಿದೆ. □

# ಸಂವಾದ

## ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಇನ್ನು ಮುಂದೆ ಪ್ರತಿ ತಿಂಗಳ ೨೭ರಂದು ಅಂಚೆಗೆ ಹಾಕಲಾಗುತ್ತದೆ. (ಈ ಹಿಂದೆ ಪ್ರತಿ ತಿಂಗಳ ೧೩ರಂದು ಹಾಕಲಾಗುತ್ತಿತ್ತು.) ಅಂದರೆ ಫೆಬ್ರವರಿ ತಿಂಗಳ ಸಂಚಿಕೆ ಜನವರಿ ೨೭ರಂದು ಅಂಚೆಗೆ ಹೋಗುತ್ತದೆ. ಹಾಗಾಗಿ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿಯೇ 'ಸಂವಾದ' ತಮಗೆ ತಲುಪುತ್ತದೆ.

ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ. ನಿಮ್ಮ ದೂರಿನ ಆಧಾರದ ಮೇಲೆ ಇಲ್ಲಿನ ಅಂಚೆ ಕಛೇರಿಯಲ್ಲಿ ನಾವು ವಿಚಾರಿಸಿ ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ.

ಸಾಮಾನ್ಯವಾಗಿ ಎಲ್ಲ ಚಂದಾದಾರರಿಗೂ ಸಕಾಲದಲ್ಲಿ ಪತ್ರಿಕೆ ಸಿಗುತ್ತಿದೆಯಾದರೂ ಕೆಲವರಿಗೆ ಕಾರಣಾಂತರದಿಂದ ಪತ್ರಿಕೆ ಕೈ ಸೇರುತ್ತಿಲ್ಲ. ಈ ಅನಾನುಕೂಲಕ್ಕೆ 'ಸಂವಾದ' ಬಳಗ ವಿಷಾಧಿಸುತ್ತದೆ. ಚಂದಾದಾರರು ಪತ್ರಿಕೆ ಸಿಗದಿದ್ದಾಗ ಕೂಡಲೇ ಮೇಲೆ ನಾವು ಸೂಚಿಸಿರುವಂತೆ ಅಂಚೆ ಕಛೇರಿಗೆ ದೂರು ನೀಡುವ ಮೂಲಕ ಹಾಗೂ ಆ ಮಾಹಿತಿಯನ್ನು ನಮಗೆ ತಿಳಿಸುವ ಮೂಲಕ ಸಹಕರಿಸಬೇಕೆಂದು ವಿನಂತಿಸುತ್ತೇವೆ.

-ವ್ಯವಸ್ಥಾಪಕ

ಇತಿಹಾಸ

# ದಲಿತರ ಇತಿಹಾಸ, ಸಂಸ್ಕೃತಿ ಪರಂಪರೆ

○ ಎಸ್.ಎಸ್. ಹಿರೇಮಠ

**ಕರ್ನಾಟಕ, ಅಖಂಡ ಭಾರತದ ಅವಿಭಾಜ್ಯ ಅಂಗವಾಗಿರುವಂತೆ, ದೇಶವ್ಯಾಪಿ ದಲಿತ ಚರಿತ್ರೆಯ ಭಾಗ ನಮ್ಮ ನಾಡಿನ ದಲಿತರ ಇತಿಹಾಸ. ಇದನ್ನು ಇನ್ನೊಂದು ರೀತಿಯಿಂದ ಹೇಳುವುದಾದರೆ ದೇಶವ್ಯಾಪಿಯಾಗಿ ನಡೆಯುತ್ತಿದ್ದ ಮಾನವನ ಚಟುವಟಿಕೆಗಳು ಕರ್ನಾಟಕ ದಲ್ಲೂ ಇದ್ದವು. ಆದರೆ ಪ್ರಾದೇಶಿಕವಾದ ಅನನ್ಯತೆಗಳೂ ಅಸ್ತಿತ್ವದಲ್ಲಿದ್ದವು. ಈ ನಾಡಿನ ಮೊದಲ ಬೇಸಾಯಗಾರರಾಗಿದ್ದ ಅಂದಿನ ದಲಿತರು ಜಾಗತಿಕ ಚರಿತ್ರೆಯ ಮುಖ್ಯಭಾಗವಾಗಿರುವುದನ್ನು ಅರಿತಾಗ ಸಂತೋಷ ಮತ್ತು ಹೆಮ್ಮೆಯಾಗುತ್ತದೆ.**

'ದಲಿತಶಾಸ್ತ್ರ'ದ (Dalitology) ಒಂದು ಮುಖ್ಯ ಅಧ್ಯಾಯ 'ದಲಿತ ಚರಿತ್ರೆ'. ಕಳೆದುಹೋಗಿರುವ ದಲಿತರ ಇತಿಹಾಸ ರಚನೆ ಅಷ್ಟು ಸುಲಭದ ಕೆಸಲವಲ್ಲ, ಆದರೆ ಅದು ತೀರ ಅಸಾಧ್ಯವೆಂಬ ನಿರಾಶೆಯೂ ಸಲ್ಲದು. ಹೀಗಲ್ಲದೆ ಬೇರಿರಲಿಕ್ಕೆ ಸಾಧ್ಯವೇ ಇಲ್ಲ ಎಂಬ ದೃಢವಾದ ಪ್ರಮೇಯಗಳ ಮೂಲಕ ಒಮ್ಮೊಮ್ಮೆ ಸಾಗಬೇಕಾಗುತ್ತದೆ. ಕೆಲವೊಮ್ಮೆ ಗಟ್ಟಿಯಾದ ಆಧಾರಾಂಶಗಳಂತೂ ದೊರಕುತ್ತವೆ.

**ಭೂತವನ್ನು ಬಿಟ್ಟಿಲ್ಲದ ವರ್ತಮಾನ:**

ಪ್ರಖ್ಯಾತ ಇತಿಹಾಸಕಾರ ಡಿ.ಡಿ. ಕೋಸಾಂಬಿ ಹೇಳುತ್ತಾರೆ. 'ಗತಕಾಲದಲ್ಲಿ ಆಗಿ ಹೋದ ಎಲ್ಲ ಸಾಮಾಜಿಕ ಬದಲಾವಣೆಗಳೂ ತಮ್ಮ ಮುದ್ರೆಯನ್ನು ನಮ್ಮ ಇಂದಿನ ಸಮಾಜದಲ್ಲೂ ಉಳಿದು ಬರುವಂತೆ ಒತ್ತಿವೆ. ಇವುಗಳನ್ನಾಧರಿಸಿ ನಮ್ಮ ಚರಿತ್ರೆಯನ್ನು ಗ್ರಹಿಸುವ ಸಾಧ್ಯತೆ ಉಪಯುಕ್ತವಾದುದು' (ಪುಟ ೧೦), 'ಗತಕಾಲವನ್ನು ಇಷ್ಟರಮಟ್ಟಿಗೆ ಉಳಿಸಿಕೊಂಡು ಬಂದಿರುವ ದೇಶ ಬೇರೊಂದಿರಲಾರದು' (ಪುಟ ೧೧), 'ನಮ್ಮ ದೇಶವು ಭೂತವನ್ನು ಹೀಗೆ ಹೊತ್ತುಕೊಂಡೇ ಬಂದಿದೆ ಎಂಬುದು ಜನ ಜೀವನದ ಪಾಲಿನ ಶಾಪ ಹೌದಾದರೂ, ಅದು ಚರಿತ್ರ ಕಾರನ ಪಾಲಿನ ವರವೂ ಹೌದು' (ಪುಟ ೧೯. ಈ ಎಲ್ಲ ಉದ್ಧರಣೆಗಳು 'ಪ್ರಾಚೀನ ಭಾರತದ ಚರಿತ್ರೆ' ಮೂಲ ಬಾಲಗೋಪಾಲ್. ಅನು: ಎಚ್.ಎಸ್. ಶ್ರೀಮತಿ, ೧೯೯೮, ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್). ಈ ಹಿನ್ನೆಲೆಯಲ್ಲಿ ದಲಿತರ ಜೀವನದಲ್ಲಿ ಇಂದು ಜೀವಂತವಿರುವ ಆಚರಣೆಗಳು ಮತ್ತು ನಂಬಿಕೆಗಳು ಇತರ ಜಾತಿವರ್ಗಗಳ ಜತೆ ದಲಿತರ ಒಡನಾಟದಿಂದಾಗಿ ಹುಟ್ಟಿರುವ ಹಬ್ಬ ಜಾತ್ರೆ, ಉತ್ಸವ ಮೊದಲಾದವುಗಳು ದಲಿತರ ಕಳೆದು ಹೋದ ಇತಿಹಾಸ ಮತ್ತು ಸಂಸ್ಕೃತಿ ಪರಂಪರೆಯನ್ನು ಚಿತ್ರಿಸಿಕೊಳ್ಳುವುದಕ್ಕೆ ನೆರವಾಗುತ್ತವೆಂಬುದನ್ನು ಗಮನಿಸಬೇಕು.

ಕರ್ನಾಟಕ, ಅಖಂಡ ಭಾರತದ ಅವಿಭಾಜ್ಯ ಅಂಗವಾಗಿರುವಂತೆ, ದೇಶವ್ಯಾಪಿ ದಲಿತ ಚರಿತ್ರೆಯ ಭಾಗ ನಮ್ಮ ನಾಡಿನ ದಲಿತರ ಇತಿಹಾಸ. ಇದನ್ನು ಇನ್ನೊಂದು ರೀತಿಯಿಂದ ಹೇಳುವುದಾದರೆ ದೇಶವ್ಯಾಪಿಯಾಗಿ ನಡೆಯುತ್ತಿದ್ದ ಮಾನವನ ಚಟುವಟಿಕೆಗಳು ಕರ್ನಾಟಕ ದಲ್ಲೂ ಇದ್ದವು. ಆದರೆ ಪ್ರಾದೇಶಿಕವಾದ ಅನನ್ಯತೆಗಳೂ ಅಸ್ತಿತ್ವದಲ್ಲಿದ್ದವು. ಈ ನಾಡಿನ ಮೊದಲ ಬೇಸಾಯಗಾರರಾಗಿದ್ದ ಅಂದಿನ ದಲಿತರು ಜಾಗತಿಕ ಚರಿತ್ರೆಯ ಮುಖ್ಯಭಾಗವಾಗಿರುವುದನ್ನು ಅರಿತಾಗ ಸಂತೋಷ ಮತ್ತು ಹೆಮ್ಮೆಯಾಗುತ್ತದೆ. 'ವಿಶ್ವ ಹಿಂದೂ ಪರಿಷತ್' ಪರಿಕಲ್ಪನೆ ಯಂತೆ 'ವಿಶ್ವ ದಲಿತ' ಪರಿಕಲ್ಪನೆ ಸಾಧ್ಯವಿದೆ ಎಂಬುದು ಅತಿಶಯೋಕ್ತಿಯೂ ಅಲ್ಲ ಒಣ ಅಭಿಮಾನದ ಮಾತೂ ಅಲ್ಲ. ಅದು ಹೇಗೆಂಬುದನ್ನು ಈಗ ನೋಡೋಣ.

**ಆಕರಗಳು:**

ಸಂಪ್ರದಾಯಿಕ ಶಾಸ್ತ್ರ ಮತ್ತು ಅಸಂಪ್ರದಾಯಿಕ ಮೂಲಗಳನ್ನು ಆಕರವನ್ನಾಗಿ ಮಾಡಿಕೊಂಡು ವಿಸ್ಮೃತಿ ಗೀಡಾಗಿರುವ ದಲಿತರ ಇತಿಹಾಸವನ್ನು ('ದಲಿತಶಾಸ್ತ್ರ'ವನ್ನು ಕೂಡ) ರಚಿಸಬೇಕಾಗುತ್ತದೆ. ಪ್ರಾಚ್ಯಶಾಸ್ತ್ರ (Archaeology) ಭಾಷಾಶಾಸ್ತ್ರ (Linguistics), ನಾಮ ವಿಜ್ಞಾನ (Onomastics), ಮಾನವಕುಲಶಾಸ್ತ್ರ (Enthnography) ಮೊದಲಾದವು ಸಂಪ್ರದಾಯಿಕ ಆಕರಶಾಸ್ತ್ರಗಳಾದರೆ ಜಾನಪದ (Folklore), ಪುರಾಣ, ಭಾರತಾದಿ ಇತಿಹಾಸ ಕಾವ್ಯ ಮುಂತಾದವು ಅಸಂಪ್ರದಾಯಿಕ ಆಕರಗಳಾಗುತ್ತವೆ.

**ಆರ್ಯಪೂರ್ವಭಾರತ:**

"Pre-Aryan India is of great importance for the understanding of the general course of development of ancient Indian civilisation" (page 172), "Pre-Aryan ethno-cultural substrata had a considerable influence on the economy of the Indo Aryans, on the formation of religious beliefs and were significant in the development of science, philosophy and the arts"(ಅದೇ)

"Specific study of the history of southern India in the ancient period still lags consideranly behind the study of Northern India" (ಅದೇ) ("The Image of India" ಬೊಂಗಾರ್ಡ್-ಲೆವಿನ್ ಮತ್ತು ವಿಗಾಸಿನ್ ೧೯೮೪.)

**ದಕ್ಷಿಣದ ಬಗ್ಗೆ ನಿರ್ಲಕ್ಷ್ಯ:**

in "the south there had survived much more of pre-Aryan India than anywhere else" ("A History of south India, ನೀಲಕಂಠಶಾಸ್ತ್ರಿ, ೧೯೭೬, ಪುಟ ೨) ಭಾರತದ ಚರಿತ್ರೆಯಲ್ಲಿ ದಕ್ಷಿಣ ಭಾರತ ತುಂಬ ನಿರ್ಲಕ್ಷ್ಯಕ್ಕೀಡಾಗಿರುವುದನ್ನು ಬೇರೆ ಕೆಲವು ಲೇಖಕರು ತಕರಾರಿರುತ್ತಾರೆ. ಉದಾ: ವಿನ್ಸೆಂಟ್ ಸ್ಮಿತ್ "Hitherto most historians of ancient India have written as if the south did not exist"ಅದೇ ಪುಟ ೨. ಉದ್ಧೃತ) ಎ.ಎಲ್.ಭಾಷ್ಯಂ ಬರೆಯುತ್ತಾರೆ, "There has always been an obvious distinction between the Indo Aryan speeking areas of the north and the Dravidian especially the Tamil speaking areas of the south" (ಪುಟ.೪)

ಆರ್ಯರು ಆಗಮಿಸುವುದಕ್ಕಿಂತ ಮೊದಲಿನ ಪ್ರಗತಿಪಥದಲ್ಲಿ ಕೊಂಡೊಯ್ದಿದ್ದ ಅನೇಕ ಜನ ಸಮುದಾಯಗಳಲ್ಲಿ ನಿಗ್ರೋ ನಾಗರು, ಮುಂಡಾ ಮತ್ತು ಕೋಲಾ ಭಾಷಿಕರು ಮತ್ತು ದ್ರಾವಿಡ ಭಾಷಿಕರಿದ್ದರು. ಅವರ ಸಂಸ್ಕೃತಿಗಳ ಗಾಢವಾದ ಪ್ರಭಾವದಿಂದ ಆರ್ಯವೈದಿಕರು ಪ್ರವರ್ಧಮಾನ ಸ್ಥಿತಿಗೆ ಬಂದರು. ಮೇಲೆ ಉದ್ಧರಿಸಿರುವ ವಾಕ್ಯಗಳಲ್ಲಿ 'ಪ್ರಿ-ಆರ್ಯನ್' ಜನ ಎಂದರೆ ಇವರೇ. ಇವರಲ್ಲಿ ಆದಿಮ ಬೇಸಾಯಗಾರ ದಲಿತರು ಯಾರೆಂಬುದೇ ನಮ್ಮ ಮುಂದಿರುವ ಮುಖ್ಯ ಪ್ರಶ್ನೆ.

**ದಲಿತರ ಮೂಲ ನೋಡದ ಕೆಲವು ಶೋಧನೆಗಳು:**

ಶಂ.ಬಾ.ಜೋಷಿಯವರು ಕನ್ನಡಿಗರ ಮೂಲವನ್ನು ಶೋಧಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ ಮೊದಲಿಗರಲ್ಲಿ ಒಬ್ಬರು. ಅವರಲ್ಲಿ ಕೃಷಿಕರು ಮತ್ತು ಪಶುಪಾಲಕರು ಎಂಬ ವೃತ್ತಿಯಾಧಾರಿತ ಶೋಧನೆಯ ನೆಲೆಯಿಲ್ಲದೇ ಇದ್ದುದರಿಂದ ಕನ್ನಡದ ಎಲ್ಲ ಜಾತಿ ಕುಲಗಳನ್ನು ಒಟ್ಟಾಗಿ ಗ್ರಹಿಸಿಬಿಡುತ್ತಾರೆ. ಪ್ರಾಚ್ಯಶಾಸ್ತ್ರೀಯ ಶೋಧನೆಗಳು ಹಲ ವಾರು ಜನಸಮುದಾಯಗಳ ವಿಭಿನ್ನ ಸಂಸ್ಕೃತಿಗಳು ಅಸ್ತಿತ್ವದಲ್ಲಿದ್ದುದನ್ನು ವಿವರಿಸಿವೆ. ಜೋಷಿಯವರಿಗೆ ಕುರುಬರ ನೆಲೆಗಳನ್ನು ಶೋಧಿಸುವುದಕ್ಕೆ ಸಾಧ್ಯವಾದಂತೆ ದಲಿತರ ನೆಲೆಯನ್ನು ಶೋಧಿಸುವುದಾಗಲಿಲ್ಲ. ಪ್ರಾಚ್ಯ ಶಾಸ್ತ್ರೀಯ ಶೋಧನೆಗಳೂ ಆಗ ಈಗಿನಂತೆ ಹೆಚ್ಚು ಬೆಳಕಿಗೆ ಬಂದಿರಲಿಲ್ಲ.

ಮಹಾರಾಷ್ಟ್ರದ ಡಿ.ಡಿ.ಕೋಸಾಂಬಿ, ಬಂಗಾಲದ ದೇವಿಪ್ರಸಾದ ಛಟ್ಟೋಪಾಧ್ಯಾಯರು ದಕ್ಷಿಣ ಭಾರತದ ದ್ರಾವಿಡ ಭಾಷಿಕ ನಾಡುಗಳ

ಅನುಭವಗಳನ್ನು ಬಳಸಿಕೊಳ್ಳದೇ ಇದ್ದುದರಿಂದ ದಲಿತರ ಬಗ್ಗೆ ಹೆಚ್ಚೇನನ್ನೂ ಹೇಳದಾದರು.

ನಮ್ಮ ದೇಶದ ವ್ಯವಸಾಯ, ಸಾಮಾಜಿಕ ವಿಲೀನತೆಗಳಲ್ಲಿ ಹಾಗೂ ಸಾಂಸ್ಕೃತಿಕ ಸಮಾವೇಶಗಳಲ್ಲಿಯೇ ಸಂಭವಿಸಿತು ಎನ್ನುವ ಡಿ.ಡಿ.ಕೋಸಾಂಬಿ 'ನಾಗರಿಕರು' ಅರಣ್ಯವಾಸಿಗಳನ್ನು ಹೊಲೆ ಮಾದಿಗರನ್ನಾಗಿಸಿ ಆಧೀನವಾಗಿಸಿಕೊಂಡರು ಎನ್ನುತ್ತಾರೆ. (ಪೂರ್ವೋಕ್ತ ಪು ೨೬, ೨೭) ಆದರೆ ಈ ಊಹೆಗೆ ಆಧಾರವಿಲ್ಲ. ಪ್ರತಿಯಾಗಿ ಮೂಲ ಕೃಷಿಕ ಹೊಲೆಯ ಮಾದಿಗ ರಿಂದಲೇ 'ನಾಗರಿಕರು' ಬೇಸಾಯವನ್ನು ಕಲಿತರೆನ್ನುವುದನ್ನು ಸಮರ್ಥಿಸುವ ಸಾಕ್ಷ್ಯಾಧಾರಗಳು ಬೇಕಾದಷ್ಟಿವೆ. ದೇವಿ ಪ್ರಸಾದ ಛಟ್ಟೋಪಾಧ್ಯಾಯರು ಪರೋಕ್ಷವಾಗಿ ದಲಿತರ ಸಾಧನೆಗಳನ್ನೇ ಕುರಿತು ತುಂಬ ಆಳವಾಗಿ 'ಲೋಕಾಯತ' ದಲ್ಲಿ ಚರ್ಚಿಸಿದ್ದಾರೆ. ಆದರೆ ಈ ಬಗೆಯ ಸಾಧನೆಗಳಿಗೆ ದಲಿತರೇ ಕಾರಣರೆಂದು ಸ್ಪಷ್ಟವಾಗಿ ಹೇಳಲು ಅಸಮರ್ಥ ವಾಗುತ್ತಾರೆ. ಉದ್ದಕ್ಕೂ ವೈದಿಕ-ಅವೈದಿಕ ಎಂಬ ಪರಿಭಾಷೆ ಯನ್ನೇ ಬಳಸುತ್ತಾರಲ್ಲದೆ ಅವೈದಿಕಕ್ಕೆ ತಪ್ಪಿಯೂ ದ್ರಾವಿಡ ಅಥವಾ ಮುಂಡಾ ಭಾಷಿಕರು ಎಂದೇನು ಹೇಳುವುದಿಲ್ಲ.

ಆರ್.ಎಸ್.ಶರ್ಮ ಶೂದ್ರರ ಕುರಿತು ಶೋಧನೆ ನಡೆಸಿದರೂ ದಲಿತರ ಮೂಲಕ್ಕೆ ಹೋಗಿ ಮುಟ್ಟಲಿಲ್ಲ. ರೋಮಿಲಾ ಥಾಪರ್ ಭಾರತದ ಜನತೆಯ ಚರಿತ್ರೆಯ ನಿರ್ಮಾಣದ ಕಷ್ಟಗಳೇನೆಂಬುದನ್ನು ವಿವರಿಸಿದರೂ ದಲಿತರ ಬಗ್ಗೆ ಅಧಿಕೃತವಾಗಿ ಏನನ್ನೂ ಹೇಳಲಿಲ್ಲ. ಹೀಗೆ ದಲಿತರ ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಭಾರತದ ಚರಿತ್ರಕಾರರಲ್ಲಿ ಯಾವ ಸಂಗತಿಯೂ ಇಲ್ಲದೇ ನಿರಾಶೆಯಾಗುತ್ತದೆ. ಇನ್ನುಳಿದ ಬೇರೆ ಚರಿತ್ರ ಕಾರರಲ್ಲಂತೂ ಉತ್ತರ, ದಕ್ಷಿಣ ಭೇದ ಭಾವ, ಜಾತೀಯತೆ, ಕೋಮುವಾದೀ ಮನೋಭಾವ ಇಂಥ ರೋಗಗಳು ಮಾಮೂಲಾಗಿದ್ದು ದಲಿತರ ಕುರಿತ ಮಾತುಗಳನ್ನು ಅವರಿಂದ ನಿರೀಕ್ಷಿಸುವುದೇ ತಪ್ಪು.

**ಹೊಲೆಯ-ಮಾದಿಗ:**

ಮೊದಲು ಈ ಪದ ಪರಿಕಲ್ಪನೆಗಳ ಕುರಿತು ಯೋಚಿಸಬೇಕು. ಪೊಲಿ(ಲೆ)+ಅ = ಪೊಲಿ(ಲೆ)ಯ. ಇದು ಇಂದಿನ 'ಹೊಲೆಯ' ಪದದ ನಿಷ್ಪತ್ತಿ. ವೈದಿಕರ ವೇದಗಳಲ್ಲಿ ಬರುವ ಋತದ ಕಲ್ಪನೆಯನ್ನು ಹೋಲುವ ದ್ರಾವಿಡ ಸಂಸ್ಕೃತಿಯ ಅದ್ಭುತ ಪದ 'ಪೊಲಿ'. 'ಸಮೃದ್ಧಿಯನ್ನುಂಟು ಮಾಡು' (ಹುಲುಸು) ಎಂದು ಇದರರ್ಥ. ಸಮೃದ್ಧಿ ಅಥವಾ ಸುಖವನ್ನುಂಟು ಮಾಡುವವ/ಳು ಪೊಲೆಯ/ಪೊಲತಿ. ಹೊಲೆಯ ಪ್ರಾತಿಪದಿಕವಾಗಿರುವ 'ಪೊಲಿ' ದಕ್ಷಿಣ ಭಾರತದ ನಾಲ್ಕೂ ರಾಜ್ಯಗಳ ಎಲ್ಲ ಜನಕುಲಗಳ ಸಂಸ್ಕೃತಿಗಳಲ್ಲಿ ಎಷ್ಟು ವಿಸ್ತೃತವಾಗಿ ಬಳಕೆಯಲ್ಲಿದೆ ಎಂದರೆ ಅವನ್ನೆಲ್ಲ ಈ ಸಣ್ಣ ಲೇಖನದಲ್ಲಿ ದಾಖಲು ಮಾಡುವುದು ಸಾಧ್ಯವಿಲ್ಲ.

(ಕುತೂಹಲಿಗಳು ವಿವರಗಳಿಗೆ ಇದೇ ಲೇಖಕನ ಈ ಕೆಳಗಿನ ಗ್ರಂಥಗಳನ್ನು ಅವಲೋಕಿಸಬಹುದು:

೧) ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ ೨, ಸಮತಾ ಪ್ರಕಾಶನ, ಹೊಸಪೇಟೆ.

೨) ಮಾದರ ಚೆನ್ನಯ್ಯನ ನಾಡಿನಲ್ಲಿ, ಸಮತಾ ಪ್ರಕಾಶನ, ೧೯೯೭.

೩) ದಲಿತ ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.



ನಮ್ಮ ದೇಶದ ವ್ಯವಸಾಯ, ಸಾಮಾಜಿಕ ವಿಲೀನತೆಗಳಲ್ಲಿ ಹಾಗೂ ಸಾಂಸ್ಕೃತಿಕ ಸಮಾವೇಶಗಳಲ್ಲಿಯೇ ಸಂಭವಿಸಿತು ಎನ್ನುವ ಡಿ.ಡಿ.ಕೋಸಾಂಬಿ 'ನಾಗರಿಕರು' ಅರಣ್ಯವಾಸಿಗಳನ್ನು ಹೊಲೆಮಾದಿಗರನ್ನಾಗಿಸಿ ಆಧೀನವಾಗಿಸಿಕೊಂಡರು ಎನ್ನುತ್ತಾರೆ. (ಪೂರ್ವೋಕ್ತ ಪು ೨೬, ೨೭) ಆದರೆ ಈ ಊಹೆಗೆ ಆಧಾರವಿಲ್ಲ. ಪ್ರತಿಯಾಗಿ ಮೂಲ ಕೃಷಿಕ ಹೊಲೆಯ ಮಾದಿಗರಿಂದಲೇ 'ನಾಗರಿಕರು' ಬೇಸಾಯವನ್ನು ಕಲಿತರೆನ್ನುವುದನ್ನು ಸಮರ್ಥಿಸುವ ಸಾಕ್ಷ್ಯಾಧಾರಗಳು ಬೇಕಾದಷ್ಟಿವೆ. ದೇವಿಪ್ರಸಾದ ಛಟ್ಟೋಪಾಧ್ಯಾಯರು ಪರೋಕ್ಷವಾಗಿ ದಲಿತರ ಸಾಧನೆಗಳನ್ನೇ ಕುರಿತು ತುಂಬ ಆಳವಾಗಿ 'ಲೋಕಾಯತ'ದಲ್ಲಿ ಚರ್ಚಿಸಿದ್ದಾರೆ.

ಈ ಗ್ರಂಥಗಳಲ್ಲಿ ವಿವೇಚಿಸಲಾಗದಿದ್ದ ಹಲವಾರು ಸಂಗತಿಗಳನ್ನು ಮೊದಲಬಾರಿಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.)

ಒಂದು ಪದ ಪುಲ್ಲಿಂಗ ಮತ್ತು ಸ್ತ್ರೀಲಿಂಗವೆರಡೂ ಆಗುವುದು ದ್ರಾವಿಡ ನಾಮಶಾಸ್ತ್ರೀಯ ವೈಶಿಷ್ಟ್ಯ. ನಿಂಗಪ್ಪ- ನಿಂಗವ್ವ, ನಾಗಪ್ಪ-ನಾಗವ್ವ, ಗ್ಯಾರಪ್ಪ-ಗ್ಯಾರವ್ವ, ದಾಸಪ್ಪ- ದಾಸವ್ವ, ಜೋಗಪ್ಪ-ಜೋಗವ್ವ, ಬಸಪ್ಪ-ಬಸವ್ವ, ಪಂಪಪ್ಪ-ಪಂಪವ್ವ ಇವುಗಳಂತೆ ಹೊಲೆಯ-ಹೊಲತಿ ಮತ್ತು ಮಾದೇಗ-ಮಾದೇಗಿ ('ವಡ್ಡಾರಾಧನೆ')

ತೆಲುಗು ಮೂಲದ 'ಮಾದಿಗ' ಪದಕ್ಕೂ ಇಡೀ ಗ್ರಾಮಕ್ಕೆ ನೆಮ್ಮದಿಯನ್ನುಂಟು ಮಾಡುವವ ಎಂದೇ ಅರ್ಥ. 'ಹೊಲೆಯ', 'ಮಾದಿಗ' ಪರಿಕಲ್ಪನೆಗಳು ವಿಧಿಯಾ ಚರಣೆ, ಹಬ್ಬ ಮೊದಲಾದ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು; ಭೂತಾಯಿ, ಫಲವಂತಿಕೆ, ಆದಿಮ ತಾಂತ್ರಿಕ ಯೋಗಿಕ ಆಚರಣೆಗಳನ್ನು ಒಳಗೊಂಡ ಭೂಮ ಪದಗಳಾಗಿದ್ದು 'ದಲಿತ ಶಾಸ್ತ್ರ'ದ ಅಮೂಲ್ಯ ಪರಿಭಾಷೆಗಳಾಗಿವೆ.

ದಕ್ಷಿಣ ಭಾರತದ ಮಾನವಕುಲ ಶಾಸ್ತ್ರೀಯ ಅಧ್ಯಯನ ಮಾಡಿದ ಮೊದಲಿಗರಲ್ಲಿ ಈ.ಥರಸ್ಟನ್ ಪ್ರಮುಖ. 'ದಿ ಕಾಸ್ಟ್ ಎಂಡ್ ಟ್ರೈಬ್ಸ ಆಫ್ ಸದರ್ನ್ ಇಂಡಿಯಾ'ದ ಏಳು ಸಂಪುಟಗಳಲ್ಲಿ ಚೆಲ್ಲವರಿದಿರುವ ಸಮೃದ್ಧ ಮಾಹಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ದಲಿತರ ಮೂಲನೆಲೆಯ ಸುಳಿವು ಸಿಗುತ್ತದೆ. ದಕ್ಷಿಣದ ಭಾಷಿಕ ನಾಡುಗಳ ಜಾತಿ-ಕುಲಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಖಚಿತಗೊಳ್ಳುವ ಕೆಲವು ಸಂಗತಿಗಳೆಂದರೆ-ವೃತ್ತಿ ಆಧಾರದಲ್ಲಿ ಈ ಜಾತಿಕುಲಗಳನ್ನೆಲ್ಲ ೧) ಪಶುಪಾಲಕರು ೨) ಕೃಷಿಕರು ಎಂದು ವಿಭಾಗೀಕರಿಸುವ ಅನಿವಾರ್ಯತೆ. ಎರಡನೇ ಪ್ರಧಾನ ಅಂಶವೆಂದರೆ ಮೊಟ್ಟ ಮೊದಲು ಬೇಸಾಯವನ್ನು ಪ್ರಾರಂಭಿಸಿದವರು ಹೊಲೆಯ ಮತ್ತು ಮಾದಿಗ ಮಹಿಳೆಯರು. ಕುರುಬರು, ಬೇಡರು, ಗೊಲ್ಲರು, ಕೊರಚರು, ಗೌಡರು ಮೊದಲಾದವರು ಪಶುಪಾಲಕ ಕುಲಗಳಾದರೆ ಪರೈಯಾನ್, ಪಲ್ಲನ್ (ತಮಿಳು, ಮಲೆಯಾಳ), ಮಾಲ, ಮಾದಿಗ (ತೆಲುಗು), ಹೊಲೆಯ-ಮಾದಿಗ(ಕನ್ನಡ)ರು ದಲಿತ ಕೃಷಿಕ ಜಾತಿಗಳು. ಕೃಷಿಕರು ಮೊದಲು ಮಾತೃಪ್ರಧಾನ ಸಮಾಜದವರು. ಇಂಥ ನೆಲೆಯೂರಿದ 'ಹಳ್ಳಿ ಸಂಸ್ಕೃತಿ'ಯಲ್ಲಿ ಮಾತ್ರ 'ಸಾಂಖ್ಯ', 'ತಂತ್ರ', 'ಯೋಗ', 'ಲೋಕಾಯತ'ದಂಥ ಸಿದ್ಧಾಂತಗಳು, ಸಂಗೀತ ('ಬೃಹದ್ದೇಶಿ'-ಮಾತಂಗ), ನೃತ್ಯ, ಸಾಹಿತ್ಯ, ಚಿತ್ರದಂಥ ಕಲೆಗಳು ಹುಟ್ಟಲು ಸಾಧ್ಯ. (ಇದರೆಲ್ಲ ವಿವರಗಳಿಗೆ ದೇವಿಪ್ರಸಾದ ಛಟ್ಟೋಪಾಧ್ಯಯರ 'ಲೋಕಾಯತ' ಗ್ರಂಥವನ್ನು ನೋಡಬಹುದು) ಇಡೀ ದೇಶದಲ್ಲಿ ಮೊಟ್ಟಮೊದಲ ಸಂಗೀತ ಶಾಸ್ತ್ರವನ್ನು ಬರೆದ ಪಿತಾಮಹ 'ಮಾತಂಗ ಮುನಿ' (ಬೃಹದ್ದೇಶಿ) ಮಾದಿಗ ಕುಲದವನು ಎಂಬ ಒಂದು ನಿದರ್ಶನವನ್ನು ಇಲ್ಲಿ ನೀಡಬಹುದು.

ಪಶುಸಂಗೋಪರಾಗಿ ಭಾರತಕ್ಕೆ ಕಾಲಿಟ್ಟ ಆರ್ಯ ವೈದಿಕರು ನೂರಾರು ವರ್ಷಗಳವರೆಗೆ ಭಾರತದ ಬೇಸಾಯಗಾರರ ಜತೆ ಹೋರಾಡಿ ಕೊನೆಗೆ ತಾವೂ ಸಾಮಾಜಿಕಾರ್ಥಿಕವಾಗಿ ಪ್ರಗತಿಪರವಾದ ಕೃಷಿಯನ್ನು ಅವಲಂಬಿಸಿದರು. ಬೇಸಾಯಗಾರರಲ್ಲಿದ್ದ ಜ್ಞಾನ, ಕಲೆ, ತಂತ್ರಜ್ಞಾನಗಳನ್ನು ದೋಚಿದರೂ ವೈದಿಕರು ಈ ಬೇಸಾಯಗಾರರನ್ನು ರಾಕ್ಷಸರು, ದಾನವರು, ನಾಗರು (ಅಂಬೇಡ್ಕರ್ ಅವರು ನಿರ್ಧರಿಸಿರುವಂತೆ) ಎಂದೆಲ್ಲ ಗುರುತಿಸಿದರು. ತಮ್ಮ ವೈದಿಕ ವಾಙ್ಮಯದಲ್ಲಿ ಅಸಂಖ್ಯ ಸಂದರ್ಭಗಳಲ್ಲಿ ದಾಖಲಿಸಿದರು. (ಅವು ಕಲೆಗಳ ರೂಪದಲ್ಲಿ ಹೆಚ್ಚಿವೆ) ಲಿಖಿತ ದಾಖಲೆಗಳು ಈ ದೇಶದಲ್ಲಿ ಅತಿ ಹೆಚ್ಚಿರುವುದು ಆರ್ಯ ವೈದಿಕವಾದ್ದರಿಂದ ಅವರ ದೃಷ್ಟಿಕೋನದಲ್ಲಿ ಚಿತ್ರಿತವಾದ ದಲಿತರ ಬದುಕನ್ನು ಸರಿಯಾಗಿ ಜೋಡಿಸಿಕೊಂಡು ದಲಿತ ದೃಷ್ಟಿಕೋನದಿಂದ ಪುನರ್ರಚಿಸಿಕೊಳ್ಳುವ ಅಗತ್ಯವಿದೆ. ಲಿಖಿತ ಆಕರಗಳಲ್ಲಿ ಅವೈದಿಕರಾದ ಬೌದ್ಧ ಜೈನರ ಗ್ರಂಥಗಳು ನಂತರದವು. ಇವುಗಳಿಂದಲೂ ದಲಿತ

ಚರಿತ್ರೆಗೆ ಒಂದಿಷ್ಟು ನೆರವಾಗುವ ಸಾಧ್ಯತೆ ಇದೆ. ದೇಶೀ ವಾಙ್ಮಯ ಕ್ರಿ.ಶ.ದ ಈಚೆಯ ಸೃಷ್ಟಿಯಾದ್ದರಿಂದ ದಲಿತರ ಪೂರ್ವ ಚರಿತ್ರೆಗೆ ಇವುಗಳ ನೆರವು ಎಷ್ಟಿದ್ದರೂ ಪರೋಕ್ಷ.

ಬೇಸಾಯಗಾರರ ಮಾತೃಪ್ರಧಾನ ಸಮಾಜ ದೇಶವ್ಯಾಪಿಯಾಗಿ ತುಂಬ ಪ್ರಭಾವಶಾಲಿಯಾಗಿತ್ತು. ಈ ಸಂಗತಿಯನ್ನು ಸಮರ್ಥಿಸುವ ಅಸಂಖ್ಯ ನಿದರ್ಶನಗಳಿವೆ. ಮಾತೃದೈವದ ಕಲ್ಪನೆಯನ್ನೆ ಉದಹರಿಸುವುದಾದರೆ ಗ್ರಾಮನೆಲೆಯಲ್ಲಿ ಜನಪದ ದೈವಗಳು ಸ್ತ್ರೀರೂಪಿಯೇ. ರಾಷ್ಟ್ರೀಯ ನೆಲೆಯ ದುರ್ಗೆ, ಕಾಳಿ, ಪಾರ್ವತಿ, ಲಕ್ಷ್ಮೀ, ಸರಸ್ವತಿ ಇಂಥವೇ. ಇವಕ್ಕೆ ನಡೆಯುವ ಹಬ್ಬ ಆರಾಧನೆ, ಜಾತ್ರೆ, ಉತ್ಸವಗಳು ನಾನಾ ನಮೂನೆ. ತಾತ್ವಿಕ ಕ್ಷೇತ್ರದಲ್ಲಿ ಇದೇ ಆಧಾರದಲ್ಲಿ ಹುಟ್ಟಿದ 'ತಂತ್ರ' ಬ್ರಾಹ್ಮಣರ ತತ್ವಶಾಸ್ತ್ರದ ಮೇಲೂ ಗಾಢವಾದ ಪ್ರಭಾವ ಬೀರಿತು. 'ತಂತ್ರ'ಗಳಿಲ್ಲದಿದ್ದರೆ ಭಾರತೀಯ ತಾತ್ವಿಕ ಚಿಂತನೆಗೆ ಅಡಿಪಾಯವೇ ಇರಲಾರದೆಂದು ಬಲ್ಲಿದರು ನಿರ್ವಚಿಸಿದ್ದಾರೆ. 'ಯೋಗ'ದ ಮೂಲವೂ ಇಲ್ಲಿಯೇ ಇದೆ. ಇದರ ಭಾರತೀಯ ಪ್ರಭಾವ ವನ್ನಂತೂ ಹೆಚ್ಚಿಗೆ ವಿವರಿಸುವ ಅಗತ್ಯವಿಲ್ಲ.

ಒಂದೆಡೆ ಗ್ರಾಮಗಳು, ಗ್ರಾಮದ ಸ್ತ್ರೀ ದೈವಗಳು ಅವುಗಳ ಹಬ್ಬಗಳು, ಮಳೆ, ಬೆಳೆ, ಆರೋಗ್ಯದ ಹಂಬಲ, ಫಲವಂತಿಕೆ ಮತ್ತು ಇನ್ನೊಂಡೆದೆ ತಂತ್ರ, ಯೋಗ, ದಲಿತರು ಇವೆಲ್ಲಕ್ಕೂ ಇರುವ ಅಂತರ್‌ಸಂಬಂಧ ಗಾಢವಾಗಿದ್ದು ಒಂದನ್ನೊಂದು ಪ್ರತ್ಯೇಕವಾಗಿ ಅಧ್ಯಯನಿಸುವುದು ನಿರರ್ಥಕ. ಈ ಕೃಷಿ ಸಂಸ್ಕೃತಿಗಿಂತ ತೀರ ಭಿನ್ನವಾದುದು ದ್ರಾವಿಡ ಪಶುಪಾಲಕರ 'ಹಟ್ಟಿ ಸಂಸ್ಕೃತಿ'. ಎಮ್ಮೆ ಕೋಣ, ಆಕಳು, ಹೋರಿ, ಕುರಿ, ಆಡುಗಳನ್ನು ಹಿಂಡು ಹಿಂಡಾಗಿ ಸಾಕಿಕೊಂಡು ಅಲೆಯುತ್ತಿದ್ದ ಈ ಜನಕುಲಗಳು ಕಾಲಾಂತರದಲ್ಲಿ ಗ್ರಾಮಗಳಲ್ಲಿ ನೆಲೆಗೊಂಡು ಸಂಕರ ಸಂಸ್ಕೃತಿ ಹುಟ್ಟಲು ಕಾರಣರಾದರು. ಈ ಎಲ್ಲ ಸಂಗತಿಗಳಿಗೆ ಪ್ರಾಚ್ಯಶಾಸ್ತ್ರೀಯ ಆಧಾರ ಸಿಕ್ಕುವುದಾದರೆ ಮಾತ್ರ ನಮ್ಮ ಊಹೆಗಳೆಲ್ಲ ಸಿದ್ಧಾಂತಗಳಾಗುವುದರಲ್ಲಿ ಸಂದೇಹವಿಲ್ಲ.

**ಪ್ರಾಚ್ಯಶಾಸ್ತ್ರದ ಆಧಾರ:**

ಕರ್ನಾಟಕದ ಚರಿತ್ರಪೂರ್ವಕಾಲದ ಜನಕುಲಗಳ ಬಗ್ಗೆ ಪ್ರಾಚ್ಯಶಾಸ್ತ್ರಜ್ಞರು ಸಾಕಷ್ಟು ಕೆಲಸ ಮಾಡಿದ್ದಾರೆ. ಇನ್ನೂ ಆಗಬೇಕಾಗಿರುವ ಕೆಲಸಗಳು ಬಹಳಷ್ಟಿದ್ದರೂ ಈವರೆಗಿನ ಅವರ ಶೋಧನೆಗಳ ಬೆಳಕಿನಲ್ಲಿ ದಲಿತರ ಮೂಲವನ್ನು ಕಂಡುಕೊಳ್ಳಲು ಸಾಧ್ಯ.

ಎರಡು ಲಕ್ಷ ವರ್ಷಗಳಿಂದ ೮೦೦೦ ವರ್ಷಗಳವರೆಗಿದ್ದ ಆದಿ ಹಳೇ ಶಿಲಾಯುಗ, ಮಧ್ಯ ಹಳೇ ಶಿಲಾಯುಗ, ಅಂತ್ಯ ಹಳೇ ಶಿಲಾಯುಗ; ಕ್ರಿ.ಪೂ. ೧೦,೦೦೦ದಿಂದ ೫೦೦೦ ವರ್ಷದವರೆಗಿದ್ದ ಸೂಕ್ಷ್ಮ ಶಿಲಾಯುಗ; ಕ್ರಿ.ಪೂ. ೨೫೦೦-೧೮೦೦ ವರ್ಷದವರೆಗಿದ್ದ ನವಶಿಲಾಯುಗ; ಕ್ರಿ.ಪೂ. ೨೦೦೦-೨೦೦ವರೆಗಿದ್ದ ತಾಮ್ರ ಶಿಲಾಯುಗ; ಕ್ರಿ.ಪೂ. ೧೨೦೦-೨೦೦ ರವರೆಗಿದ್ದ ಬೃಹತ್ ಶಿಲಾಯುಗ ಇಲ್ಲವೆ ಕಬ್ಬಿಣ ಯುಗ ಹೀಗೆ ಕನ್ನಡ ನಾಡಿನಲ್ಲಿ ತುಂಬ ಪ್ರಾಚೀನ ಕಾಲದಿಂದ ಅನೇಕ ಕುಲಗಳು ಬಾಳಿ ಬಂದಿರುವುದನ್ನು ಪತ್ತೆ ಮಾಡ ಲಾಗಿದೆ. (ವಿವರಗಳಿಗೆ ನೋಡಿ: 'ಕರ್ನಾಟಕ ಚರಿತ್ರೆ' ಸಂಪುಟ ೧, ೧೯೯೭, ಹಂಪಿ, ಕನ್ನಡ ವಿ.ವಿ.) ಪ್ರಗತಿಯ ಈ ಘಟ್ಟಗಳೆಲ್ಲಕ್ಕೂ ಒಂದಲ್ಲ ಹಲವಾರು ಜನಾಂಗಗಳು ಕಾರಣವಿರುವುದನ್ನು ಪ್ರಾಚ್ಯಶಾಸ್ತ್ರಜ್ಞರು ಕಂಡುಕೊಂಡಿದ್ದು ಇವು ಜಗತ್ತಿನ ಬೇರೆ ಬೇರೆ ಭಾಗಗಳಿಗೆ ಸಂಬಂಧಿಸಿವೆ. ಆಫ್ರಿಕಾದ ನಿಗ್ರೋ, ಭೂಮಧ್ಯ ಸಮುದ್ರ ಪ್ರದೇಶದ ಪ್ರೋಟೊ, ಆಸ್ಟ್ರಲೈಡ್ ಮತ್ತು ಸುಮೇರಿಯದ ಉಬೈದಿಯನ್ ಜನಕುಲಗಳು ನಮ್ಮ ನಾಡನ್ನಷ್ಟೇ ಅಲ್ಲ ಭಾರತವನ್ನೊಳಗೊಂಡು ಹಲವಾರು ದೇಶಗಳನ್ನು (ಇರಾಯ, ಅಫಘಾನಿಸ್ಥಾನ, ಇಂಡೋಚೈನ, ಸಿಲೋನ, ಆಸ್ಟ್ರೇಲಿಯ, ಇಂಡೋನೇಶಿಯಾ ಮುಂತಾಗಿ) ಆವರಿಸಿದ್ದರು. ಇವರಲ್ಲಿ ಮೊದಲು ಬಂದಿದ್ದ ನಿಗ್ರೋಗಳು ತಮಿಳುನಾಡಿನ ಕೆಲವು ಬುಡಕಟ್ಟುಗಳಲ್ಲಿ, ನಾಗಾಗಳಲ್ಲಿ ಮತ್ತು ಅಂದಮಾನ್ ದ್ವೀಪಗಳಲ್ಲಿ ಉಳಿದಿದ್ದಾರೆ. ಪ್ರೋಟೊ ಆಸ್ಟ್ರಲೈಡ್ ಎಂಬ ಜನ ಪಂಗಡವೇ ಮುಂಡಾ (ಕೋಲ) ಭಾಷಿಕರಾಗಿದ್ದು ಇವರೇ ಮೊಟ್ಟಮೊದಲ ದ್ರಾವಿಡ ಪಶುಪಾಲಕ 'ಹಟ್ಟಿ' ಸಂಸ್ಕೃತಿಯ ಮೂಲ ಜನಾಂಗವಾಗಿದ್ದರು. ಸಮುದ್ರ ಮಾರ್ಗದಿಂದ ಬಂದ ಈ ದ್ರಾವಿಡರ ಪ್ರಾಬಲ್ಯದಿಂದಾಗಿ ಮುಂಡಾ ಭಾಷಿಕ ದಲಿತರು ದ್ರಾವಿಡ ಭಾಷಿಕರಾಗಬೇಕಾಯಿತು.

> ಕನ್ನಡ ನಾಡಿನಲ್ಲಿ ತುಂಬ ಪ್ರಾಚೀನ ಕಾಲದಿಂದ ಅನೇಕ ಕುಲಗಳು ಬಾಳಿ ಬಂದಿರುವುದನ್ನು ಪತ್ತೆ ಮಾಡಲಾಗಿದೆ. ಪ್ರಗತಿಯ ಈ ಘಟ್ಟಗಳೆಲ್ಲಕ್ಕೂ ಒಂದಲ್ಲ ಹಲವಾರು ಜನಾಂಗಗಳು ಕಾರಣವಿರುವುದನ್ನು ಪ್ರಾಚ್ಯಶಾಸ್ತ್ರಜ್ಞರು ಕಂಡುಕೊಂಡಿದ್ದು ಇವು ಜಗತ್ತಿನ ಬೇರೆ ಬೇರೆ ಭಾಗಗಳಿಗೆ ಸಂಬಂಧಿಸಿವೆ. ಆಫ್ರಿಕಾದ ನಿಗ್ರೋ, ಭೂಮಧ್ಯ ಸಮುದ್ರ ಪ್ರದೇಶದ ಪ್ರೋಟೊ, ಆಸ್ಟ್ರಲೈಡ್ ಮತ್ತು ಸುಮೇರಿಯದ ಉಬೈದಿಯನ್ ಜನಕುಲಗಳು ನಮ್ಮ ನಾಡನ್ನಷ್ಟೇ ಅಲ್ಲ ಭಾರತವನ್ನೊಳಗೊಂಡು ಹಲವಾರು ದೇಶಗಳನ್ನು ಆವರಿಸಿದ್ದರು. ಇವರಲ್ಲಿ ಮೊದಲು ಬಂದಿದ್ದ ನಿಗ್ರೋಗಳು ತಮಿಳುನಾಡಿನ ಕೆಲವು ಬುಡಕಟ್ಟುಗಳಲ್ಲಿ, ನಾಗಾಗಳಲ್ಲಿ ಮತ್ತು ಅಂದಮಾನ್ ದ್ವೀಪಗಳಲ್ಲಿ ಉಳಿದಿದ್ದಾರೆ. ಪ್ರೋಟೊ ಆಸ್ಟ್ರಲೈಡ್ ಎಂಬ ಜನ ಪಂಗಡವೇ ಮುಂಡಾ(ಕೋಲ) ಭಾಷಿಕರಾಗಿದ್ದು ಇವರೇ ಮೊಟ್ಟಮೊದಲ ದ್ರಾವಿಡ ಪಶುಪಾಲಕ 'ಹಟ್ಟಿ' ಸಂಸ್ಕೃತಿಯ ಮೂಲ ಜನಾಂಗವಾಗಿದ್ದರು. ಸಮುದ್ರ ಮಾರ್ಗದಿಂದ ಬಂದ ಈ ದ್ರಾವಿಡರ ಪ್ರಾಬಲ್ಯದಿಂದಾಗಿ ಮುಂಡಾ ಭಾಷಿಕ ದಲಿತರು ದ್ರಾವಿಡ ಭಾಷಿಕರಾಗಬೇಕಾಯಿತು.

ಮುಂಡ(ಕೋಲ) ಭಾಷಿಕ ಜನಕುಲಗಳ ಇಂದಿನ ಬುಡಕಟ್ಟು ಸಂಸ್ಕೃತಿಗಳ ಜತೆ (ಸವರರು, ಮುಂಡರು, ಕೋಲರು, ನಾಗರು ಮೊದಲಾದವರು) ದಲಿತ ಸಂಸ್ಕೃತಿಯನ್ನು ಹೋಲಿಸಿದರೆ ಆಶ್ಚರ್ಯಕರವಾದ ಸಾಮ್ಯಗಳು ಕಂಡು ಬರುತ್ತವೆ. ಇವು ಆಕಸ್ಮಿಕ ಸಮಾನಾಂಶಗಳಲ್ಲ, ಒಂದೇ ಮೂಲದಿಂದ ಕವಲೊಡೆದ ಬೇರೆ ಬೇರೆ ಟೊಂಗೆಗಳು.

ಛೋಟಾನಾಗಪೂರ ಪ್ರದೇಶದ ಸವರರೆಂಬ ಮುಂಡಾ ಭಾಷಿಕ ಬುಡಕಟ್ಟು ಕೃಷಿಕರ ಜತೆ ನಮ್ಮ ನಾಡಿನ ತುಳು ಪ್ರದೇಶದ ದಲಿತರ ಸಾಂಸ್ಕೃತಿಕಾಂಶಗಳನ್ನು ಹೋಲಿಸಿ ನೋಡಬಹುದು. ಸವರರಲ್ಲಿರುವ ಸೊನುಂ ಕೃಷಿ ಸಂಸ್ಕೃತಿಯ ಆದಿಮ ಹಂತವನ್ನು ಸೂಚಿಸಿದರೆ ಕರಾವಳಿ ದಲಿತರಲ್ಲಿರುವ ಭೂತಾರಾಧನೆ ಅದರ ಬೆಳೆದ ಸ್ಥಿತಿಯನ್ನು ಧ್ವನಿಸುತ್ತದೆ. (ಸವರರ ಸಂಸ್ಕೃತಿಯ ಕುರಿತು ಈ.ಥರ್‌ಸ್ಟನ್ ಮತ್ತು ಪಿಯರ್ಸ್ ವಿಟ್‌ಬೆಸ್ಕಿ ಅವರ 'ಡೈಲಾಗ್ಸ್ ವಿಥ್ ದಿ ಡೆಡ್' ಗ್ರಂಥಗಳನ್ನು ನೋಡಬಹುದು) ಸವರರ ಅನುಭವಗಳು ದ್ರಾವಿಡ ದಲಿತರ ಸಂಸ್ಕೃತಿ ಶೋಧನೆಗೆ ತುಂಬ ಪೂರಕವಾದ ಮಾಹಿತಿಗಳನ್ನು ಸೂಕ್ಷ್ಮವಾದ ವಿವರಗಳನ್ನು ನೀಡುತ್ತದೆ. ಕೃಷಿಗೂ ಬುಡಕಟ್ಟು ಜೀವನ ಪದ್ಧತಿಗೂ ವಿಧಿಯಾಚರಣೆಗಳಿಗೂ, ಮೌಖಿಕ ಪರಂಪರೆಗೂ ಇದ್ದ ಗಾಢವಾದ ಸಂಬಂಧದ ಕುರಿತು ಪಿಯರ್ಸ್ ಅವರ ಕೃತಿ ಮಹತ್ವದ ಮಾಹಿತಿಯನ್ನು ನೀಡುತ್ತದೆ. ಇದು ದಲಿತರ ಮುಂಡಾ ಮೂಲವನ್ನು ಸಮರ್ಥಿಸುತ್ತದೆ.

ಪ್ರಾಚ್ಯಶಾಸ್ತ್ರ ಹೇಳುವ ಶಿಲಾತಾಮ್ರ ಯುಗಕ್ಕೆ ಸೇರಿದ ಸಿಂಧೂ ನಾಗರಿಕತೆಗೂ ಕನ್ನಡ ನಾಡಿನ ಆ ಕಾಲದ ದಲಿತ ಕೃಷಿಕರಾಗಿದ್ದಿರಬಹುದಾದ ತಾಮ್ರಯುಗದ ಜನಕುಲಗಳ ನಡುವೆಯೂ ಸಂಬಂಧವಿದ್ದ ಬಗ್ಗೆ ಪ್ರಾಚ್ಯಶಾಸ್ತ್ರಜ್ಞರು ಹೇಳುವ ಅಂಶಗಳಿವು-

ಕನ್ನಡ ನಾಡಿನ ಗಣಿಗಳಿಂದ ತೆಗೆದ ಚಿನ್ನವನ್ನು ಸಿಂಧೂ ನಾಗರಿಕ ಪಟ್ಟಣಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಕರ್ನಾಟಕದ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲದ ಮಡಕೆಗಳು ಗುಜರಾತ ಪ್ರದೇಶದ ಹರಪ್ಪಾ ನಾಗರಿಕತೆಯಲ್ಲಿ ಬಳಕೆಯಲ್ಲಿದ್ದವು. ('ಕರ್ನಾಟಕ ಚರಿತ್ರೆ', ಸಂ.೧, ೧೯೯೭, ಹಂಪಿ ವಿ.ವಿ.) (ಪುಟ ೧೫) ಮಸ್ಕಿ, ಬೂದಿಹಾಳ ಮೊದ

ಲಾದೆಡೆ ಸಿಗುವ ತಿರುವುಗಲ್ಲು, ನೀಳಚಕ್ಕೆಗಳು 'ಹರಪ್ಪ ಸಂಸ್ಕೃತಿಯ ನೀಳಚಕ್ಕೆಗಳಿಗೆ ತುಂಬಾ ಹೋಲುತ್ತವೆ'. (ಅದೇ ಪುಟ ೧೫೨) ಪಿಕ್ಕಿಹಾಳ, ತೆಕ್ಕಲಕೋಟೆ, ಸಂಗನಕಲ್ಲು ನೆಲೆಗಳ ವರ್ಣಚಿತ್ರಗಳು (ಗೂಳಿ ಇತ್ಯಾದಿ) 'ಹರಪ್ಪ ನಾಗರಿಕತೆಯ ಮುದ್ರಿಕೆಗಳ ಗೂಳಿ ಚಿತ್ರಗಳನ್ನು' ನೆನಪಿಗೆ ತರುತ್ತವೆ. (ಅದೇ ಪು.೧೬೪) ಕೃಷ್ಣಾ ಮೇಲ್ದಂಡೆಯ ಪಾತ್ರೆಗಳ ಚಿತ್ರಗಳು ಹರಪ್ಪ ನಾಗರಿಕತೆಯ ಹಲವು ನೆಲೆಗಳಲ್ಲಿ ಸಿಕ್ಕಿವೆ. (ಅದೇ ಪು.೧೬೮) ಹಂಪಿ-ಆನೆಗೊಂದಿ ಭಾಗದ ಬಂಡೆ ಚಿತ್ರಗಳಲ್ಲಿ ಹರಪ್ಪಾ ಲಿಪಿಯನ್ನು ಹೋಲುವ ಒಂದೆರಡು ಅಕ್ಷರಗಳಿವೆ. (ಅದೇ ಪುಟ ೧೯೯).

**ಕಬ್ಬಿಣದ ಶೋಧ:**

ಕ್ರಿ.ಪೂ. ೬೦೦-೨೦೦ರಲ್ಲಿ ಉತ್ತರ ಭಾರತದಲ್ಲಿ ಭಾರತದಲ್ಲಿ ಕಬ್ಬಿಣದ ಬಳಕೆ ಪ್ರಾರಂಭವಾಯಿತು. ಆಗಿನಿಂದ ಕೃಷಿಯಲ್ಲಿ ಕ್ರಾಂತಿಕಾರಕ ಪರಿವರ್ತನೆಯುಂಟಾಗಿ ಹೆಚ್ಚುವರಿ ಉತ್ಪಾದನೆಯಿಂದಾಗಿ ರಾಜ್ಯ-ಸಾಮ್ರಾಜ್ಯಗಳು ಉದಯಿಸಿದವೆಂದು ಇತಿಹಾಸಕಾರರ ಅಭಿಪ್ರಾಯ. ಆದರೆ ಕರ್ನಾಟಕದ ಈಚಿನ ಪ್ರಾಚ್ಯಶಾಸ್ತ್ರೀಯ ಶೋಧನೆಗಳಲ್ಲಿ ಹರಿಹರ ತಾಲೂಕು ಕುಮಾರನಹಳ್ಳಿ ಮತ್ತು ಅದರ ಸಮೀಪದ ಹಳ್ಳೂರಗಳಲ್ಲಿ ಕ್ರಿ.ಪೂ. ೧೨೦೦-೧೦೦೦ದಲ್ಲಿಯೇ ಕಬ್ಬಿಣ ಉಪಕರಣಗಳು-ಅಸ್ತ್ರಗಳು ಪತ್ತೆಯಾಗಿ, ಭಾರತದ ಚರಿತ್ರೆಯ ಮೂಲ ಗ್ರಹಿಕೆಯೇ ಬುಡಮೇಲಾಗುವಂತಾ ಯಿತು. ಸಿಂಧೂ ನಾಗರಿಕ ಸಮಾಜಕ್ಕೆ ಬಂಗಾರವನ್ನು ಪೂರೈಸುತ್ತಿದ್ದ ಕರ್ನಾಟಕ ಆ ನಾಗರಿಕತೆಯ ಕೊನೆ ದಿನಗಳಲ್ಲಿ ಕಬ್ಬಿಣವನ್ನು ಶೋಧಿಸಿ ಬಳಕೆಗೆ ತಂದಿತ್ತೆಂಬುದನ್ನು ನೋಡಿದರೆ ಭಾರತದ ಪ್ರಗತಿ ಪಥದಲ್ಲಿ ಕರ್ನಾಟಕದ ಪ್ರಧಾನ ಪಾತ್ರದ ಅರಿವಾಗುತ್ತದೆ.

ತಾಮ್ರಶಿಲಾಯುಗದ ಆಸ್ಟ್ರಿಕ್ ಭಾಷಿಕ ಕೃಷಿಕರು ಕಾಲಾಂತರದಲ್ಲಿ ಕಬ್ಬಿಣದ ಶೋಧನೆಗೆ ಕಾರಣರಾಗಿರಬೇಕಲ್ಲವೇ? ಇಲ್ಲದಿದ್ದರೆ ಬೃಹತ್‌ಶಿಲಾಯುಗ ಸಂಸ್ಕೃತಿಯವರಾದ ಉಬೈದಿಯನ್ ಮೂಲದ ದ್ರಾವಿಡ ಭಾಷಿಕ ಪಶುಪಾಲಕರು ಅದರ ನಿರ್ಮಾಪಕರಾಗಿರುವ ಸಾಧ್ಯತೆಯಿದೆ.

ಸಣ್ಣ ಸಣ್ಣ ಪ್ರದೇಶಗಳಿಗೆ ಮತ್ತು ಗುಂಪುಗಳಿಗೆ ಸೀಮಿತವಾಗಿದ್ದ ಅಂದಿನ ಅಧಿಕ ಉತ್ಪಾದನೆಯಿಂದಾಗಿ ದೊಡ್ಡ ರಾಜ್ಯಗಳು ಹುಟ್ಟಿರಲಾರವು. ಬುಡಕಟ್ಟು ರಾಜ್ಯಗಳು ಇದ್ದಿರುವ ಸಾಧ್ಯತೆ ಹೆಚ್ಚು. ಬೃಹತ್ ಶಿಲಾಯುಗಕ್ಕೆ ಕಾರಣರಾದ ಪಶುಪಾಲಕ ಮತ್ತು ಕುಮ್ರಿ ಬೇಸಾಯಗಾರ ಕುಲಗಳು ಸಮುದ್ರದ ಮೂಲಕ ದಕ್ಷಿಣ ಭಾರತಕ್ಕೆ ಬಂದರೆಂದು ನಿಶ್ಚಯಿಸಲಾಗಿದೆ. ಕುರುಬರು, ಬೇಡರು, ಗೊಲ್ಲರು ಮೊದಲಾದ ದ್ರಾವಿಡ ಪಶುಪಾಲಕರು ದಕ್ಷಿಣದ ರಾಜ್ಯ ಗಳಲ್ಲಿ ಹರಡಿ ಹಂಚಿರುವ ರೀತಿಯನ್ನು ನೋಡಿದರೆ ಈ ಹೇಳಿಕೆ ಸಮರ್ಪಕವೇ.

ಇವರ ಮೂಲದ ಕುರಿತು ರಶಿಯನ್ ಶೋಧಕರು ಹೇಳಿರುವ ವಿಚಾರಗಳಿವು-

**ಲೆಮೂರಿಯದ ರಹಸ್ಯ:**

ದಕ್ಷಿಣ ಅಮೆರಿಕಾ, ಆಫ್ರಿಕಾ, ಆಸ್ಟ್ರೇಲಿಯಾ, ಸಿಂಹಳ, ಭಾರತಗಳನ್ನು ಕೂಡಿಸಿದ್ದ ಗೊಂಡಾವನ (ಲೆಮೂರಿಯ) ಹಿಂದೂ ಮಹಾಸಾಗರದಲ್ಲಿ ಮುಳುಗಿ ಹೋಗಿದ್ದು ಅದು ಮಾನವನ ನಾಗರಿಕತೆಯ ತೊಟ್ಟಿಲಾಗಿತ್ತು ಎನ್ನುವ ರಶಿಯನ್ ಶೋಧಕರು ಇಲ್ಲಿಂದ ದ್ರಾವಿಡರು ಜಗತ್ತಿನೆಲ್ಲೆಡೆ ಸಾಧ್ಯವಿರುವಲ್ಲೆಲ್ಲ ಚಲ್ಲವರಿದರು ಎಂದು ಅಭಿಪ್ರಾಯ ಪಡುತ್ತಾರೆ. ('ಲೆಮೂರಿಯ ರಹಸ್ಯ': ಕ.ಸಾ.ಪ. ೧೯೮೦) ನಾವು ದಲಿತರ ಮೂಲವೆಂದು ಭಾವಿಸಬಹುದಾದ ಮುಂಡಾ ಕೋಲ ಜನ ಭಾರತಕ್ಕೆ ಸುಮಾರು ೬೦೦೦ ವರ್ಷಗಳ ಹಿಂದೆ ಇಂಡೋಚೀನದಿಂದ ಬಂದರೆಂದು ಈ ಗ್ರಂಥದಲ್ಲಿ ಸಾಧಾರವಾಗಿ ವಿವರಿಸಲಾಗಿದೆ. ಇಂದಿಗೂ ಇಂಡೋಚೀನದಲ್ಲಿ ಮುಂಡ ಕೋಲ್ ಭಾಷೆಗಳಿವೆ. ಸುಮೇರಿಯನ್ನರ ಪೂರ್ವಜರಾದ ಉಬಾಯಿದಿಯನ್ನರು ಕ್ರಿ.ಪೂ.೪೦೦೦ದಷ್ಟೊತ್ತಿಗೆ ಭಾರತಕ್ಕೆ ಬಂದರೆಂದು ಈ ವಿದ್ವಾಂಸರ ವಾದ. ಇವರೇ ದ್ರಾವಿಡ ಭಾಷಿಕರು. ಅಂದರೆ ನಮ್ಮ ಪ್ರಕಾರ ದ್ರಾವಿಡ ಪಶುಪಾಲಕರಾದ ಕುರುಬರು, ಬೇಡರು, ಗೊಲ್ಲರು, ಗೊಂಡರು ಮೊದಲಾದವರು. ಇವರೇ ಬೃಹತ್ ಶಿಲಾಯುಗ '(ಕಬ್ಬಿಣಯುಗ)ಕ್ಕೆ ಕಾರಣರು. ಸುಮೇರಿಯದ ಉಬಾಯಿದಿನ್ನರಲ್ಲಿರುವ ಉರ್, ಉರಕ್, ನಿಪ್ಪೂರ್, ಮಾರಿ ಈ ನಾಮಗಳು ನಮ್ಮ ಗ್ರಾಮನಾಮ, ದೈವನಾಮಗಳಿಗೆ ಸಂಪೂರ್ಣ ಸಮಾನವಾಗಿವೆ.

ಸಣ್ಣ ಸಣ್ಣ ಪ್ರದೇಶಗಳಿಗೆ ಮತ್ತು ಗುಂಪುಗಳಿಗೆ ಸೀಮಿತವಾಗಿದ್ದ ಅಂದಿನ ಅಧಿಕ ಉತ್ಪಾದನೆಯಿಂದಾಗಿ ದೊಡ್ಡ ರಾಜ್ಯಗಳು ಹುಟ್ಟಿರಲಾರವು. ಬುಡಕಟ್ಟು ರಾಜ್ಯಗಳು ಇದ್ದಿರುವ ಸಾಧ್ಯತೆ ಹೆಚ್ಚು. ಬೃಹತ್ ಶಿಲಾಯುಗಕ್ಕೆ ಕಾರಣರಾದ ಪಶುಪಾಲಕ ಮತ್ತು ಕುಮ್ರಿ ಬೇಸಾಯಗಾರ ಕುಲಗಳು ಸಮುದ್ರದ ಮೂಲಕ ದಕ್ಷಿಣ ಭಾರತಕ್ಕೆ ಬಂದರೆಂದು ನಿಶ್ಚಯಿಸಲಾಗಿದೆ. ಕುರುಬರು, ಬೇಡರು, ಗೊಲ್ಲರು ಮೊದಲಾದ ದ್ರಾವಿಡ ಪಶುಪಾಲಕರು ದಕ್ಷಿಣದ ರಾಜ್ಯಗಳಲ್ಲಿ ಹರಡಿ ಹಂಚಿರುವ ರೀತಿಯನ್ನು ನೋಡಿದರೆ ಈ ಹೇಳಿಕೆ ಸಮರ್ಪಕವೇ.

**ಕೃಷಿಕರು ಪಶುಪಾಲಕರು:**

ದಕ್ಷಿಣದ ಕೃಷಿಕ ಜನಸಮುದಾಯಗಳ ಜತೆ ಹೋಲಿಸಿ ದರೆ ಮೂಲ ದ್ರಾವಿಡ ಪಶುಪಾಲಕರ ಸಂಖ್ಯಾಬಲ ಹೆಚ್ಚಾಗಿತ್ತು. ದ್ರಾವಿಡ ಜಾತಿಗಳಲ್ಲಿ ಕೃಷಿ ಮತ್ತು ಅದಕ್ಕೆ ಪೂರಕವಾದ ವೃತ್ತಿ ಜಾತಿಗಳ ಜತೆ ಹೋಲಿಸಿದರೆ ಪಶು ಪಾಲಕರ ಕುಲಗಳೇ ಅಧಿಕವಾಗಿವೆ. ಅವರು ಕೃಷಿಕರ ಜತೆ ಸಂಘರ್ಷಿಸಿ ನಂತರ ಸಮನ್ವಯಗೊಂಡು ಗ್ರಾಮಗಳಲ್ಲಿ ತಳವೂರತೊಡಗಿದರು. ಕೆಲವರು ತಮ್ಮ ಆದಿಮ ಸಂಸ್ಕೃತಿ ಸ್ವರೂಪ ಹೆಚ್ಚು ಬದಲಾದಂತೆ ಕಾಡುಗಳಲ್ಲೇ ಉಳಿದರು. ಹೀಗೆ ಪಶುಪಾಲಕರಲ್ಲಿ ಕಾಡು-ನಾಡು (ಕಾಡ ಬೇಡರು (ಮ್ಯಾಸ ನಾಯಕರು) -ಊರನಾಯಕರು, ಕಾಡುಗೊಲ್ಲರು- ಊರಗೊಲ್ಲರು; ಕಾಡಕುರುಬರು- ಊರುಕುರುಬರು ಮುಂತಾಗಿ) ಎಂಬ ಪ್ರಭೇದಗಳು ಹುಟ್ಟುವಂತಾಯಿತು. ನಾಡಿನ ದಲಿತ ಕೃಷಿಕರ ಜತೆ ಕೂಡಿ ನಿಂತ ಪಶುಪಾಲಕರಿಂದಾಗಿ ಸಂಕರ ಸಂಸ್ಕೃತಿ ಹುಟ್ಟಿತು. ಇಬ್ಬರ ದೇವತೆಗಳು, ಆರಾಧನಾ ಪದ್ಧತಿಗಳು, ಹಬ್ಬ ಜಾತ್ರೆಗಳು ಕೊಳುಕೊಡೆಗೊಳಗಾದವು. ಹಟ್ಟಿ ಹಳ್ಳಿ ಸಂಸ್ಕೃತಿ ಬೆರೆತವು. ಹೀಗೆ ಒಟ್ಟಾದ ಮುಂಡಾ-ದ್ರಾವಿಡ ಸಂಸ್ಕೃತಿ ಕನ್ನಡ ಸಂಸ್ಕೃತಿ ಯಾಗಿ ಕಾಲಾಂತರದಲ್ಲಿ ಪ್ರಾದುರ್ಭಾವವಾಯಿತು.

**ದಲಿತರು ಮುಂಡಾ ಮೂಲದವರೇ?**

ಪ್ರಾದಿಮ ಸಂಸ್ಕೃತಿ ಅವಶೇಷಗಳನ್ನು ಹೆಚ್ಚಾಗಿ ಉಳಿಸಿಕೊಂಡಿರುವ ಕರಾವಳಿ ಪ್ರದೇಶದ ಹೊಲೆಯರ ಒಂದು ಪ್ರಭೇದದ ಹೆಸರು 'ಮುಂಡಾಲ'. ಇದು ಮುಂಡಾ ಮೂಲ

ವನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತದೆ. ಮುಂಡರಗಿ, ಮುಂಡವಾಡ, ಮುಂಡಗೋಡ ಮುಂತಾದ ಮುಂಡಘಟಿತ ಗ್ರಾಮನಾಮಗಳು ನಮ್ಮ ನಾಡಿನಲ್ಲಿ ಹಿಂದೊಮ್ಮೆ ಅವರ ವ್ಯಾಪಕ ಪ್ರಸರಣವನ್ನು ಸೂಚಿಸುತ್ತದೆ.

ಕೋಲ್-ಮುಂಡಾ ಭಾಷಿಕರು ಈಗ ಛೋಟಾನಾಗಪುರ ಮತ್ತು ಮಧ್ಯಭಾರತದಲ್ಲಿದ್ದಾರೆ. ಆದರೆ ಈ ಮೊದಲು ಹೇಳಿದಂತೆ ಹಿಂದೊಮ್ಮೆ ಅವರು ಇಡೀ ಭಾರತವನ್ನಷ್ಟೇ ಅಲ್ಲ ಬರ್ಮಾ, ಇಂಡೋಚೀನ, ಇನ್ಸುಲಿಂಡಿಯಾ(ಮಲಯ, ಆರ್ಕಿಪೆಲಿಗೊ), ಮಲೇಶಿಯಾ, ಪೊಲಿನೇಶಿಯಾಗಳಲ್ಲೂ ಹಬ್ಬಿ ಹರಡಿದ್ದರೆ. ('ಸೆಲೆಕ್ಟ್ ಪೇಪರ್ಸ್'- ಸುನೀತಿ ಕುಮಾರ ಚಟರ್ಜಿ, ೧೯೭೭, ಪು. ೫,೬) ಇದು ವಿಶ್ವ ದಲಿತರ ಸಂಸ್ಕೃತಿ ಪ್ರಸಾರವ್ಯಾಪ್ತಿಯನ್ನು ಸ್ಪಷ್ಟಗೊಳಿಸುವ ಅಂಶ. ಪರಿಷ್ಕಾರಗೊಂಡ ದಲಿತ ಸಂಸ್ಕೃತಿ ಬೌದ್ಧಮತವಾಗಿ ಬೆಳೆದು ಜಗತ್ತಿನ ಅನೇಕ ದೇಶಗಳಲ್ಲಿ ಹರಡಿ ಮೊಟ್ಟ ಮೊದಲ 'ಜಾಗತಿಕ ಧರ್ಮ'ವಾಯಿತೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಮೂಲ ಮಾತೃ ಸಂಬಂಧದ ಬೇರುಗಳಿರುವಲ್ಲೆಲ್ಲ ಬೌದ್ಧಮತ ತಳವೂರಿತೆಂದು ಭಾವಿಸಬಹುದು. ಅನಾರ್ಯರಾದ ಶಾಕ್ಯ ಕುಲದಿಂದ ಬಂದ ಗೌತಮ ಬುದ್ಧ ಬೇಸಾಯಗಾರ ಮೂಲದ ಬುಡಕಟ್ಟಿನಲ್ಲಿದ್ದವ.

ಮುಂಡ-ಕೋಲ್ ಭಾಷಿಕ ಸವರೊಗಳ ಬೆಟ್ಟದ ಬತ್ತದ ಬೇಸಾಯದ ಇಂಜಿನಿಯರಿಂಗ್ ತಜ್ಞತೆಯನ್ನು ಕಂಡು ಬ್ರಿಟಿಷ್ ಅಧಿಕಾರಿಗಳು ದಿಗ್ಭ್ರಾಂತರಾದುದನ್ನು ಈ.ಥರ್ಸ್ಟನ್ ವಿವರಿಸಿದ್ದಾರೆ. ('ಕಾಸ್ಟ್ ಎಂಡ್ ಟ್ರೈಬ್ಸ್ ಆಫ್ ಸದರ್ನ ಇಂಡಿಯ') ಅವರು ನೇಗಿಲು ಮತ್ತು ಪ್ರಾಣಿಗಳ ಶಕ್ತಿಯನ್ನು ಬಳಸದೇ ಕೃಷಿ ಮಾಡಿಕೊಂಡಿರುವವರು. ಉತ್ತರ ಪ್ರದೇಶದ ಹರಿಜನರು ಕೋಲ ಬುಡಕಟ್ಟು ಮೂಲದವರೆಂದು ಡಾ.ಎಚ್.ಪಿ. ಉಪಾಧ್ಯಾಯ ಬರೆದಿದ್ದಾರೆ. ('ಸೆಡ್ಯೂಲ್ಡ ಕಾಸ್ಟ್ ಎಂಡ್ ಸೆಡ್ಯೂಲ್ಡ ಟ್ರೈಬ್ಸ್ ಆಫ್ ಇಂಡಿಯಾ', ಅನಮೋಲ ಪಬ್ಲಿಕೇಷನ್ಸ್ ೧೯೯೧) ಉತ್ತರಪ್ರದೇಶದ ಉತ್ತರಖಂಡ ಭಾಗಕ್ಕೆ ಸಂಬಂಧಿಸಿದ ಮೊಟ್ಟಮೊದಲ ಬುಡಕಟ್ಟು ಜನ ಈ ಕೋಲರು. ಇವರು ಮುಂಡಾ ಜನಾಂಗದಿಂದ ಕವಲಾದವರು. (ಅದೇ) ಭಾರತದಲ್ಲಿ ಹೆಚ್ಚಿನ ಕಡೆ ಇರುವ ಅಸ್ಪೃಶ್ಯರ ಹೆಸರುಗಳಲ್ಲಿ 'ಕೋಲ್' ಕೂಡಾ ಒಂದು (ಜಾತ್ರೆಗಳು: ಪು. ೧೯೦)

ಆದಿಮ ಕೃಷಿಯಲ್ಲಿ ಕೋಲರು ಬಳಸುತ್ತಿದ್ದ ಆ ಕಾಲದ ನೇಗಿಲೇ 'ಲಿಂಗ'ವಾಗಿ ಪೂಜೆಗೊಳ್ಳತೊಡಗಿತು. ಇದು ಕೃಷಿ ಪುರುಷರ ಕೈಗೆ ಹಸ್ತಾಂತರವಾದುದರ ಸಂಕೇತವೂ ಹೌದು. ನಂತರ ಯೋನಿರೂಪದ ಭೂಮಿಯನ್ನು ಶಿಶ್ನರೂಪಿ ನೇಗಿಲಿನಿಂದ ಊಳುವ ಕ್ರಿಯೆ ಮತೀಯ ನೆಲೆಯಲ್ಲಿ ಪಾಣಿಪೀಠ(ಗೌರಿಪಟ್ಟ)(ಯೋನಿ)ದಲ್ಲಿ ಲಿಂಗವನ್ನು ಸ್ಥಾಪಿಸುವ 'ಶಿವಲಿಂಗ' (ಈಶ್ವರ)ದ ಸ್ವರೂಪವಾಯಿತು. ಎಸ್.ಕೆ. ಚಟರ್ಜಿಯವರು ('ವೇದಯುಗ'-ಪು.೧೮೧) ಶಿವನ ಶಿಶ್ನ ಸಂಕೇತವಾದ ಲಿಂಗವು ಅದರ ನಾಮರೂಪಗಳೆರಡರಲ್ಲೂ ಆಸ್ಟ್ರಿಕ್ ಅಥವಾ ಪ್ರೊಟೋ ಆಸ್ಟ್ರಲೈಡ್ ಮೂಲದ್ದೆಂದು ಹೇಳುತ್ತಾರೆ. ನೆಲದ ಮೇಲೆ ಶಂಕು ಆಕೃತಿಯ ರಹಸ್ಯಪೂರ್ಣ ಶಿಲೆಗಳು (ಯೂರೋಪಿನ ಕೆಲ್ಟಿಕ್ ಪ್ರದೇಶಗಳಲ್ಲಿನ ಮೆನಹಿರ್‌ಗಳಂತೆ)ಮಾನ್‌ಖ್ಮರ್ ಮತ್ತು ಕೋಲರಲ್ಲಿ ಪಂಥೀಯವಾದ ವಸ್ತುಗಳಾಗಿದ್ದವು. ಇವು ಅಗೆಯುವ ಗುಳದ ಮಾದರಿಯಲ್ಲಿದ್ದು ಆದಿಕಾಲದ ನೇಗಿಲುಗಳಾಗಿ ಉಪಯೋಗವಾಗುತ್ತಿದ್ದವು. ಲಿಂಗ, ಲಕುಟ, ಲಗುಡ, ಲಂಗುಲ ಪದಗಳು ಆಸ್ಟ್ರಿಕ್ ಮೂಲದವು.... ಗೌರಿಪಟ್ಟ ಅಥವಾ ಯೋನಿಯಲ್ಲಿರುವ ಲಿಂಗದ ಸಂಕೇತವು ಸ್ವಲ್ಪಮಟ್ಟಿಗೆ ಆಸ್ಟ್ರಿಕ್ ಮೆನ್‌ಹಿರ್‌ಗಳಿಂದ ಬಂದದ್ದು. ಅದು ಈಚಿನವರೆಗೂ ಮುಂಡಾಗಳ ಸಸನ್-ದಿರಿಸ್ ಅಥವಾ ಕುಟುಂಬದ ಹೂಳುಗಲ್ಲುಗಳಲ್ಲಿ ಉಳಿದು ಬಂದಿತ್ತು. (ಅದೇ-೧೮೧)

ಭಾರತದಲ್ಲಿ ಮೆನ್‌ಹಿರ್‌ಗಳು ಅತೀ ಹೆಚ್ಚು ದೊರಕುವುದು ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ಮತ್ತು ಪೂರ್ವ ಮಹಾರಾಷ್ಟ್ರ ಭಾಗದಲ್ಲಿ (ಎಸ್.ಬಿ.ದೆವೊ)ದೆಯೊ ಅವರ ಪ್ರಕಾರ ನಮ್ಮ ದೇಶದಲ್ಲಿ ಮೊಟ್ಟಮೊದಲ ಕೆರೆ ನೀರಾವರಿ ಆರಂಭಿಸಿದ್ದು ಬೃಹತ್ ಶಿಲಾಯುಗ ಸಂಸ್ಕೃತಿ ಜನ. ಮೆನ್‌ಹಿರ್‌ಗಳಿಗೆ ಕಾರಣರಾದ ಇವರು ಕ್ರಿ.ಪೂ.೧೦೦೦ದ ಸುಮಾರಿಗೆ ಸೇರಿದ ದ್ರಾವಿಡ ಪಶುಪಾಲಕರು. ಅರೆ ವಲಸೆಗಾರರಾಗಿದ್ದ ಇವರು ಕಬ್ಬಿಣ ಬಳಕೆ ಕಂಡುಕೊಂಡು ಕೃಷಿಗೂ ತೊಡಗಿದರು. 'ಟೋಪಿಕಲ್ಲು', 'ಕಡಗಲ್ಲು'ಗಳು ಕೂಡ ಆದಿಮ ಜನರ ಶಿಶ್ನ ಪೂಜೆಯ ಸಂಕೇತಗಳೇ.

ನಮ್ಮ ನಾಡಿನಲ್ಲಿ ದ್ರಾವಿಡರ ಪ್ರಾಬಲ್ಯದಿಂದಾಗಿ ಮತ್ತು ಅವರ ಜತೆಯ ಸಂಪರ್ಕ ಸಹಯೋಗದಿಂದಾಗಿ ಮುಂಡಾ ಸಂಸ್ಕೃತಿ ಅಷ್ಟಷ್ಟೇ ಹಾಳಾಗಿ ಹೊಲೆಯ-ಮಾದಿಗ ಸಂಸ್ಕೃತಿ ಉಳಿಯಿತು. ಬುಡಕಟ್ಟುಗಳು ಸಂಪೂರ್ಣ ನಾಶವಾಗದೇ ಅವುಗಳ ಸಾಂಸ್ಕೃತಿಕ ರೂಪಗಳು ಜಾತಿಗಳಲ್ಲಿ ಉಳಿದು ಬಂದವು. ಬುಡಕಟ್ಟು ಆರ್ಥಿಕತೆ ನಾಶವಾಗಲು, ಶೋಷಣೆಯ ಆಧಾರದಲ್ಲಿ ರಾಜ್ಯಗಳು ಹುಟ್ಟಲು ಕೂಡಿ ಬಂದ ಕಾರಣಗಳೇನೆಂದು ನೋಡಬೇಕು.

ಇಲ್ಲಿ ನಾವು ಚರಿತ್ರ ಯುಗಕ್ಕೆ ಕಾಲಿಡುತ್ತೇವೆ. ಸಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟರಲ್ಲದೆ ಇನ್ನೂ ಸಣ್ಣ-ಪುಟ್ಟ ರಾಜರುಗಳ ಕಾಲದಲ್ಲಿ ಕರ್ನಾಟಕ ಊಳಿಗ ಮಾನ್ಯ ವ್ಯವಸ್ಥೆಗೆ ಬದಲಾದುದರ ಕತೆ ಇದು. ಕೃಷಿಕ ದಲಿತರು ಈ ಹಂತದಲ್ಲಿ ಅಸ್ಪೃಶ್ಯರಾಗಲು ಮುಖ್ಯ ಕಾರಣ ಶೋಷಕ ರಾಜ್ಯ ವ್ಯವಸ್ಥೆ ಅನುಸರಿಸಿದ ಆರ್ಥಿಕ ನೀತಿ.

ಪ್ರಭುತ್ವಕ್ಕೆ ತಾತ್ವಿಕ ಅಡಿಪಾಯ ಹಾಕಿದ ವೈದಿಕಶಾಹಿ ಉತ್ತರದಿಂದ ದಕ್ಷಿಣಕ್ಕೆ ಇಳಿದು ಬರುತ್ತಲೆ ಇತ್ತು. ರಾಮಾಯಣ, ಮಹಾಭಾರತಗಳು ಇದನ್ನೆಲ್ಲ ಕತೆಕಟ್ಟಿ ಹೇಳಿವೆ. ಪುರಾಣಗಳೂ ಇದಕ್ಕೆ ದನಿಗೂಡಿಸಿವೆ. ಬ್ರಾಹ್ಮಣರನ್ನು ಶಾಶ್ವತವಾಗಿ ಶ್ರೀಮಂತರನ್ನಾಗಿ ನೆಲೆಗೊಳಿಸುವ ತಂತ್ರವನ್ನು ಪ್ರಭುತ್ವ ಕಂಡುಕೊಂಡಿತು. ಅದೇ 'ಅಗ್ರಹಾರ' ವ್ಯವಸ್ಥೆ ಬೇಸಾಯಗಾರರ ಮೇಲೆ ರಾತ್ರೋರಾತ್ರಿ ಈ ಹೊಸ ಯಜಮಾನರನ್ನು ಪ್ರತಿಷ್ಠಾಪಿಸುತ್ತ ಹೋಯಿತು ಪ್ರಭುತ್ವ. ತೀವ್ರವಾಗಿ ಪ್ರತಿಭಟಿಸಿದ ಕೃಷಿಕರನ್ನು ರಾಕ್ಷಸರೆಂದು ಕೀಳ್ಗೆಯ್ಯಲಾಯಿತು. ಪ್ರಭುತ್ವದ ಬಲದಿಂದ ಹತ್ತಿಕ್ಕಲಾಯಿತು. ಕೊನೆಗೆ ಅಸ್ಪೃಶ್ಯರನ್ನಾಗಿ ಮಾಡಲಾಯಿತು.

ಹಿಂದೊಮ್ಮೆ ಕಾಡುಗಳಲ್ಲಿ ಆಶ್ರಮವಾಸಿಗಳಾಗಿದ್ದ ಬ್ರಾಹ್ಮಣರು ಈಗ (ಉದಾ: ಕರ್ನಾಟಕದಲ್ಲಿ) ನಾಡಿನ ಗ್ರಾಮಗ್ರಾಮಗಳಲ್ಲಿ 'ವಸಾಹತು'ಗಳನ್ನು ಸ್ಥಾಪಿಸಿಕೊಂಡು (ಅಗ್ರಹಾರ) ಷಟ್‌ಕರ್ಮ ನಿರತರಾದರು. ಬೌದ್ಧ ಜೈನರ ಸಾಂಸ್ಕೃತಿಕ ಯಜಮಾನಿಕೆಯ ವಿರುದ್ಧ ಬಚಾವಾಗುಳಿಯಬೇಕಾದಾಗ ಮಾತ್ರ ಅವರು ದೇಸೀ ಭಾಷೆಗಳತ್ತ ಕಣ್ಣು ಹಾಕಿದರು. ಅವರೆಗೆ ಅವರ ಓದು-ಬರಹವೆಲ್ಲ ಸಂಸ್ಕೃತದಲ್ಲೇ. ಕರ್ನಾಟಕದಲ್ಲಿ ಸಿಗುವ ಸುಮಾರು ೩೦ ಸಾವಿರ ಶಾಸನಗಳಲ್ಲಿ ದಾನಶಾಸಗಳೇ ಸಿಂಹಪಾಲು ಎನ್ನುವುದರ ಗುಟ್ಟನ್ನು ಇಲ್ಲಿ ಸ್ಮರಿಸಬಹುದು. ಪ್ರಭುತ್ವ ಚೈತ್ಯ, ವಿಹಾರ, ಮಠ ದೇಗುಲ ಅಗ್ರಹಾರಗಳಿಗೆ ಭೂಮಿದಾನ ನೀಡಿ ತನ್ನ ಸುಲಿಗೆಯನ್ನು ನಿರಾತಂಕಗೊಳಿಸಿಕೊಂಡಿತು. ತಮ್ಮ ಭೂಮಿಗೆ ತಾವೇ ಗುಲಾಮರಾಗಬೇಕಾದ ಸ್ಥಿತಿ ಕೃಷಿಕ ದಲಿತರಿಗೆ ಬಂದಿತು. ಪಶುಪಾಲಕ ಜಾತಿಗಳು ರೈತ ಕುಲ ಗಳಾದವು. ಆದರೆ ಹಳ್ಳಿಗೆ, ಭೂಮಿಗೆ, ದನಗಳ ಫಲ ವಂತಿಕೆಗೆ ಸಂಬಂಧಪಟ್ಟ ಆಚರಣೆಗಳೆಲ್ಲ ಸಂಪ್ರದಾಯನು ಸಾರ ದಲಿತರ ವಶದಲ್ಲೇ ಉಳಿದವು. ರೈತರಾದ ಪಶುಪಾಲಕ ಜಾತಿಗಳು ಕೃಷಿಗೆ ಸಂಬಂಧಪಟ್ಟು ದಲಿತ ಮೂಲದ ಆಚರಣೆಗಳನ್ನೇ ಮೈಗೂಡಿಸಿಕೊಂಡಿರುವುದನ್ನು ನೋಡಬಹುದು.

ಗುಡ್ಡಬೆಟ್ಟಗಳಲ್ಲಿದ್ದ ಮೂಲ ಕೃಷಿಕರು ನಿಧಾನ ಗತಿಯಲ್ಲಿ ಶೋಷಣೆಗೆ ಈಡಾದುದರಿಂದ ಅವರಲ್ಲಿ ಬುಡಕಟ್ಟು ಲಕ್ಷಣಗಳು ಹೆಚ್ಚು ಢಾಳಾಗಿ ಉಳಿದುಬಂದವು. ಸವರ, ಮುಂಡಾಗಳಲ್ಲಿ ಅವನ್ನು ಕಾಣುತ್ತೇವೆ. ನಾಡನ್ನು ಸೇರಿ ನೆಲೆ ನಿಂತವರು ತೀವ್ರವಾದ ದಾಳಿ ದಬ್ಬಾಳಿಕೆಗೆ ಸಿಕ್ಕು ನುಜ್ಜು ಗುಜ್ಜಾಗಬೇಕಾಯಿತು. ದೇಶವ್ಯಾಪಿ ದಲಿತರ ಸ್ಥಿತಿ ಇದನ್ನು ನಿಚ್ಚಳವಾಗಿ ಕಾಣಿಸುತ್ತಿದೆ.

**ಕೃಷಿಗೆ ಪೂರಕವಾದ ವೃತ್ತಿಗಳು:**

ಪ್ರಾಚ್ಯಶಾಸ್ತ್ರದ ಭೌತಿಕ ಆಕರಗಳಲ್ಲಿ ಪ್ರಮುಖವಾದ ಮಣ್ಣಿನ ಮಡಿಕೆಗಳು ಕುಂಬಾರ ಕಲೆಗೆ ಸಂಬಂಧಪಟ್ಟಿದ್ದು

ಸಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟರಲ್ಲದೆ ಇನ್ನೂ ಸಣ್ಣ-ಪುಟ್ಟ ರಾಜರುಗಳ ಕಾಲದಲ್ಲಿ ಕರ್ನಾಟಕ ಊಳಿಗ ಮಾನ್ಯ ವ್ಯವಸ್ಥೆಗೆ ಬದಲಾದುದರ ಕತೆ ಇದು. ಕೃಷಿಕ ದಲಿತರು ಈ ಹಂತದಲ್ಲಿ ಅಸ್ಪೃಶ್ಯರಾಗಲು ಮುಖ್ಯ ಕಾರಣ ಶೋಷಕ ರಾಜ್ಯ ವ್ಯವಸ್ಥೆ ಅನುಸರಿಸಿದ ಆರ್ಥಿಕ ನೀತಿ. ಪ್ರಭುತ್ವಕ್ಕೆ ತಾತ್ವಿಕ ಅಡಿಪಾಯ ಹಾಕಿದ ವೈದಿಕಶಾಹಿ ಉತ್ತರದಿಂದ ದಕ್ಷಿಣಕ್ಕೆ ಇಳಿದು ಬರುತ್ತಲೆ ಇತ್ತು. ರಾಮಾಯಣ, ಮಹಾಭಾರತಗಳು ಇದನ್ನೆಲ್ಲ ಕತೆಕಟ್ಟಿ ಹೇಳಿವೆ. ಪುರಾಣಗಳೂ ಇದಕ್ಕೆ ದನಿಗೂಡಿಸಿವೆ. ಬ್ರಾಹ್ಮಣರನ್ನು ಶಾಶ್ವತವಾಗಿ ಶ್ರೀಮಂತರನ್ನಾಗಿ ನೆಲೆಗೊಳಿಸುವ ತಂತ್ರವನ್ನು ಪ್ರಭುತ್ವ ಕಂಡುಕೊಂಡಿತು. ಅದೇ 'ಅಗ್ರಹಾರ' ವ್ಯವಸ್ಥೆ. ಬೇಸಾಯಗಾರರ ಮೇಲೆ ರಾತ್ರೋ ರಾತ್ರಿ ಈ ಹೊಸ ಯಜಮಾನರನ್ನು ಪ್ರತಿಷ್ಠಾಪಿಸುತ್ತ ಹೋಯಿತು ಪ್ರಭುತ್ವ ತೀವ್ರವಾಗಿ ಪ್ರತಿಭಟಿಸಿದ ಕೃಷಿಕರನ್ನು ರಾಕ್ಷಸರೆಂದು ಕೀಳ್ಗೆಯ್ಯ ಲಾಯಿತು. ಪ್ರಭುತ್ವದ ಬಲದಿಂದ ಹತ್ತಿಕ್ಕಲಾಯಿತು. ಕೊನೆಗೆ ಅಸ್ಪೃಶ್ಯರನ್ನಾಗಿ ಮಾಡಲಾಯಿತು.

ಸಾಕಷ್ಟು ದೀರ್ಘವಾದ ಚರಿತ್ರೆಯನ್ನು ನಿರ್ಮಿಸಿವೆ. ಎಷ್ಟೋ ಸಲ ಅವುಗಳ ಆಧಾರದಲ್ಲೇ ಆದಿಮ ಜನಾಂಗಗಳನ್ನು ಗುರುತಿಸಲು ವಿದ್ವಾಂಸರು ಯತ್ನಿಸುತ್ತಾರೆ. ಮಹಿಳೆಯರು ಮಡಿಕೆಗಳ ನಿರ್ಮಾತೃಗಳೆಂಬ ಊಹೆ ಅರ್ಥಪೂರ್ಣ ವಾದುದು. ಚಕ್ರಗಳ ಬಳಕೆ ಬಂದ ನಂತರವಷ್ಟೇ ಅವು ಪುರುಷರ ಪಾಲಾದವು. ಮಹಿಳೆಯರು ಕೃಷಿಯನ್ನು ಕಂಡುಕೊಂಡ ನಂತರ ಮಡಿಕೆಗಳ ಮಹತ್ವ ಇನ್ನೂ ಹೆಚ್ಚಿತು. ಆಹಾರ ಬೇಯಿಸಲು, ದವಸ-ಧಾನ್ಯ ಸಂಗ್ರಹಿಸಿಡಲು, ವಿಧಿಯಾಚರಣೆಗಳನ್ನು ಪೂರೈಸಲು, ಗೋರಿಗಳಲ್ಲಿ ಎಲುಬುಗಳನ್ನು ಸಂಗ್ರಹಿಸಿಡಲು ಹೀಗೆ ಅನೇಕ ವಿಧವಾಗಿ ಬಳಸಲಾಯಿತು. ಅವುಗಳ ಮೇಲೆ ಚಿತ್ರ, ರೇಖೆ, ಸುಳುಹು ಗಳನ್ನು ಬಿಡಿಸುತ್ತಿದ್ದ ಕಲೆಯ ಬೆಳವಣಿಗೆಗೆ ಕಾರಣ ವಸ್ತುವಾಯಿತು.

ಕುಂಬಾರಿಕೆಗೂ ಕೃಷಿಗೂ ನಂಟಿರುವುದರಿಂದ ಕುಂಬಾರರು, ದಲಿತ ಕೃಷಿಕರು, ಒಂದು ಮೂಲದವರಾಗುತ್ತಾರೆ. ಕೃಷಿಕರು ಮಾತೃಮೂಲೀಯ ಸಾಮಾಜಿಕ ಸ್ಥಿತಿಯಲ್ಲಿ ತಾಯಿದೈವವನ್ನು ಕುಂಭಗಳಲ್ಲಿ ದರ್ಶಿಸಿದ್ದು ಒಂದು ನಿದರ್ಶನ. ಇಂದಿಗೂ ಮಾತೃಪಂಥದ ಪಳೆಯುಳಿಕೆಯಾಗಿ ಕುಂಭಪೂಜೆ ಉಳಿದಿದೆ.

ಬಡಿಗ-ಕಂಬಾರ ವೃತ್ತಿಗಳೂ ಕೃಷಿಗೆ ಸಂಬಂಧಿಸಿದ್ದು ದಲಿತವೆಂಬ ಮರದಿಂದಲೆ ಕವಲೊಡೆದು ಪ್ರತ್ಯೇಕ ಶಾಖೆಗಳಾದವು. ಬಡಿಗ-ಕಂಬಾರ ಮುಂತಾದ ಪಂಚಾಳ ಕುಲದ ಆಚರಣೆ ಪದ್ಧತಿಗಳನ್ನು ಗಮನಿಸಿದರೆ ಅಲ್ಲಿ ದಲಿತ ಸಂಸ್ಕೃತಿಯ ಬೇರೆ ರೂಪಗಳೇ ಕಾಣಸಿಗುತ್ತವೆ. ಗಾಣಿಗ, ನೇಕಾರ ಮೊದಲಾದ ಇನ್ನೂ ಹಲವಾರು ಜಾತಿಗಳು ಕೃಷಿ ಉತ್ಪನ್ನಗಳನ್ನು ಆಧರಿಸಿದ್ದು ನೆಲೆಯೂರಿದ ಹಳ್ಳಿಗಳಲ್ಲಿ ಮಾತ್ರ ಹುಟ್ಟುವ ಸಾಧ್ಯತೆಯಿತ್ತು. ಈ ಹಿನ್ನೆಲೆಯಲ್ಲಿ ಇವೂ ದಲಿತ ಮೂಲದವೇ. ಜಾತಿಯ ಶ್ರೇಣೀಕರಣದ ಅಮಾನವೀಯ ವ್ಯವಸ್ಥೆ ಊಳಿಗಮಾನ್ಯ ಕಾಲದ ಅನಿವಾರ್ಯ ಸ್ಥಿತಿಯಾದಾಗ ಪಂಚಾಳ ಕುಲಗಳು ಮಧ್ಯ ಜಾತಿಗಳಾಗಲು ಸಾಧ್ಯವಾಯಿತು. ಏಕೆಂದರೆ ಅದಾಗಲೇ ದಲಿತರು ಅಸ್ಪೃಶ್ಯರಾಗಿದ್ದರು. ಮಧ್ಯಮ ಜಾತಿಗಳು ರೈತಕುಲಗಳಾದವು. ಅವಕ್ಕೆ ಪೂರಕ ಕೆಲಸ ಮಾಡಬೇಕಿದ್ದ ಈ ಕರಕುಶಲಿಗಳೆಲ್ಲ ಒಂದೆರಡು ಮೆಟ್ಟಿಲು ಮೇಲೇರಲು ಸಾಧ್ಯವಾಯಿತು. ಕೃಷಿ, ಕೃಷಿಯಾಧಾರಿತ ಕರಕುಶಲಕರ್ಮ ಜಾತಿಗಳ ಉಗಮ ಹೀಗೆ ಒಂದು ಮೂಲದಲ್ಲಿರುವುದಾದರೆ ಅದು ಪ್ರೋಟೋ ಆಸ್ಟ್ರಲೈಡ್ ಎಂದು ಹೇಳುವ ತಾಮ್ರ ಶಿಲಾ ಯುಗದ ಜನತೆಯೇ. ಉಪ್ಪಾರರನ್ನು ಕರಾವಳಿ ಭಾಗದಲ್ಲಿ ಕೂಸ ಹೊಲೆಯರೆಂದು ಕರೆಯುತ್ತಾರೆ. ಬಂಟ (ನಾಡವ) ಬಿಲ್ಲವ ಮೊದಲಾದ ಜಾತಿಗಳು ತಾಯಾಳಿಕೆಯವಾಗಿದ್ದು ದಲಿತರಲ್ಲಿದ್ದ ಬಳಿಗಳನ್ನೇ ಒಳಗೊಂಡಿವೆ ಎಂದು ಥರ್‌ಸ್ಟನ್ ಮೊದಲಾದವರು ಹೇಳಿದ್ದಾರೆ.

ಸಿಂಧೂ ನಾಗರಿಕತೆಯಲ್ಲಿ ಪ್ರೋಟೋ ಆಸ್ಟ್ರಲೈಡ್ ಮತ್ತು ದ್ರಾವಿಡ ಉಬೈದಿಯನ್ ಕುಲಗಳು ಒಟ್ಟಾಗಿದ್ದುವೆಂದು ಭಾವಿಸಬಹುದಾಗಿದೆ. ಆದರೆ ದ್ರಾವಿಡ ಉಬೈದಿಯನ್ನರ ಕಬ್ಬಿಣವೇಕೆ ಸಿಂಧೂಕೊಳ್ಳದ ನಗರಗಳಲ್ಲಿ ದೊರಕಲಿಲ್ಲ? ಕ್ರಿ.ಪೂ.೧೨೦೦ರ ಕರ್ನಾಟಕದ ಕಬ್ಬಿಣ ಯಾರ ಸೃಷ್ಟಿ? ಸಮುದ್ರ ಮಾರ್ಗವಾಗಿ ಬಂದ ಉಬೈದಿಯನ್ನರೇ ಸಿಂಧೂ ನಾಗರಿಕತೆಯ ದ್ರಾವಿಡರಾಗಿದ್ದರೇ? ಅಥವಾ ಅವರೇ ಬೇರೆಯೇ? ಇಂಥ ಗಂಭೀರ ಪ್ರಶ್ನೆಗಳು ಬಗೆಹರಿಯಬೇಕಾದ ಅಗತ್ಯವಿದೆ.

ಬಡಿಗ-ಕಂಬಾರ ವೃತ್ತಿಗಳೂ ಕೃಷಿಗೆ ಸಂಬಂಧಿಸಿದ್ದು ದಲಿತವೆಂಬ ಮರದಿಂದಲೆ ಕವಲೊಡೆದು ಪ್ರತ್ಯೇಕ ಶಾಖೆ ಗಳಾದವು. ಬಡಿಗ-ಕಂಬಾರ ಮುಂತಾದ ಪಂಚಾಳ ಕುಲದ ಆಚರಣೆ ಪದ್ಧತಿಗಳನ್ನು ಗಮನಿಸಿದರೆ ಅಲ್ಲಿ ದಲಿತ ಸಂಸ್ಕೃತಿಯ ಬೇರೆ ರೂಪಗಳೇ ಕಾಣಸಿಗುತ್ತವೆ. ಗಾಣಿಗ, ನೇಕಾರ ಮೊದಲಾದ ಇನ್ನೂ ಹಲವಾರು ಜಾತಿಗಳು ಕೃಷಿ ಉತ್ಪನ್ನಗಳನ್ನು ಆಧರಿಸಿದ್ದು ನೆಲೆಯೂರಿದ ಹಳ್ಳಿಗಳಲ್ಲಿ ಮಾತ್ರ ಹುಟ್ಟುವ ಸಾಧ್ಯತೆಯಿತ್ತು. ಈ ಹಿನ್ನೆಲೆಯಲ್ಲಿ ಇವೂ ದಲಿತ ಮೂಲದವೇ.

ಕ್ರಿ.ಪೂ. ೧೨೦೦ರಷ್ಟು ಮೊದಲೆ ದಕ್ಷಿಣದಲ್ಲಿ ಕಬ್ಬಿಣ ಸಿಕ್ಕಿದ್ದರೂ ಉತ್ತರದಲ್ಲಿಯಂತೆ ವರ್ಗಾಧಾರಿತ ರಾಜ್ಯಗಳು ಏಕೆ ಹುಟ್ಟಲಿಲ್ಲ? ಅಧಿಕ ಉತ್ಪಾದನೆ ನಡೆಯುತ್ತಿದ್ದುದಕ್ಕೆ ವಿದೇಶಿ ವ್ಯಾಪಾರ ಮೊದಲಾದ ಸಂಗತಿಗಳು ಸಾಕ್ಷಿಯಿವೆ. ಇಲ್ಲಿ ಬುಡಕಟ್ಟು ರಾಜ್ಯಗಳಿದ್ದ ಸೂಚನೆಗಳೂ ಇವೆ. ಅವು ಸಾಕಷ್ಟು ಸಂಪದ್ಭರಿತವಾಗಿದ್ದ ಸೂಚನೆ ರಾಮಾಯಣ, ಮಹಾ ಭಾರತ, ಪುರಾಣಗಳಿಂದ ದೊರಕುತ್ತದೆ. ಬ್ರಾಹ್ಮಿಯಿಂದಲೇ ಸ್ಥಳೀಯ ದೇಸೀ ಲಿಪಿಗಳು ಬೆಳೆದುದು, ಶೋಷಕ ವ್ಯವಸ್ಥೆಗೆ ಬೇಕಾದ ತಾತ್ವಿಕಾಂಶಗಳೆಲ್ಲ ಉತ್ತರದಿಂದಲೇ ಬಂದುದು ಇವೆಲ್ಲ ಬೇರೆ ರೀತಿ ಆಲೋಚಿಸಲು ಚೋದಿಸುತ್ತವೆ.

ಇದು ಮುಖ್ಯವಾಗಿ ವೈದಿಕಶಾಹಿ ಮತ್ತು ನಂತರದ ಬ್ರಾಹ್ಮಣಶಾಹಿ ಕುತಂತ್ರದ ಜತೆ ತಳುಕು ಹಾಕಿಕೊಳ್ಳುತ್ತದೆ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)




ಕ್ರಿಯೆ:

ಗೆದ್ದಲುಗಳು ಕಟ್ಟಿದ ಹುತ್ತದಲಿ
ವಾಸಿಸುತ್ತವೆ ಅಂಟೆ- ಹಾವುಗಳು
ರಟ್ಟೆ ಮುರಿದು ಬೆವರ ಸುರಿಸಿ
ಉತ್ತು ಬೆಳೆಯುವವನಿಗೆ ಅರೆಹೊಟ್ಟೆ
ಸಿರಿವಂತರ ಕಣಜ ತುಂಬುತ್ತದೆ
ಹೊಟ್ಟೆ ಬಿರಿಯುತ್ತದೆ
ಹಸಿವಿನಿಂದ ಬಿಕ್ಕುತ್ತವೆ ಮಕ್ಕಳು
ನೋವ ನುಂಗಿ ಉಸಿರುಕಟ್ಟುವ
ಕತ್ತಲನಲ್ಲಿವೆ ಹೆಣ್ಣುಗಳು
ಕೋಟೆ ಕಟ್ಟುವ
ರಾಟೆ ಬೀಸುವ ರಟ್ಟೆಗಳು
ಮಹಲುಗಳ ಕಾಯುವ ಕಂಬಳಿಗಳು
ಹಳದಿ ಬಣ್ಣದ ಮುದಿ ಎಲೆಗಳು

ಪ್ರಕ್ರಿಯೆ:

ಗಡಿಯಾರ ತಿರುಗಿದಂತೆ
ಗಂಟೆ ಹೊಡೆದಂತೆ
ಕನಸುಗಳು ಚಿಗುರೊಡೆಯುತ್ತವೆ
ಹೆಣ್ಣುಗಳು ಬಿರಿಯುತ್ತವೆ
ಹಕ್ಕಿಗಳು ಗೂಡು ಕಟ್ಟುತ್ತವೆ
ಮರಿ ಹಕ್ಕಿ ರೆಕ್ಕೆ ಬಿಚ್ಚಿ ಹಾರುತ್ತವೆ
ಬೆಳಕಿನೆಡೆಗೆ ಚಲಿಸುತ್ತಾ ಉಸಿರಾಡುತ್ತಾ
ದನಿಯೆತ್ತುವಳು ಹೆಣ್ಣು
ಕಂಬಳಿಗಳು ಪೊರೆತೆಗೆದು
ಬಣ್ಣದ ಚಿಟ್ಟೆಗಳಾಗುತ್ತವೆ
ಚಿಟ್ಟೆ ಹಿಡಿಯಲು ಎಲ್ಲರೂ ತವಕಿಸುತ್ತಾರೆ
ಗೂಡುಕಟ್ಟಿದ ರೇಷ್ಮೆ ಹುಳುಗಳು
ಚಿಟ್ಟೆಗಳಾಗಿ ಹೊರಬಂದು
ಮೊಟ್ಟೆಗಳ ಹಾಕುತ್ತವೆ
ಎಲೆಗಳುದುರಿ ಚಿಗುರೊಡೆಯುತ್ತವೆ

○ ನಾಗವೇಂದ್ರ ಸ್ವಾಮಿ ಚಿದರವಳ್ಳಿ

## ಪರಂಪರೆ

**ಒಂದು ಸಾಮಾನ್ಯ ದಲಿತ ಕುಟುಂಬದಲ್ಲಿ ಹುಟ್ಟಿದ ಆ ಮಗು ಮುಂದೆ ತನ್ನ ಹೆಸರಿನಿಂದಲೇ ಇತಿಹಾಸವನ್ನು ಕ್ರಿ.ಪೂ. ಮತ್ತು ಕ್ರಿ.ಶ. ಎಂದು ವಿಭಜಿಸುವಂಥ ಶಕ್ತಿಯಾಗಿ ಬೆಳೆಯಿತು. ಅದರ ಹೆಸರು ಕ್ರಿಸ್ತಯೇಸು. ಆ ಮಗು ಹುಟ್ಟಿದ ದಿನವೇ ಕ್ರಿಸ್ಮಸ್. ಆ ಮಗುವಿನ ಹೆಸರಿನಿಂದಲೇ ಗುರುತಿಸಲ್ಪಡುವ ಧರ್ಮ ಕ್ರೈಸ್ತಧರ್ಮ. ಇಂದು ಈ ಧರ್ಮ ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ಅನುಯಾಯಿಗಳನ್ನು ಹೊಂದಿರುವ ಜನಪರ ಧರ್ಮವಾಗಿದೆ.**

○ ವೈ. ಮರಿಸ್ವಾಮಿ

# ಡಿಸೆಂಬರ್ ೨೪ : ಮಧ್ಯರಾತ್ರಿಯಲ್ಲಿ ಹುಟ್ಟಿದ ಆ ಮಗು

೨೦೦೨ ವರ್ಷಗಳ ಹಿಂದೆ ಚಕ್ರವರ್ತಿ ಜೌಗುಪ್ತನು ತನ್ನ ಸಾಮ್ರಾಜ್ಯದಲ್ಲೆಲ್ಲಾ ಜನಗಣತಿಯಾಗಬೇಕೆಂದು ಆಜ್ಞೆ ಹೊರಡಿಸಿದನು. ಪ್ರಪಂಚದ ಮಾನವನ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಸಲ ನಡೆದ ಜನಗಣತಿ ಅದಾಗಿತ್ತು. ಸಿರಿಯ ನಾಡಿನಲ್ಲಿ ನಡೆದ ಆ ಜನಗಣತಿಯ ಸಂದರ್ಭದಲ್ಲಿ ಕುರೇನ್ಯ ಎನ್ನುವಾತ ರಾಜ್ಯಪಾಲನಾಗಿದ್ದ. ಜನಗಣತಿಯಲ್ಲಿ ಪ್ರಜೆಗಳೆಲ್ಲರೂ ತಮ್ಮ ಹೆಸರುಗಳನ್ನು ದಾಖಲೆ ಮಾಡಿಸಿಕೊಳ್ಳಲು ತಮ್ಮ ತಮ್ಮ ಹುಟ್ಟೂರುಗಳಿಗೆ ತೆರಳಬೇಕೆಂದು ಚಕ್ರವರ್ತಿಯ ಫರ್ಮಾನಾಗಿತ್ತು. ಆತನ ಆಜ್ಞೆಗೆ ಮರುಮಾತನಾಡದೆ ಜನರೆಲ್ಲರೂ ತಮ್ಮ ತಮ್ಮ ಸ್ವಗ್ರಾಮಗಳತ್ತ ಮುಖಮಾಡಿ ನಡೆದರು.

ಜೌಗುಪ್ತ ಚಕ್ರವರ್ತಿಯ ಸಾಮ್ರಾಜ್ಯಕ್ಕೆ ಸೇರಿದ ಗುಲಿಲೇಯ ಎಂಬ ಪ್ರಾಂತದ ನಜರೇತ್ ಎನ್ನುವ ಊರಿನಲ್ಲಿ ಬಡಗಿ ವೃತ್ತಿಯ ಜೋಸೆಫ್ ಮತ್ತಾತನ ಪತ್ನಿ ಮರಿಯ ವಾಸವಾಗಿದ್ದರು. ಬಡಗಿ ಜೋಸೆಫ್ ಮೂಲತಃ ಜದೇವ ಪ್ರಾಂತದ ಬೆತ್ಲಹೇಮ್ ಎಂಬ ಊರಿಗೆ ಸೇರಿದ ದಾವೀದನ ಮನೆತನದವನು ಹಾಗೂ ಗೋತ್ರದವನು. ಚಕ್ರವರ್ತಿಯ ಆಜ್ಞೆಯ ಮೇರೆಗೆ ಜನಗಣತಿಯಲ್ಲಿ ದಾಖಲಾತಿ ಮಾಡಿಸಿ ಕೊಳ್ಳಲು ತನ್ನ ವಂಶಸ್ಥರ ಹುಟ್ಟೂರಾದ ಬೆತ್ಲಹೇಮಿಗೆ ತೆರಳ ಲೇಬೇಕಾದ ಅನಿವಾರ್ಯ ಪರಿಸ್ಥಿತಿ ಆತನಿಗೆ ಎದುರಾಯಿತು. ಆತನಿಗೆ ಇನ್ನೂ ಹೆಚ್ಚಿಗೆ ತಲೆಬಿಸಿಮಾಡಿದ ಸಂಗತಿ ಎಂದರೆ, ಮರಿಯ ಒಂಭತ್ತು ತಿಂಗಳ ತುಂಬುಗರ್ಭಿಣಿ ಎಂಬುದು. ಇಂದೋ ನಾಳೆಯೋ ಹೆರಿಗೆಯಾಗುವ ಸಂಭವವಿರುವುದ ರಿಂದ, ತುಂಬುಗರ್ಭಿಣಿಯನ್ನು ಕರೆದುಕೊಂಡು ಹೋಗುವು ದಾದರೂ ಹೇಗೆ? ಸಂಧಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡ ಜೋಸೆಫ್. ಚಕ್ರವರ್ತಿಯ ಆಜ್ಞೆಯನ್ನು ಉಲ್ಲಂಘಿಸಿದರೆ ಕಠಿಣ ಶಿಕ್ಷೆಯಾಗುವುದಂತೂ ಗ್ಯಾರಂಟಿ. ಬೀಸೋ ದೊಣ್ಣೆಯನ್ನು ತಪ್ಪಿಸಿಕೊಂಡರೆ-ನೂರು ವರ್ಷ ಆಯಸ್ಸು ಎಂಬ ಗಾದೆ ಮಾತಿನಂತೆ, ಚಕ್ರವರ್ತಿಯ ಆಜ್ಞೆಯನ್ನು ಧಿಕ್ಕರಿಸುವುದ ಕ್ಕಿಂತ ನಜರೇತ್ ಬಿಟ್ಟು ಬೆತ್ಲಹೇಮ್‌ಗೆ ಪ್ರಯಾಣ ಬೆಳೆಸುವುದೇ ಒಳ್ಳೆಯ ದೆಂದು ತೀರ್ಮಾನಿಸಿದ.

ಬಟ್ಟೆಯ ಎರಡು ಮೂಟೆಗಳ ಸಮೇತ ಪತ್ನಿ ಮರಿಯಾಳನ್ನೂ ಕತ್ತೆಯ ಮೇಲೆ ಕೂರಿಸಿಕೊಂಡು ಬೆತ್ಲಹೇಮಿನತ್ತ ಹೊರಟ. ಬಡಗಿ ಜೋಸೆಫ್‌ಗಿದ್ದ ಸಂಪತ್ತು ಎಂದರೆ, ಆ ಕತ್ತೆ, ಅದರ ಎಡ ಬಲಗಳಲ್ಲಿ ನೇತಾಡುತ್ತಿದ್ದ ಎರಡು ಬಟ್ಟೆಯ ಗಂಟುಗಳು ಮತ್ತು ತುಂಬು ಗರ್ಭಿಣಿ ಮರಿಯ. ತನ್ನ ಪತ್ನಿ ಮರಿಯಳನ್ನು ಅಪಾರವಾಗಿ ಪ್ರೀತಿಸಿ ಗೌರವಿಸುತ್ತಿದ್ದ ಜೋಸೆಫ್, ಕತ್ತೆಯ ನಡಿಗೆಯ ಕುಲುಕಾಟಕ್ಕೆ ಆಕೆ ಮತ್ತು ಆಕೆಯ ಕರುಳಚೀಲದಲ್ಲಿರುವ ಕಂದಮ್ಮ ಅದೆಷ್ಟು ಘಾಸಿಗೊಳ್ಳುವರೋ ಎಂದು ಮನದಲ್ಲೇ ಮರುಗುತ್ತ ದಾರಿ ಸವೆಸುತ್ತಿದ್ದ. ಹೀಗೆ ಜೋಸೆಫ್ ಮತ್ತು ಮರಿಯ ನಿಧಾನವಾಗಿ ದಾರಿ ಸವೆಸುತ್ತಾ ಬೆತ್ಲಹೇಮ್ ನಗರದ ಸಮೀಪಕ್ಕೆ ಬಂದರು. ಹೇಗೋ ತಲುಪಬೇಕಾದ ಸ್ಥಳಕ್ಕೆ ಬಂದುಬಿಟ್ಟೆವಲ್ಲಾ ಎಂದು ಜೋಸೆಫ್ ನಿಟ್ಟುಸಿರು ಬಿಡುತ್ತಿರುವಾಗಲೇ, ಮರಿಯಳಿಗೆ ಪ್ರಸವವೇದನೆ ಶುರುವಾಯಿತು. ಆಕೆ ಅವುಡುಗಚ್ಚಿ ಆ ನೋವನ್ನು ಅದುಮಿಡಲು ಪ್ರಯತ್ನಿಸುತ್ತಿದ್ದಳು. ಆದರೆ, ಅದು ಸಾಧ್ಯವಾಗುತ್ತಿರಲಿಲ್ಲ. ಮನದಲ್ಲೇ ದೇವರನ್ನು ಪ್ರಾರ್ಥಿಸು ತ್ತಿದ್ದಳು. ತನ್ನ ಪ್ರೀತಿಯ ಮಡದಿ ಪಡುತ್ತಿರುವ ಯಾತನೆಯಲ್ಲಿ ಪಾಲು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲವಲ್ಲಾ ಎಂದು ಜೋಸೆಫ್ ಹಲುಬತೊಡಗಿದ. ಅಷ್ಟರಲ್ಲೇ ಅವರು ಬೆತ್ಲಹೇಮ್ ಗ್ರಾಮವನ್ನು ಸೇರಿಕೊಂಡಿದ್ದರು.

ಕತ್ತೆ ಮತ್ತು ಹೆಂಡತಿಯನ್ನು ರಸ್ತೆಯಲ್ಲಿ ನಿಲ್ಲಿಸಿ, ಯಾವ ಮನೆಯಲ್ಲಾದರೂ ತಂಗಲು ಸ್ವಲ್ಪ ಜಾಗ ಸಿಗಬಹುದಾ ಎಂದು ಕೇಳಲು ಜೋಸೆಫ್ ಕಂಡ ಕಂಡ ಮನೆಯ ಬಾಗಿಲುಗಳನ್ನು ಬಡಿಯತೊಡಗಿದ. ಆತನ ಸೋತ ಮುಖ, ಪ್ರಸವ ವೇದನೆ ಅನುಭವಿಸುತ್ತಿರುವ ಆತನ ಹೆಂಡತಿ ಮತ್ತು ಎರಡು ಬಟ್ಟೆಯ ಮೂಟೆಗಳನ್ನು ಹೊತ್ತು ನಿಂತಿರುವ ಕತ್ತೆಯನ್ನು ನೋಡಿದ ಕೂಡಲೇ; ಮುಖದ ಮೇಲೆ ಹೊಡೆದಂತೆ ಬಾಗಿಲ ಮುಚ್ಚಿಕೊಂಡು ಬಿಡುತ್ತಿದ್ದರು, ಮನೆಯ ಯಜಮಾನರು. ಇವರ ರೀತಿಯಲ್ಲೇ ಜನಗಣತಿಯಲ್ಲಿ ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಲು, ಅನೇಕ ಊರುಗಳಿಂದ ಬಂದ ಜನರಿಂದ ಬೆತ್ಲಹೇಮ್ ಗಿಜಿಗುಡುತ್ತಿತ್ತು. ಈ ಅವಕಾಶವನ್ನು ಬಳಸಿಕೊಂಡ ಕೆಲವು ಸ್ಥಳೀಯರು, ಬಾಡಿಗೆಗೆ ತಮ್ಮ ಮನೆಗಳಲ್ಲಿ ತಂಗಲು ಜಾಗ ಕೊಡುತ್ತಿದ್ದರು. ಜೋಸೆಫ್ ಮತ್ತು ಮರಿಯ ಅತ್ಯಂತ ಬಡವರಾಗಿದ್ದುದರಿಂದ, ಬಾಡಿಗೆ ಕೊಡುವ ಸ್ಥಿತಿಯಲ್ಲಿರಲಿಲ್ಲ. ಇನ್ನೂ ಕೆಲವರ ಮನೆಗಳು ತಮ್ಮ ನೆಂಟರಿಂದಲೇ ತುಂಬಿಕೊಂಡಿದ್ದವು.

ಕ್ಷಣಕ್ಷಣಕ್ಕೆ ಮರಿಯಳ ಹೆರಿಗೆ ನೋವು ಜಾಸ್ತಿಯಾಗುತ್ತಿದೆ. ತಂಗಲು ಯಾವ ಮನೆಯ ಕದವೂ ತೆರೆಯುತ್ತಿಲ್ಲ. ಈ ಲೋಕ ದಲ್ಲಿ ಬಡವರಾಗಿ ಹುಟ್ಟಿರುವುದೇ ದೊಡ್ಡ ಶಾಪವೇನೋ ಎನ್ನುವಂತೆ ಗಂಡ ಹೆಂಡತಿಯಿಬ್ಬರೂ ಪರಸ್ಪರ ಮುಖನೋಡಿಕೊಂಡರು. ಇಬ್ಬರ ಕಣ್ಣುಗಳೂ ಸಂಕಟ ಮತ್ತು ಅವಮಾನದಿಂದ ಪ್ರಪಂಚದ ನಿರ್ಗತಿಕರ-ನೊಂದವರ ನೋವನ್ನೇ ತುಂಬಿಕೊಂಡಂತೆ ಕಾಣುತ್ತಿದ್ದವು. ಒಬ್ಬರ ಕೈಗಳು ಮತ್ತೊಬ್ಬರ ಕಣ್ಣೀರನ್ನು ಒರೆಸಲು ಪ್ರಯತ್ನಿಸಿದರೂ, ಎದೆತುಂಬಿ ಬಂದ ದುಃಖವನ್ನು ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ. ಈಗ ಅವರು ಊರ ಕೊನೆಯಲ್ಲಿದ್ದರು. ಕೊನೆಯ ಪ್ರಯತ್ನ ವೆಂಬಂತೆ ಜೋಸೆಫ್, ಊರ ಹೊರಗಿನ ಆ ಕೊನೆಯ ಮನೆಯ ಬಾಗಿಲನ್ನು ಬಡಿದ. ಆ ಮನೆಯ ಒಡತಿಗೆ ಜೋಸೆಫ್ ಮತ್ತು ಮರಿಯಳ ಪರಿಸ್ಥಿತಿಯನ್ನು ಕಂಡು ಕರುಣೆ ಯುಂಟಾಯಿತು. ತನ್ನ ಮನೆಯು ಈಗಾಗಲೇ ಭರ್ತಿಯಾಗಿರುವುದರಿಂದ, ಮನೆಯ ಹಿಂದಿನ ಕೊಟ್ಟಿಗೆಯಲ್ಲಿ ಉಳಿದುಕೊಳ್ಳಬಹುದೆಂದು ಹೇಳಿದಳು. ಇದರಿಂದ ಇಬ್ಬರಿಗೂ ಹೋದ ಪ್ರಾಣ ಮರಳಿ ಬಂದಂತಾಯಿತು.

> **ಡಿಸೆಂಬರ್ ೨೫ರಂದು ಪ್ರತಿವರ್ಷ ಪ್ರಪಂಚದಾದ್ಯಂತ ನಡೆಯುವ ಕ್ರಿಸ್ತ ಜಯಂತಿಯ ಆಚರಣೆಗೂ ಮತ್ತು ಅಂದು ಆ ಮಗು ಹುಟ್ಟಿದ ಸಂದರ್ಭಕ್ಕೂ ಎಷ್ಟೊಂದು ವ್ಯತ್ಯಾಸ ಇದೆಯಲ್ಲವೆ? ವರ್ಷಕ್ಕೊಮ್ಮೆ ನಡೆಯುವ ಈ ಕ್ರಿಸ್ತ ಜಯಂತಿಗೆ ನಿಜವಾದ ಅರ್ಥ ಸಿಗಬೇಕಾದರೆ, ಆ ಮಗು ಹುಟ್ಟಿ ಪ್ರತಿನಿಧಿಸಿದ ದಲಿತ ಸಮುದಾಯವನ್ನು ಮಾನವೀಯತೆಯ ಸ್ಪರ್ಶ ದಿಂದ ಮೈದಡವಿ ಮೇಲೆತ್ತಬೇಕು.**

ಅಂದು ಡಿಸೆಂಬರ್ ತಿಂಗಳಿನ ೨೪ನೇ ತಾರೀಕಿನ ತೀವ್ರ ಚಳಿಗಾಲದ ಮಧ್ಯರಾತ್ರಿ. ಆ ಮನೆಯ ಒಡತಿ ಮರಿಯಳ ಹೆರಿಗೆಗೆ ನೆರವಾಗಲು ಒಬ್ಬ ವಯಸ್ಸಾದ ಸೂಲಗಿತ್ತಿಯನ್ನು ಕರೆ ತಂದಳು. ಸುಸೂತ್ರವಾಗಿ ಹೆರಿಗೆಯಾಯಿತು. ಬಾಣಂತನಕ್ಕೆ ಬೇಕಾದ ಬಟ್ಟೆಯನ್ನೂ ಮನೆಯೊಡತಿಯೇ ತಂದುಕೊಟ್ಟಳು. ಮಧ್ಯರಾತ್ರಿ ೧೨ ಗಂಟೆಗೆ ಸರಿಯಾಗಿ ಮರಿಯಳಿಗೆ

ಗುಂಡುಗುಂಡಾಗಿರುವ ಮುದ್ದಾದ ಗಂಡು ಮಗುವೊಂದು ಜನಿಸಿತು. ಗವ್ವೆನ್ನುವ ಆ ಕತ್ತಲೆಯ ನೀರವತೆಯಲ್ಲಿ ಪ್ರಶಾಂತತೆಯಿಂದ ಉರಿಯುತ್ತಿದ್ದ ಪುಟ್ಟ ದೀಪವೊಂದು ತನ್ನ ಬೆಳಕಿನಿಂದ, ಅದಾಗ ತಾನೇ ಹುಟ್ಟಿದ ಮಗುವನ್ನು ಭೂಲೋಕಕ್ಕೆ ಸ್ವಾಗತಿಸಿತು. ಕೊಟ್ಟಿಗೆಯ ತುಂಬ ಹಾರಾಡುತ್ತಿದ್ದ ಸೊಳ್ಳೆಗಳು ತಮ್ಮದೇ ಸುಂಯ್ ಎನ್ನುವ ಭಾಷೆಯಲ್ಲಿ ಲಾಲಿ ಹಾಡಿದವು. ಕೊಟ್ಟಿಗೆಯಲ್ಲಿ ಕಟ್ಟಿಹಾಕಲಾಗಿದ್ದ ದನಕರುಗಳು ತದೇಕ ಚಿತ್ರದಿಂದ ಆ ಸುಂದರ ಮಗುವನ್ನು ವೀಕ್ಷಿಸಿ, ಅಂಬಾ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ದವು. ತಮ್ಮೊಂದಿಗೆ ಜೀವ ಸೇರ್ಪಡೆಯಾಯಿತು ಎಂದು ಸಂಭ್ರಮಿಸಿದವು.

ಆ ಮಗುವಿನ ಆಗಮನ ಜೋಸೆಫ್ ಮತ್ತು ಮರಿಯ ಇದುವರೆಗೆ ಅನುಭವಿಸಿದ್ದ ನೋವು-ಸಂಕಟ-ಅವಮಾನವನ್ನೆಲ್ಲಾ ಮರೆಸಿತು. ಮರಿಯಾಳಂತೂ ಎರಡೂ ಕೈಗಳಿಂದ ಆ ಎಳೆಕಂದಮ್ಮನನ್ನು ಎದೆಗೊತ್ತಿಕೊಂಡು ಲೊಚಲೊಚನೆ ಮುತ್ತಿಟ್ಟಳು. ಬಾಣಂತಿಯ ಆರೈಕೆಗೆ, ಮಗುವಿನ ಪೋಷಣೆಗೆ ಇರಬೇಕಾದ ಯಾವುದೇ ವಸ್ತುಗಳು ಅಲ್ಲಿರಲಿಲ್ಲ. ಅವುಗಳೆಲ್ಲದರ ಕೊರತೆಯನ್ನು ಆ ಮಗುವಿನ ಪ್ರಸನ್ನತೆ ಹೋಗಲಾಡಿಸಿತು. ಕೊಟ್ಟಿಗೆಯ ಗಂಜಳದ ವಾಸನೆಯು, ಸಾಂಬ್ರಾಣಿಯ ಸುಗಂಧದಂತೆ ಭಾಸವಾಗುತ್ತಿತ್ತು. ಕೊರೆಯುವ ಚಳಿಯಿಂದ ಎಳೆ ಮೈಯನ್ನು ಬೆಚ್ಚಗಿಡಲು, ತಾಯಿ ಮರಿಯ ಹೊದಿಸಿದ ಹರಕಲು ಬಟ್ಟೆಯೇ 'ಸ್ವೆಟರ್' ಆಗಿತ್ತು. ಇಡೀ ಬೆತ್ಲಹೇಮ್ ಗ್ರಾಮವೇ ನಿದ್ರೆಯ ತೆಕ್ಕೆಯಲ್ಲಿದ್ದಾಗ, ಊರ ಹೊರಗಿನ ದನದ ಕೊಟ್ಟಿಗೆಯಲ್ಲೊಂದು ಹೊಸ ಜೀವ ಜನ್ಮ ತಳೆದ ಸಡಗರ-ಸಂಭ್ರಮ ತುಂಬಿಕೊಂಡಿತ್ತು.

ಹೀಗೆ, ಒಂದು ಸಾಮಾನ್ಯ ದಲಿತ ಕುಟುಂಬದಲ್ಲಿ ಹುಟ್ಟಿದ ಆ ಮಗು ಮುಂದೆ ತನ್ನ ಹೆಸರಿನಿಂದಲೇ ಇತಿಹಾಸವನ್ನು ಕ್ರಿ.ಪೂ. ಮತ್ತು ಕ್ರಿ.ಶ. ಎಂದು ವಿಭಜಿಸುವಂಥ ಶಕ್ತಿಯಾಗಿ ಬೆಳೆಯಿತು. ಅದರ ಹೆಸರು ಕ್ರಿಸ್ತಯೇಸು. ಆ ಮಗು ಹುಟ್ಟಿದ ದಿನವೇ ಕ್ರಿಸ್ಮಸ್. ಆ ಮಗುವಿನ ಹೆಸರಿನಿಂದಲೇ ಗುರುತಿಸಲ್ಪಡುವ ಧರ್ಮ ಕ್ರೈಸ್ತಧರ್ಮ. ಇಂದು ಈ ಧರ್ಮ ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ಅನುಯಾಯಿಗಳನ್ನು ಹೊಂದಿರುವ ಜನಪರ ಧರ್ಮವಾಗಿದೆ.

ಡಿಸೆಂಬರ್ ೨೫ರಂದು ಪ್ರತಿವರ್ಷ ಪ್ರಪಂಚದಾದ್ಯಂತ ನಡೆಯುವ ಕ್ರಿಸ್ತ ಜಯಂತಿಯ ಆಚರಣೆಗೂ ಮತ್ತು ಅಂದು ಆ ಮಗು ಹುಟ್ಟಿದ ಸಂದರ್ಭಕ್ಕೂ ಎಷ್ಟೊಂದು ವ್ಯತ್ಯಾಸವಿದೆಯಲ್ಲವೆ? ವರ್ಷಕ್ಕೊಮ್ಮೆ ನಡೆಯುವ ಈ ಕ್ರಿಸ್ತ ಜಯಂತಿಗೆ ನಿಜವಾದ ಅರ್ಥ ಸಿಗಬೇಕಾದರೆ, ಆ ಮಗು ಹುಟ್ಟಿ ಪ್ರತಿನಿಧಿಸಿದ ದಲಿತ ಸಮುದಾಯವನ್ನು ಮಾನವೀಯತೆಯ ಸ್ಪರ್ಶದಿಂದ ಮೈದಡವಿ ಮೇಲೆತ್ತಬೇಕು.

ಮಾನವ ಕುಲದ ಉದ್ಧಾರಕ, ಜಗದ್‌ರಕ್ಷಕ, ಅಪ್ರತಿಮ ಬೋಧಕ, ದೈವನಿಯಮಗಳ ವಿಮರ್ಶಕ, ದೈವೀ ಸಾಮ್ರಾಜ್ಯದ ಸಂಸ್ಥಾಪಕ, ಕಾರ್ಯನಿಷ್ಠ ಅಧಿಕಾರವುಳ್ಳ ವ್ಯಕ್ತಿ ಮಾನವರನ್ನು ಪಾಪ ಬಂಧನದಿಂದ ಬಿಡುಗಡೆ ಮಾಡಲು ಬಂದ ನರಪುತ್ರ, ಲೋಕೋದ್ಧಾರಕ, ದೀನ ದಲಿತರ ವಿಮೋಚನಾಕಾರ ಎಂದು ಕೊಟ್ಟಿಗೆಯಲ್ಲಿ ಹುಟ್ಟಿದ ಆ ಮಗುವನ್ನು ಹೊಗಳಿ ಹಾಡುವ ಭಾರತೀಯ ಕ್ರೈಸ್ತರು; ಇಂದಿಗೂ ಕೊಟ್ಟಿಗೆಯ ಬದುಕಲ್ಲೇ ಬಂಧಿಯಾಗಿರುವ ದಲಿತರ ಅದರಲ್ಲೂ ವಿಶೇಷವಾಗಿ ದಲಿತ ಕ್ರೈಸ್ತರ ವಿಮೋಚನೆಗೆ ಹೆಗಲ ಕೊಡಲು ಸಿದ್ಧರಿರುವರೆ? □

# ಕ್ರೈಸ್ತರದೂ ಒಂದು ದನಿ ಸಂವಾದವಾದಾಗ...

> ಭಾರತೀಯ ಕ್ರೈಸ್ತರಿಗೆ ಮೊದಲಿನಿಂದಲೂ ರಾಜಕೀಯದಲ್ಲಿ ಆಸಕ್ತಿ ಕಡಿಮೆ. ಕಾರಣ ಹಲವು. ಸಂವಿಧಾನ ಸಾಫಲ್ಯಕ್ಕಾಗಿ ಕ್ರೈಸ್ತರನ್ನು ರಾಜಕೀಯ ಮುಖಂಡರು ಅಂದು ಎಳೆ ತಂದುದೂ ಉಂಟು. ಅನಂತರ ಕೇವಲ ಬೆರಳೆಣಿಕೆಯ ಮಂದಿ ರಾಜಕೀಯ ರುಚಿಗೆ ಒಗ್ಗಿಕೊಂಡದೂ ಉಂಟು.

ಭಾರತದಲ್ಲಿರುವ ಕ್ರೈಸ್ತ ಸಮುದಾಯ ಇಲ್ಲಿಯವರೆಗೆ ಯಾರ ಗಮನಕ್ಕೂ ಬಾರದೆ, 'ಜನಸೇವೆಯೇ ಜನಾರ್ಧನನ ಸೇವೆ' ಎಂದುಕೊಂಡು, ಪಾಲಿಗೆ ಮಂದ ಪಾಂಚಾಮೃತ ವನ್ನುಂಡು ಕೊಂಡು, ರಾಷ್ಟ್ರದ ಇತರ ಪ್ರಮುಖ ಕೋಮಿನವರ ಜೊತೆಗೆ ಅನ್ಯೋನ್ಯವಾಗಿ ನಡೆದುಕೊಂಡು ತಮ್ಮಷ್ಟಕ್ಕೆ ತಮ್ಮ ಮತ-ಮಠಗಳ ಒಳಗೆ ತಾವಿದ್ದರು. ಆದರೆ ಈಚಿನ ದಿನಗಳಲ್ಲಿ ಹಿಂದೂ ಸಾಮ್ರಾಟಶಾಹಿ ಮನಸ್ಸುಗಳು ಅವರ ಶಾಂತಿ ಸಮಾಧಾನದ ಪ್ರವೃತ್ತಿಯನ್ನೇ ಅವರ ದೌರ್ಬಲ್ಯವೆಂದು ತಿಳಿದುಕೊಂಡು ಕ್ರೈಸ್ತ ಸಮಾಜದ ಮೇಲೆ ದೌರ್ಜನ್ಯವನ್ನೆಸಗುತ್ತಿದ್ದಾರೆ. ಕ್ರೈಸ್ತರು ಮತ್ತು ಮುಸಲ್ಮಾರನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ಮತಾಂಧರ ಕಾರ್ಯಚಟುವಟಿಕೆಗಳು ಇತ್ತೀಚಿನ ದಿನಗಳಲ್ಲಿ ತಾರಕಕ್ಕೇರಿದೆ. ರಾಷ್ಟ್ರಾದ್ಯಂತ ಕ್ರೈಸ್ತರ ಮೇಲೆ ಹಲ್ಲೆ ನಡೆಯುತ್ತಲೇ ಇದೆ. 'ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆಯನ್ನೂ ಕೊಡು' ಎಂಬ ಯೇಸುಕ್ರಿಸ್ತನ ಉಪದೇಸವನ್ನು ಮುಂದುಮಾಡಿಕೊಂಡು, ಸಾಮಾಜಿಕ ಕಾಳಜಿಯಿಂದ ಜೀವಿಸುತ್ತಿರುವ ಕ್ರೈಸ್ತರು ತಮ್ಮ ಮೇಲಿನ ಅನ್ಯಾಯ ದೌರ್ಜನ್ಯಗಳನ್ನು ಕ್ರಿಸ್ತನಿಗಾಗಿ ಸಹಿಸಿಕೊಂಡು ಪುಣ್ಯಕೋಟಿ ತತ್ವವನ್ನು ಅನುಸರಿಸುತ್ತಿದ್ದಾರೆ. ದುರಂತವೆಂದರೆ, 'ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು' ಎಂಬಂತೆ ಅವರಿಗೆ ಹೊಡೆತ ಬೀಳುತ್ತಲೇ ಇದೆ. ಇದನ್ನು ನೋಡಿದರೆ ಕ್ರೈಸ್ತರಿಗೆ ಪ್ರತಿಭಟಿಸುವ ಪ್ರವೃತ್ತಿಯೇ ಇಲ್ಲವೆನಿಸುತ್ತದೆ. ಕ್ರಿಸ್ತನನ್ನು ಮುಂದೊಡ್ಡಿಕೊಂಡು ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಸಹಿಸಿಕೊಳ್ಳುವುದು ಹೇಡಿತನದ ಲಕ್ಷಣ. ಇದಕ್ಕೆ ಕಾರಣ ಹಲವಾರು; ಮೊದಲೇ ಹೇಳಿದಂತೆ ಕ್ರಿಸ್ತನ ಉಪದೇಶ, ಹಕ್ಕುಬಾಧ್ಯತೆಗಳ ತಿಳುವಳಿಕೆ ಇಲ್ಲದೆ ಇರುವುದು, ರಾಜಕೀಯ ಪ್ರಜ್ಞೆಯ ಅರಿವಿಲ್ಲದಿರುವುದು, ಪ್ರತಿಭಟನೆಯ ಮನೋಭಾವ ಬೆಳೆಯದಿರುವುದು.

ಭಾರತೀಯ ಕ್ರೈಸ್ತರಿಗೆ ಮೊದಲಿನಿಂದಲೂ ರಾಜಕೀಯದಲ್ಲಿ ಆಸಕ್ತಿ ಕಡಿಮೆ. ಕಾರಣ ಹಲವು. ಸಂವಿಧಾನ ಸಾಫಲ್ಯಕ್ಕಾಗಿ ಕ್ರೈಸ್ತರನ್ನು ರಾಜಕೀಯ ಮುಖಂಡರು ಅಂದು ಎಳೆ ತಂದುದೂ ಉಂಟು. ಅನಂತರ ಕೇವಲ ಬೆರಳೆಣಿಕೆಯ ಮಂದಿ ರಾಜಕೀಯ ರುಚಿಗೆ ಒಗ್ಗಿಕೊಂಡದೂ ಉಂಟು. ಅಂದು ಸಂವಿಧಾನ ರಚನಾ ಸಮಿತಿಯಲ್ಲಿ ಫಾಧರ್ ಜೊರೋಮ್ ಡಿಸೋಜ ಅವರು ಸದಸ್ಯರಾಗಿದ್ದರು; ಇಂದು ಜಾರ್ಜ್ ಫರ್ನಾಂಡಿಸ್ ಅವರು ರಾಷ್ಟ್ರದ ರಕ್ಷಣಾ ಮಂತ್ರಿಗಳಾಗಿದ್ದಾರೆ. ಕರ್ನಾಟಕದಲ್ಲಿಯೂ ಕ್ರೈಸ್ತ ಸಮೂಹದವರು ಶಾಸಕರಾಗಿ, ಮಂತ್ರಿಗಳಾಗಿದ್ದಾರೆ. ವಸ್ತುಸ್ಥಿತಿ ಹೀಗಿದ್ದರೂ ಕ್ರೈಸ್ತರಿಗೆ ರಾಜಕೀಯ ಪ್ರಜ್ಞೆ ಬರಲೇ ಇಲ್ಲ. ಕ್ರೈಸ್ತ ನಾಯಕರೂ ಕೂಡ ತಮ್ಮ ಜನರಿಗೆ ಈ ಪ್ರಜ್ಞೆ ಪ್ರಾಪ್ತವಾಗ ಬೇಕೆಂದು ಬಯಸಿದಂತೆಯೂ ಇಲ್ಲ. ಸಂವಿಧಾನಾತ್ಮಕವಾಗಿ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ ಅನಾಯಾಸ ವಾಗಿ ಒದಗಿ ಬಂದ ನಾಯಕ ಪಟ್ಟವನ್ನು ಪಟ್ಟು ಹಿಡಿದು ಗಿಟ್ಟಿಸಿ ಕೊಂಡು ಅದಷ್ಟರಿಂದಲೇ ತೃಪ್ತಿಪಟ್ಟುಕೊಳ್ಳುವ ಪ್ರವೃತ್ತಿಯನ್ನೇ ಬೆಳೆಸಿಕೊಂಡರು. ತಾವು, ತಾವು ತಾವೇ ಮಂತ್ರಿಗಳಾಗಿ ಕ್ರೈಸ್ತರ ಪ್ರತಿನಿಧಿಗಳಂತೆ ಸೋಗು ಹಾಕಿದರು. 'ಹುಚ್ಚು ಮುಂಡೆ ಮನೆಯಲ್ಲಿ ಉಂಡವನೇ ಜಾಣ' ಎಂಬಂತೆ ಅವರು ನಡೆದುಕೊಂಡರು. ಇತ್ತ ಸಾಮಾನ್ಯ ಕ್ರೈಸ್ತರು ಈ ದೇಶದಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ಅರಿವೂ ಇರದೆ ಮೂಕ ಪಶುಗಳಂತೆ ಬದುಕುತ್ತಿರುವರು.

ಕ್ರೈಸ್ತರಿಗೆ ರಾಜಕೀಯ ಪ್ರಜ್ಞೆ ಅತ್ಯಂತ ಅನಿವಾರ್ಯ ಅಗತ್ಯವೆಂಬುದನ್ನು ಮನಗಂಡು ವಿಧಾನ ಪರಿಷತ್ತಿನ ಮಾಜಿ ಉಪ ಸಭಾಪತಿ ಶ್ರೀ ಡೇವಿಡ್ ಸಿಮೆಯೋನ್ ಅವರು 'ಕರ್ನಾಟಕ ರಾಜ್ಯ ಸಂಘ-ಸಂಸ್ಥೆಗಳ ಒಕ್ಕೂಟ'ವನ್ನು ಹುಟ್ಟು ಹಾಕಿ ಆ ದಿಕ್ಕಿನಲ್ಲಿ ಒಂದೆಡರು ವರ್ಷ ಕಾಲ ಕೆಲಸ ಮಾಡಿದರು. ಅವರ ಉಪಸಭಾಪತಿ ಸ್ಥಾನದ ತೆರವಿನಿಂದ ಈ ಕಾರ್ಯ ಹೆಚ್ಚು ಕಾಲ ಮುಂದುವರಿಯಲಿಲ್ಲ.

ಇಂದು ಇಡೀ ಕ್ರೈಸ್ತ ಸಮುದಾಯವನ್ನು ರಾಜಕೀಯ ಪಕ್ಷಗಳು (ಇದಕ್ಕೆ ಕಾಂಗ್ರೆಸ್ ಹೊರತಲ್ಲ) ಹಾಗೂ ರಾಜ್ಯ ಸರ್ಕಾರಗಳು ತಿರಸ್ಕಾರ ಭಾವದಿಂದ ಕಾಣುತ್ತಿವೆ. ಪ್ರಜಾಪ್ರಭುತ್ವದಲ್ಲಿ ಕ್ರೈಸ್ತ ಬಂಧುಗಳು ತಮ್ಮ ಏಕತೆಯನ್ನು ಸಂಖ್ಯಾಬಲದಿಂದ ಸಂದರ್ಭಾನುಸಾರ ಪ್ರದರ್ಶಿಸಬೇಕು. ಆಗ ಕ್ರೈಸ್ತರ ಬೇಡಿಕೆಗಳಿಗೆ ಬೆಲೆ ಬರುತ್ತದೆ. ಒತ್ತಾಯಗಳಿಗೆ ಉತ್ತರ ದೊರಕುತ್ತದೆ. ಹೊಡೆತಗಳಿಗೆ ಪ್ರತಿ ಹೊಡೆತ ಪ್ರಾಪ್ತವಾಗುತ್ತದೆ. ಹಾಗಾಗಬೇಕಾದರೆ ಕರ್ನಾಟಕದ ಕ್ರೈಸ್ತರೆಲ್ಲ ತಮ್ಮ ತಮ್ಮ ಸಭಾಭೇದ, ಪಂಥಭೇದಗಳನ್ನು ಬಿಟ್ಟು ಒಗ್ಗಟ್ಟಾಗಬೇಕು.

ದುರಂತವೆಂದರೆ ಪ್ರಸಕ್ತ ಕ್ರೈಸ್ತರಲ್ಲಿ ಪೂರ್ವಗ್ರಹಪೀಡಿತ ಮನೋಭಾವ, ಜಾತಿ ಪದ್ಧತಿ, ಭಾಷಾಭೇದ, ಪ್ರೊಟೆಸ್ಟಂಟ್ ಕಥೋಲಿಕರೆಂಬ ಪಂಥಭೇದ, ಸಭಾಭೇದಗಳು ಹುತ್ತದೊಳಗಿನ ಗೆದ್ದಲಿನಂತೆ ಪೊತಗುಟ್ಟುತ್ತಿದ್ದು, ಅದಕ್ಕೆ ಪರಿಹಾರವೇ ಇಲ್ಲವೇನೊ ಎನ್ನುವಷ್ಟು ಬೆಳೆದು ಬೇರುಬಿಟ್ಟಿದೆ. ದೊಡ್ಡ ಮೀನು ಸಣ್ಣ ಮೀನನ್ನು ತಿನ್ನುವಂತೆ ಸಬಲ ಕ್ರೈಸ್ತರು ಅಬಲ ಕ್ರೈಸ್ತರನ್ನು ಕಿತ್ತು ತಿನ್ನುತ್ತಿದ್ದಾರೆ. ಈ ಪರಿಸ್ಥಿತಿಯಿಂದ ಮುಕ್ತವಾಗಬೇಕಾದರೆ ಗ್ರಾಮೀಣ ಪ್ರದೇಶದಿಂದ ಬಂದ ದೀನ, ದಲಿತ ಕ್ರೈಸ್ತರು ಸಾಮಾಜಿಕ, ರಾಜಕೀಯ, ಆರ್ಥಿಕ ಭದ್ರತೆಯನ್ನು ಸಾಧಿಸ ಬೇಕು. ರಾಜಕೀಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು, ಬಹುಸಂಖ್ಯಾತರ ಜೊತೆ ಮಿಳಿತವಾಗಿ ಬದುಕಲು ಕಲಿಯ ಬೇಕು. ಇದನ್ನು ಇಂದು ಧರ್ಮಸಭೆ(Church) ಮಾಡಿದ್ದೇ ಆದರೆ ಭಾರತದ ದನಿಸತ್ತ ಕ್ರೈಸ್ತ ಕನಿಷ್ಠ ಪಕ್ಷ ಬುಸುಗುಡುವುದನ್ನಾದರೂ ಕಲಿಯುತ್ತಾನೆ.

ಡಾ|| ಬಿ.ಎಸ್. ತಲ್ವಾಡಿ

# ಸ್ತ್ರೀಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು

## ಮಹಿಳೆ

**ಮಹಿಳಾ ಚಳವಳಿಗಳು ದಿನಕಳೆದಂತೆ ತೀವ್ರಗೊಳ್ಳುತ್ತಿದ್ದರೂ, ಒಟ್ಟಾರೆ ಸಮಸ್ಯೆಗಳು ಸ್ವಲ್ಪವೂ ಕಡಿಮೆ ಯಾಗುತ್ತಿಲ್ಲ. ವಿಜ್ಞಾನ ಮತ್ತು ಆಧುನಿಕತೆಯ ಹೆಸರಿನಲ್ಲಿ ಬರುತ್ತಿರುವ ಆವಿಷ್ಕಾರಗಳು ಮಹಿಳೆಯರ ಸಮಸ್ಯೆಗಳನ್ನು ನೀಗಿಸುವ ಬದಲು ಮತ್ತಷ್ಟು ಉಲ್ಬಣಗೊಳಿಸುತ್ತಿವೆ. ಜಾಗತೀಕರಣ ಪ್ರಕ್ರಿಯೆಯಂತೂ ಪರೋಕ್ಷವಾಗಿ ಮಹಿಳಾ ದಮನಕಾರಿ ನೀತಿಯನ್ನೇ ಅನುಸರಿಸುತ್ತಿದೆ. ಸಮಾಜಮುಖಿ ಚಿಂತನೆ ಅಪ್ರಸ್ತುತ ಎನ್ನುವ ಸ್ಥಿತಿ ರೂಪುಗೊಳ್ಳುತ್ತಿದೆ. ಜಾಗತಿಕ ಮಟ್ಟದ ಎಲ್ಲಾ ಬದಲಾವಣೆಗಳು ಭಾರತೀಯ ಮಹಿಳಾ ಸಮುದಾಯದ ಮೇಲೆ ನಕರಾತ್ಮಕ ಪರಿಣಾಮವನ್ನೇ ಉಂಟುಮಾಡುತ್ತಿವೆ. ಸ್ತ್ರೀಸಮುದಾಯ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲು ಕುರಿತ ವಿಶ್ಲೇಷಣೆ ಇಲ್ಲಿದೆ.**

○ ಡಿ. ಡೊಮಿನಿಕ್

'ಸಮಾಜವಾದಿ ದರ್ಶನದ' ಅವನತಿಯೇ ಇಂದಿನ ಬಹು ದೊಡ್ಡ ಸವಾಲು. ಅಂದರೆ ಸಾಮಾಜಿಕ ನ್ಯಾಯದ ಬಗ್ಗೆ ಯಾರೂ ಸೊಲ್ಲೆತ್ತದಂತೆ ಮಾಡಲಾಗುತ್ತಿದೆ. ಬಂಡವಾಳದ ಮಾಯಾ ಬಜಾರಿನಲ್ಲಿ ಯಾರಿಗೆ ಕೊಳ್ಳುವ ಶಕ್ತಿಯಿದೆಯೋ ಅವರೇ ನಮ್ಮೆದುರಿಗಿರುವ ಮಾದರಿಗಳು. ರಾಜಕೀಯ ಗುದ್ದಾಟದ ನಡುವೆ ಎಲ್.ಪಿ.ಜಿ. ಪ್ರಕ್ರಿಯೆಗಳು ತೀವ್ರವಾಗುತ್ತಿದ್ದಂತೆಯೇ ಕಳೆದ ದಶಕದಲ್ಲಿ ಓರಿಯಂಟಲಿಸ್ಟ್ ಮತ್ತು ವಸಾಹತ್ತೋತ್ತರ ಚಿಂತನೆಗಳು ಗಾಢವಾಗಿ ಮುಂಚೂಣಿಗೆ ಬಂದವು. ಇದರಿಂದಾಗಿ ಯಾಜಮಾನ್ಯದ ಪ್ರತಿನಿಧೀಕರಣಗಳಲ್ಲಿ ಬಿಕ್ಕಟ್ಟು ಕಾಣಿಸಿಕೊಂಡಿತ್ತಾದರೂ, ಸರ್ವಿಸ್ ಸೆಕ್ಟರ್ ಎದುರು ನಿಸ್ತೇಜವಾಗಿಬಿಟ್ಟವೆ. ಹೀಗಿರುವಲ್ಲಿ ಐಡೆಂಟಿಟಿ ಪಾಲಿಟಿಕ್ಸ್ ಪ್ರತ್ಯೇಕತೆಯನ್ನು ಅನನ್ಯತೆಯೆಂದು ನಂಬಿಸಿತ್ತಲ್ಲದೆ, ಹಿಂಸಾತ್ಮಕ ಸ್ಥಿತಿಯನ್ನು ಸಹ ಪ್ರಚೋದಿಸುತ್ತಿದೆ. ಆದ್ದರಿಂದ, ಸಮಾಜಮುಖಿ ಚಿಂತನೆ 'ಅಪ್ರಸುತ್ತ' ಎನ್ನುವ ವಾಸ್ತವ

ರೂಪುಗೊಳ್ಳುತ್ತಿದೆ. ಇಲ್ಲಿ 'ಸೋಷಿಯಲ್ ಕ್ಯಾಪಿಟಲ್' ಬಂಡವಾಳಶಾಹಿ ಅರ್ಥಶಾಸ್ತ್ರದ ಒತ್ತೆಯಾಳಾಗಿ ಪರಿವರ್ತನೆಗೊಳ್ಳುತ್ತಿದೆಯೆಂಬ ಗುಮಾನಿಯ ನಡುವೆಯೇ ಬಹುರೂಪಿ ಕುಲ ಸಂಬಂಧೀ (ethic) ಐಡೆಂಟಿಟಿಗಳು 'ಜಾತಿ' ಮತ್ತು 'ಜನಾಂಗಿಯವಾದ'ಗಳನ್ನು ಮೀರಿ ವಿಶ್ವಸ್ಥ ನಾಗರೀಕತ್ವದ ಆಶಯಗಳನ್ನು ವ್ಯಕ್ತಪಡಿಸುತ್ತಿವೆ. ಈ ಸೈದ್ಧಾಂತಿಕ ಚೌಕಟ್ಟನ್ನು ಸ್ಪಷ್ಟಗೊಳಿಸಿಕೊಳ್ಳುವ ಮೊದಲು ಕೆಲವು ಘಟನೆಗಳಿಗೆ ಮುಖಾಮುಖಿಯಾಗುವುದು ಸೂಕ್ತವೆಂದು ಭಾವಿಸುತ್ತೇನೆ.

ಒಂದು : ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿರುವ ಮಹಿಳಾ ಚಿಂತಕಿ ಸುಸಾನ್ನ ಜಾರ್ಜ್ ತಮ್ಮ ಇತ್ತೀಚಿನ ಕೃತಿ "Lugano Report"ನಲ್ಲಿ ಜಾಗತಿಕ ಬಂಡವಾಳಗಾರರ ಹುನ್ನಾರಗಳನ್ನು ಬಯಲಿಗೆಳೆಯುತ್ತಾರೆ. ಇಲ್ಲಿ ಬಂಡವಾಳ ಶಾಹಿ ಜಗತ್ತು ೨೧ನೇ ಶತಮಾನದಲ್ಲಿ ಉಳಿದುಕೊಳ್ಳಬೇಕಾದರೆ ಇವತ್ತಿನ ಬಿಕ್ಕಟ್ಟುಗಳನ್ನು ತಮ್ಮ ಅನುಕೂಲಕ್ಕಾಗಿ ಪರಿವರ್ತಿಸಿಕೊಳ್ಳಬೇಕು. ಅಂದರೆ ಈಗಾಗಲೇ, ಆಗಿರುವ ಭೂತಾಪಮಾನದ ಅಸಮತೋಲನವನ್ನು ಹಾಗೂ ಅದರ ಪರಿಣಾಮಗಳನ್ನು 'ತೃತೀಯ' ಜಗತ್ತಿಗೆ ವರ್ಗಾಯಿಸುವುದು. ಆ ಮೂಲಕ 'ಅಭಿವೃದ್ಧಿ'ಗೊಂಡ ದೇಶಗಳ ಹೊಣೆಗಾರಿಕೆಯನ್ನು ತಪ್ಪಿಸುವುದು. ಅಂದರೆ ನೆದರ್‌ಲ್ಯಾಂಡ್ಸ್‌ನಂತಹ ದೇಶ ತನ್ನ ಗಾತ್ರಕ್ಕಿಂತ ನಾಲ್ಕು ಪಟ್ಟು ಹೆಚ್ಚು ಕಬಳಿಸುತ್ತಿದೆಯಾದ್ದರಿಂದ ಪರಿಸರ ಬಿಕ್ಕಟ್ಟ ತೀವ್ರಗೊಳ್ಳುತ್ತದೆ. ಅಂತಹ ಸಂದರ್ಭದಲ್ಲಿ ಅದು 'ಗ್ರಾಹಕ ಸಂಸ್ಕೃತಿ'ಯನ್ನು ಉಳಿಸಿಕೊಳ್ಳುತ್ತಲೇ ಅದರ ಪರಿಣಾಮಗಳನ್ನು ಬೇರೆಯವರಿಗೆ ವರ್ಗಾಯಿಸುತ್ತದೆ. ಹೀಗಾಗುವಾಗ ಅತಿ ಸರಳವಾದ ಉಪಾಯಗಳನ್ನು ಬಂಡವಾಳಶಾಹಿ ಜಗತ್ತು ಮುಂದಿಡುತ್ತದೆ. ಅಂತಹ ಒಂದು ಉಪಾಯವೆಂದರೆ ಭೂಮಿ ಮೇಲಿನ ಒತ್ತಡವನ್ನು ಇನ್ನೊಂದು ೧೫ ವರ್ಷಗಳಲ್ಲಿ ಇಳಿಸಬೇಕಾದರೆ ವಿಶ್ವಜನಸಂಖ್ಯೆಯ ೨೦%ರಷ್ಟನ್ನು ನಾಶಮಾಡುವುದು. ಹೀಗೆ ನಾಶಕ್ಕೊಳಗಾಗುವ ಜನ ಯಾರು? ಅವರ ಪ್ರಕಾರ ಅನಕ್ಷರಸ್ಥರು, ದಲಿತರು, ಮಕ್ಕಳು, ಸ್ತ್ರೀಯರು ಮತ್ತು ಬಡವರು. ಇವರ್‍ಯಾರು ಬದುಕುವ ಹಕ್ಕನ್ನು ಹೊಂದಿರುವುದಿಲ್ಲ. ಏಕೆಂದರೆ ಡಾರ್ವಿನನ್ನ ಸಾಮಾಜಿಕ ವಿಕಾಸದ ಪ್ರಕಾರ 'ಶಕ್ತಿವಂತರು' ಮಾತ್ರ ಬದುಕಲು ಅರ್ಹರು. (Survival of the fittest) ಅಂದರೆ ಏಶಿಯಾ ಮತ್ತು ಆಫ್ರಿಕಾ ಖಂಡದ ಜನ ಸಮುದಾಯಗಳು ಇವತ್ತಿನ ತಂತ್ರಜ್ಞಾನ ಆಧರಿತ ಡಾರ್ವಿನ್ನನ ಸಾಮಾಜಿಕ ವಿಕಾಸವಾದದಲ್ಲಿ ಜಾಗ ಇಲ್ಲದವರು. ಅವರು ಕೋಮುಗಲಭೆ, ಬರಗಾಲ, ಭೂಕಂಪ ಅಥವಾ ಪ್ರವಾಹ...ಮುಂತಾದ ಮಾನವ ನಿರ್ಮಿತ ಸಹಜ ವಿಕೋಪಗಳಿಗೆ ಸಿಕ್ಕಿ ಸರ್ವನಾಶವಾಗಬೇಕು. ಹೀಗೆ 'ಸುಸಾನ್ನ ಜಾರ್ಜ್'ರವರು ಬಂಡವಾಳಶಾಹಿಗಳ ಹುನ್ನಾರಗಳನ್ನು ಬಯಲುಗೊಳಿಸುತ್ತಾ ಅದಕ್ಕೆ ಪೂರಕವಾದ ಪ್ರತಿರೋಧ ತಂತ್ರಗಳನ್ನು ರೂಪಿಸಿಕೊಳ್ಳಲು ಕರೆ ನೀಡುತ್ತಿದ್ದಾರೆ. ಇಲ್ಲಿ 'ಹಕ್ಕು'ಗಳ ಪ್ರಶ್ನೆ ಉಳ್ಳವರ ಹಕ್ಕುಗಳು ಮಾತ್ರ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ.

ಎರಡನೆಯದಾಗಿ, ಕಳೆದ ವರ್ಷ ಗುಜರಾತಿನಲ್ಲಿ 'ಭೂಕಂಪ' ಪ್ರಕೃತಿ ವಿಕೋಪ ಎಂದೇ ಎಲ್ಲರೂ ಯೋಚಿಸಿದ್ದು, ಆದರೆ ಇಂಥ ಸರಳ ಸೀದಾ ಕಾರಣವನ್ನು ಬದಿಗೊತ್ತಿ ಯೋಚಿಸಿದಾಗ ಇದಕ್ಕಿಂತ ಭಿನ್ನ ಕಾರಣವೊಂದು ಹೊಳೆಯುತ್ತದೆ. ರಾಜಸ್ಥಾನದ ಮರುಭೂಮಿಯಲ್ಲಿ ಕೇಂದ್ರ ಸರ್ಕಾರ ನಡೆಸಿದ 'ಪರಮಾಣು ಬಾಂಬು' ಪರೀಕ್ಷೆ ಭೂಮಿಒಳಗೆ ನಡುಕ ಮತ್ತು ಕಿ.ಮಿ.ಗಳುದ್ದದ ದೊರಗನ್ನು ಸೃಷ್ಟಿಸುತ್ತದೆ. ಇದು ಗುಜರಾತಿನ ಉತ್ತರದಲ್ಲಿ ನಡೆದರೆ, ದಕ್ಷಿಣದಲ್ಲಿ ಅಂದರೆ ಮಧ್ಯಪ್ರದೇಶ, ಮಹಾರಾಷ್ಟ್ರ ಗಡಿಗಳಲ್ಲಿ ಗುಜರಾತ್ ಸರ್ಕಾರ ನಿರ್ಮಿಸಿರುವ ಸರದಾರ ಸರೋವರ ಆಣೆಕಟ್ಟು ೩೭ ಸಾವಿರ ಹೆಕ್ಟರ್ ಭೂಮಿ ನೀರಿನಿಂದ ತುಂಬುವಂತೆ ಮಾಡಿದೆ. ಅಷ್ಟೊಂದು ನೀರಿನ ಭಾರ ಒಂದೆಡೆಯಾದರೆ ಅತ್ತ ಪರಮಾಣು ಬಾಂಬು ಸ್ಫೋಟ ಪರೀಕ್ಷೆ ಭೂಮಿಯನ್ನು ಸೀಳಿದ್ದು ಈ ಭೂಭಾಗಗಳ ನಡುವೆ 'ಭೂಕಂಪ' ಸಂಭವಿಸುತ್ತದೆ. ಅಂದರೆ ಇದು ಪ್ರಕೃತಿ ಸಹಜ ವೆಂದು ನಂಬಲು ಸಾಧ್ಯವೇ ಇಲ್ಲ. ಆದರೂ ಮಾಧ್ಯಮಗಳು ಇಂತಹ ಸಂಗತಿಗಳನ್ನು 'ಸಹಜ'ವೆಂಬಂತೆ ಚಿತ್ರಿಸುತ್ತವೆ.

ಮೂರನೆಯದಾಗಿ, ವಿಶ್ವಬ್ಯಾಂಕ್ ಪ್ರಯೋಜಿತ 'ನ್ಯಾಶನಲ್ ಪಾರ್ಕ್' ಯೋಜನೆಯಡಿ ಎತ್ತರ ಗಡಿಯಾಗುತ್ತಿರುವ ಸಮುದಾಯಗಳು ಪ್ರತಿಭಟಿಸಿದಾಗ, ಅವರ ಮೇಲೆ ವಿನಾಕಾರಣ ಪೊಲೀಸ್ ಹಿಂಸೆಯನ್ನು ಹೇರಲಾಗುತ್ತದೆ. ಅಂದರೆ ಇಂದು 'ಸ್ವಾಭಾವಿಕ ಸಂಪನ್ಮೂಗಳು' ನಿಗಮೀಕರಣಕ್ಕೊಳಪಡುತ್ತಿವೆಯಲ್ಲದೆ, ಜನಸಮುದಾಯಗಳು ಈ ಸಂಪನ್ಮೂಲಗಳ ಮೇಲಿನ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಿವೆಯೆಂಬುದು ಸರಳ ಸ್ಪಷ್ಟವಷ್ಟೆ

ಈ ಮೇಲಿನ ಸಂಗತಿಗಳನಿಟ್ಟುಕೊಂಡು ಇನ್ನು ಮುಂದಿನ ಚರ್ಚೆಯನ್ನು ಆರಂಭಿಸುತ್ತೇನೆ. ರೈಮಂಡ್ ವಿಲ್ಲಿಯಮ್ಸ್ ಯಾವುದೇ ಸಂಗತಿಯನ್ನು ಅರ್ಥೈಸುವಾಗ ಕೆಲವು "Key Words" ಬಹು ಪ್ರಧಾನವಾಗಿ ಸಾಂಸ್ಕೃತಿಕ ಮತ್ತು ಸಾಂಸ್ಥಿಕ ರೂಢಿಗಳನ್ನು ವಿವರಿಸಿಕೊಳ್ಳುವಾಗ ಉಪಯುಕ್ತ ಸಾಧನ

ಗಳೆನ್ನುತ್ತಾರೆ. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಸ್ತ್ರೀ, ಸಮುದಾಯ, ಸಮಸ್ಯೆ, ಸವಾಲು...ಇತ್ಯಾದಿ ಪದಗಳು ಒಂದು ವಿಶಿಷ್ಟವಾದ ಅರ್ಥ ಜಗತ್ತನ್ನು ಬಿಂಬಿಸುತ್ತವೆಯಲ್ಲದೆ, ಈ ಅರ್ಥ ಜಗತ್ತು ಸ್ಥಾಪಿತ 'ಸಾಮಾಜಿಕ ಸಂಬಂಧ'ಗಳನ್ನು ಮುರಿದು ಕಟ್ಟುತ್ತವೆ. ಹಾಗೆ ಮಾಡುವಾಗ ಹೊಸ ಸಾಧ್ಯತೆಗಳನ್ನು 'ಸಾರ್ವಜನಿಕ ವಲಯ'ದಲ್ಲಿ ಅವು ಹೊಮ್ಮಿಸುತ್ತವೆ. ಆದ್ದರಿಂದ ಅಂತಹ ಕೆಲವು ಮುಖ್ಯ ಪರಿಭಾಷೆಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

೧. ಅಭಿವೃದ್ಧಿ ಅಥವಾ ಡೆವಲಪ್‌ಮೆಂಟ್: ಈ ಪರಿಭಾಷೆಗಳಿಗೆ ತಾತ್ವಿಕ ಚೌಕಟ್ಟು ದೊರೆಯುವುದು 'ಆಧುನಿಕತೆ' ಎನ್ನುವ ಪರಿಕಲ್ಪನೆ. ಇವುಗಳನ್ನು ಪ್ರಕ್ರಿಯಾತ್ಮಕ ವಿಚಾರಧಾರೆ/ವ್ಯಾಖ್ಯಾನಕ್ಕೊಳಪಡಿಸುವಾಗ 'ಸಾಂಸ್ಕೃತಿಕ ಭಿನ್ನತೆ'ಯನ್ನು ಸಂಘಟಿಸಲಾಗುತ್ತದೆ. ಈ ಸಾಂಸ್ಕೃತಿಕ ಭಿನ್ನತೆಗಳು ಸಾಮುದಾಯಿಕವಾಗಿ ವ್ಯಕ್ತಿಗಳು ಮೇಲ್ಮುಖಚಲನೆಯಲ್ಲಿ ತೊಡಗಲು ಮತ್ತು ತಮ್ಮ ಇರುವಿಕೆ ಸ್ಥಾನಗಳನ್ನು ಗಟ್ಟಿಗೊಳಿಸಿಕೊಳ್ಳಲು ನೆರವಾಗುತ್ತವೆ. ಅಂದರೆ ಯಾವುದನ್ನು ನಾವು 'ಲಿಬರಲಿಸಂ' ಅಥವಾ ಸ್ವಯಂತಂತ್ರವಾದಿ ವರಸೆಗಳೆಂದು ಕರೆಯುತ್ತೇವೋ ಅವು ಪ್ರಗತಿ/ಸುಧಾರಣೆ ಎನ್ನುವ ಐಡಿಯಾಗಳನ್ನು ಪ್ರಚೋದಿಸುತ್ತವೆ. ಇಲ್ಲಿ ನುರಿತ ಅಥವಾ ನಾಗರೀಕ ಸಮಾಜ ಪರಿಸರವನ್ನು 'ಸಂಪತ್ತಾನ್ನಾಗಿಸಿ' ತನ್ನ ಆಧುನಿಕತೆಗಾಗಿ ಅದನ್ನು ಮೂಲ ಕಚ್ಚಾವಸ್ತುವನ್ನಾಗಿ ಮಾಡಿ ಕೊಳ್ಳುತ್ತದೆ. ಇದನ್ನೇ ಜೆ.ಎಸ್.ಮಿಲ್ 'ನಿರಂಕುಶ ಪ್ರಭುತ್ವ ಒಂದು ಸಮರ್ಥನೀಯ ಸರ್ಕಾರ ಮಾದರಿಯಾಗಿ ಅನಾಗರೀಕರನ್ನು ನಾಗರೀಕರನ್ನಾಗಿಸುವ ಉದ್ದೇಶವನ್ನು ಹೊಂದಿರುತ್ತದೆ' ಎನ್ನುತ್ತಾನೆ. ಇಲ್ಲಿ 'ಪೋಷಕ ಪ್ರವೃತ್ತಿ' ನಾಜೂಕಾಗಿ ಸಾಮ್ರಾಜ್ಯಶಾಹಿ ಧೋರಣೆಯನ್ನೆಲ್ಲ 'ಪ್ರಜಾ ಪ್ರಭುತ್ವದ'ದಡಿ ಮುಂದುವರೆಸಲಾಗುತ್ತದೆ. ಆದ್ದರಿಂದ 'ಪ್ರಗತಿಗೆ' ಬೇಕಾದ ಸಮ್ಮತಿಯನ್ನು ಜನರಿಂದಲೇ ಪಡೆಯಲಾಗುತ್ತದೆ. ಇಂತಹ 'ಸಮ್ಮತಿ'ಯ ಹಿಂದೆ ಕ್ರೌರ್ಯವೇನೂ ಇರುವುದಿಲ್ಲ. ಇವತ್ತಿನ 'ನಗರಕೇಂದ್ರಿತ' ಬದುಕು ಇದಕ್ಕೊಂದು ಅತ್ಯುತ್ತಮ ನಿದರ್ಶನವಾಗುತ್ತದೆ. ಇಲ್ಲಿ ಅಧಿಕೃತ ಕಥಾನಕಗಳು (Official narratives) ಸಮಸ್ಯೆಯನ್ನು ವ್ಯಾಖ್ಯಾನಿಸುತ್ತವಲ್ಲದೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಪರಿಹಾರವಾಗಿ ಸಮರ್ಥಿಸಿಕೊಳ್ಳುತ್ತವೆ. ಆದ್ದರಿಂದ ಈ ತಂತ್ರೋಪಾಯಗಳೇ 'ಆಧುನಿಕತೆ'ಯೆಂದು ಬಿಂಬಿಸಲಾಗುತ್ತದೆ. ಈ ಪ್ರಕ್ರಿಯೆಯನ್ನು ಹಬರ್ಮಸ್, 'ಜೀವ ಜಗತ್ತಿನ ವಸಾಹತೀಕರಣ' ಎಂದು ಕರೆಯುತ್ತಾನೆ. ಈ ವಸಾಹತೀಕರಣವನ್ನು ಪ್ರತಿಭಟಿಸುವ ಪ್ರತಿರೋಧಗಳೂ ಸಹ ಅದರೊಳೊಳಗಿನಿಂದಲೇ ರೂಪುಗೊಳ್ಳುತ್ತದೆಯೆಂದು ಹಬರ್ಮಸ್ ಚಿಂತಕ ಹೇಳುತ್ತಾನೆ. ಅಂದರೆ ನಿಜವಾದ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಸಂಘಟಿತಗೊಳ್ಳುವುದೇ ಇಲ್ಲಿ. ಅಂದರೆ 'ಆಧುನಿಕತೆ'ಯು ಭಿನ್ನಭಿನ್ನ ರೂಪಾಂತರಗಳ ಮೂಲಕ ಕಾಣಿಸಿಕೊಳ್ಳುತ್ತದೆಯಲ್ಲದೆ, 'ಐಡೆಂಟಿಟಿ' ಅನನ್ಯತೆಗಳು ಆ ಭಿನ್ನತೆಗಳನ್ನು ತಮ್ಮ ಅಭಿವ್ಯಕ್ತಿ ಮಾದರಿಗಳನ್ನಾಗಿ ಮಾಡಿಕೊಳ್ಳುತ್ತವೆ. ಆದ್ದರಿಂದ ವೈವಿಧ್ಯತೆ ಎನ್ನುವುದು ಬದುಕಿನ ಭಾಗವಾಗಿ ಗೋಚರಿಸುತ್ತದೆ. ಇದನ್ನೇ 'ದ್ವಿದಳನ' ಕ್ರಿಯೆ ಎಂತಲೂ ಕರೆಯಬಹುದು. ಮ್ಯಾಕ್ಸ್ ವೇಬರ್ ಎನ್ನುವ ಸಮಾಜಶಾಸ್ತ್ರಜ್ಞ, ಈ ಸ್ಥಿತಿಯನ್ನು 'ರಜನಾತ್ಮಕ ಭಿನ್ನತೆ' (Structural differentiation) ಎಂದು ಕರೆಯುತ್ತಾನೆ. ಅಂದರೆ 'ಜೀವಜಗತ್ತು' ಆಧುನಿಕತೆಯಿಂದ ವಸಾಹತೀಕರಣಕ್ಕೊಳಪಡುವಾಗಲೇ, ಅದರೊಳಗಿನ ತಾರ್ಕಿಕತೆಯಿಂದಾಗಿ ಅದು ಭಿನ್ನತೆಯತ್ತ ಚಲನೆಯನ್ನು ಆರಂಭಿಸುತ್ತದೆ. ಆದರೆ ಅದರೊಳಗಿನ ಸಾಮಾಜಿಕ ಅಧಿಕಾರ ಸಂಬಂಧಗಳು ಆ ಚಲನೆಯನ್ನು ವರ್ಗೀಕರಿಸಿ, ಸ್ಥಿರೀಕರಿಸುತ್ತದೆ. ಆದ್ದರಿಂದ ಕುಲ ಸಂಬಂಧೀ, ಜಾತಿ ಸಂಬಂಧೀ ಅನನ್ಯತೆಗಳು ಜಡತ್ವಗೊಂಡು ಪ್ರಾಚೀನ ಅವಶೇಷಗಳಾಗಿ ಕಾಣತೊಡಗುತ್ತವೆ. ಅಂದರೆ ಈ ರೀತಿ ಅನನ್ಯತೆಗಳನ್ನು ಬಿಂಬಿಸುವುದರಿಂದ ಕೆಲವೇ ಅನನ್ಯತೆಗಳು ಅಥವಾ ಸಮುದಾಯಗಳು 'ಷಧುನಿಕತೆ'ಯನ್ನು ಏಕರೂಪಿಯಾಗಿಸಿ, ತಮ್ಮ ಖಾಸಗೀ ಆಸ್ತಿಯನ್ನಾಗಿ ಮಾಡಿಕೊಳ್ಳುತ್ತವೆ. ಇಂತಹ ಸಮುದಾಯಗಳು ತಮಗಿಂತ ಭಿನ್ನ ಮಾದರಿಯ ಬದುಕನ್ನು ಅವಹೇಳನ ಮಾಡುವುದಲ್ಲದೆ,

ಮಹಿಳೆ, ಪುರುಷನಿಗಿಂತ ಹೆಚ್ಚಿನ ಅಂದರೆ ೨/೩ರಷ್ಟು ದುಡಿಮೆಯಲ್ಲಿ ತೊಡಗಿದ್ದಾಳೆ. ಇದಕ್ಕೆ ತಕ್ಕ ಪ್ರತಿಫಲವನ್ನು ಆಕೆ 'ಹಣ'ದ ರೂಪದಲ್ಲೇ ಪಡೆಯಬೇಕಾಗಿದೆ. ಹೀಗೆ ತನ್ನ ದುಡಿಮೆಯನ್ನು ತನ್ನದಾಗಿಸಿಕೊಳ್ಳುವಾಗ, ಜಾತಿ, ವರ್ಗ, ಲಿಂಗ ಮತ್ತು ಲೈಂಗಿಕ ಅಲ್ಪಸಂಖ್ಯಾತರೆಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದರಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಹಿಬೇಕಾಗಿದೆ. ಇದರ ಮೊದಲ ಹೆಜ್ಜೆಯಾಗಿ ಕೌಟುಂಬಿಕ ನೆಲೆಯಲ್ಲೇ ಆಕೆ ತನ್ನ ದುಡಿಮೆಗೆ ತಕ್ಕ 'ಖಚ್ಚುಚ್ಚ'ಯನ್ನು ನಾಗರೀಕ ಪ್ರಜೆಯಾಗಿ ಕೇಳಲೇ ಬೇಕಾಗುತ್ತದೆ. ತದ ನಂತರದಲ್ಲಿ ತನ್ನ ಅನನ್ಯತೆಯ ಬಹುರೂಪಿ ಆಯ್ಕೆಗಳಲ್ಲಿ ತೊಡಗಬಹುದಾಗಿದೆ. ಅಂದರೆ ವಿವಾಹ, ಲೈಂಗಿಕತೆ ಮುಂತಾದವು ಸಾರ್ವಜನಿಕವಾಗಿ, ಮುಜುಗರವಿಲ್ಲದೆ ವಿಶ್ಲೇಷಣೆಗೆ ಒಳಪಟ್ಟು ಆರೋಗ್ಯ ಪೂರ್ಣ 'ಸಂವಾದ'ದಲ್ಲಿ ತೊಡಗಬೇಕಾಗುತ್ತದೆ.

ಅದನ್ನು ಪ್ರತ್ಯೇಕಿಸುವ ಕ್ರಿಯೆಗೂ ಇಳಿಯುತ್ತದೆ. ಹಾಗೆ ಪ್ರತ್ಯೇಕಿಸಿ ನಿಯಂತ್ರಣಕ್ಕೊಳಪಡಿಸಲಾಗುತ್ತದೆ.

ನಿಜವಾಗಿಯೂ ಸಮಸ್ಯೆ ಶುರುವಾಗುವುದು ಇಲ್ಲೆ ಏಕೆಂದರೆ ಈ ಭಿನ್ನತೆಯು ಅಂತಿಮವಾಗಿ ವ್ಯಕ್ತಿ ಸ್ವಾಮ್ಯವನ್ನು ಪಡೆದು, ಉತ್ಪಾದನಾ ಪ್ರಕ್ರಿಯೆಯನ್ನು ಒಡೆತನಕ್ಕೊಳಪಡಿಸಲಾಗುತ್ತದೆ. ಇದೇ ಅಂತಿಮವಾಗಿ ಬಂಡವಾಳಶಾಹಿ ಆಧುನಿಕತೆಯಾಗಿ, ಅದನ್ನು ಪ್ರತಿಭಟಿಸುವ ಪ್ರತಿರೋಧಗಳೂ ಸಹ ಅದೇ ಸನ್ನಿವೇಶದಲ್ಲಿ ರೂಪುಗೊಳ್ಳುತ್ತಾ ಸಾಗುತ್ತದೆ. ಆದ್ದರಿಂದ ಲಿಂಗ ಸಂಬಂಧಗಳೂ ಸಹ ಮರು ಸಂಘಟಿತಗೊಂಡು, ತಾರತಮ್ಯಕ್ಕೊಳಗಾಗುತ್ತವೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಏಕೆಂದರೆ ಭಿನ್ನತೆಯು ತೀವ್ರವಾದಷ್ಟು ಆ ಭಿನ್ನತೆಗಳ ಪಾತ್ರಗಳು, ಪ್ರತಿನಿಧೀಕರಣಗಳೂ ಪ್ರತಿಕ್ಷಣದಲ್ಲೂ ಬದಲಾವಣೆಗೊಳ್ಳುತ್ತಿರುತ್ತವೆ. ಈ ಬದಲಾವಣೆಗಳನ್ನು 'capital'ನ ಮೂಲಕ ಸ್ಥಿರೀಕರಣಕ್ಕೊಳಪಡಿಸಲಾಗುತ್ತದೆ. ಇದನ್ನೇ 'ಶೋಷಣೆ' ಎಂತಲೂ ಕರೆಯುವುದು.

**೨. ಪರಿಸರ ಮತ್ತು ಸ್ವಾಭಾವಿಕ ಸಂಪನ್ಮೂಲಗಳು:**

ಮೇಲೆ ವಿವರಿಸಿಕೊಂಡಂತೆ, ಆಧುನಿಕತೆಯ ಪ್ರಕ್ರಿಯೆಯಲ್ಲಿ 'ಅಭಿವೃದ್ಧಿ' ಎನ್ನುವುದೇ 'ಜೀವಜಗತ್ತಿನ ವಸಾಹತೀಕರಣ' ಎಂದು ಕರೆದರೆ ತಪ್ಪಾಗಲಾರದು. ಏಕೆಂದರೆ ಜೀವ ಜಗತ್ತಿನಲ್ಲಿನ ತಾರ್ಕಿಕತೆಯ ಪರಿಸರವನ್ನು ಬಹು ನೇರವಾಗಿ "Natural Resources" ಎಂದು ಸ್ಥಿರೀಕರಣಗೊಳಿಸಿ "Utility" ಮೌಲ್ಯವನ್ನಾಗಿ ಪರಿವರ್ತಿಸುತ್ತದೆ. ಹೀಗೆ ಉತ್ಪಾದನಾ ಪ್ರಕ್ರಿಯೆ ಆರಂಭವಾಗಿ ಗ್ರಾಹಕ ವಸ್ತುಗಳಾಗಿ ಸಂಪೂನ್ಮಲಗಳ ಬಳಕೆ ತೀವ್ರವಾಗುತ್ತದೆ. ಇದನ್ನು 'Economic Extraction' ಅಂದರೆ ಸಾಧ್ಯವಾದಷ್ಟು ಬಳಸಿಕೊಳ್ಳುವುದು. ಆದ್ದರಿಂಲೇ 'ಸ್ವಾಭಾವಿಕ' ಎನ್ನುವುದು ಸಾಂಸ್ಕೃತಿಕ ಬದುಕಿನಿಂದ ಆಚೆ ಇದ್ದು ಅದು ಮಾನವ ಸೃಷ್ಟಿಯಿಂದ ಹೊರಗಿರುತ್ತದೆಯೆಂದು ಭಾವಿಸಲಾಗುತ್ತದೆ. ಅಂದರೆ ಪರಿಸರವೆಂದರೆ ಸಂವೃದ್ಧಿಯಾದ ಅರಣ್ಯಸಂಪತ್ತು, ಖನಿಜಗಳು ಮತ್ತು ದೊಡ್ಡ ನದಿಗಳಿಂದ ಹರಿಯುವುದಾಗಿರುತ್ತದೆ. "Resources" ಅಥವಾ ಸಂಪನ್ಮೂಲಗಳೆನ್ನುವುದು ಸಾಂಸ್ಕೃತಿಕ ನಿರೂಪಣೆಗಳಾಗಿ 'ಬಳಕೆ' ಮತ್ತು 'ವಿನಿಮಯ' ಮೌಲ್ಯವನ್ನು ಹೊಂದಿದ್ದು ನಿರ್ವಹಣೆ ಅಥವಾ ಮ್ಯಾನೇಜ್‌ಮೆಂಟ್ ಬಹಳ ಮುಖ್ಯವಾಗುತ್ತದೆ. ಇವತ್ತಿನ ಅಕಾಡೆಮಿಕ್ ಶಿಸ್ತುಗಳನ್ನು ಇಲ್ಲಿ ಉಲ್ಲೇಖಿಸಬೇಕಿಲ್ಲ. ಈ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ 'ಆಸ್ತಿ' ಮತ್ತು 'ಒಡೆತನ' ಎನ್ನುವುದು ಬಳಕೆ ಮತ್ತು ಹೊಂದುವ ಹಕ್ಕಾಗಿ 'ಅವಕಾಶ' (Space) ಮತ್ತು ಭೌಗೋಳಿಕ ಪ್ರದೇಶ (territory)ಗಳಲ್ಲಿ ಚಲನೆ ಆರಂಭವಾಗುತ್ತದೆ. ಈ ಚಲನೆಗೆ ಭೂತ-ವರ್ತಮಾನ ಭವಿಷ್ಯತ್ತುಗಳು ಇರುತ್ತವೆ. ಇಂದು ಈ ಚಲನೆಯು ಜಾಗತಿಕವಾಗಿ 'trans-local' ನೆಲೆಯನ್ನು ಪಡೆದಿದೆಯಲ್ಲದೆ ಈ ಚಲನೆಯಲ್ಲಿ ಸಾಂಸ್ಕೃತಿಕ ರಾಜಕಾರಣವು ತೀವ್ರವಾಗಿ ನಡೆಯುತ್ತಿರುತ್ತದೆ ಎಂಬುದನ್ನು ಗಮನಿಸಲೇಬೇಕು. ಆದ್ದರಿಂದಲೇ ಇಲ್ಲಿನ ರಾಜಕಾರಣ ಸಾಮಾಜಿಕ ಬದುಕಿನ ಹೊರಗೆ "Natural Resources" ಇದೆ ಎಂದೂ ಭಾವಿಸುತ್ತದೆ. ಇದನ್ನೇ ಒಟ್ಟಾಗಿ 'ಸಾಮಾಜಿಕ ಜೀವ-ಜಗತ್ತು' ಎಂದು ಕರೆಯಬಹುದಾಗಿದೆ. ಅಂದರೆ ಒಂದು ಸಾಮಾಜಿಕ ಬದುಕು 'ಪರಿಸರ'ಕ್ಕೆ ಬಂದು ಬಿಡುತ್ತದೆ.

> ಆದಿವಾಸಿ ಜನರಾಗಲೀ, ಭೂರಹಿತ ಕೃಷಿ ಕಾರ್ಮಿಕರಾಗಲೀ, ದಲಿತರಾಗಲೀ ಅಥವಾ ಗ್ರಾಮ ಪರಿಸರದಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿರುವ ಮಹಿಳಾ ಸ್ತ್ರೀಶಕ್ತಿ ಗುಂಪುಗಳಾಗಲೀ ಎಲ್ಲರೂ ಸಹ 'ಆಧುನಿಕ ಪ್ರಜೆ'ಯ ನಕಾರಾತ್ಮಕ ಪರಿಣಾಮಗಳನ್ನು ನೇರವಾಗಿ ಅನುಭವಿಸುವವರಾಗಿದ್ದಾರೆಂದೇ ನನ್ನ ನಂಬುಗೆ. ಏಕೆಂದರೆ ಇವರೆಲ್ಲರೂ ಸಹ ಬ್ರಿಟೀಷ್ ಕಾಲದಿಂದಲೇ 'State Republics' ಎನ್ನುವ ಚೌಕಟ್ಟಿಗೆ ಒಳಗಾಗಿ ವಸಾಹತುಶಾಹಿಯ ಉದ್ದೇಶಗಳಿಗೆ ಪೂರಕವಾಗಿ ರೂಪುಗೊಂಡವರು. ಅಂದರೆ ಗ್ರಾಮ ಎಂದರೆ 'ರಾಜ್ಯಾಂಗ' ಅಥವಾ 'State' ನ ಸರಳೀಕೃತ ರೂಪ. ನಗರೀಕರಣದ ಪ್ರಕ್ರಿಯೆಗೆ ಬೇಕಾದ ಸಂಪನ್ಮೂಲಗಳನ್ನು ಒದಗಿಸುವವರು. ಇವರೆಲ್ಲ ಓರಿಯಂಟಲಿಸ್ಟ್ ಪ್ರಣಾಳಿಕೆಯ ಮುಗ್ಧ ಸಮುದಾಯಕ ಜನ. ಇಲ್ಲಿ ವ್ಯಕ್ತಿಗತ ಹಕ್ಕುಗಳೇನು ಇರುವುದಿಲ್ಲ. ಆದ್ದರಿಂದ ಇವರೆಲ್ಲ ಕರುಣೆಗೆ ಪಾತ್ರವಷ್ಟೆ.

ಈ ಮೇಲೆ ವಿವರಿಸಿಕೊಂಡಂತೆ ಈ 'ಬಳಕೆ'ಯ ದೃಷ್ಟಿಕೋನದಲ್ಲಿರುವ ಸಮಸ್ಯಾತ್ಮಕ ಅವಳಿಗಳೆಂದರೆ "Waste" ಮತ್ತು "Scarcity" (ಕೊರತೆ). ಇವೆರಡೂ ಸಹ 'ಜೀವಜಗತ್ತಿನ' ಸುತ್ತಾ ಸಾಂಸ್ಕೃತಿಕವಾಗಿ ಕಟ್ಟಿರುವಂತಹವೇ ಆಗಿವೆ. ಉದಾಹರಣೆಗೆ ನಾವು ನೀರನ್ನು Waste ಮಾಡಬಾರದು. ಏಕೆಂದರೆ ಅದರ ಕೊರತೆ ಇದೆ ಎಂದು ಹೇಳುತ್ತೇವೆ. ಆದರೆ ಹಾಗೆ ಹೇಳುವಾಗ ಅದರೊಳಗಿನ ರಾಜಕಾರಣವನ್ನು ನಾವು ಗಮನಿಸುವುದಿಲ್ಲ. ಅಂದರೆ ಖಾಸಗಿ ಒಡತನದಿಂದಾಗಿ ನೀರು ಅತ್ಯಧಿಕವಾಗಿ ಬಳಕೆಯಾದಾಗ ಅಂತರ್ಜಲ ಕಮ್ಮಿಯಾಗುತ್ತದೆ ಮಾತ್ರವಲ್ಲ ನಿಜವಾದ ಕೊರೆತ (Scarcity)ಯನ್ನು ಅನುಭವಿಸಬೇಕಾಗುತ್ತದೆ. ಇದು ಸಾಮಾಜಿಕ ಪರಿಣಾಮಗಳನ್ನು ಒಳಗೊಂಡಿರುತ್ತದೆ. ಇಲ್ಲಿ ಬರಗಾಲ/ಕ್ಷಾಮ ತಲೆದೋರುತ್ತದೆಯಲ್ಲದೆ ಬಡಜನತೆಯ ಅದೃಷ್ಟದ ಅಂತರ್‌ಜಲ ಹಿಂಗಿ ಹೋಗುವುದಕ್ಕಿಂತಲೂ ವೇಗವಾಗಿ, ಹಿಂಗಿ ಹೋಗುತ್ತಿರುತ್ತದೆಯಲ್ಲದೆ, 'ವಲಸೆ' ಸಹಜ ವೆಂಬಂತಾಗುತ್ತದೆ. ಇಲ್ಲಿ ಬದುಕಿನ ಕ್ರಮಗಳೂ ಸಹ ಹಿಂಗಿ ಹೋಗಿ ಏಕರೂಪಿ ಮಾರುಕಟ್ಟೆ ಪ್ರೇರಿತ ಬದುಕಾಗುವ ಸಾಧ್ಯತೆಗಳೇ ಹೆಚ್ಚಾಗಿರುತ್ತವೆ. ಇಲ್ಲಿ ನಿಜವಾದ "Scarcity" ರಾಜಕೀಯ ಬಿಕ್ಕಟ್ಟಾಗಿ, ಶೀಘ್ರ ಪರಿಹಾರವನ್ನು ಬಯಸುತ್ತದೆಯಾದ್ದರಿಂದ ನಿಜವಾದ ಲಿಂಗತಾರತಮ್ಯಗಳು ಅಥವಾ ಆರ್ಥಿಕ ಅಸಮಾನತೆಗಳಾವುವು ಮುಖ್ಯವಾಗುವುದಿಲ್ಲ.

**೩. ಬಯ್ನರಿಯೋಪಾದಿಯಲ್ಲಿ ಅರ್ಥೈಸಲಾಗಿರುವ ಗ್ರಾಮ ಮತ್ತು ನಗರ, ನಾಗರೀಕ ಸಮಾಜ (Civil Society) ಮತ್ತು ರಾಜ್ಯಾಂಗ (State), ರೈತಾಪಿ ಜನಗಳು ಮತ್ತು ಸರ್ವಾಧಿಕಾರಿ ಪ್ರಭುತ್ವ, ಸಮುದಾಯ ಮತ್ತು ಸರ್ಕಾರ, ಲಿಂಘೀಯ ಸಂಬಂಧಗಳು ಮತ್ತು ಲೈಂಗಿಕತೆಯ ರಾಜಕಾರಣ... ಶೋಷಕ ಮತ್ತು ಶೋಷಣೆ, ಬ್ರಾಹ್ಮಣ್ಯ ಮತ್ತು ದಲಿತತ್ವ...**

ಇತ್ಯಾದಿ ಪರಿಭಾಷೆಗಳು ಯಾವತ್ತೂ ಕ್ರಿಯಾಶೀಲವಾಗುವುದು ಅಸಮಾನ ಅಧಿಕಾರ ಸಂಬಂಧಗಳಲ್ಲಿ. ಆದ್ದರಿಂದ ಜ್ಞಾನ-ತಂತ್ರಜ್ಞಾನ-ಆಧುನಿಕತೆಗಳು ಅಧಿಕಾರಯುತವಾಗಿ, ಯಾರಲ್ಲಿ ಈ ಜ್ಞಾನ-ತಂತ್ರಜ್ಞಾನ-ಆಧುನಿಕತೆಗಳು ಇಲ್ಲವೋ ಅವರೆಲ್ಲಾ ಪ್ರಾಚೀನ ಕಾಲದ ಅವಶೇಷಗಳಾಗಿ ಕಾಣತೊಡಗುತ್ತಾರೆ. ಇವರು 'ಬಲಿಪಶು'ಗಳು ಎಂಬ ಖಾಯಂ ಹಣೆಪಟ್ಟಿಯನ್ನು ಧರಿಸಿಕೊಂಡು 'ಆಧುನಿಕ'ರಾಗಲು ತೀವ್ರ ಹೆಣಗಾಡಬೇಕಾಗುತ್ತದೆ. ಈ ಕ್ರಿಯೆಯಲ್ಲಿ ಸೋತರೆ ಅವರೆಲ್ಲಾ 'ಅಸಮರ್ಥ'ರಾಗಿ ಬದುಕುವ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಸಾಮಾಜಿಕ ಡಾರ್ವಿನ್ನನ ಸಿದ್ಧಾಂತದ ಪ್ರಕಾರ ಅವರು ಜೀವಿಸಲು ಯೋಗ್ಯರಲ್ಲ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಹಾಗಾದರೆ ಬದುಕುವ ಹಕ್ಕಿಗೆ ಯೋಗ್ಯರು ಯಾರು? ನಾಗರೀಕ ಸಮಾಜದಲ್ಲಿ ಅಂದರೆ civil societyಯ ರೂಪವಾದ ನಗರದ ಬಡಾವಣೆಗಳಲ್ಲಿ ಜೀವಿಸುತ್ತಿರುವ ಉದ್ಯಮಪತಿಗಳು, ರಾಜಕಾರಣಿಗಳು, ನೌಕರಶಾಹಿ ವರ್ಗ ಮತ್ತು ವಿದ್ವತ್ ಜಗತ್ತಿನ ಪ್ರತಿನಿಧಿಗಳು. ಇವರಿಗೆ ಬಯ್ನರಿಯಾಗಿ ಗ್ರಾಮ ಸಮುದಾಯಗಳು ಪ್ರತಿನಿಧೀಕರಣಗೊಳ್ಳುತ್ತವೆ. ಈ ಸಮುದಾಯಗಳೇ ನಗರಗಳಿಗೆ ಬೇಕಾದ ಕಚ್ಚಾವಸ್ತುಗಳಾದ ಟಿಂಬರ್, ಸೈಜುಕಲ್ಲು, ಮರಳು, ಆಹಾರ ಪದಾರ್ಥಗಳು ಮುಂತಾದವನ್ನು ಸಾಗಿಸುವುದು. ಇಲ್ಲಿ 'ಸಮುದಾಯ' ಎನ್ನುವುದು ಸಮಾಜಶಾಸ್ತ್ರೀಯ ನೆಲೆಗಳಲ್ಲೇ ನಿರೂಪಣೆಗೊಂಡು, ರಾಜ್ಯಾಂಗ ಪ್ರಣೀತ 'ಪ್ರಜೆಗಳ' ಕಲ್ಪನೆಯು ಅಸಂಗತವಾಗುತ್ತದೆ. ಅಂದರೆ ಹಕ್ಕುಗಳನ್ನು ಅನುಭೋಗಿಸುವವರಾಗಿದ್ದು ಅದಕ್ಕೆ ಅರ್ಹತೆಯನ್ನು ಹೊಂದಿರುತ್ತಾರೆ. ಅಥವಾ ಅವರ ಜೀವನಕ್ರಮ (ಎಷ್ಟೇ ಭ್ರಷ್ಟವಿದ್ದರೂ ಸಹ) ಕಾನೂನಾತ್ಮಕವಾಗಿ ಸಮರ್ಥನೆ ಗೊಳಗಾಗುತ್ತದೆ. ಆದರೆ ಈ ನಾಗರೀಕ ಜೀವಿಸುವ ಜನ, ದಲಿತರು, ಆದಿವಾಸಿಗಳು, ಹಾಗೇನಾದರೂ ಜೀವಿಸಲು ಪ್ರಯತ್ನಪಟ್ಟರೆ ಅವರ ಪ್ರಯತ್ನಗಳು ಕಾನೂನು ಬಾಹಿರವಾಗುತ್ತವೆ. ಅಂದರೆ ಆಧುನಿಕತೆಯ ಎಲ್ಲಾ ಸೌಲತ್ತುಗಳು ಹೀಗೆ ಖಾಸಗೀ ಸೊತ್ತಾಗಿ ಬಿಡುತ್ತವೆ. ಅಲ್ಲದೆ ಇಲ್ಲಿ 'ಪ್ರಜೆ'ಯ ವ್ಯಾಖ್ಯಾನಗಳು ಎಂದೂ ಗ್ರಾಮ ಸಮುದಾಯಗಳು ಅಥವಾ ಕೊಳೆಗೇರಿಗಳ ಜನರನ್ನು ಒಳಗೊಳ್ಳದೇ, ಅವರೆಲ್ಲಾ ಅಂಚಿಗೆ ಸರಿಸಲ್ಪಟ್ಟವರೆಂದು ಸ್ಥಿರೀಕರಣಕ್ಕೊಳಗಾಗುತ್ತಾರೆ.

ಆದರೆ ಆದಿವಾಸಿ ಜನರಾಗಲೀ, ಭೂರಹಿತ ಕೃಷಿ ಕಾರ್ಮಿಕರಾಗಲೀ, ದಲಿತರಾಗಲೀ ಅಥವಾ ಗ್ರಾಮ ಪರಿಸರದಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿರುವ ಮಹಿಳಾ ಸ್ತ್ರೀಶಕ್ತಿ ಗುಂಪುಗಳಾಗಲೀ ಎಲ್ಲರೂ ಸಹ 'ಆಧುನಿಕ ಪ್ರಜೆ'ಯ ನಕಾರಾತ್ಮಕ ಪರಿಣಾಮಗಳನ್ನು ನೇರವಾಗಿ ಅನುಭವಿಸುವವರಾಗಿದ್ದಾರೆಂದೇ ನನ್ನ ನಂಬುಗೆ. ಏಕೆಂದರೆ ಇವರೆಲ್ಲರೂ ಸಹ ಬ್ರಿಟೀಷ್ ಕಾಲದಿಂದಲೇ 'State Republics' ಎನ್ನುವ ಚೌಕಟ್ಟಿಗೆ ಒಳಗಾಗಿ ವಸಾಹತುಶಾಹಿಯ ಉದ್ದೇಶಗಳಿಗೆ ಪೂರಕವಾಗಿ

ರೂಪುಗೊಂಡವರು. ಅಂದರೆ ಗ್ರಾಮ ಎಂದರೆ 'ರಾಜ್ಯಾಂಗ' ಅಥವಾ 'State' ನ ಸರಳೀಕೃತ ರೂಪ. ನಗರೀಕರಣದ ಪ್ರಕ್ರಿಯೆಗೆ ಬೇಕಾದ ಸಂಪನ್ಮೂಲಗಳನ್ನು ಒದಗಿಸುವವರು. ಇವರೆಲ್ಲ ಓರಿಯಂಟಲಿಸ್ಟ್ ಪ್ರಣಾಳಿಕೆಯ ಮುಗ್ಧ ಸಮುದಾಯಕ ಜನ. ಇಲ್ಲಿ ವ್ಯಕ್ತಿಗತ ಹಕ್ಕುಗಳೇನು ಇರುವುದಿಲ್ಲ, ಆದ್ದರಿಂದ ಇವರೆಲ್ಲ ಕರುಣೆಗೆ ಪಾತ್ರವಷ್ಟೆ ಇಂತಹ ಪ್ರತಿನಿಧೀಕರಣಗಳನ್ನು ಇಂದಿಗೂ ಸಾರ್ವತ್ರಿಕವಾಗಿ ಬಳಸುತ್ತಿರುವುದನ್ನು ಕಾಣಬಹುದು. ಆದ್ದರಿಂದ ಪ್ರಭುತ್ವ/ ರಾಜ್ಯಾಂಗದ ನೇರ ಸಾಂಸ್ಥಿಕ ರೂಪಗಳ ಪರಿಣಾಮಗಳು ಈ ಜನಗಳ ಮೇಲೆ ಆಗದೆಂದೇ ಭಾವಿಸಲಾಗಿದೆ.

ಆದರೆ 'ಆಧುನಿಕ ಪ್ರಜೆ'ಗಳು ನೇರವಾಗಿ ಪ್ರಭುತ್ವ/ ರಾಜ್ಯಾಂಗದ ಹಿಂಸೆಯನ್ನು ದಿನ ನಿತ್ಯ ಅನುಭವಿಸುವವರಾಗಿದ್ದಾರೆ. ಅಂದರೆ ಈ ಪ್ರಜೆಗಳಿಗೆ ನೇರವಾಗಿ

೧. ಅರಣ್ಯ ಇಲಾಖೆ

೨. ಪೊಲೀಸ್ ಸ್ಟೇಶನ್

೩. ತಾಲೂಕು ಕಛೇರಿ

೪. ಚುನಾವಣಾ ಸಂದರ್ಭದಲ್ಲಿ ಮತ ಚಲಾಯಿಸುವ Voters listನಲ್ಲಿರುವವರಾಗಿರುವುದು.

ಈ ಮೇಲಿನ ನಾಲ್ಕು ಅಂಗಗಳು ಪ್ರಭುತ್ವದ ನೇರ ಬಿಂಬಗಳಾಗಿದ್ದು ನಾಗರೀಕ ಪ್ರಜೆಗಳ ಹಕ್ಕುಗಳನ್ನು ಕಾಯುವವರಾಗಿದ್ದಾರೆ! ಎಂಥ ವ್ಯಂಗ್ಯ? ಈ ನಾಲ್ಕು ಸಾಂಸ್ಥಿಕ ರೂಪುಗಳಲ್ಲಿನ 'ಹಿಂಸೆ' ಎಷ್ಟು ಕ್ರೂರವಾದದ್ದೆಂಬುದನ್ನು ಮತ್ತೆ ವಿವರಿಸಬೇಕಿಲ್ಲ.

ಆದ್ದರಿಂದ ಈ 'ಪ್ರಜೆ'ಗಳ ದೈನಂದಿನ ಸಂಘರ್ಷ ಇರುವುದು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಈ ಮೇಲಿನ ನಾಲ್ಕು ಸಾಂಸ್ಥಿಕ ರೂಪಗಳು ಬಿಡದಿರುವ ಕಾರಣ ಪ್ರತಿಭಟನೆ ಅನಿವಾರ್ಯವಾಗುತ್ತದೆ. ನಿಜವಾಗಿಯು 'ಪ್ರಜೆ'ಯ ಬಗೆಗಿನ ಪ್ರಜಾಸತಾತ್ತಕ ವ್ಯಾಖ್ಯಾನಗಳು ಈ ದೈನಂದಿನ ಬದುಕಿನಿಂದಲೇ ಹೊಮ್ಮುತ್ತಿರುತ್ತವೆ ಎನ್ನುವುದು ನನ್ನ ಭಾವನೆ.

**ಬಹುರೂಪಿ ಅನನ್ಯತೆಯ ಹುಡುಕಾಟಗಳು:**

ಸ್ತ್ರೀಸಮುದಾಯವನ್ನು ಏಕರೂಪಿ ನೆಲೆಯಲ್ಲಿ ನಿರೂಪಿಸದೆ, ಈ ಸ್ತ್ರೀ ಸಮುದಾಯದ ಅಸ್ತಿತ್ವವು ಇಲ್ಲಿಯವರೆಗೆ ವಿವರಿಸಿ ಕೊಂಡಿರುವ ಪರಿಭಾಷೆಗಳಲ್ಲಿ 'ಸುಪ್ತ'ವಾಗಿದ್ದುದ್ದನ್ನು ಇನ್ನು ಮುಕ್ತವಾಗಿ ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ. ಅಂದರೆ ಇಂದು 'ಸ್ತ್ರೀ' ಅಥವಾ 'ಮಹಿಳೆ'ಯನ್ನು 'ಪುರುಷ'ನಿಗೆದುರು ನಿಲ್ಲುವ ಬಯ್ನರಿಯನ್ನಾಗಿ ಇಲ್ಲಿ ಖಂಡಿತಾ ನಿರೂಪಿಸಲಾಗದು. ಹಾಗೇ ನಿರೂಪಿಸಿದಲ್ಲಿ ಅದು 'ಪುರುಷ' ವ್ಯಾಖ್ಯಾನದ ಮುಂದುವರಿದ ಭಾಗವೇ ಆಗುತ್ತದೆ. ಅದರ ಬದಲು ಅವರ ಐಡೆಂಟಿಟಿಗಳು ಮತ್ತು ಆಸಕ್ತಿಗಳು ತಮ್ಮ ಬದುಕಿನ ಚಾರಿತ್ರಿಕ ಸನ್ನಿವೇಶಗಳಲ್ಲಿ, ಸಾಂಸ್ಕೃತಿಕ ರೂಢಿಗಳಲ್ಲಿ ಮತ್ತು ತಮ್ಮ ದೈನಂದಿನ ಪ್ರತಿರೋಧಗಳಲ್ಲಿ ರೂಪುಗೊಳ್ಳು ತ್ತಿರುತ್ತವೆ. ಅಂದರೆ ಈಗಾಗಲೇ ನಿರೂಪಿಸಿದಂತೆ ಕರ್ತೃತ್ವದ ನಿರೂಪಣೆಯೂ ಬಹುರೂಪಿ ಅಧಿಕಾರ ಕ್ಷೇತ್ರಗಳಲ್ಲಿ ನಡೆಯುತ್ತಿರುತ್ತದೆ. ಈ ಪ್ರಕ್ರಿಯೆಯು ಸಂಕೀರ್ಣ ಮತ್ತು ದ್ವಂದ್ವಾತ್ಮಕ ನೆಲೆಗಳಲ್ಲಿರುತ್ತವೆ. ಕಾರಣ ಆದಿವಾಸಿ ಮಹಿಳೆಯರು ದೊಡ್ಡ ಯೋಜನೆಗಳಿಗೆ ಪ್ರತಿರೋಧವನ್ನೊಡ್ಡುತ್ತಿರುವುದು ಕೇವಲ ಏಕರೂಪಿ ನೆಲೆಯದ್ದಾಗಿರುವುದಿಲ್ಲ, ಅದು ಆ ಕ್ಷಣದಲ್ಲೇ ಆದಿವಾಸಿಯಾಗಿ, ರೈತಳಾಗಿ, ಅರಣ್ಯದಲ್ಲಿನ ಉಪ ಉತ್ಪನ್ನಗಳ

ಸ್ತ್ರೀಸಮುದಾಯವನ್ನು ಏಕರೂಪಿ ನೆಲೆಯಲ್ಲಿ ನಿರೂಪಿಸದೆ, ಈ ಸ್ತ್ರೀ ಸಮುದಾಯದ ಅಸ್ತಿತ್ವವು ಇಲ್ಲಿಯವರೆಗೆ ವಿವರಿಸಿ ಕೊಂಡಿರುವ ಪರಿಭಾಷೆಗಳಲ್ಲಿ 'ಸುಪ್ತ' ವಾಗಿದ್ದುದ್ದನ್ನು ಇನ್ನು ಮುಕ್ತವಾಗಿ ಚರ್ಚೆಗೆ ತೆಗೆದುಕೊಳ್ಳ ಬಹುದಾಗಿದೆ. ಅಂದರೆ ಇಂದು 'ಸ್ತ್ರೀ' ಅಥವಾ 'ಮಹಿಳೆ'ಯನ್ನು 'ಪುರುಷ'ನಿಗೆದುರು ನಿಲ್ಲುವ ಬಯ್ನರಿಯನ್ನಾಗಿ ಇಲ್ಲಿ ಖಂಡಿತಾ ನಿರೂಪಿಸಲಾಗದು. ಹಾಗೇ ನಿರೂಪಿಸಿದಲ್ಲಿ ಅದು 'ಪುರುಷ' ವ್ಯಾಖ್ಯಾನದ ಮುಂದುವರಿದ ಭಾಗವೇ ಆಗುತ್ತದೆ. ಅದರ ಬದಲು ಅವರ ಐಡೆಂಟಿಟಿಗಳು ಮತ್ತು ಆಸಕ್ತಿಗಳು ತಮ್ಮ ಬದುಕಿನ ಚಾರಿತ್ರಿಕ ಸನ್ನಿವೇಶಗಳಲ್ಲಿ, ಸಾಂಸ್ಕೃತಿಕ ರೂಢಿಗಳಲ್ಲಿ ಮತ್ತು ತಮ್ಮ ದೈನಂದಿನ ಪ್ರತಿರೋಧಗಳಲ್ಲಿ ರೂಪುಗೊಳ್ಳುತ್ತಿರುತ್ತವೆ.

ಸಂಗ್ರಾಹಕಳಾಗಿ, ಸ್ತ್ರೀಯಾಗಿ, ತಾಯಿಯಾಗಿ, ಗ್ರಾಹಕಳಾಗಿ, ಬರಗಾಲ ಪರಿಹಾರ ಯೋಜನೆಯಲ್ಲಿ ಕೂಲಿಯಾಳಾಗಿ, ಸಾಲಗಾರಳಾಗಿ, ವಲಸಿಗಳಾಗಿ, ಸಾಮಾಜಿಕ ಕಾರ್ಯಕರ್ತೆಯಾಗಿ, ಹೆಂಡತಿಯಾಗಿ, ಪಂಚಾಯತಿ ಸದಸ್ಯೆಯಾಗಿ, ಚುನಾವಣೆಯಲ್ಲಿ ಮತ ಚಲಾಯಿಸುವ ಮತದಾರಳಾಗಿ....ಇನ್ನೂ ಅನೇಕ ಪಾತ್ರಗಳಲ್ಲಿ ಸ್ತ್ರೀ ತನ್ನ ಅಸ್ತಿತ್ವವನ್ನು ನಿರೂಪಿಸಿಕೊಳ್ಳುತ್ತಿದ್ದಾಳೆ. ಈ ಬಹುರೂಪಿ ನೆಲೆಗಳನ್ನು ಹಿಂಸಾತ್ಮಕವಾಗಿ ಹತ್ತಿಕ್ಕಲಾಗುತ್ತಿದೆ. ಈ ಕೌಟುಂಬಿಕ ಹಿಂಸೆಯಿಂದ ಆರಂಭವಾಗಿ, ಹೊರಗೆ ಪೊಲೀಸು ಬಂದೂಕಿನ ತನಕ ಚಾಚುತ್ತದೆ.

ಇಲ್ಲಿ ಮಹಿಳಾ ಚಳವಳಿ ಬಿಂಬಿಸಿದ ಅಥವಾ ಕಟ್ಟಿದ ಸ್ತ್ರೀ ಐಡೆಂಟಿಟಿಗಳು ಇಂದು ಮೂರು ನೆಲೆಗಳಲ್ಲಿ ಸ್ಥಿರೀಕರಣಕ್ಕೊಳಗಾಗಿವೆ. ೧. 'ನಾಗರೀಕತ್ವ' ಅಥವಾ ಸಿಟಿಜನ್‌ಶಿಪ್' ಪರಿಕಲ್ಪನೆಯು ಮಧ್ಯಮ ವರ್ಗದ ಸೆಕ್ಯುಲರ್ ವ್ಯಕ್ತಿತ್ವವಾಗಿ, ಮೇಲೆ ವಿವರಿಸಿಕೊಂಡ ಬಹುರೂಪಿ ನೆಲೆಗಳು ಅಂತಿಮ ವಾಗಿ ಮೇಲ್ಜಾತಿ, ಹಿಂದೂ ಗಂಡಸು ಪ್ರತಿನಿಧಿಸುವ ಸಮುದಾಯದಲ್ಲಿ ಲೀನವಾಗಿಬಿಡುತ್ತದೆ. ಅಲ್ಲದೆ ಪ್ರತಿರೋಧದ ಅಂಶಗಳು ನಿರಸನಗೊಳ್ಳುತ್ತವೆ. ೨. ಹೀಗೆ ಮಹಿಳೆಯನ್ನು ಮೇಲ್ಜಾತಿ, ಹಿಂದೂ ಸಮುದಾಯವನ್ನಾಗಿ ಕಟ್ಟುವುದರ ಮೂಲಕ ಮೇಲ್ಜಾತಿ ಮತ್ತು ಹಿಂದು ಸಮುದಾಯವನ್ನು ರಾಷ್ಟ್ರೀಕೃತ ನೆಲೆಯಲ್ಲಿ ಗಟ್ಟಿಗೊಳಿಸುವುದು ಅಥವಾ ಸ್ಥಿರೀಕರಿಸುವುದು ಹಾಗೂ ಅದಕ್ಕೆ ಬೇಕಾದ 'ಸಮ್ಮತಿ'ಯನ್ನು ನಾನಾ ವಿಧಗಳಲ್ಲಿ ಪಡೆದುಕೊಳ್ಳಬಹುದು.

೩. ನಾಗರೀಕತ್ವ ಅಥವಾ ನಾಗರೀಕ ಪ್ರಜೆಯ ಹಕ್ಕುಗಳ ಪರಿಕಲ್ಪನೆಯಿಂದಾಗಿ 'ಹೆಣ್ಣು-ಗಂಡು' (Hetrosexuality) ಸಂಬಂಧಗಳನ್ನು ಮೀರಿ ಅಥವಾ ಅದರ ಯಜಮಾನ್ಯವನ್ನು ಒಡೆದು 'ಲಿಂಗೀಯ ಅಲ್ಪಸಂಖ್ಯಾತ'ರೆನ್ನುವ ಭಿನ್ನ ಐಡೆಂಟಿಟಿಗಳು ಇಂದು ಒಂದಷ್ಟು ಮಾನ್ಯತೆಯನ್ನು ಪಡೆದುಕೊಳ್ಳುಲಾರಂಭಿಸಿರುವುದು, ಲೈಂಗಿಕತೆಯ ರಾಜಕಾರಣವನ್ನು ಹೆಣ್ಣಿನ ಬಲಿಪಶುತನವನ್ನು ಪ್ರಶ್ನಿಸಲಾರಂಭಿಸಿವೆ. ಅಂದರೆ ಕೋಜಾಗಳು, ಸಲಿಂಗ ಕಾಮಿಗಳು ಸಾರ್ವಜನಿಕವಾಗಿ ಪುರುಷಕೇಂದ್ರಿತ ನೈತಿಕ ಮೌಲ್ಯ ವ್ಯವಸ್ಥೆಯನ್ನು ಪ್ರಶ್ನಿಸಲಾರಂಭಿಸಿರುವುದು ಸ್ವಾಗತಾರ್ಹವಾದುದು.

ಆದ್ದರಿಂದ ಸ್ತ್ರೀ ಸಮುದಾಯ ಮೇಲಿನ ಸ್ವರೂಪಗಳನ್ನು ವಿವರಣೆಗೊಳ್ಳುವಾಗ ಯಾವ 'ಅನನ್ಯತೆ' ಅಗತ್ಯವಾಗುತ್ತದೆ. ಮತ್ತು ಆ 'ಅನನ್ಯತೆ' ಯಾವಾಗ ಚಲನಶೀಲ ಪ್ರಕ್ರಿಯೆಗೊಳಗಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ ವಿವರಿಸಿಕೊಳ್ಳುವ ಜರೂರು ಇದೆ. ಇಲ್ಲಿ ಪುರುಷ ವ್ಯಾಖ್ಯಾನಗಳೂ ಸಹ ಇಂದು ತೀವ್ರವಾದ ಸವಾಲುಗಳನ್ನು ತನ್ನೊಳಗಿನಿಂದಲೂ ಮತ್ತು ಹೊರಗಿನಿಂದಲೂ ಎದುರಿಸುವಂತಾಗಿದೆ. ಹೀಗಿರುವಲ್ಲೂ ಇಂದು ಮಹಿಳೆ, ಪುರುಷನಿಗಿಂತ ಹೆಚ್ಚಿನ ಅಂದರೆ ೨/೩ ರಷ್ಟು ದುಡಿಮೆಯಲ್ಲಿ ತೊಡಗಿದ್ದಾಳೆ. ಇದಕ್ಕೆ ತಕ್ಕ ಪ್ರತಿಫಲವನ್ನು ಆಕೆ 'ಹಣ'ದ ರೂಪದಲ್ಲೇ ಪಡೆಯಬೇಕಾಗಿದೆ. ಹೀಗೆ ತನ್ನ ದುಡಿಮೆಯನ್ನು ತನ್ನದಾಗಿಸಿಕೊಳ್ಳುವಾಗ, ಜಾತಿ, ವರ್ಗ, ಲಿಂಗ ಮತ್ತು ಲೈಂಗಿಕ ಅಲ್ಪಸಂಖ್ಯಾತರೆಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದರಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಇದರ ಮೊದಲ ಹೆಜ್ಜೆಯಾಗಿ ಕೌಟುಂಬಿಕ ನೆಲೆಯಲ್ಲೇ ಆಕೆ ತನ್ನ ದುಡಿಮೆಗೆ ತಕ್ಕ 'Salary'ಯನ್ನು ನಾಗರೀಕ ಪ್ರಜೆಯಾಗಿ ಕೇಳಲೇಬೇಕಾಗುತ್ತದೆ. ತದನಂತರದಲ್ಲಿ ತನ್ನ ಅನನ್ಯತೆಯ ಬಹುರೂಪಿ ಆಯ್ಕೆಗಳಲ್ಲಿ ತೊಡಗಬಹುದಾಗಿದೆ. ಅಂದರೆ ವಿವಾಹ, ಲೈಂಗಿಕತೆ ಮುಂತಾದವು ಸಾರ್ವಜನಿಕವಾಗಿ, ಮುಜುಗರವಿಲ್ಲದೆ ವಿಶ್ಲೇಷಣೆಗೆ ಒಳಪಟ್ಟು ಆರೋಗ್ಯ ಪೂರ್ಣ 'ಸಂವಾದ'ದಲ್ಲಿ ತೊಡಗಬೇಕಾಗುತ್ತದೆ. ಇಲ್ಲಿ ವಿಶ್ವಸ್ಥ ಪ್ರಜೆಯ ಸಾಧ್ಯತೆಗಳೂ ಇವೆ ಎಂಬುದನ್ನು ಮರೆಯುವಂತಿಲ್ಲ.

ಆದ್ದರಿಂದ ಮಾರುಕಟ್ಟೆ ಪ್ರಣೀತ 'ವ್ಯಕ್ತಿಸಾಧನೆ' ಸಾಮಾಜಿಕ ನ್ಯಾಯದ ನೆಲೆಯಲ್ಲಿ 'ಬಯ್ನರಿ'ಯನ್ನು ಮೀರಿ ಸಮುದಾಯ ಕೇಂದ್ರದತ್ತ ಚಲನೆ ಮುಖ್ಯವಾಗುತ್ತದೆ. ಪರಿಸರವು ಕೇಸರೀಕರಣಗೊಳ್ಳದೆ ಹಸಿರಾಗಿಸುವಲ್ಲಿ ನಮ್ಮ ಭವಿಷ್ಯವೂ ಹಾಗೂ ಮುಂದಿನ ಪೀಳಿಗೆಯ ಪರಿಸರವೂ ಅಡಗಿದೆ ಎಂಬುದನ್ನು ಮರೆಯುವಂತಿಲ್ಲ. □

# ಧರ್ಮಗಳ ಮೂಲ ಹುಡುಕುತ್ತಾ...

## ವಿವೇಕಾನಂದರ ವಿಚಾರಗಳು

**ಅಸ್ತಿತ್ವದಲ್ಲಿರುವ ಎಲ್ಲಾ ಧರ್ಮಗಳ ಮೂಲ ಆಶಯವೂ, ಮಾನವ-ಮಾನವರ ನಡುವೆ ಸಮಾನತೆ-ಪ್ರೀತಿ ಸೋದರತೆಗಳಂತಹ ಮಾನವೀಯ ಮೌಲ್ಯಗಳನ್ನು ಭಿತ್ತಿ ಬೆಳೆಯುವುದೇ ಆಗಿದೆ. ಆದ್ದರಿಂದಲೇ ಬಸವಣ್ಣನವರು 'ದಯವೇ ಧರ್ಮದ ಮೂಲವಯ್ಯ' ಎಂದಿದ್ದು. ಆದರೆ ಇತ್ತೀಚೆಗೆ ಮತೀಯವಾದಿಗಳು ಸೃಷ್ಟಿಸುತ್ತಿರುವ ಗೊಂದಲ ಮತ್ತು ಹುಟ್ಟುಹಾಕುತ್ತಿರುವ ಅಮಾನವೀಯ ಕೃತ್ಯಗಳಿಗೆ ವಿವೇಕಾನಂದರು ಶತಮಾನಗಳ ಹಿಂದೆಯೇ ಪರಿಹಾರ ನೀಡಿದ್ದರು. ಅವರು ಎಲ್ಲ ಧರ್ಮಗಳ ಸಾರವನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.**

ಸಂಗ್ರಹ:
ಜ.ಹೂ. ನಾರಾಯಣಸ್ವಾಮಿ

### ಕ್ರೈಸ್ತ

ಕ್ರೈಸ್ತ ಮೂಢನಂಬಿಕೆಗಳನ್ನೆಲ್ಲಾ ಮೂಲೋತ್ಪಾಟನಮಾಡಿ ವಿಜಯಿಯಾದ. ಈ ಮಹಾತ್ಮ ಪೌರೋಹಿತ್ಯ ಎಂಬ ದೌರ್ಜನ್ಯದ ಘಟಸರ್ಪವನ್ನು ನಾಶಮಾಡಿ, ಸತ್ಯವೆಂಬ ಮಾಣಿಕ್ಯವನ್ನು ಅದರ ದವಡೆಯಿಂದ ರಕ್ಷಿಸಿ ಜಗತ್ತಿಗೆ ನೀಡಿದನು. ಕ್ರೈಸ್ತಧರ್ಮ ಹರಡಿದ್ದು ಖಡ್ಗದ ಮೂಲಕ. ಅಂತಹ ಸಾಧು ಪುರುಷನ ಶಿಷ್ಯರು ಎಷ್ಟೊಂದು ಜನರನ್ನು ಕೊಲ್ಲಬೇಕಾಯಿತು! ಎಷ್ಟು ವಿಚಿತ್ರ ಇದು.

ನಾನು ಯಾವ ಧರ್ಮಕ್ಕೂ ವಿರೋಧಿಯಲ್ಲ ಎಂಬುದು ಅಸತ್ಯ. ಭರತ ಖಂಡದಲ್ಲಿರುವ ಕ್ರೈಸ್ತ ಪಾದ್ರಿಗಳನ್ನು ಕಂಡರೆ ನನಗೆ ಆಗುವುದಿಲ್ಲ ಎಂಬುದು ಅಷ್ಟೇ ಸತ್ಯ.. ಕ್ರೈಸ್ತನ ಅನುಯಾಯಿಗಳಿಗೆ ಹಿಂದೂಗಳು ಮಾಡಿರುವ ಅನ್ಯಾಯವೇನು? ಪ್ರತಿಯೊಂದು ಕ್ರೈಸ್ತ ಮಗುವಿಗೂ 'ಹಿಂದೂಗಳು ನೀಚರು, ಪಾಪಿಗಳು, ಅತಿ ಭಯಂಕರ ರಾಕ್ಷಸರು' ಎಂದು ಬೋಧಿಸುವರು. ಇಲ್ಲಿ ಮಕ್ಕಳಿಗೆ ಭಾನುವಾರ ಮಾಡುವ ಪಾಠದ ಕೆಲವು ಭಾಗ ಕ್ರೈಸ್ತರಲ್ಲದವರನ್ನೆಲ್ಲಾ ದ್ವೇಷಿಸುವಂತೆ ಮಾಡುವುದು. ಏಕೆ? ಬಾಲ್ಯದಿಂದಲೇ ಅವರು ಪಾದ್ರಿಗಳಿಗೆ ಕಾಸನ್ನು ಚಂದಾ ಕೊಡಲಿ ಎಂದು. ಸತ್ಯದೃಷ್ಟಿಯಿಂದ ಇಲ್ಲದೇ ಇದ್ದರೆ, ತಮ್ಮ ಮಕ್ಕಳ ನೈತಿಕ ದೃಷ್ಟಿಯಿಂದಲಾದರೂ ಇಂತಹ ವಿಷಯಗಳ ಪ್ರಚಾರವನ್ನು ತಡೆಯಬೇಕು. ಇಂತಹ ಮಕ್ಕಳು ಕ್ರಮೇಣ ಅತಿ ಕ್ರೂರಿಗಳಾದ ನಿರ್ದಾಕ್ಷಿಣ್ಯ ಪರರಾದ ಸ್ತ್ರೀಪುರುಷರಾಗುವುದರಲ್ಲಿ ಸಂದೇಹವೇನಿದೆ? ಹಿಂದೂ ಧರ್ಮಕ್ಕೆ ವಿರೋಧವಾಗಿ ಮದ್ರಾಸಿನಲ್ಲಿ ಪ್ರಕಟವಾದ ಪುಸ್ತಕಗಳನ್ನು ನೋಡಿ. ಯಾವನಾದರೊಬ್ಬ ಹಿಂದೂ ಕ್ರೈಸ್ತರ ಮೇಲೆ ಇಂತಹ ಒಂದು ಪಂಕ್ತಿಯನ್ನು ಬರೆದರೆ ಸಾಕು, ಪಾದ್ರಿಗಳು ಬೆಂಕಿಯನ್ನೇ ಕಾರುವರು. ಸೇಡನ್ನು ತೀರಿಸಿಕೊಳ್ಳಬೇಕು ಎನ್ನುವರು.

ಓ ಇಂಗ್ಲೀಷಿನವರು..ಅವರೆಲ್ಲಾ ನಿಜವಾಗಿ ಕಾಡು ಜನರು. ಸಹಿಸಲಸಾಧ್ಯವಾದ ಚಳಿ ಮತ್ತು ಆ ವಾತಾವರಣ ದಲ್ಲಿ ಇರುವುದಕ್ಕೆ ಅವಕಾಶವೇ ಇಲ್ಲ. ಆ ವಾತಾವರಣವೆ ಅವರನ್ನು ಅರೆನಾಗರಿಕರನ್ನಾಗಿ ಮಾಡಿರುವುದು, ಅವರು ಸುಮ್ಮನೆ ಕೊಲ್ಲುವುದನ್ನು ಆಲೋಚಿಸುತ್ತಾರೆ. ಅವರ ಧರ್ಮ ಎಲ್ಲಿ ಹೋಯಿತು? ಆ ಪಾವಿತ್ರಾತ್ಮನ ಹೆಸರನ್ನು (ಕ್ರೈಸ್ತ) ತೆಗೆದುಕೊಳ್ಳುವರು. ತಾವು ಮಾನವ ಕೋಟಿ ಯನ್ನು ಪ್ರೀತಿಸುತ್ತೇವೆ ಎನ್ನುವರು, ಕ್ರೈಸ್ತಧರ್ಮದಿಂದ ಇತರರನ್ನು ನಾಗರಿಕರಾಗಿ ಮಾಡುತ್ತೇವೆ ಎನ್ನುವರು. ಇಲ್ಲಿ ಅವರನ್ನು ನಾಗರಿಕರನ್ನಾಗಿ ಮಾಡಿರುವುದು ಅವರ ಹಸಿವು, ಅವರ ದೇವರಲ್ಲ. ಮಾನವ ಪ್ರೀತಿ ಎಂಬುದು ಬರೀ ಅವರ ಮಾತಿನಲ್ಲಿ, ಆಚರಣೆಯಲ್ಲಿ ಹಿಂಸೆ ಮತ್ತು ಪಾಪವಲ್ಲದೆ ಬೇರಿಲ್ಲ. ಸಹೋದರನೇ ನಾನು ನಿನ್ನನ್ನೇ ಪ್ರೀತಿಸುತ್ತೇನೆ ಎಂದು ಹೇಳುತ್ತಿರುವಾಗಲೇ, ಅವನ ಕೊರಳನ್ನು ಕತ್ತರಿಸುವರು. ಅವರ ಕೈಗಳು ರಕ್ತದಿಂದ ನೆನೆದು ಹೋಗಿವೆ. ಅಮೆರಿಕಾ ದೇಶೀಯರಾದ ನೀವು ಏನನ್ನು ಪೂಜಿಸುತ್ತೀರಿ? ಡಾಲರನ್ನು. ಅದನ್ನು ಸಂಗ್ರಹಿಸುವ ಭರದಲ್ಲಿ ನೀವು ನಿಮ್ಮ ಆಧ್ಯಾತ್ಮಿಕತೆಯನ್ನೇ ಮರೆಯುತ್ತೀರಿ. ನಿಮ್ಮ ದೇಶ ಒಂದು ಜಡವಾದಿಗಳ ದೇಶವಾಗುತ್ತದೆ. ನಿಮ್ಮ ಬೋಧಕರು ಮತ್ತು ನಿಮ್ಮ ಚರ್ಚುಗಳು ಕೂಡ ಪ್ರಪಂಚದ ಆಸೆಗಳಿಂದ ಕಲುಷಿತವಾಗಿವೆ. ಚರ್ಚಿನ ಹೆಂಗಸರ ಮತಭ್ರಾಂತಿ ಹೇಳತೀರದು. ಅವರು ಅಲ್ಲಿ ಪಾದ್ರಿಯ ಕೈಕೆಳಗೆ ಇರುವರು, ಅವರು ಮತ್ತು ಪಾದ್ರಿಗಳು ಒಟ್ಟಿಗೆ ಸೇರಿ ಪ್ರಪಂಚವನ್ನು ನರಕ ಸದೃಶವನ್ನಾಗಿ ಮಾಡುವರು. ಧರ್ಮವನ್ನೆಲ್ಲಾ ಹಾಳು ಮಾಡುವರು.

ಕ್ರೈಸ್ತರಿಗೆ ದೇವರು ಯಾವಾಗಲೂ ಏನನ್ನಾದರೂ ಕೊಡಬೇಕು. ಸರ್ವೇಶ್ವರನೆದುರಿಗೆ ಅವರು ಭಿಕ್ಷುಕರಂತೆ ಬರುವರು...ಈಗಿನ ಕಾಲದಲ್ಲಿ ಧರ್ಮ ಬರಿಯ ಹುಡುಗಾಟವಾಗಿದೆ, ಷೋಕಿಯಾಗಿದೆ. ಜನರು ಒಂದು ಕುರಿಮಂದೆಯಂತೆ ಚರ್ಚಿಗೆ ಹೋಗುತ್ತಾರೆ. ಯಾವ ಚರ್ಚೂ ಜನರನ್ನು ಉದ್ಧಾರ ಮಾಡಲಿಲ್ಲ. ಒಂದು ದೇವ ಸ್ಥಾನದಲ್ಲಿ ಹುಟ್ಟುವುದು ಒಳ್ಳೆಯದು. ಆದರೆ ಯಾರು ದೇವಸ್ಥಾನ ಅಥವಾ ಚರ್ಚಿನಲ್ಲೇ ಸಾಯುತ್ತಾರೋ ಅವರನ್ನು ದೇವರೇ ರಕ್ಷಿಸಬೇಕು. ಅದರಿಂದ ಪಾರಾಗಿ, ಒಳ್ಳೆಯ ಪ್ರಾರಂಭವೇನೋ ನಿಜ. ಆದರೆ ಅದನ್ನು ತ್ಯಜಿ... ಅದು ಬಾಲ್ಯಾವಸ್ಥೆ.

ಕ್ರೈಸ್ತರು ಕೂಡ ವೇದಾಂತವನ್ನು ಓದದೆ 'ನ್ಯೂ ಟೆಸ್ಟ ಮೆಂಟ'ನ್ನು ಅರ್ಥಮಾಡಿಕೊಳ್ಳಲಾರರು. ವೇದಾಂತವೇ ಎಲ್ಲ ಧರ್ಮಗಳ ತತ್ವ. ವೇದಾಂತ ತತ್ವವಿಲ್ಲದೇ ಇದ್ದರೆ ಧರ್ಮಗಳೆಲ್ಲ ಮೂಢನಂಬಿಕೆ, ವೇದಾಂತವಿದ್ದರೆ ಅವುಗಳೆಲ್ಲ ಧರ್ಮವಾಗುವುವು.

ನಮ್ಮ ಮಾನಸಿಕ ರಚನಾನಿಯಮಗಳಿಗೆ ಅನುಸಾರವಾಗಿ ಅನಂತತೆ ಎಂಬ ಭಾವವನ್ನೂ, ನಾವು ನೀಲಿಯಾಕಾಶವೋ ಅಥವಾ ಸಾಗರವೋ ಇವುಗಳ ಮೂಲಕ ಹೊಂದಿಸಿಕೊಂಡಿರುವಂತೆಯೇ, ನಾವು ಪವಿತ್ರತೆ ಎಂಬ ಭಾವವನ್ನು ಸ್ವಾಭಾವಿಕವಾಗಿ ಚರ್ಚು, ಶಿಲುಬೆ, ಮಸೀದಿಗಳೆಂಬ ಆಕಾರಗಳೊಂದಿಗೆ ಹೊಂದಿಸಿಕೊಳ್ಳುತ್ತೇವೆ...ಕೆಲವರು ತಮ್ಮ ಇಡೀ ಜೀವನವನ್ನೇ ಚರ್ಚಿನ ವಿಗ್ರಹಕ್ಕೆ ಮೀಸಲಾಗಿಟ್ಟು ಅದನ್ನು ಮೀರಿ ಬೆಳೆಯಲಾರರು. ಏಕೆಂದರೆ ಅವರಿಗೆ ಧರ್ಮವೆಂದರೆ ಕೆಲವು ಅಭಿಪ್ರಾಯಗಳಿಗೆ ತಮ್ಮ ಸಮ್ಮತಿಯನ್ನು ಕೊಡುವುದು ಮತ್ತು ತಮ್ಮ ಮತಾನುಯಾಯಿಗಳಿಗೆ ಒಳ್ಳೆಯದನ್ನು ಮಾಡುವುದು ಮಾತ್ರ.

ನಾನು ಒಂದು ವಿಷಯವನ್ನು ತಮಗೆ ತಿಳಿಸಬೇಕೆಂದಿರುವೆನು. ಮಹಮ್ಮದೀಯರಿಗೆ ಮತ್ತು ಹೆಂಗಸರಿಗೆ ಆತ್ಮವಿಲ್ಲ ಎಂದು ನೀವು ಹೇಳುವುದು ಸರಿಯಲ್ಲ. ಇದು ಕ್ರೈಸ್ತರಲ್ಲಿರುವ ಒಂದು ಹಳೆಯ ದೋಷ. ಅವರು ಆ ದೋಷವನ್ನೇ ಪ್ರೀತಿಸುತ್ತಾರೆ ಎಂದು ತೋರುವುದು. ಇದು ಮಾನವ ಜನಾಂಗದ ಸ್ವಭಾವದ ಒಂದು ದೋಷ. ಅವರಿಗೆ ಮತ್ತೊಬ್ಬರನ್ನು ಕಂಡರೆ ಆಗದೇ ಇದ್ದರೆ ಅವರ ವಿಷಯವಾಗಿ ಏನನ್ನಾದರೂ ದೋಷಾರೋಪಣೆ ಮಾಡುವರು. ಅದೂ ಅಲ್ಲದೆ ನಿಮಗೆ ಗೊತ್ತಿದೆ. ನಾನು ಮಹಮ್ಮದೀಯನಲ್ಲ ಎಂಬುದು. ಆದರೂ ನನಗೆ ಮಹಮ್ಮದೀಯರ ಧರ್ಮವನ್ನು ಚೆನ್ನಾಗಿ ತಿಳಿದುಕೊಳ್ಳುವ ಅವಕಾಶವಿತ್ತು. ಖುರಾನಿನಲ್ಲಿ ಹೆಂಗಸರಿಗೆ ಆತ್ಮವಿಲ್ಲ ಎಂದು ಒಂದು ನುಡಿಯೂ ಇಲ್ಲ. ಅದರ ಬದಲು ಅದು ಸ್ತ್ರೀಯರಿಗೆ ಆತ್ಮವಿದೆ ಎಂದು ಹೇಳುವುದು.

ಮನುಷ್ಯ ಮನುಷ್ಯರಲ್ಲಿರುವ ಸಹೋದರ ಭಾವನೆ ಗಳಿಗೆ ಈ ಹಿಂದೂ, ಕ್ರಿಶ್ಚಿಯನ್, ಮುಸಲ್ಮಾನ ಮುಂತಾದ, ಹೆಸರುಗಳು ದೊಡ್ಡ ಆತಂಕಗಳೆಂದು ನನ್ನ ಗುರು ಹೇಳುತ್ತಿದ್ದರು. ಮೊದಲು ನಾವು ಅವುಗಳನ್ನು ಮುರಿಯಲು ಪ್ರಯತ್ನಿಸಬೇಕು. ಅವು ತಮ್ಮಲ್ಲಿದ್ದ ಒಳ್ಳೆಯ ಶಕ್ತಿಯನ್ನೆಲ್ಲಾ ಕಳೆದುಕೊಂಡು ಈಗ ಕೇವಲ ನಾಶಕಾರಕ ಶಕ್ತಿಯನ್ನು ಮಾತ್ರ ಹೊಂದಿವೆ. ನಮ್ಮಲ್ಲಿ ಅತ್ಯಂತ ಉತ್ತಮರಾದವರೂ ಅದರ ಭಯಂಕರ ಪ್ರಭಾವಕ್ಕೆ ಒಳಗಾಗಿ ಪಿಶಾಚಿಗಳಂತೆ ಆಗುತ್ತೇವೆ.

### ಬುದ್ಧ

ಜನಸಾಮಾನ್ಯರಿಗೆ ಯಾವ ಜ್ಞಾನಕ್ಕೂ ಹಕ್ಕಿರಲಿಲ್ಲ. ವೇದದ ಒಂದು ಪದ ಅವನ ಕಿವಿಗೆ ಬಿದ್ದರೆ ಘೋರ ದಂಡನೆ ಅವನಿಗೆ ಕಾದಿತ್ತು. ಪುರಾತನ ಹಿಂದೂಗಳು ಕಂಡುಹಿಡಿದ ಆಧ್ಯಾತ್ಮಿಕ ಸತ್ಯಗಳನ್ನೊಳಗೊಂಡ ವೇದವನ್ನು ಪುರೋಹಿತರು ರಹಸ್ಯವಾಗಿಟ್ಟರು. ಕೊನೆಗೆ ಇದನ್ನು ಸಹಿಸಲು ಆಗದ ಒಬ್ಬನು ಕಾಣಿಸಕೊಂಡ. ಅವನಿಗೆ ಬುದ್ಧಿ ಇತ್ತು, ಶಕ್ತಿ ಇತ್ತು,

**ಪ್ರಪಂಚಕ್ಕೆ ಒಂದು ಪರಿಪೂರ್ಣವಾದ ನೀತಿಯನ್ನು ಕೊಟ್ಟವರಲ್ಲಿ ಬುದ್ಧನೇ ಮಾನವ ಕೋಟಿಯಲ್ಲಿ ಮೊದಲಿಗನು. ಅವನು ಒಳ್ಳೆಯದಕ್ಕಾಗಿ ಒಳ್ಳೆಯವನಾಗಿದ್ದರು. ಪ್ರೀತಿ ಗಾಗಿ ಪ್ರೀತಿಸುತ್ತಿದ್ದರು. ಜಾತಿಯನ್ನು ಒಪ್ಪಿಕೊಳ್ಳದ ಭರತ ಖಂಡದ ಶ್ರೇಷ್ಠ ತತ್ವಜ್ಞಾನಿಯಾದವನು ಬುದ್ಧ ನೊಬ್ಬನೇ. ಅವನ ಅನುಯಾಯಿಗಳಲ್ಲಿ ಒಬ್ಬನೂ ಕೂಡ ಈಗ ಭರತ ಖಂಡದಲ್ಲಿಲ್ಲ. ಬುದ್ಧ ವೇದಕ್ಕಾಗಲೀ ಜಾತಿಗಾಗಲೀ ಪುರೋಹಿತರಿಗಾಗಲೀ ಅಚಾರಕ್ಕಾಗಲೀ ಬಾಗಲಿಲ್ಲ. ವಿಚಾರ ನಿಮ್ಮನ್ನು ಒಯ್ಯುವವರೆಗೆ ನಿರ್ಭಯವಾಗಿ ಅದನ್ನು ಅನುಸರಿಸಿದನು, ಸತ್ಯಾನ್ವೇಷಣೆಯಲ್ಲಿ ಇಂತಹ ದಿಟ್ಟತನ ಮತ್ತು ಪ್ರಪಂಚದಲ್ಲಿ ಸರ್ವರ ಮೇಲೆಯೂ ಪ್ರೇಮ ಇದ್ದಂತಹ ಮತ್ತೊಬ್ಬ ವ್ಯಕ್ತಿಯನ್ನು ಪ್ರಪಂಚ ಮತ್ತೆಂದೂ ಕಂಡಿಲ್ಲ. ಬುದ್ಧ ಧಾರ್ಮಿಕ ಪ್ರಪಂಚದಲ್ಲಿ ವಾಷಿಂಗ್‌ಟನ್ ಇದ್ದಂತೆ.**

ವಿಶಾಲವಾದ ಆಕಾಶದಷ್ಟು ಅಸೀಮವಾಗಿತ್ತು ಅವನ ಹೃದಯ. ಜನರು ಪುರೋಹಿತರನ್ನು ಅನುಸರಿಸುತ್ತಿದ್ದುದನ್ನು ಅವನು ಕಂಡ. ಪುರೋಹಿತರು ಅಧಿಕಾರದ ಮದದಲ್ಲಿ ಮುಳುಗಿಹೋಗಿದ್ದರು. ಇದನ್ನು ಹೇಗಾದರೂ ನಿವಾರಿಸ ಬೇಕೆಂದು ಅವನು ಯತ್ನಿಸಿದ. ಯಾರ ಮೇಲೂ ಅವನಿಗೆ ಅಧಿಕಾರ ಬೇಕಿರಲಿಲ್ಲ. ಜನರ ಮಾನಸಿಕ ಮತ್ತು ಧಾರ್ಮಿಕ ಬಂಧನ ಗಳನ್ನು ಕಳಚಲು ಅವನು ಯತ್ನಿಸಿದ. ಅವನ ಹೃದಯ ವಿಶಾಲವಾಗಿತ್ತು. ನಮ್ಮಲಿಲ ಸುತ್ತಲಿರುವ ಹಲವರಿಗೆ ಹೃದಯ ಇರಬಹುದು. ನಾವೂ ಇತರರಿಗೆ ಸಹಾಯ ಮಾಡಲು ಯತ್ನಿಸಬಹುದು. ಆದರೆ ಬುದ್ಧಿ ಇಲ್ಲ. ಇತರರಿಗೆ ಹೇಗೆ ಸಹಾಯ ಮಾಡಬಹುದೋ ಅಂತಹ ಮಾರ್ಗ ಗೊತ್ತಿಲ್ಲ. ಆದರೆ ಆತ ಜೀವಿ ಗಳ ಬಂಧನವನ್ನು ಹೇಗೆ ಖಂಡಿಸಬಹುದು ಎಂಬ ಮಾರ್ಗ ವನ್ನು ಕಂಡು ಹಿಡಿದ. ಅವನು ಮಹಾಜ್ಞಾನಿ, ಅನುಭಾವಿ; ಎಲ್ಲವನ್ನೂ ಅವನು ಅನುಷ್ಠಾನಕ್ಕೆ ತಂದ. ಭೇದ ಭಾವವಿಲ್ಲದೆ ಅದನ್ನು ಎಲ್ಲರಿಗೂ ಬೋಧಿಸಿ ನಿರ್ವಾಣ ಸುಖವನ್ನು ಹೇಗೆ ಪಡೆಯಬೇಕೆಂಬುದನ್ನು ತೋರಿದ. ಅವನೇ ಬುದ್ಧ.

ಪ್ರಪಂಚಕ್ಕೆ ಒಂದು ಪರಿಪೂರ್ಣವಾದ ನೀತಿಯನ್ನು ಕೊಟ್ಟವರಲ್ಲಿ ಬುದ್ಧನೇ ಮಾನವ ಕೋಟಿಯಲ್ಲಿ ಮೊದಲಿಗನು. ಅವನು ಒಳ್ಳೆಯದಕ್ಕಾಗಿ ಒಳ್ಳೆಯವನಾಗಿದ್ದರು. ಪ್ರೀತಿ ಗಾಗಿ ಪ್ರೀತಿಸುತ್ತಿದ್ದರು. ಜಾತಿಯನ್ನು ಒಪ್ಪಿಕೊಳ್ಳದ ಭರತ ಖಂಡದ ಶ್ರೇಷ್ಠ ತತ್ವಜ್ಞಾನಿಯಾದವನು ಬುದ್ಧ ನೊಬ್ಬನೇ. ಅವನ ಅನುಯಾಯಿಗಳಲ್ಲಿ ಒಬ್ಬನೂ ಕೂಡ ಈಗ ಭರತ ಖಂಡದಲ್ಲಿಲ್ಲ.

ಬುದ್ಧ ವೇದಕ್ಕಾಗಲೀ ಜಾತಿಗಾಗಲೀ ಪುರೋಹಿತರಿಗಾಗಲೀ ಅಚಾರಕ್ಕಾಗಲೀ ಬಾಗಲಿಲ್ಲ. ವಿಚಾರ ನಿಮ್ಮನ್ನು ಒಯ್ಯುವವರೆಗೆ ನಿರ್ಭಯವಾಗಿ ಅದನ್ನು ಅನುಸರಿಸಿದನು, ಸತ್ಯಾನ್ವೇಷಣೆಯಲ್ಲಿ ಇಂತಹ ದಿಟ್ಟತನ ಮತ್ತು ಪ್ರಪಂಚದಲ್ಲಿ ಸರ್ವರ ಮೇಲೆಯೂ ಪ್ರೇಮ ಇದ್ದಂತಹ ಮತ್ತೊಬ್ಬ ವ್ಯಕ್ತಿಯನ್ನು ಪ್ರಪಂಚ ಮತ್ತೆಂದೂ ಕಂಡಿಲ್ಲ. ಬುದ್ಧ ಧಾರ್ಮಿಕ ಪ್ರಪಂಚದಲ್ಲಿ ವಾಷಿಂಗ್‌ಟನ್ ಇದ್ದಂತೆ.

ಬ್ರಾಹ್ಮಣರು ಬ್ರಹ್ಮನ ವಿಚಾರ ಚರ್ಚಿಸುತ್ತಾ ಬಂದರು.

ಬುದ್ಧ: ನೀವು ಬ್ರಹ್ಮನನ್ನು ಕಂಡಿರುವಿರಾ?

ಬ್ರಾಹ್ಮಣ: ಇಲ್ಲ

ಬುದ್ಧ: ನಿಮ್ಮ ತಂದೆ ಆತನನ್ನು ನೋಡಿದ್ದನೋ?

ಬ್ರಾಹ್ಮಣ: ಇಲ್ಲ ಅವನು ನೋಡಿರಲಿಲ್ಲ.

ಬುದ್ಧ: ನಿಮ್ಮ ತಾತ ನೋಡಿದ್ದನೋ?

ಬ್ರಾಹ್ಮಣ: ಇಲ್ಲ ಅವನೂ ನೋಡಿರುವಂತೆ ಕಾಣುವುದಿಲ್ಲ.

ಬುದ್ಧ: ನನ್ನ ಸ್ನೇಹಿತರೇ, ಯಾರನ್ನು ನೀವು, ನಿಮ್ಮ ತಂದೆ, ನಿಮ್ಮ ತಾತ ಯಾರೂ ನೋಡಿಲ್ಲವೋ, ಅವನ ವಿಚಾರ ವಾದ ಮಾಡುತ್ತಾ ಒಬ್ಬರು ಮತ್ತೊಬ್ಬರನ್ನು ಮೂದಲಿಸುತ್ತಿರುವಿರಲ್ಲ? ಎಂದನು. ಇಡಿಯ ಪ್ರಪಂಚ ವರ್ತಿಸುತ್ತಿರುವುದೇ ಹೀಗೆ.

ಉಪನಿಷತ್ತು ಕಂಡು ಹಿಡಿದವರು ರಾಜರಾಗಿದ್ದರೂ, ಅವರ ಕೈಯಲ್ಲಿ ಎಲ್ಲಾ ಆಸ್ತಿಗಳಿದ್ದರೂ, ಉಪನಿಷತ್ತಿಗೆ ಯಾವ ಪ್ರಾಪಂಚಿಕ ಬೆಂಬಲವೂ ಇರಲಿಲ್ಲ. ಹೋರಾಟ ತುಂಬ ಕಠಿಣ ವಾಗುತ್ತ ಬಂತು. ಎರಡು ಸಾವಿರ ವರ್ಷಗಳಾದ ಮೇಲೆ ಅದು ಬೌದ್ಧಧರ್ಮದಲ್ಲಿ ಪರ್ಯವಸಾನವಾಯಿತು. ರಾಜನಿಗೂ ಪುರೋಹಿತನಿಗೂ ಇದ್ದ ಭಿನ್ನಾಭಿಪ್ರಾಯದಲ್ಲಿ ಬೌದ್ಧ ಧರ್ಮದ ಬೀಜವಿದೆ. ಹೋರಾಟದಲ್ಲಿ ಧರ್ಮವೆಲ್ಲ ಅವನತಿಗೆ ಬಂತು. ಒಬ್ಬರು ಧರ್ಮವನ್ನೇ ಯಜ್ಞಮಾಡಲು ಸಿದ್ಧರಾಗಿದ್ದರು. ಮತ್ತೊಬ್ಬರು ವೇದಗಳ ಕಾಲದ ದೇವತಾದಿ ಗಳಿಗೆ ಯಜ್ಞಗಳನ್ನೇ ಮಾಡಬೇಕೆಂದಿದ್ದರು. ಬೌದ್ಧಧರ್ಮ ಜನಸಾಮಾನ್ಯರ ಶೃಂಖಲೆಯನ್ನು ಕಿತ್ತು ಒಗೆಯಿತು. ಒಂದು ಕ್ಷಣದಲ್ಲಿ ಎಲ್ಲಾ ಜಾತಿ ಕೋಮುಗಳು ಒಂದೇ ಆದವು. ಆದಕಾರಣ ಶ್ರೇಷ್ಠವಾದ ಧಾರ್ಮಿಕ ಭಾವನೆ ಇಂಡಿಯಾದಲ್ಲಿ ಇದೆ. ಆದರೆ ಅದನ್ನು ಜನರಿಗೆ ಇನ್ನೂ ಬೋಧಿಸಬೇಕಾಗಿದೆ. ಇಲ್ಲದೇ ಇದ್ದರೆ ಅದರಿಂದ ಏನೂ ಪ್ರಯೋಜನವಿಲ್ಲ.

ಬೌದ್ಧಧರ್ಮ ಆಹುತಿಯನ್ನು ಸ್ವೀಕರಿಸುವ ದೇವತೆಗಳ ಸಿಂಹಾಸನವನ್ನು ಕದಲಿಸಿ ಅವರನ್ನು ಸ್ವರ್ಗಧಾಮದಿಂದ ಉರುಳಿಸಿತ್ತು. ದೇವತೆಗಳ, ಬ್ರಹ್ಮನ ಅಥವಾ ಇಂದ್ರನ ಪದವಿಗಿಂತ, ಬುದ್ಧನಾಗುವುದು ಉತ್ತಮ ಪದವಿ. ಬ್ರಹ್ಮ ಮತ್ತು ಇಂದ್ರ-ಇವರು ಮಾನವ ದೇವನಾದ ಬುದ್ಧನ ಪದತಲದಲ್ಲಿ ಪ್ರಾರ್ಥಿಸಲು ತಮ್ಮಲ್ಲಿ ಸ್ಪರ್ಧಿಸುವರು. ಪ್ರತಿಯೊಬ್ಬ ಮಾನವ ನಿಗೂ ಬುದ್ಧನ ಸ್ಥಿತಿಯನ್ನು ಪಡೆಯುವುದಕ್ಕೆ ಅಧಿಕಾರವಿದೆ. ಈ ಜನ್ಮದಲ್ಲಿಯೇ ಎಲ್ಲರಿಗೂ ಇದಕ್ಕೆ ಅವಕಾಶವಿದೆ. ದೇವತೆಗಳ ಆಧಾರದ ಮೇಲೆ ನಿಂತ ಪುರೋಹಿತರ ಮೇಲ್ಮೆ ಮಾಯವಾಯಿತು.

( ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ) □

# ಸಂವಾದ




## ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ವಿಚಾರ ಲಹರಿ

# ಶನಿದೇವ ಮತ್ತು ಕಾಗೆ ಪುರಾಣ

**ವಿಕ್ರಮ ರಾಜನ ಕಥೆ ಭಜನೆ ಮಾಡುವವರು ದ್ರಾವಿಡರೆ ಎಂಬುದು ಗಮನೀಯವಾದುದು. ಹಿಂದೆ ಶನಿ ದೇವನ ಪೂಜಾರಿಗಳು ದ್ರಾವಿಡರೆ ಆಗಿದ್ದರು. ಆದರೆ ಈಗ ಆರ್ಯರು ಪೂಜಾರಿಗಳಾಗಿರುವುದನ್ನು ಗಮನಿಸಬಹುದು. ಶನಿದೇವನು ಹುಟ್ಟಿದ ತಕ್ಷಣ ತನ್ನ ತಂದೆಗೆ ಹಿಡಿದುಕೊಂಡು ತನ್ನ ತಂದೆಯನ್ನೂ ಬಿಡಲಿಲ್ಲ, ಅವನಿಗೂ ತುಂಬಾ ಕಾಟ ನೀಡಿದ ಎಂಬುದನ್ನು ಶನಿ ಪ್ರಭಾವದಲ್ಲಿ ಚಿತ್ರಿಸಲಾಗಿದೆ. ಕಾಗೆ ಜನವಸತಿಯ ಸುತ್ತಮುತ್ತ ವಾಸಿಸುವ ಪಕ್ಷಿ, ಇದು ಕಾಡಿನ ಮಧ್ಯ ಭಾಗದಲ್ಲಿ ವಾಸಿಸುವುದಿಲ್ಲ.**

ರಮೇಶ್ ಸಂಕ್ರಾಂತಿ

ಕರ್ನಾಟಕದ ಮುಖ್ಯಮಂತ್ರಿ ಕೃಷ್ಣರವರು ರಸ್ತೆಯ ಬದಿಯ ಅನಧಿಕೃತ ದೇವಾಲಯಗಳನ್ನು ಕೆಡವಲಾಗುತ್ತದೆ ಎಂದಿದ್ದಾರೆ. ಇವುಗಳಲ್ಲಿ ಚರ್ಚು, ಮಸೀದಿ, ದೇವಾಲಯಗಳೂ ಸೇರಿವೆ. ಕಳೆದ ೨೫-೩೦ ವರ್ಷಗಳ ಅವಧಿಯಲ್ಲಿ ಒಂದು ಅಂಕಿ-ಅಂಶದ ಪ್ರಕಾರ ಈ ದೇಶದಲ್ಲಿರುವ ಪ್ರಾರ್ಥನಾ ಮಂದಿರಗಳು ದೇಶದ ಜನತೆಗೆ ಉದ್ಯೋಗ ಒದಗಿಸಬಲ್ಲ ಕಾರ್ಖಾನೆಗಿಂತಲೂ, ದೇವಾಲಯಗಳೆ ಹೆಚ್ಚಿವೆ. ಈ ರೀತಿ ಹೆಚ್ಚಾಗುತ್ತಿರುವ ದೇವಾಲಯಗಳು ಎಷ್ಟು ಸಮಸ್ಯೆಗಳನ್ನು ಹುಟ್ಟುಹಾಕುತ್ತಿವೆ ಎಂದರೆ! ಟ್ರಾಫಿಕ್ ಜಾಮ್, ನೆಲಗಳ್ಳರಿಗೆ ಕುಮ್ಮಕ್ಕು ಮಾತ್ರವಲ್ಲದೆ ಕೋಮುಗಲಭೆಯನ್ನು ಹಚ್ಚುವ ತಾಣಗಳಾಗುತ್ತಿವೆ.

ಈ ರೀತಿ ದೇವಾಲಯಗಳಲ್ಲಿ ಸಂಕಷ್ಟ ಹರ ಗಣಪ, ಭವಹರ ಗಣಪ, ಶನಿ ಮಹಾತ್ಮ ದೇವಾಲಯಗಳೂ ಸೇರಿವೆ.

ಗಣಪತಿ ಹಬ್ಬದ ಬಗ್ಗೆ ಮಾತನಾಡುತ್ತಾ ಸ್ವತಂತ್ರ ಪೂರ್ವದಲ್ಲಿ ಬಾಲಗಂಗಾಧರನಾಥ ತಿಲಕರು ಬ್ರಿಟಿಷರ ವಿರುದ್ಧ ಜನತೆಯನ್ನು ಸಂಘಟಿಸಲು ಗಣಪತಿ ಹಬ್ಬಕ್ಕೆ ಚಾಲನೆ ನೀಡಿದ್ದರು. ಆದರೆ ಈಗ? ಈ ದೇವಾಲಯಗಳು ಬಳಕೆಯಾಗುತ್ತಿರುವ ಕಾರಣವೇ ಬೇರೆ. ಜನತೆಯನ್ನು ದಿಕ್ಕು ತಪ್ಪಿಸಲು ದೇವಾಲಯಗಳು ಮುಂದಾಗಿವೆ ಎಂದರೆ ವಿಪರ್ಯಾಸವಲ್ಲ.

ಹೊಸ ಆರ್ಥಿಕ ನೀತಿಯ ಪರಿಣಾಮದಿಂದ ಮೈಸೂರ್ ಲ್ಯಾಂಪ್ಸ್, NGEFನಂತಹ ಕೈಗಾರಿಕೆಗಳು ಮುಚ್ಚಿ, ಜನತೆ ಬೀದಿ ಪಾಲಾದರೆ ಶನಿ ಕಾಟದಿಂದ ಹೀಗಾಗಿದೆ ಎಂದು ಜನ ದೇವಾಲಯಗಳನ್ನು ಕಟ್ಟಿ ಇದ್ದ ಬದ್ದ ಹಣ ಹುಂಡಿಗೆ ಹಾಕಿ ಪೂಜೆ ವ್ರತಗಳನ್ನು ಮಾಡುತ್ತಿದ್ದಾರೆ. ಗಣಪತಿ ಹುಟ್ಟಿನ ಬಗ್ಗೆ ವೈಜ್ಞಾನಿಕವಾಗಿ ದೇವಿ ಪ್ರಸಾದ್ ಚಟ್ಟೋಪಾಧ್ಯಾಯರು ಒಂದು ಪ್ರಬಂಧ ಬರೆದಿದ್ದಾರೆ. ಗಣಪತಿಗಳು ಅದನ್ನು ನೋಡಬಹುದು. ಶನಿ ಮಹಾತ್ಮನ ಬಗ್ಗೆ ಸ್ವಲ್ಪ ನೋಡೋಣ.

ಶನಿ ಮಹಾತ್ಮ ಎಂದ ತಕ್ಷಣ ಪ್ರತಿಯೊಬ್ಬರಿಗೂ ಒಂದೊಂದು ಭಾವನೆ ಬರುತ್ತದೆ. ಆಸ್ತಿಕರಾದರೆ ಭಯ ಭಕ್ತಿ, ನಾಸ್ತಿಕರಾದರೆ ಶನಿಯ ಬಗ್ಗೆ ಅವಹೇಳನದ ಮಾತು, ಮಾರ್ಕ್ಸ್ ವಾದಿಗಳಾದರೆ ದೇವರೆ ಇಲ್ಲವೆಂಬ ತರ್ಕ.

ಹಾಗಾದರೆ ಶನಿಮಹಾತ್ಮ ಏನೆಂದು ಒಮ್ಮೆ ನೋಡೋಣ.

'ಶನಿ ಮುಂಡೇದು' ಎಂಬ ಬೈಗುಳದ ಮಾತನ್ನು ಸಂಪ್ರದಾಯಸ್ಥರು ಈಗಲೂ ಬಳಸುತ್ತಾರೆ. ಶನಿ ಎಂದರೆ ಅನಿಷ್ಟವೆಂಬ ಅರ್ಥದಲ್ಲಿ ಬಳಕೆಯಾಗುವ ಪದವೆಂದಾಯಿತು.

ಕೆಲವು ಉದಾಹರಣೆಯೊಂದಿಗೆ ಕಾಗೆಯ ಬಗ್ಗೆ ಚರ್ಚಿಸೋಣ.

ಕಾಗೆ ಮುಟ್ಟಿಸಿಕೊಂಡರೆ ಮನುಷ್ಯ ಸ್ನಾನ ಮಾಡಬೇಕು. ಕಾಗೆ ಮನೆಯೊಳಗೆ ಬಂದರೆ ಆರು ತಿಂಗಳು ಮನೆ ಖಾಲಿ ಮಾಡಬೇಕು. ಹೀಗೆ ಕಾಗೆ ತಿರಸ್ಕಾರಕ್ಕೆ ಒಳಗಾದ ಪಕ್ಷಿ, ಕೋಗಿಲೆ ಒಂಟಿಯಾಗಿ ಜೀವಿಸುವ ಮತ್ತು ಸೋಮಾರಿ ಪಕ್ಷಿ ಇದು ಸೋಮಾರಿ ಎಂದರೆ, ತನ್ನ ಮೊಟ್ಟೆಯನ್ನೂ ತಾನು ಕಾವು ಕೊಡುವುದಿಲ್ಲ ಅಂಥಹ ಸೋಮಾರಿ. ಆದರೂ ಇದು ಪುರಸ್ಕೃತ ಪಕ್ಷಿ, ಕಾಗೆ ಸಂಘ ಜೀವಿ ಒಂಟಿಯಾಗಿ ವಾಸಿಸುವ ಪಕ್ಷಿಯಲ್ಲ, ಆಹಾರವನ್ನೇನಾದರೂ ಕಂಡರೆ ತನ್ನ ಬಳಗದವರನೆಲ್ಲಾ ಕರೆದು ಕೂಡಿ ತಿಂದು ಬದುಕುವ ಪಕ್ಷಿ ಕಾಗೆ. ಆದರೂ ಇದು ತಿರಸ್ಕೃತ ಪಕ್ಷಿ.

ಎಲ್ಲಾ ಪುರಾತನ ಭಾಷೆಗಳಲ್ಲೂ ಕಾಗೆಯನ್ನು ಆಕಾರ ಬಣ್ಣ ಅದರ ಧ್ವನಿಯಿಂದಲೆ ಗುರುತಿಸುವುದನ್ನು ನಾವು ಗಮನಿಸಬಹುದು. ಇಂಗ್ಲೀಷ್‌ನಲ್ಲಿ Crow ತಮಿಳಿನಲ್ಲಿ ಕಾಕಾ ಕನ್ನಡದಲ್ಲಿ ಕಾಗೆ. ಇದು ಭಾಷೆಗಳನ್ನು ಮಾನವ ರೂಢಿಸುವ ಹೊತ್ತಿಗಾಗಲೆ ಕಾಗೆಗಳು ಮಾನವನ ಸಂಪರ್ಕಕ್ಕೆ ಬಂದಿದ್ದವು ಎಂಬುದನ್ನು ಇದು ಸೂಚಿಸುತ್ತದೆ. ಈ ರೀತಿ ಹೆಸರಿಗೂ ಗುಣ ಸ್ವರೂಪಗಳಿಗೂ ಹೋಲಿಕೆಯಾಗುವ-ತಾಳೆಯಾಗುವ ಹೆಸರಿನ ಪ್ರಾಣಿ ಪಕ್ಷಿಗಳು ಅತಿ ವಿರಳ.

ತಮಿಳಿನಲ್ಲಿ ಒಂದು ತಮಾಷೆ ಇದೆ. ಕಾಕಾ, ಕಾಕಾ ಅನ್ನುವುದರಿಂದ ಕಾಕಾ ಎಂದು ಹೆಸರು ಬಂದಿದಿಯೆ ಅಥವಾ ಕಾಕಾ, ಕಾಕಾ ಎಂದು ಹೆಸರಿಟ್ಟಿದ್ದರಿಂದ ಕಾಕಾ ಅನ್ನುತ್ತದೆಯೆ (ಕಾಕಾ ಅಂದರೆ ತಮಿಳಿನಲ್ಲಿ ಕಾಗೆ) ಇದು ಮೇಲ್ನೋಟಕ್ಕೆ ತರಲೆ ಮಾತಾಗಿ ಕಂಡರೂ, ಭಾಷೆ ರೂಪುಗೊಳ್ಳುತ್ತಿದ್ದ ಕಾಲಕ್ಕಾಗಲೆ ಕಾಗೆ ಮನುಷ್ಯನ ಅಕ್ಕಪಕ್ಕ ಸುಳಿದಾಡಿ ಮನುಷ್ಯನ ಸಂಪರ್ಕಕ್ಕೆ ಬಂದಿರಬೇಕು. ಶನಿಮಹಾತ್ಮನು ಸಹ ಪುರಾಣಗಳಲ್ಲಿ ಉಲ್ಲೇಖವಾಗಿರುವಂತೆ ಆದೀಮ ದೇವತೆಯಾಗಿರಲು ಸಾಕಷ್ಟು ಪುರಾವೆಗಳಿವೆ. ಶನಿ ಸೂರ್ಯಪುತ್ರ ಮಾನವನ ನಾಗರಿಕತೆ ಪ್ರಾರಂಭವಾದ ದಿನಗಳಲ್ಲಿ ಮನುಷ್ಯ ಕಲ್ಪಿಸಿಕೊಂಡ ದೇವತೆಗಳು ಕಣ್ಣಿಗೆ ಕಾಣಿಸುತ್ತಿದ್ದ ಪರಿಸರದ ವಸ್ತುಗಳ ಅಪಭ್ರಂಶ, ಸೂರ್ಯ, ಚಂದ್ರ, ಅಗ್ನಿ ವಾಯು, ಪರ್ವತ, ನದಿ, ಮಳೆ ಇವುಗಳೆಲ್ಲವೂ ಮನುಷ್ಯನ ಅರಿವಿಗೆ ಬಂದ ಮೊದಲ ಅದ್ಭುತಗಳು. ಇದನ್ನೇ ಮುಂದೆ ಮನುಷ್ಯ ದೇವತಾ ರೂಪಕೊಟ್ಟನೆಂದು ಈಗಾಗಲೆ ಸಾಬೀತಾಗಿದೆ. ಸೂರ್ಯಪುತ್ರನಾದ್ದರಿಂದ ಶನಿಯು ಪುರಾತನ ದೇವತೆ ಎಂಬುದು ಸಾಬೀತಾದಂತಾಯಿತು.

ಪುರಾತನ ದೇವತೆ ಮತ್ತು ಪುರಾತನ ಪಕ್ಷಿಯನ್ನು ಒಂದು ಮಾಡಿ ಹೀನಾಯವಾಗಿ ಕಾಣುವ ಸಂಸ್ಕೃತಿ ಹೇಗೆ ಯಾವಾಗ ಪ್ರಾರಂಭವಾಗಿರಬಹುದೆಂದು ಒಮ್ಮೆ ಅವಲೋಕಿಸೋಣ.

ಶನಿ ಎಂಬ ಹೆಸರಿನ ಈತನು ದಕ್ಷಿಣದ ಪ್ರಬಲ ಜನನಾಯಕನಾಗಿದ್ದಿರಬಹುದು. ಈತನು ದ್ರಾವಿಡ ಸಮುದಾಯದವ ನಾಗಿದ್ದನು ಎಂಬುದಕ್ಕೆ ಈ ತನಕ ಕಪ್ಪು ಬಣ್ಣ ಇಂಬು ಕೊಡುತ್ತದೆ. ಈತನ ಲಾಂಛನ ಕಾಗೆಯಾಗಿರುವ ಸಾಧ್ಯತೆ ಇದೆ. ಈತನು ವಲಸೆ ಬಂದ ಆರ್ಯರಿಗೆ ತುಂಬಾ ಕಾಡಿಸಿರ ಬಹುದು. ಆದ್ದರಿಂದಲೇ ಶನಿಯನ್ನು ಕಾಟಕೊಡುವ ದೇವರಾಗಿ ಚಿತ್ರಿಸಲಾಗಿದೆ. ದ್ರಾವಿಡರಲ್ಲಿ ಕಾಗೆಗೆ ಸಾಂಸ್ಕೃತಿಕ ಸ್ಥಾನ ಕೊಡಲಾಗಿದೆ.

ಕಾಗೆ ಮನೆ ಮುಂದೆ ಕಾಕಾ ಎಂದರೆ ನೆಂಟರು ಬರುತ್ತಾರೆಂಬ ನಂಬಿಕೆ. ಮನುಷ್ಯ ಸತ್ತ ಮೇಲೆ ಸ್ವರ್ಗಕ್ಕೆ ಹೋಗಬೇಕಾದರೆ ಗುಂಡಿ ಮೇಲಿಟ್ಟ ಕೂಳನ್ನು (ಆಹಾರವನ್ನು) ಕಾಗೆ ಮುಟ್ಟಬೇಕು. ಇದು ದ್ರಾವಿಡ ಸಂಪ್ರದಾಯ. ಕಾಗೆ ಗುಂಡಿಯ ಮೇಲಿಟ್ಟ ಕೂಳು (ಆಹಾರ) ಮುಟ್ಟದಿದ್ದರೆ, ಸ್ವರ್ಗಕ್ಕೆ ಹೋಗಲಿಲ್ಲವೆಂಬ ನಂಬಿಕೆ (ಕಾಗೆಯೆ ಸ್ವರ್ಗಕ್ಕೆ ಮಿಡಿಯೇಟರ್). ಗಿಳಿ, ಪಾರಿವಾಳ, ನವಿಲು, ಗುಬ್ಬಿಗಳನ್ನು ಬಿಟ್ಟು ಕಾಗೆಯೇ ಏಕೆ ಈ ಸ್ಥಾನ ಕೊಡಲಾಗಿದೆ ಎಂಬುದು ಗಮನಾರ್ಹ.

ಸತ್ತ ಮನುಷ್ಯ ತಿಥಿಯವರೆಗೂ ಕಾಗೆ ರೂಪದಲ್ಲಿ ಅಲೆಯುತ್ತಾ ಇರುತ್ತಾನೆಂದು ನಂತರ ಸ್ವರ್ಗಕ್ಕೆ ಹೋಗುತ್ತಾನೆಂಬ ನಂಬಿಕೆ. ಮನುಷ್ಯ ಸತ್ತ ಮೇಲೆ ಶವಸಂಸ್ಕಾರದ ಎರಡು ಪದ್ಧತಿಗಳಿವೆ. ಒಂದು ಹೂಳುವುದು ಇದು ದ್ರಾವಿಡ ಸಂಸ್ಕೃತಿ. ಇನ್ನೊಂದು ಆರ್ಯರದು. ಆರ್ಯರು ಹೆಣವನ್ನು ಸುಟ್ಟು ಬೂದಿಯ ಗುರುತು ಸಿಗಬಾರದೆಂದು ಹರಿಯುವ ನೀರಿನಲ್ಲಿ ಕಲಸಿ ಬಿಡುತ್ತಾರೆ. ತಮ್ಮ ಹೊಲಗಳಲ್ಲಿ ಹೆಣ ಹೂತು ಗುಂಡಿಯ ಮೇಲೆ ಹಣ್ಣು ಹೂ ಬಿಡುವ ಸಸಿ ನೆಡುವ ಪದ್ಧತಿ ದ್ರಾವಿಡರರದು. ಸತ್ತ ನಂತರವೂ ನಾಲ್ಕು ಜನರಿಗೆ ಉಪಯೋಗಕ್ಕೆ ಬರಲಿ ಮರವಾಗಿ ನೆರಳಾಗಲಿ ಎಂಬುದೆ ಇದರ ಅರ್ಥ.

**ಶನಿ ಮಹಾತ್ಮ ಎಂದ ತಕ್ಷಣ ಪ್ರತಿಯೊಬ್ಬರಿಗೂ ಒಂದೊಂದು ಭಾವನೆ ಬರುತ್ತದೆ. ಆಸ್ತಿಕರಾದರೆ ಭಯ ಭಕ್ತಿ, ನಾಸ್ತಿಕರಾದರೆ ಶನಿಯ ಬಗ್ಗೆ ಅವಹೇಳನದ ಮಾತು, ಮಾರ್ಕ್ಸ್‌ವಾದಿಗಳಾದರೆ ದೇವರೆ ಇಲ್ಲವೆಂಬ ತರ್ಕ.**

ಬಹಳ ಹಿಂದೆಯೆ ದ್ರಾವಿಡರಿಗೆ ಬೇಸಾಯ ಕರಗತವಾಗಿತ್ತು. ಆದ್ದರಿಂದಲೆ ಆರ್ಯರು ಬೇಸಾಯವನ್ನು ತಿರಸ್ಕರಿಸಿದ್ದು. ಕಾಗೆ ಬೇಸಾಯದ ಸಮಯದಲ್ಲಿ ರೈತ ಭೂಮಿ ಉಳುವೆ ಮಾಡುವಾಗ ಮಣ್ಣಿನ ಅಡಿಯಲ್ಲಿರುವ ಕಾಂಡ ಕೊರೆಯುವ ಹುಳು ಮೇಲೆ ಬರುತ್ತದೆ. ಆಗ ಕಾಗೆಗಳು ಹುಳುಗಳನ್ನು ಆಯ್ದು ತಿನ್ನುತ್ತವೆ. ದ್ರಾವಿಡರ ಆಚಾರ ವಿಚಾರ ಎಲ್ಲವನ್ನು ಹೀನಾಯವೆಂದು ಚಿತ್ರಿಸುವುದು ಆರ್ಯರ ಒಂದು ಪರಿಪಾಠ. ಶನಿಯನ್ನು ಹೀನಾಯವಾಗಿಸಲು ಆರ್ಯರು ಹೂಡಿದ ಉಪಾಯ ಈ ಕೆಳಗಿನಂತಿವೆ.

ಶನಿಯನ್ನು ನೆನಸಿಕೊಂಡರೂ ಈತ ತುಂಬಾ ಕಾಟ ಕೊಡುತ್ತಾನೆ ಎಂಬ ನಂಬಿಕೆಯ ಉಲ್ಲೇಖ ಶನಿಯ ಬಗ್ಗೆ ಚರ್ಚೆ ಮಾಡಿದರೂ ಅಪಾಯವೆಂದು ಹೇಳುವ ಸಾರವೇ ವಿಕ್ರಮ ರಾಜನ ಕಥೆಯಲ್ಲಿ ಉಲ್ಲೇಖಿಸಿರುವುದು.

ವಿಕ್ರಮ ರಾಜನ ಕಥೆ ಭಜನೆ ಮಾಡುವವರು ದ್ರಾವಿಡರೆ ಎಂಬುದು ಗಮನೀಯವಾದುದು. ಹಿಂದೆ ಶನಿ ದೇವನ ಪೂಜಾರಿಗಳು ದ್ರಾವಿಡರೆ ಆಗಿದ್ದರು. ಆದರೆ ಈಗ ಆರ್ಯರು ಪೂಜಾರಿಗಳಾಗಿರುವುದನ್ನು ಗಮನಿಸಬಹುದು. ಶನಿದೇವನು ಹುಟ್ಟಿದ ತಕ್ಷಣ ತನ್ನ ತಂದೆಗೆ ಹಿಡಿದುಕೊಂಡು ತನ್ನ ತಂದೆಯನ್ನೂ ಬಿಡಲಿಲ್ಲ, ಅವನಿಗೂ ತುಂಬಾ ಕಾಟ ನೀಡಿದ ಎಂಬುದನ್ನು ಶನಿ ಪ್ರಭಾವದಲ್ಲಿ ಚಿತ್ರಿಸಲಾಗಿದೆ. ಕಾಗೆ ಜನವಸತಿಯ ಸುತ್ತಮುತ್ತ ವಾಸಿಸುವ ಪಕ್ಷಿ, ಇದು ಕಾಡಿನ ಮಧ್ಯ ಭಾಗದಲ್ಲಿ ವಾಸಿಸುವುದಿಲ್ಲ.

ಕಾಗೆಯನ್ನು ರಾಮಾಯಣದಲ್ಲಿ ಕಾಕಾಸುರ ರಾಕ್ಷಸನಾಗಿ ಚಿತ್ರಿಸಿಲಾಗಿದೆ. ಕಾಗೆ ಮತ್ತು ಶನಿ ರಾಜನನ್ನು ಎಷ್ಟು ತಿರಸ್ಕೃತವಾಗಿ ಆರ್ಯರು ಚಿತ್ರಿಸಿದರೂ ಈಗಲೂ ಜನ ಭಕ್ತಿಯಿಂದ ಶನಿದೇವನನ್ನು ಪೂಜಿಸುತ್ತಿರುವುದನ್ನು ಕಾಣಬಹುದು. ಹಾಗಾದರೆ ಶನಿಯನ್ನು ಭಕ್ತಿಯಿಂದ ಪೂಜಿಸುವುದು ಸರಿಯೆ? ಶನಿದೇವರನ್ನು ದ್ರಾವಿಡರು ಸಂಕೇತಿವಾಗಿ ಇಟ್ಟುಕೊಳ್ಳಬಹುದು. ಆದರೆ ಭಕ್ತಿಯಿಂದ ಪೂಜಿಸುವುದು ಅತಿರೇಕದ ಪರಮಾವಧಿಯಾದೀತು?

ಹೊಸ ಆರ್ಥಿಕ ನೀತಿಯ ಪರಿಣಾಮದಿಂದ ಕಂಗೆಟ್ಟ ಜನ ತಮ್ಮ ಆರ್ಥಿಕ ಅಧಃಪತನಕ್ಕೆ ನಿಜವಾದ ಕಾರಣಗಳನ್ನು ಹುಡುಕಿಕೊಳ್ಳದೆ ನಮಗೆ ಶನಿಗ್ರಹದ ಕಾಟದಿಂದ ಈ ಕಷ್ಟ ಬಂದಿದೆ ಎಂದು ಶನಿಯನ್ನೇ ಪೂಜಿಸುತ್ತಾ ಹೆಚ್ಚು ಹೆಚ್ಚು ಶನಿದೇವರ ದೇವಾಲಯಗಳನ್ನು ಕಟ್ಟಿ ಶನಿವಾರ ಬಂತೆಂದರೆ ಶನಿದೇವಾಲಯದ ಮುಂದೆ ಸಾಲಾಗಿ ನಿಲ್ಲುವುದು ನಾವು ತೋಡಿಕೊಂಡ ಹಳ್ಳಕ್ಕೆ ನಾವೆ ಬಿದ್ದಂತೆಯೆ ಸರಿ. □

# ಕಗ್ಗೊಲೆಯ ಅಂಗಳದಲ್ಲಿ...



ಸತ್ತವರ ಬದುಕು
ಬರಖಾಸ್ತು
ಕೊಂದವರಿಗೆ ಅದು
ಕ್ರೀಮಿಕೀಟ
ಹೆಮ್ಮೆಯ ಕಿರೀಟ

ಇಲ್ಲಿ
ರಕ್ತ ಹೆಪ್ಪುಗಟ್ಟುವುದಿಲ್ಲ
ಹರಿಯುತ್ತದೆ ನೀರಾಗಿ
ಕಗ್ಗೊಲೆಯ ಕಂಡು ಮರುಕಪಟ್ಟು
ಮೌನ ಆಚರಿಸಿ ಸುಸ್ತಾದವರು
ಕುಡಿದು
ದಣಿವಾರಿಸಿಕೊಳ್ಳಲು

ನೆರೆದರು ಮಂದಿ
ಮಂದೆ ಮಂದೆ
ಅತ್ತು ಕರೆದು ಗೋಳಾಡಿದರು

(ಸತ್ತವರು ಯಾರು?
ಸಂವಿಧಾನ ಬರೆದವನ
ಮೊಮ್ಮಕ್ಕಳು)

ಭಾಷಣಗಳ ಬಿಗಿದರು
ಹೊದಿಸಿದರು ಹಾರ ತುರಾಯಿ
ಬರೆದರು ಸತ್ತವರ ಗುಂಡಿಗಳ ಮೇಲೆ
ಗಾಂಧೀವಾದದ ಶಾಸನ

ಕಗ್ಗೊಲೆಯ ಅಂಗಳದಲ್ಲಿ
ಮೌನದ ಮೇಲೆ
ಸಾಮೂಹಿಕ ಅತ್ಯಾಚಾರ
ಚೂರಿ, ಮಚ್ಚು, ತ್ರಿಶೂಲಗಳ
ಮರದ ಕೆಳಗೆ
ಶಾಂತಿಯ ಆಚರಣೆ

ಇನ್ಯಾರೋ ಓದಿದರು
ಸತ್ತವರ
ಸಾಯಿಸಿದ
ಊರುಗಳ ಪಟ್ಟಿ
ಬೆಲ್ಚಿಯಿಂದ ನಾಗಲಾಪಲ್ಲಿ.....
ಬೆಳೆಯುತ್ತಾ ಹೋಯಿತು
ಪಟ್ಟಿ
ಕರಂಚೇಡು....

ಯಾವುದೋ ಜೀವ ಕೂಗಿತ್ತೆ
ಜೋರಾಗಿ.....ಎಚ್ಚೆತ್ತಂತೆ
ಹೆಮ್ಮೆಯಿಂದ
ಬೆದರಿತು ಮಂದೆಯ ಮಂದೆ
ಶ್.....! ಉಸುರ ಬೇಡ ಆ ಹೆಸರು
ಶಾಂತಿಗೆ ಭಂಗ.....

(೨೦೦೨ ಮೇ ೨೬ ರಂದು ನಾಗಲಾಪಲ್ಲಿಯಲ್ಲಿ ದಲೀಕ ಏರ್ಪಡಿಸಿದ್ದ ಕಗ್ಗೊಲೆಯ ಅಂಗಳದಲ್ಲಿ ಒಂದು ದಿನದ ಮೌನದ ಸಂದರ್ಭ)

○ ಹುಲಿಕುಂಟೆ ಮೂರ್ತಿ

ಚಂದ್ರಭಾನ್ ಪ್ರಸಾದ್

## ದಲಿತ್ ಡೈರಿ

# ಬಿಎಸ್ಪಿ ಮುಂದಿರುವ ಆಯ್ಕೆಗಳು

**ಬಿ.**ಎಸ್ಪಿ ಇನ್ನೂ ಪಾಠ ಕಲಿತಿಲ್ಲ. ೧೯೯೩ರ ವಿಧಾನಸಭೆ ಚುನಾವಣೆಯಲ್ಲಿ ಬಿಎಸ್ಪಿ ಮುಲಾಯಂಸಿಂಗ್ ಯಾದವ್ ರ ಸಮಾಜವಾದಿ ಪಕ್ಷದ ಜೊತೆ ಮೈತ್ರಿಗೆ ಮುಂದಾದ ಮರುದಿನವೇ ಅದು ಎಚ್ಚೆತ್ತುಕೊಂಡಿತ್ತು. ಹಿಂದುಳಿದ ವರ್ಗಗಳು ದಲಿತರೊಂದಿಗೆ ಮತ್ತು ದಲಿತ ನಾಯಕತ್ವದಲ್ಲಿ ಒಂದಾಗುವುದಿಲ್ಲ ಎಂಬ ಸತ್ಯ ಗೊತ್ತಾದ ಮೇಲೆ ಅದು ಸಮಾಜವಾದಿ ಪಕ್ಷದ ಸಖ್ಯ ತೊರೆಯಿತು. ಬಿಎಸ್ಪಿಯ ಪ್ರಮುಖ ಗುರಿಗಳಲ್ಲೊಂದಾದ 'ಬಹುಜನ ಸಮಾಜವಾದ' ಮುಗ್ಗರಿಸಿ ಬಿತ್ತು. ಎಸ್ಪಿ-ಬಿಎಸ್ಪಿ ನಡುವಿನ ಮೈತ್ರಿ ಮುರಿದು ಬಿದ್ದಿರುವುದರಿಂದ ತಿಳಿದುಬಂದ ಒಂದು ಸತ್ಯವೆಂದರೆ, ದಲಿತರು ಮತ್ತು ಹಿಂದುಳಿದವರು ಅಧಿಕಾರ ಹಂಚಿಕೆಯಲ್ಲೂ ಒಂದಾಗುವುದಿಲ್ಲ ಎಂಬುದು. ಈ ಸತ್ಯ ಗೊತ್ತಿದ್ದೂ ಬಿಎಸ್ಪಿ ಎಸ್ಪಿಯೊಂದಿಗೆ ಚುನಾವಣಾ ಮೈತ್ರಿಗೆ ಆತುರದ ಹೆಜ್ಜೆ ಇರಿಸಿದ್ದೇಕೆ ಎನ್ನುವುದಕ್ಕೆ ಇನ್ನೂ ಉತ್ತರ ಸಿಕ್ಕಿಲ್ಲ.

ವಿಚಾರದಲ್ಲೂ ಅಷ್ಟೆ. ಒಂದು ವೇಳೆ ಛತ್ತೀಸಗಢ, ರಾಜಸ್ಥಾನ್, ಮಧ್ಯಪ್ರದೇಶ ಮತ್ತು ದೆಹಲಿಯಲ್ಲಿ ಅಥವಾ ಯಾವುದೇ ನೆರ ರಾಜ್ಯಗಳಲ್ಲಿ ಅತಂತ್ರ ವಿಧಾನಸಭೆ ರಚನೆಯಾಗಿದ್ದರೆ ಪಶು ಸಂಗೋಪನೆ ಖಾತೆಗೋಸ್ಕರವಾದರೂ ಬಿಎಸ್ಪಿ ಸರ್ಕಾರ ಸೇರಲು ಹಿಂದೇಟು ಹಾಕುತ್ತಿರಲಿಲ್ಲ.

ಬಿಎಸ್ಪಿ ಮುಂದಿರುವ ಸಂದಿಗ್ಧತೆ ಎಂದರೆ ಬರುವ ಲೋಕಸಭೆ ಚುನಾವಣೆಯಲ್ಲಿ ಯಾರೊಂದಿಗೆ ಕೈ ಮಿಲಾಯಿಸುವುದು ಎಂಬುದರ ಕುರಿತು. ಮಾಯಾವತಿ ಮುಂದಿರುವ ದಾರಿಗಳಲ್ಲಿ ಕಾಂಗ್ರೆಸ್, ಬಿಜೆಪಿ, ಅದು ಬಿಟ್ಟರೆ ತೃತೀಯರಂಗ. ತೃತೀಯರಂಗ ಇನ್ನೂ ಆಕಾಶದಲ್ಲಿದೆ. ಒಟ್ಟಿನಲ್ಲಿ ಮಾಯಾವತಿಯವರಿಗೆ ಬೇಕಾಗಿರುವುದು ಅಧಿಕಾರ ರಚನೆಯ ಮೈತ್ರಿ ಕಸರತ್ತು. ಅದು ಕೇಂದ್ರದಲ್ಲಿಯೇ ಆಗಿರಲಿ, ರಾಜ್ಯಮಟ್ಟದಲ್ಲಿಯೇ ಆಗಿರಲಿ ಅಧಿಕಾರ ಸಿಕ್ಕರೆ ರಾಜಕೀಯ ಮೈತ್ರಿಗೆ ಅವರು ಸಿದ್ಧ. ಒಳ ತಿರುಳು ಏನೆಂದರೆ ಬಿಎಸ್ಪಿ ಕಾಂಗ್ರೆಸ್ ಅಧಿಕಾರದ ಹಸಿವನ್ನೂ ಮೀರಿಸಿದೆ. ಇದು ದುರಂತ. ಕಾಂಗ್ರೆಸ್‌ನೊಂದಿಗೆ ಮೈತ್ರಿ ಏರ್ಪಟ್ಟರೂ ಅದು ಯಾವುದೇ ಪರಸ್ಪರ ಮಾತುಕತೆ ಇಲ್ಲದೆ ಅಧಿಕಾರ ಹಂಚಿಕೆಗೆ ಮುಂದಾಗುವುದಿಲ್ಲ. ಹಾಗಿದ್ದರೆ ಕಾಂಗ್ರೆಸ್‌ನಲ್ಲಿರುವ ಎಷ್ಟೋ ಜನ ಹಿರಿಯ ಮುಖಂಡರು ಕೇವಲ ಸಚಿವ ಸ್ಥಾನಗಳಿಗೆ ಸೀಮಿತರಾಗಿರುತ್ತಿರಲಿಲ್ಲ. ಸಚಿವರಾಗಿದ್ದರೂ ದಲಿತ ಜನಾಂಗದ ರಕ್ಷಣೆ, ಬೆಳವಣಿಗೆಗೆ ಯಾವ ಬಗೆಯ ಕೊಡುಗೆ ನೀಡಿದ್ದಾರೆನ್ನುವುದೂ ಒರೆಗೆ ಹಚ್ಚುವ ವಿಚಾರ.

> **ಬಿಎಸ್ಪಿ ತವರೂರು ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ಶಕ್ತಿ ಅಷ್ಟಕ್ಕಷ್ಟೆ. ಬರುವ ಲೋಕಸಭಾ ಚುನಾವಣೆಯಲ್ಲಿ ಅದು ಬಿಎಸ್ಪಿಯನ್ನು ನೆಚ್ಚಿಕೊಂಡಿದೆ. ಆದರೆ, ಬ್ರಾಹ್ಮಣ ಕೇಂದ್ರಿತ ಕಾಂಗ್ರೆಸ್ ಮೈತ್ರಿ ವಿಚಾರದಲ್ಲಿ ಬಿಎಸ್ಪಿಯ ಪ್ರಾಬಲ್ಯ ಮರೆಯುವಂತಿಲ್ಲ. ಅಧಿಕಾರದ ಸವಿಯುಂಡ ಬಿಎಸ್ಪಿ ನಾಯಕಿ ಮಾಯಾವತಿಯವರ ಮುಂದೆ ಇರುವ ಆಯ್ಕೆಗಳು ಒಂದಲ್ಲ ಮೂರು. ಕಾಂಗ್ರೆಸ್, ಬಿಜೆಪಿ ಹಾಗೂ ಆಕಾಶದಲ್ಲಿರುವ ತೃತೀಯ ರಂಗ. ಯಾವುದಕ್ಕೂ ಮಾಯಾವತಿ ಸಾವಿರ ಬಾರಿ ಯೋಚಿಸುವುದೊಳಿತು.**

ದುರಂತ ಎಂದರೆ, ಅದೇ ಬಿಎಸ್ಪಿ ಬಿಜೆಪಿಯ ಬೆಂಬಲದಿಂದ ಅಧಿಕಾರ ಹಿಡಿಯಿತು. ಮತ್ತು ಸತತ ೨ ಬಾರಿ ಬಿಜೆಪಿಯೊಂದಿಗೆ ಮೈತ್ರಿಯನ್ನೂ ಮಾಡಿಕೊಂಡಿತು. ಮೂರೂ ಸಂದರ್ಭಗಳಲ್ಲಿ ದಲಿತ ನಾಯಕಿ ಮಾಯಾವತಿ ಬ್ರಾಹ್ಮಣ-ಬನಿಯಾ ಹಿಡಿತದ ಬಿಜೆಪಿ ಬೆಂಬಲದಿಂದ ಮುಖ್ಯಮಂತ್ರಿಯಾಗಿ ವಿರಾಜಮಾನರಾದರು.

ಈ ಮೈತ್ರಿ ಬ್ರಾಹ್ಮಣ- ದಲಿತ ಮೈತ್ರಿಯೇ ಹೊರತು ಮತ್ತೇನೂ ಅಲ್ಲ. ಸದ್ಯ, ಬಿಎಸ್ಪಿ ಬಿಜೆಪಿಯ ಸಖ್ಯವನ್ನು ತೊರೆದು ಒಂಟಿಯಾಗಿ ನಿಂತಿದೆ. ಹೇಗೆ ಮಾಯಾವತಿ ಮತ್ತೆ ನಾಲ್ಕನೆ ಬಾರಿಗೆ ಮುಖ್ಯಮಂತ್ರಿಯಾಗುತ್ತಾರೋ ನೋಡಬೇಕು. ಅಥವಾ ಯಾವ ರಾಜಕೀಯ ಗುಂಪಿನೊಂದಿಗೆ ಗುರುತಿಸಿಕೊಂಡು ಕೇಂದ್ರದಲ್ಲಿ ಅಧಿಕಾರ ಸವಿಯುತ್ತಾರೋ ಎನ್ನುವುದು ಮುಖ್ಯ ವಿಚಾರ.

ಬಿಎಸ್ಪಿಯ ತವರೂರು ಎಂದೇ ಹೇಳಲಾಗುವ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಹೇಳಿಕೊಳ್ಳುವಂಥ ಅಸ್ತಿತ್ವ ಇಲ್ಲ. ಅದು ಬಿಟ್ಟರೆ ಎರಡೇ ಎರಡು ರಾಜಕೀಯ ಘಟಕಗಳು ಪ್ರಬಲವಾಗಿವೆ. ಒಂದು ಬಿಜೆಪಿ, ಇನ್ನೊಂದು ಸಮಾಜವಾದಿ ಪಕ್ಷ. ಒಂದು ವೇಳೆ ಮಾಯಾವತಿ ಮತ್ತೆ ಮುಖ್ಯಮಂತ್ರಿಯಾಗುವುದಾದರೆ ಅದು ಬಿಜೆಪಿ ಅಥವಾ ಸಮಾಜವಾದಿ ಪಕ್ಷದ ಬೆಂಬಲದಿಂದ ಮಾತ್ರವೇ ಹೊರತು ಬೇರೆ ದಾರಿ ಇಲ್ಲ. ದುರಂತ ಎಂದರೆ, ಈಗಲಾದರೂ ಆಲಸ್ಯದ ದಲಿತ ಮನಸ್ಸು ತನ್ನ ಲೆಕ್ಕಾಚಾರ ಮಾಡಲಿ. ಕಾಂಗ್ರೆಸ್‌ನೊಂದಿಗೆ ಬಿಎಸ್ಪಿ ಹೆಜ್ಜೆ ಹಾಕುವುದಾದರೆ ಬಿಎಸ್ಪಿಗೆ ಕೊಂಚ ಮಟ್ಟಿನ 'ಜಾತ್ಯತೀತ' ಮಾರ್ಗ ಇದೆ ಎಂದೇ ಅರ್ಥ. ಅದೂ ಕೂಡ ಬ್ರಾಹ್ಮಣ ವಿಚಾರದಲ್ಲಿ ಅದು ಷರತ್ತು ಹಾಕಿಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಬಿಜೆಪಿಗಿಂತ ಹೆಚ್ಚಿನ ಬ್ರಾಹ್ಮಣ ಕೇಂದ್ರಿತ ಪಕ್ಷ. ಆದರೆ, ಬಿಎಸ್ಪಿ ವಿಚಾರದಲ್ಲಿ ಕಾಂಗ್ರೆಸ್ ತನ್ನ ವೈಶಾಲ್ಯತೆ ತೋರಬೇಕಷ್ಟೇ. ಕಾಂಗ್ರೆಸ್ ಬಿಎಸ್ಪಿ ಸರಿಯಾದ ಮತ್ತು ಸಮರ್ಥ ಮೈತ್ರಿ ಪಕ್ಷ. ಅಧಿಕಾರ ಹಂಚಿಕೆ ಕಾಂಗ್ರೆಸ್ ಹಾಕಿದ ಗೆರೆ ದಾಟಲು ದಲಿತ ನಾಯಕರೂ ಸಿದ್ಧರಿಲ್ಲ. ದುರಂತ ಎಂದರೆ ಕಾಂಗ್ರೆಸ್‌ನ ದಲಿತ ಮುಖಂಡರಿಗೆ ಅಧಿಕಾರ ಹಂಚುವ ವಿಷಯ ಬಂದಾಗ ಮಾತ್ರ ಯಾವ ಮಾತುಕತೆನೂ ಇಲ್ಲ. ಇದೇ ಕಾಂಗ್ರೆಸ್‌ನ ಅಂತಸತ್ವ. ಅದು ಹಾಕಿದ ಕೆಟ್ಟ ಮಾರ್ಗವನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಕೂಡ ಅನುಸರಿಸುತ್ತಿದೆ.

ಒಟ್ಟಾರೆ ಸ್ಥಿತಿಗತಿಗನುಸಾರ ಬಿಎಸ್ಪಿ ತನ್ನ ನಿಲುವು ಬದಲಿಸಿಕೊಂಡಿದೆ. ಮಾತುಕತೆ ನಡೆಸಲು ತುದಿಗಾಲ ಮೇಲೆ ನಿಂತಿದೆ. ಅದು ಕೇಂದ್ರದಲ್ಲಿ ಸರ್ಕಾರ ರಚನೆ ಮಾಡುವಲ್ಲಿ ದೊಡ್ಡ ಪಕ್ಷಗಳಿಗೆ ಅನೇಕ ಷರತ್ತುಗಳನ್ನಿಡುವ ಮುಖಾಂತರ ಹೆಚ್ಚಿನ ತಲೆ ಬಿಸಿ ಮಾಡಿದೆ. ಬಿಎಸ್ಪಿ ಇಲ್ಲದೆ ಬಿಜೆಪಿ ಅಧಿಕಾರ ಅಸಾಧ್ಯ ಎಂಬ ಸತ್ಯ ಅರಿತಿರುವ ಕಾಂಗ್ರೆಸ್ ಈಗ ತನ್ನ ಬಾಗಿಲು ತೆರೆದಿಟ್ಟಿದೆ. ಛತ್ತೀಸಗಢ, ಮಧ್ಯಪ್ರದೇಶದಲ್ಲಿ ಈಗಾಗಲೇ ಬಿಎಸ್ಪಿಯೊಂದಿಗೆ ಕೈ ಜೋಡಿಸಲು ಕಾಂಗ್ರೆಸ್ ಸಿದ್ಧವಾಗಿದೆ.

ಉತ್ತರಪ್ರದೇಶದ ಮಟ್ಟಿಗೆ ಹೀಗೆ ಅನೇಕ ಸೆಮಿನಾರುಗಳು ಆರಂಭವಾಗಿವೆ. ದಲಿತರು ಕಾಂಗ್ರೆಸ್ ಬೆನ್ನಿಗೆ ಬೀಳುವುದಿಲ್ಲ ಎಂದು ಬಿಎಸ್ಪಿ ಹೇಳುತ್ತಿದೆ. ಮುಸ್ಲಿಮರು, ದಲಿತರು, ಬ್ರಾಹ್ಮಣರು ಇಲ್ಲದೆ ಕಾಂಗ್ರೆಸ್ ಕಷ್ಟ ಎಂಬುದು ಬಿಎಸ್ಪಿ ಲೆಕ್ಕಾಚಾರ. ಬಿಎಸ್ಪಿ ಈಗಲಾದರೂ ತನ್ನ ಸೈದ್ಧಾಂತಿಕ ಸೂತ್ರಗಳಲ್ಲಿ ಹೊಸತನ್ನು ತಂದರೆ ಒಳ್ಳೆಯದು.

'ನಾನು ದಲಿತೆ, ನನ್ನ ಬೆನ್ನಿಗೆ ದಲಿತರ ವಿಶಾಲ ಬೆಂಬಲ ಇದೆ. ಅವರೇ ನನ್ನ ಮುಖ್ಯ ಸಾಮಾಜಿಕ ಮಾನಸಿಕ ಸ್ಥೈರ್ಯ' ಎಂದು ಮಾಯಾವತಿ ತನ್ನಷ್ಟಕ್ಕೆ ತಾನು ಹೇಳಿಕೊಳ್ಳುತ್ತಿದ್ದಾರೆ. ಮಾಯಾವತಿಯವರು ಮೇಲಿನ ಮಾತನ್ನು ಕೈಬಿಟ್ಟು ವಾಸ್ತವತೆಗೆ ಬರಬೇಕು. ದಲಿತರು-ಹಿಂದುಳಿದವರು ಒಂದಾಗದ ಹೊರತು ತಮ್ಮ ಆಶಯ ಈಡೇರದು. ದಲಿತರಿಗೆ ಯಾವುದೇ ಜನವರ್ಗಗಳು ಸಹಜ ಮೈತ್ರಿಯಲ್ಲ. ಅದು ಯಾವಾಗಲೂ ಸಹಜ ವೈರುಧ್ಯಗಳೊಂದಿಗೆ ಬಾಳಬೇಕು. ಹಿಂದುಳಿದವರು ಮತ್ತು

ಅನುವಾದ:
ಲಕ್ಷ್ಮಣ ಹೂಗಾರ್

ದ್ವಿಜರು ದಲಿತರ ತೊಡರು. ಬ್ರಾಹ್ಮಣರ ನಾಯಕತ್ವದ ಮುಳುಗುವ ಹಡಗಿನಲ್ಲಿ ದ್ವಿಜರು ಕುಳಿತ್ತಿದ್ದಾರೆ. ಅವರು ಅವರ ಉಳಿಗಾಲಕ್ಕೆ ಹೋರಾಡುತ್ತಿದ್ದರೆ, ದಲಿತರೊಂದಿಗೆ ಅಧಿಕಾರ ಹಂಚಿಕೊಳ್ಳಲು ಅಳುಕಿದೆ. ದಲಿತರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಸಾಂಘಿಕವಾಗಿ ಮುಂದೆ ಬರಲು ಹಾತೊರೆಯುತ್ತಿದ್ದರೆ, ಹಿಂದುಳಿದವರು ಈ ಗೆರೆಯನ್ನು ದಾಟಿ ಹೋಗಿಯಾಗಿದೆ. ಈಗ ಅವರಿಗೆ ಬೇಕಿರುವುದು ಅಧಿಕಾರ. ಅವರು ಆಳುವವರಾಗುವ ದಿಸೆಯತ್ತ ಹೋರಾಟ ನಡೆಸಿದ್ದಾರೆ. ದ್ವಿಜರು ಅಧಿಕಾರ ನಡೆಸುತ್ತಿರುವಂತೆ ತಾವೂ ದಿಢೀರನೆ ಅಧಿಕಾರ ನಡೆಸುವ ಆತುರತೆಯಲ್ಲಿ ಇದ್ದಾರೆ.

ಹೀಗಿರುವಾಗ ಬಿಜೆಪಿಯಾಗಲಿ ಅಥವಾ ಕಾಂಗ್ರೆಸ್ಸಾಗಲಿ ಮಾಯಾವತಿಯನ್ನು ಮತ್ತೆ ಮುಖ್ಯಮಂತ್ರಿ ಮಾಡುತ್ತಾರೆಂಬ ಕನಸಿದೆಯಲ್ಲ ಅದು ಶುದ್ಧ ಭ್ರಮೆ. ರಿಮೋಟ್‌ನಂತೆ ಮುಖ್ಯಮಂತ್ರಿಯಾಗುವುದು ಬೇಡ. ಇತಿಹಾಸದ ಪಾಠದಿಂದಲಾದರೂ ಬಿಎಸ್ಪಿ ತನ್ನ 'ದಲಿತ ಪ್ರಣಾಳಿಕೆ'ಯಡಿ ವಿಶಾಲ ತಳಹದಿಯಡಿ ಕೆಲಸ ಆರಂಭಿಸಬೇಕು. ಯಾವುದೇ ರಾಜ ಅಥವಾ ಕೆಲ ಸಚಿವ ಸ್ಥಾನಗಳಿಗೋಸ್ಕರ ದಲಿತರ ಹೆಸರಿಗೆ ಮಸಿ ಬಳಿಯುವ ಕೆಲಸ ಮಾಡಬಾರದು.



# ಸುಳ್ಳಾದ ಚುನಾವಣಾ ಸಮೀಕ್ಷೆ

ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢಗಳನ್ನು ಕಳೆದುಕೊಂಡಿತು. ಚುನಾವಣಾತ್ತ್ವವು ಎಲ್ಲ ಸಮೀಕ್ಷೆಗಳು ತಲೆಕೆಳಗಾದವು. ಮಧ್ಯಪ್ರದೇಶದಲ್ಲಂತೂ ಹೀನಾಯ ಸೋಲು ಕಂಡಿತು. ಬಹುತೇಕ ಸಮೀಕ್ಷೆಗಳು ೩/೧ ಬಹುಮತ ಕಾಂಗ್ರೆಸ್‌ಗೆ ದೊರೆಯಲಿದೆ ಎಂದಿದ್ದವು. ನನಗೆ ರಾಜಸ್ಥಾನ್, ಛತ್ತೀಸಗಢದ ಚುನಾವಣೆ ಫಲಿತಾಂಶದ ಬಗ್ಗೆ ಶಂಕೆ ಇತ್ತು. ರಾಜಸ್ಥಾನದ ಜಾಟರು ಶೇ. ೧೨ರಷ್ಟಿದ್ದಾರೆ. ರಾಜ್ಯದ ಅತಿದೊಡ್ಡ ಎರಡನೇ ಜಾತಿ ಅದು. ಅದು ಈ ಚುನಾವಣೆಯಲ್ಲಿ ಸಂಪೂರ್ಣವಾಗಿ ಬಿಜೆಪಿಯತ್ತ ವಾಲಿದ್ದರಿಂದಾಗಿ ೭೫ ಸ್ಥಾನಗಳು ಕಾಂಗ್ರೆಸ್ ಕೈತಪ್ಪಿದವು.

ಇಲ್ಲಿ ಜಾಟ್‌ರು ಮತ್ತು ರಜಪೂತರು ಎಂದೂ ಒಟ್ಟಾಗಿ ಹೋಗಿಲ್ಲ, ಆದರೆ ರಜಪೂತರು ಬಿಜೆಪಿ ಕೈಬಿಡಲು ಸಿದ್ಧರಿಲ್ಲ. ಗಮನಾರ್ಹವಾದಂತಹ ಇಂತಹ ಬೆಳವಣಿಗೆಯೊಂದು ಸಾಮಾನ್ಯ ಹಿಂದುಳಿದ ವರ್ಗವನ್ನು ನಿಯಂತ್ರಣ ಮಾಡಲಿವೆ. 'ಅಶೋಕ್ ಗೆಹ್ಲೋಟ್ ಒಬ್ಬ ಹಿಂದುಳಿದವ. ಒಂದು ವೇಳೆ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿದ್ದರೆ ಕಳೆದ ದಶಕಗಳ ಹಿಂದುಳಿದ ವರ್ಗಗಳ ರಾಜಕೀಯ ಆಡಳಿತ ಸಂರಚನೆಯ ರಜಪೂತರು ಮತ್ತು ಜಾಟ್‌ರ ಹಿಡಿತ ಕೊನೆಗಾಣಿಸಲು ಸಾಧ್ಯ' ಆಗುತ್ತಿತ್ತು. ಹಾಗಾಗಲಿಲ್ಲ. ವಸುಂಧರರಾಜೇ ಸಿಂಧಿಯಾ ಎರಡೂ ರೀತಿಯಲ್ಲಿ ರಾಜಕೀಯ ಲೆಕ್ಕಾಚಾರ ತನ್ನದಾಗಿಸಿಕೊಂಡರು. ರಜಪೂತಳಾದ ಸಿಂಧಿಯಾ ಜಾಟ್ ಜಾತಿಯವನೊಂದಿಗೆ ಮದುವೆ ಆಗಿದ್ದರಿಂದ ಚುನಾವಣೆ ಲೆಕ್ಕಾಚಾರ ಏನಾಯಿತು ಎನ್ನುವುದು ಗೊತ್ತಿದೆ. ರಜಪೂತರು ಮತ್ತು ಜಾಟ್‌ರು ಒಂದಾದರು.

ಶೇ. ೧೦ರಷ್ಟಿರುವ ಪರಿಶಿಷ್ಟರು ಬಿಎಸ್ಪಿ ಕಡೆ ವಾಲಿದರು. ಬುಡಕಟ್ಟು ಅಲ್ಲದ ಬಹುತೇಕ ಜನ ಕಾಂಗ್ರೆಸ್ ವಿರುದ್ಧವಾಗಿ ಮತ ಚಲಾಯಿಸುವ ಸಂದರ್ಭದಲ್ಲಿಯೇ ಜೋಗಿಗೆ ಜುದೇವ್ ಟೇಪ್ ಹಗರಣ ಹೊಸ ಆಶಾಕಿರಣ ಎಂದೂ ಭಾವಿಸಲಾಗಿತ್ತು. ಈ ಹಗರಣ ಜಾತಿ ಒಳಸುಳಿಗಳಿಗೆ ಸಿಲುಕಿ ಜೋಗಿ ಶವಪೆಟ್ಟಿಗೆ ಅಂತಿಮ ಮೊಳೆಯಾಗಿ ಪರಿಣಮಿಸಿತು. ಜುದೇವ್ ಟೇಪ್ ಹಗರಣದ ಹಿಂದೆ ಜೋಗಿ ಕೈವಾಡ ಇದೆ ಎಂಬ ಪ್ರಚಾರ ಹಬ್ಬಿಸಿ, ಖಳನಾಯಕನಾಗಬೇಕಿದ್ದ ಕೇಂದ್ರ ಸಚಿವ ಜುದೇವ್ ಬಲಿಪಶು ಎನ್ನುವಂತೆ ಭಾವಿಸಿ ಪ್ರಚಾರಕ್ಕೆಳೆತರಲಾಯಿತು. ಕೊನೆಯಲ್ಲಿ ಫಲಿತಾಂಶ ಬಿಜೆಪಿ ಪರ ಇತ್ತು. ಇದು ಅಲ್ಲಿನ ಜಾತಿ ಆಧಾರದ ರಾಜಕೀಯ ಏಳು-ಬೀಳು.

ಒಂದಾಗುಳಿಯಲು ನಿರ್ಧರಿಸಿದರು. ಜಾಟ್-ರಜಪೂತರ ಸಮ್ಮಿಲನಕ್ಕೆ ಬ್ರಾಹ್ಮಣ-ಬನಿಯಾರ ಬೆಂಬಲ ಬೇರೆ. ನನ್ನ ಪ್ರಕಾರ, ರಾಜಸ್ಥಾನ ಬಿಜೆಪಿ ದಾರಿಯಲ್ಲಿ ಸಾಗಿದೆ,. ಕೊನೆ ಪಕ್ಷ ಎಕ್ಸಿಟ್ Polls ಕೂಡ ರಾಜಸ್ಥಾನದಲ್ಲಿ ಕಾಂಗ್ರೆಸ್ ಅಥವಾ ಅತಂತ್ರ ವಿಧಾನಸಭೆ ಎಂದೂ ಹೇಳಲಿಲ್ಲ.

ಹಿಂದಿ ಸಹರಾ ಟಿವಿ ಚಾನೆಲ್‌ನ Exit polls ಕಾರ್ಯಕ್ರಮ ನೋಡುತ್ತಿದ್ದಾಗ ನನಗೆ ರಾಜಸ್ಥಾನದ ಫಲಿತಾಂಶದ ಬಗ್ಗೆ ಶಂಕೆ ಉಂಟಾಯಿತು. ಛತ್ತೀಸ್‌ಗಢದಲ್ಲೂ ಅಷ್ಟೇ. ಅಜಿತ್ ಜೋಗಿ ಪ್ರಚಾರ ರೀತಿ ಬಿಜೆಪಿಗೆ ಪೂರಕವಾಗಿತ್ತು. ಬುಡಕಟ್ಟು ಜನಾಂಗದಿಂದ ಬಂದ ಜೋಗಿ ತಂತ್ರಗಳನ್ನು ಬುಡಮೇಲು ಮಾಡಲು ಅನೇಕ ಷಡ್ಯಂತ್ರಗಳನ್ನು ಹಣೆಯಲಾಗಿತ್ತು. ಜಾತಿ ಲೆಕ್ಕಾಚಾರಗಳ ಕೈ ಮೇಲಾಗಿ ಜೋಗಿ ತಲೆ ಕೊಟ್ಟರು. ಛತ್ತೀಸ್‌ಗಢ ಬುಡಕಟ್ಟು ರಾಜ್ಯ ಎಂದರೂ ಅಲ್ಲಿ ಬುಡಕಟ್ಟು ರಹಿತ ಜನರ ಸಂಖ್ಯೆ ಶೇ. ೬೭.೫ರಷ್ಟಿದೆ. ಅಂದರೆ ಕೇವಲ ಶೇ. ೩೨.೫ರಷ್ಟು ಮಾತ್ರ ಬುಡಕಟ್ಟು ಎಂದಂಗಾಯ್ತು. ಪರಿಶಿಷ್ಟರ ವಿಷಯದಲ್ಲಿ ಹೇಳಬೇಕಾದ್ದಿಲ್ಲ. ಶೇ. ೧೦ರಷ್ಟಿರುವ ಪರಿಶಿಷ್ಟರು ಬಿಎಸ್ಪಿ ಕಡೆ ವಾಲಿದರು. ಬುಡಕಟ್ಟು ಅಲ್ಲದ ಬಹುತೇಕ ಜನ ಕಾಂಗ್ರೆಸ್ ವಿರುದ್ಧವಾಗಿ ಮತ ಚಲಾಯಿಸುವ ಸಂದರ್ಭದಲ್ಲಿಯೇ ಜೋಗಿಗೆ ಜುದೇವ್ ಟೇಪ್ ಹಗರಣ ಹೊಸ ಆಶಾಕಿರಣ ಎಂದೂ ಭಾವಿಸಲಾಗಿತ್ತು. ಈ ಹಗರಣ ಜಾತಿ ಒಳಸುಳಿಗಳಿಗೆ ಸಿಲುಕಿ ಜೋಗಿ ಶವಪೆಟ್ಟಿಗೆ ಅಂತಿಮ ಮೊಳೆಯಾಗಿ ಪರಿಣಮಿಸಿತು.

ಜುದೇವ್ ಟೇಪ್ ಹಗರಣದ ಹಿಂದೆ ಜೋಗಿ ಕೈವಾಡ ಇದೆ ಎಂಬ ಪ್ರಚಾರ ಹಬ್ಬಿಸಲಾಯಿತು. ಖಳನಾಯಕನಾಗಬೇಕಿದ್ದ ಕೇಂದ್ರದ ಕಲ್ಲಿದ್ದಲು ಖಾತೆ ಸಚಿವ ಬಲಿಪಶು ಎನ್ನುವಂತೆ ಭಾವಿಸಿ ಪ್ರಚಾರಕ್ಕೆಳೆತರಲಾಯಿತು. ಕೊನೆಯಲ್ಲಿ ಫಲಿತಾಂಶ ಬಿಜೆಪಿ ಪರ ಇತ್ತು. ಇದು ಅಲ್ಲಿನ ಜಾತಿ ಆಧಾರದ ರಾಜಕೀಯ ಏಳು-ಬೀಳು.

ದಿಗ್ಗಿ ರಾಜಾ ಎಂದೇ ಖ್ಯಾತಿಹೊಂದಿದ್ದ ಮಧ್ಯಪ್ರದೇಶದ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್‌ರ ಪಾರು-ಪತ್ಯ ಕುಸಿದು ಬಿದ್ದಾಗ ಕಾಂಗ್ರೆಸ್ ತಲೆ ಚಚ್ಚಿಕೊಳ್ಳುವಂತಾಯಿತು. ೧೯೯೮ರಲ್ಲಿ ಇಂಕಂಬೆನ್ಸಿ ಫ್ಯಾಕ್ಟರ್‌ನ್ನೂ ಸಮರ್ಥವಾಗಿ ನಿಭಾಯಿಸಿದ ದಿಗ್ಗಿ ರಾಜಾ ಈ ಬಾರಿ ಸೋತು ಹೋದರು. ೧೯೯೮ರಲ್ಲಿ ಈಗಿರುವ ರಸ್ತೆ, ದೀಪ, ಕುಡಿವ ನೀರಿನ ವ್ಯವಸ್ಥೆಗಿಂತ ಅತ್ಯಂತ ಕಳಪೆಯಾಗಿತ್ತು. ಅದಕ್ಕೆ ಹೋಲಿಸಿದರೆ

ಈ ಬಾರಿ ಅಂತಹ ದುಸ್ಥಿತಿ ಇರಲಿಲ್ಲ, ದಿಗ್ಗಿ ಈಗಲೂ ಸಹ ಮುಖವಾಗಿ ಸಾಮಾಜಿಕ ಬಿಂದಿ ಬಿಂಬಿತರಾಗಿದ್ದರು. ದಿಗ್ಗಿ ರಾಜಾ ನೇತೃತ್ವದ ಕಾಂಗ್ರೆಸ್ ಸೋಲು ನೋಡಿದರೆ ೧೯೭೭ರಲ್ಲಿ ಇಂದಿರಾಗಾಂಧಿ ಎದುರಿಸಿದ್ದ ಸವಾಲಿನಂತಿತ್ತು.

೭೦ರ ದಶಕದಲ್ಲಿ ಇಂದಿರಾ ಅನೇಕ ಮಹತ್ವದ ಬೆಳವಣಿಗೆಗೆ ಕಾರಣರಾದರು. ಸಾಮಾಜಿಕ ಸ್ತರಗಳಲ್ಲಿ ಅನೇಕ ಸುತ್ತ್ಯಾರ್ಹ ಬದಲಾವಣೆ ತಂದರು. ಅವರು ತಮ್ಮದೇ ಆದ ಸಾಮಾಜಿಕ ಬದಲಾವಣಾ ನೀತಿಯನ್ನು ರೂಪಿಸಿಕೊಂಡಿದ್ದರು. ೧೯೬೮, ಜುಲೈ ೧೯ರಂದು ಇಂದಿರಾ ಅವರು ಈ ದೇಶದ ೧೪ನೇ ಪ್ರಸಿದ್ಧ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿದರು. ಇದು ಪ್ರಜಾತಾಂತ್ರಿಕ ಬಂಡವಾಳವಾಗಿ ಪರಿವರ್ತಿಸುವುದಾಗಿತ್ತು. ಅಸ್ಪೃಶ್ಯ ಬಾಬು ಜಗಜೀವನರಾಂರನ್ನು ಕಾಂಗ್ರೆಸ್‌ನ ಅಧ್ಯಕ್ಷರಾಗಿ ನೇಮಕ ಮಾಡಿದರು. ಬ್ರಿಟೀಷರ ಅನೇಕ ಕಾನೂನುಗಳನ್ನು ರದ್ದುಗೊಳಿಸಿದರು. ೧೯೭೧ರಲ್ಲಿ ಜನರಲ್ ಇನ್ಸುರೆನ್ಸ್‌ನ್ನು ರಾಷ್ಟ್ರೀಕರಣಗೊಳಿಸಿದರು. ೧೯೭೧ರ ಲೋಕಸಭೆ ಚುನಾವಣೆಯಲ್ಲಿ ಕೊಟ್ಟ 'ಗರೀಬಿ ಹಟಾವೋ' ಘೋಷಣೆಗೆ ೫ನೇ ಪಂಚವಾರ್ಷಿಕ ರಸ್ತೆ ಮೇಲು ರಚನೆ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಭೂಮಿತಿ ಕಾಯ್ದೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ಐತಿಹಾಸಿಕ ಸಮ್ಮೇಳನ ನಡೆಸಿದ ಕೀರ್ತಿ ಅವರದು.

ಮಧ್ಯಪ್ರದೇಶದಲ್ಲೂ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಇದಕ್ಕಿಂತ ಕೊಂಚ ಭಿನ್ನ ಸುಧಾರಣೆಗಳನ್ನು ತಂದಿದ್ದರು. ಭೂಮಿ ಎನ್ನುವುದು ದೇಶದಾದ್ಯಂತ ಬಹುದೊಡ್ಡ ಪ್ರತಿಷ್ಠೆಯ ವಿಷಯ. ಅಣ್ಣ ತಮ್ಮಂದಿರ ನಡುವಿನ ಹೊಡೆದಾಟ, ನೆರೆಯವನಿಗೆ ನೆರೆಯವನಿಂದ ಇರಿತ, ಕೊಲೆಯ ಜಾಗದಲ್ಲಿ ಮತ್ತೊಂದು ಕೊಲೆ, ನಡೆಯುತ್ತವೇ ಇದೆ. ಅದು ಕೇವಲ ತುಂಡು ಭೂಮಿಗಾಗಿ. ಈ ಕೆಟ್ಟ ನೀತಿಯನ್ನು ಖಂಡಿಸುತ್ತಲೇ ಬಂದಿದ್ದರೂ ಭೂಮಿ ಎನ್ನುವುದು ಬಹುದೊಡ್ಡ ಸಾಮಾಜಿಕ ಪ್ರತಿಷ್ಠೆಯಾಗಿ ರೂಪುಗೊಳ್ಳುತ್ತಿದೆ. ದಲಿತ ಬುದ್ಧಿಜೀವಿಗಳು ಜನವರಿ ೨೦೦೨ರಲ್ಲಿ ಇಂದಿರಾ ಸಭೆ ಸೇರಿ ದಿಗ್ಗಿ ರಾಜನ ಸುಧಾರಣಾ ಕ್ರಮಗಳ ಕುರಿತು 'ಇಂದಿರಾ ಮುಂದುವರಿಕೆ' ಎಂದು ಬಣ್ಣಿಸಿದ್ದರು.

ಮಧ್ಯಪ್ರದೇಶ ದೇಶದ ಮೊದಲ 'ಯಾವುದೇ ಒಬ್ಬ ಎಸ್‌ಸಿ/ಎಸ್‌ಟಿ ಕೂಡ ಭೂರಹಿತವಾಗಿರುವುದಿಲ್ಲ' ಎಂಬ ಐತಿಹಾಸಿಕ ಘೋಷಣೆ ಮಾಡಲಾಯಿತು. ಈ ಘೋಷಣೆಯಂತೆ ಸರ್ಕಾರವು ೨.೫೨ ಲಕ್ಷ ಎಸ್‌ಸಿ/ಎಸ್‌ಟಿ ಜನರಿಗೆ ೭.೩೭ ಲಕ್ಷ ಎಕರೆ ಭೂಮಿಯನ್ನು ವಿತರಿಸಲಾಯಿತು. ಅಂತಿಮವಾಗಿ ಹಿಡಿದುಕೊಳ್ಳಲಾಗಿದ್ದ ಭೂಮಾಲೀಕರಿಂದ ಈ ಜಮೀನನ್ನು ದಲಿತರ ಹೆಸರಿಗೆ ಮಾಡಲಾಯಿತು. ಅದು ಕಾನೂನು ಪ್ರಕಾರ ದಲಿತರಿಗೆ ಸೇರಬೇಕು. ಹಳ್ಳಿಗಳಲ್ಲಿ ಭೂಮಿಗಳ ವಾರಸುದಾದರಾಗಿದ್ದ ಭೂಮಾಲೀಕರಿಗೆ ಸರ್ಕಾರದ ಕ್ರಮ ಆತಂಕವನ್ನೇ ಸೃಷ್ಟಿಸಿತು. ಯಾರಿಗೂ ಕೂಡ ಭೂಮಿ ಬಿಟ್ಟುಕೊಡುವ ಮನಸ್ಸಿರಲಿಲ್ಲ, ದಲಿತರಿಗೆ ಈ ಭೂಮಿ ಹಂಚಿಕೆ ಮಾಡುವ ಸರ್ಕಾರದ ಆದೇಶ ರಾಜ್ಯದೆಲ್ಲೆಡೆ ಉದ್ವಿಗ್ನ ಸ್ಥಿತಿ ನಿರ್ಮಾಣಕ್ಕೆ ಕಾರಣವಾಯಿತು. ಪ್ರತಿ ಹಳ್ಳಿಗಳಲ್ಲೂ ಸುಮಾರು ೪ರಿಂದ ೧೦ ಮೊಕದ್ದಮೆಗಳು ದಾಖಲಾದವು. ಮೇಲ್ವರ್ಗದವರೂ ಭೂಮಾಲೀಕರ ಹಲ್ಲೆಗೆ, ದಬ್ಬಾಳಿಕೆಗೆ ದಲಿತರು ಈಡಾದರು. ದುರಂತ ಎಂದರೆ ಪ್ರತಿ ಹಳ್ಳಿ ಹಳ್ಳಿಯಲ್ಲೂ ದಲಿತರ ಮೇಲೆ ಹಲ್ಲೆಗೈದವರಲ್ಲಿ ಶೇ. ೯೫.೮೩ರಷ್ಟು ಜನ ಹಿಂದುಳಿದ ವರ್ಗದವರೇ ಆಗಿದ್ದರು. ಅದೇ ಹಿಂದುಳಿದ ವರ್ಗದ ರಜಪೂತರೂ ದಿಗ್ಗಿ ರಾಜಾನ ३ನೇ ಬಾರಿ ಮುಖ್ಯಮಂತ್ರಿಯಾಗುವ ಕನಸಿಗೆ ಕಲ್ಲು ಹಾಕಿದರು.

# ಇಂದಿರಾ ಮಾದರಿಯಲ್ಲಿ ಸೋತ ದಿಗ್ಗೀ ರಾಜಾ

ಆದರೆ, ಈಗ ೧. ಕುಟುಂಬದ ಪ್ರತಿಯೊಬ್ಬ ಸದಸ್ಯನಲ್ಲ, ಆದರೆ ಇಡೀ ಕುಟುಂಬ ಆ ಭೂಮಿಯ ಒಡೆತನ ಹೊಂದಿರುತ್ತದೆ. ೨. ಪ್ರತಿ ಕುಟುಂಬದ ಭೂಮಿಯ ಮೇಲಿನ ಹಿಡಿತದ ಪ್ರಮಾಣ ೨೭ ಎಕರೆಯಿಂದ ೧೨ ಎಕರೆಗೆ ತರಲಾಗಿದೆ. ಈ ಅಳತೆಗೋಲನ್ನು ಗ್ರೇಡ್ ೨ ಮತ್ತು ಗ್ರೇಡ್ ೩ಕ್ಕೂ ಅನ್ವಯವಾಗುತ್ತದೆ. ೩. ಭೂಮಿತಿ ಕಾಯ್ದೆಯಡಿ ಹಂಚಿಕೆಯಾಗಿ ಉಳಿದ ಜಮೀನನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ ಹೋಗಬೇಕೆ ಎಂಬ ಹೊಸ ಸುಧಾರಣಾ ನೀತಿ ಇಡೀ ದೇಶದಲ್ಲಿ ಅಲ್ಲೋಲ ಕಲ್ಲೋಲ ಪರಸ್ಥಿತಿಗೆ ಕಾರಣವಾಯಿತು.

ಇಂದಿರಾ ತನ್ನ ಮುಖವನ್ನು ದಲಿತರು, ಶೋಷಿತರು ಮತ್ತು ಹಿಂದುಳಿದ ವರ್ಗದತ್ತ ತಿರುಗಿಸುವುದನ್ನು ಸಹಿಸದ ಮೇಲ್ವರ್ಗ ಕುದಿಯತೊಡಗಿತ್ತು. ಪ್ರತಿಯೊಂದು ಹಂತದಲ್ಲಿ ಮೇಲ್ವರ್ಗದವರ ಪ್ರಾಬಲ್ಯ ಮುರಿಯಲು ಇಂದಿರಾ ಅಧಿಕಾರದ ಅಸ್ತ್ರ ಪ್ರಯೋಗಿಸಲಾರಂಭಿಸಿದಾಗ ಸಾಯುವ ಸ್ಥಿತಿಯ ಬಾತುಕೋಳಿಯಂತಿದ್ದ ಜೈಪ್ರಕಾಶ ನಾರಾಯಣ ಅವರು ಹೊಸ ಜೀವ ಪಡೆದುಕೊಂಡರು. ಇಂದಿರಾ ಜನಪ್ರಿಯತೆಯ ಮುಸುಕಿನಲ್ಲಿ ನಾರಾಯಣ ಅವರು ಪ್ರಬಲ ಸಾಮಾಜಿಕ ವರ್ಗಗಳನ್ನು ಜಮಾಯಿಸುವ ಕಾರ್ಯಕ್ಕಿಳಿದರು. ಇದೇ ಮುಂದೆ ತುರ್ತುಪರಸ್ಥಿತಿಗೆ ಕಾರಣವೂ ಆದ ಪ್ರಕ್ರಿಯೆ. ಜೆ.ಪಿ. ಚಳವಳಿ ಸಾಮಾಜಿಕ ಪರಿವರ್ತನೆಯ ಸಂಕೇತವಾಗಿತ್ತು. ಇಂದಿರಾಗಾಂಧಿಯನ್ನು ಖಳನಾಯಕಿಯಂತೆ ಬಿಂಬಿಸುವ ಕೆಲಸ ಬಿರುಸಿನಿಂದ ಸಾಗಿತು. ಪ್ರಪ್ರಥಮ ಬಾರಿಗೆ ಇಂದಿರಾ ತಮ್ಮ ಆಡಳಿತದ ಮೂಲಕ ಅನೂಚಾನವಾಗಿ ಬೆಳೆದು ಬಂದಿದ್ದ ಕೆಟ್ಟ ಸಾಮಾಜಿಕ ಪದ್ಧತಿಯ ಬುಡಕ್ಕೆ ಕೈ ಇಟ್ಟರೋ, ಆಗ ಸಮಾಜ ಅವರ ವಿರುದ್ಧವೇ ತಿರುಗಿ ಬಿತ್ತು.

ದಿಗ್ವಿಜಯ ಸಿಂಗ್ ಇಂದಿರಾಗಾಂಧಿಗಿಂತ ಕೊಂಚ ಭಿನ್ನ ಸುಧಾರಣೆಗಳನ್ನು ತಂದಿದ್ದರು. ಭೂಮಿ ಎನ್ನುವುದು ದೇಶದಾದ್ಯಂತ ಬಹುದೊಡ್ಡ ಪ್ರತಿಷ್ಠೆಯ ವಿಷಯ. ಅಣ್ಣ ತಮ್ಮಂದಿರ ನಡುವಿನ ಹೊಡೆದಾಟ, ನೆರೆಯವನಿಗೆ ನೆರೆಯವನಿಂದ ಇರಿತ, ಕೊಲೆಯ ಜಾಗದಲ್ಲಿ ಮತ್ತೊಂದು ಕೊಲೆ, ನಡೆಯುತ್ತವೇ ಇದೆ. ಅದು ಕೇವಲ ತುಂಡು ಭೂಮಿಗಾಗಿ. ಈ ಕೆಟ್ಟ ನೀತಿಯನ್ನು ಖಂಡಿಸುತ್ತಲೇ ಬಂದಿದ್ದರೂ ಭೂಮಿ ಎನ್ನುವುದು ಬಹುದೊಡ್ಡ ಸಾಮಾಜಿಕ ಪ್ರತಿಷ್ಠೆಯಾಗಿ ರೂಪುಗೊಳ್ಳುತ್ತಿದೆ. ದಲಿತ ಬುದ್ಧಿಜೀವಿಗಳು ಜನವರಿ ೨೦೦೨ರಲ್ಲಿ ಇಂದಿರಾ ಸಭೆ ಸೇರಿ ದಿಗ್ಗಿ ರಾಜಾನ ಸುಧಾರಣಾ ಕ್ರಮಗಳ ಕುರಿತು 'ಇಂದಿರಾ ಮುಂದುವರಿಕೆ' ಎಂದು ಬಣ್ಣಿಸಿದ್ದರು.

ಬಹುತೇಕ ಎಸ್‌ಸಿ, ಎಸ್‌ಟಿ ಜನ ಯಾವುದೇ ಆಧಾರ ಇಲ್ಲದೆ ಜರ್ಝರಿತರಾಗಿ ಕುಳಿತರೆ, ಬಿಎಸ್ಪಿ ನಾಯಕರು, ಮತ್ತು ಸ್ವಾಭಿಮಾನಿ ಅಂಬೇಡ್ಕರ್‌ವಾದಿ ತಂತ್ರಗಳು ಗಟ್ಟಿ ಧ್ವನಿಯಾಗಿ 'ನಮಗೆ ಗೌರವ ಬೇಕು, ಗೌರವಕ್ಕಾಗಿ ಮಾಸ್ಟರ್ ಕೀ' ಬೇಕು ಎಂದು ದಲಿತ ಅಜೆಂಡಾ ಪ್ರತಿಧ್ವನಿಸಿತು. ಆಗ ಪ್ರಬಲ ಕೋಮುಗಳು ಥರಗುಟ್ಟಿ ದಲಿತರ ಧ್ವನಿಗೆ ಹಿಡಿದರೆ ಅನೂಚಾನವಾಗಿ ಬಂದಿದ್ದ ಸಾಮಾಜಿಕ ಹಿಡಿತ ಕೈತಪ್ಪಿ ಹೋಗುವ ಭಯದಿಂದ ಈ ಜನ ವರ್ಗಗಳು ಬಿಜೆಪಿಯತ್ತ ವಾಲಿದವು. ದಿಗ್ಗಿ ರಾಜನ ಸುಧಾರಣೆಗಳನ್ನು ಜನರಲ್ಲಿ ಬಿಂಬಿಸಲು ದಲಿತ ಸಂಘಟನೆಗಳ ಕಾರ್ಯಕರ್ತರು ಮುಂದೆ ಬಾರದಿರುವುದು ಬಿಜೆಪಿಗೆ ಅನುಕೂಲವಾಗಿ ಪರಿಣಮಿಸಿತು.

ಇನ್ನೊಂದು ಕಡೆ ದಿಗ್ವಿಜಯ ಸಿಂಗ್‌ರ ಚುನಾವಣಾ ದರಿದ್ರ ತಂತ್ರ ಗಳು ಸರ್ಕಾರದ ಸಾಧನೆಗಳನ್ನು ಬಿಂಬಿಸಲು ವಿಫಲವಾಯಿತು. ಎನ್ನುವುದು ಕಾಂಗ್ರೆಸ್ ಸೋಲಿಗೆ ಕಾರಣ ಎನ್ನಲಡ್ಡಿಯಿಲ್ಲ.

೧೯೭೨-೧೯೯೨ರ ಮಧ್ಯೆ ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಎಸ್‌ಸಿ, ಎಸ್‌ಟಿ ಜನರಿಗೆ ಹಂಚಿಕೆಯಾದ ಭೂಮಿ ಕೇವಲ ೫.೨೫ಲಕ್ಷ ಎಕರೆ ಮಾತ್ರ. ವಿಶೇಷ ಎಂದರೆ ದಿಗ್ವಿಜಯ ಸಿಂಗ್ ನೇತೃತ್ವದ ಸರ್ಕಾರ ಮಾತ್ರ ಕೇವಲ ३ ವರ್ಷದಲ್ಲಿ ಮಾತ್ರ ೭.३೭ ಲಕ್ಷ ಎಕರೆ ಜಮೀನನ್ನು ದಲಿತರಿಗೆ ಹಸ್ತಾಂತರಿಸಿ ಸಾಮಾಜಿಕ ನ್ಯಾಯ ಎತ್ತಿ ಹಿಡಿದಿದೆ. ವಿತರಣೆಯಾದ ಭೂಮಿಯ ಮೊತ್ತ

# ಮುಲಾಯಂ ದಾರಿ ಯಾವುದು ?

೧೮ ಬಿಲಿಯನ್ ಆದರೆ, ಅದಕ್ಕಿಂತ ಹೆಚ್ಚಾಗಿ ದಲಿತರ ಸ್ವಾಭಿಮಾನಿ ಬದುಕಿಗೊಂದು ಊರುಗೋಲು ಎನ್ನುವುದರಲ್ಲಿ ಎರಡು ಮಾತಿಲ್ಲ. ದಲಿತರಿಗೆ ಅನೇಕ ವಿಧದಲ್ಲಿ ರಿಯಾಯತಿ, ಯೋಜನೆಗಳನ್ನು ಜಾರಿಗೆ ತಂದರೆ ಹಿಂದುಳಿದ ವರ್ಗ ತಕರಾರು ತೆಗೆದಾಗ ಸರ್ಕಾರ ಹಿಂದುಳಿದ ವರ್ಗದ ಮಕ್ಕಳಿಗಾಗಿ ಶಿಕ್ಷಣದಲ್ಲಿ ಶೇ. ೨೭ ರಷ್ಟು ಮೀಸಲಾತಿ ನೀತಿ ಜಾರಿಗೆ ತಂದಿತು. ಆದರೂ ಜಾತಿ ಸಮೀಕರಣ, ಪಟ್ಟಭದ್ರದ ತಂತ್ರಕ್ಕೆ ಸರ್ಕಾರ ಬಿದ್ದು ಹೋಯಿತು. ೧೯೭೭ರಲ್ಲಿ ಇಂದಿರಾಗಾಂಧಿ ಎದುರಿಸಿದ ಬಿಕ್ಕಟ್ಟನ್ನು ಎದುರಿಸಿದ ದಿಗ್ವಿಜಯ ಸಿಂಗ್ ಕೊನೆಗೂ ಸರ್ಕಾರ ಉಳಿಸಿಕೊಳ್ಳದೆ ಒಂಟಿಯಾದರು.

**ಅಧಿಕಾರದ ಸಂಪೂರ್ಣ ಹಿಡಿತ:**

ಕಳೆದ ಇತಿಹಾಸ ಮತ್ತೆ ಪುನರಾವರ್ತನೆಯಾಗುವುದು ಅಷ್ಟು ಸುಲಭವಲ್ಲ. ಮಾಯಾವತಿ ನಾಲ್ಕನೇ ಬಾರಿಗೆ ಉತ್ತರ ಪ್ರದೇಶ ಮುಖ್ಯಮಂತ್ರಿಯಾಗುತ್ತಾರೆನ್ನುವ ನಿರೀಕ್ಷೆ ಅದೊಂದು ಭ್ರಮೆ. ಇದೇ ಸಂದರ್ಭದಲ್ಲಿ ಬಹುಜನ ಸಮಾಜವಾದಿ ಪಕ್ಷದ 'ತಲೆ' ಕಾನ್ಸಿರಾಂ ಅನಾರೋಗ್ಯದಿಂದ ಕೊಡವಿಕೊಂಡು ಸಕ್ರಿಯ ರಾಜಕಾರಣಕ್ಕೆ ಮರಳುವುದು ಅಸಾಧ್ಯ. ದಿಗ್ವಿಜಯಸಿಂಗ್ ಮಾತ್ರ ದಲಿತೇತರ ನಾಯಕರಲ್ಲಿ ದಲಿತ ಅಜೆಂಡಾ ಕುರಿತು ಗಂಭೀರವಾಗಿರೋರು. ಈ ಸತ್ಯ ಅರಿತುಕೊಳ್ಳಲೇಬೇಕು. ಕಾನ್ಸಿರಾಂ ಅವರು ಹಾಸಿಗೆ ಹಿಡಿದಾಗ ಅತ್ಯಂತ ಹೀನಾಯವಾಗಿ ಮಾಯಾವತಿ ಸರ್ಕಾರವನ್ನು ಉರುಳಿಸಲಾಯಿತು. ಇವೆಲ್ಲವನ್ನೂ ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿದಾಗ ದಲಿತ ನಾಯಕಿಯ ರಾಜಕೀಯದ ದಿಕ್ಕು-ದೆಸೆ ಏನು? ಉತ್ತರದಲ್ಲಿ ಹೊಸದೊಂದು ಆಶಾಕಿರಣ ಎಂದು ಭಾವಿಸಲಾಗಿದ್ದ ರಾಜಕೀಯ ಸಂದರ್ಭದಿಂದ ವಂಚಿತವಾಗಿರುವ ಮಾಯಾವತಿ ಇನ್ನೊಂದು 'ಇನ್ನಿಂಗ್ಸ್' ಆರಂಭಿಸಲು ಕಸರತ್ತು ನಡೆಸಿದ್ದರೂ, ಆಯ್ಕೆಯ ವಿಚಾರದಲ್ಲಿ ಕೊಂಚ ಯೋಚನೆ, ದೂರದೃಷ್ಟಿ ಇಟ್ಟುಕೊಳ್ಳುವುದೊಳಿತು.

ದಲಿತ ಚಳವಳಿ ಮತ್ತೆ ತನ್ನ ಕಾಲ ಮೇಲೆ ಗಟ್ಟಿಯಾಗಿ ನಿಂತು ಸಾಮಾಜಿಕ ಆಯಾಮ ಪಡೆಯುವ ಸ್ಥಿತಿಯಲ್ಲೂ ಇಲ್ಲ. ಈಸ್ಟ್ ಇಂಡಿಯಾದಲ್ಲಿ ಮರಾಠಿ ದಲಿತ ಪ್ರಜ್ಞೆ ಮತ್ತು ಸಂಪನ್ಮೂಲ ಬೌದ್ಧತತ್ವಕ್ಕೆ ವಾಲಿವೆ. ಸಧ್ಯ ಇರುವುದು ಇಷ್ಟೇ. ದಲಿತರ ಹಿನ್ನಡೆಗೆ, ದಲಿತ ರಾಜಕೀಯದ ವಿಮುಖತೆಗೆ ಕಾರಣಗಳೇನು ಎಂಬುದನ್ನು ಪತ್ತೆ ಹಚ್ಚಬೇಕು. ಪತ್ತೆ ಹಚ್ಚಲು ಇರಬೇಕಾದ ಬೆಳ್ಳಿ ಗೆರೆಗಳಾವುವು? ವಿಶ್ವದ ಇಡೀ ದಲಿತ ಸಮುದಾಯದಲ್ಲಿ ಅಂತಹದ್ದೊಂದು ಜಾಗೃತಿ ಮತ್ತು ಮಥನ ನಡೆಯಬೇಕಾಗಿದೆ.

ವ್ಯಾಂಕೋರ್‌ನಲ್ಲಿ ನಡೆದ ದಲಿತ ಸಮ್ಮೇಳನ ಅಂತಹದ್ದೊಂದು ಆಶಾವಾದ ಹುಟ್ಟಿಸಿದೆ. ಅಂತರ ರಾಷ್ಟ್ರೀಯವಾಗಿ ಹರಿದು ಹಂಚಿ ಹೋಗಿರುವ ಬದ್ಧತೆ ಮತ್ತು ದಲಿತ ಪ್ರಜ್ಞೆಗಾಗಿ ಹೋರಾಡುತ್ತಿರುವ ಡಾ. ಕೆ.ಸಿ.ಸಿಂಗ್, ಡಾ|| ಎಂ. ಎನ್. ಬೇರ್ವಾ ಮತ್ತು ಜೈ ಬಿರ್ದಿ ಅವರು ಭಾರತಕ್ಕೆ ಬಾರದೆ ಸಾವಿರಾರು ಏಕೆ ಲಕ್ಷಾಂತರ ಜನ ದಲಿತ ಕಾರ್ಯಕರ್ತರು ಏನೂ ಮಾಡಲು ಸಾಧ್ಯವಿಲ್ಲ. ದಲಿತ

> **ದಲಿತ ಸಮುದಾಯದಲ್ಲಿನ ಬಹುತೇಕ ಪ್ರಜ್ಞಾವಂತರು ಬ್ರಾಹ್ಮಣರ ವಿರುದ್ಧ ಹೋರಾಡುವುದರಲ್ಲಿ, ಅವರನ್ನು ತೆರಳುವುದರಲ್ಲಿ, ಅತಿರೇಕದ ಮಾತುಗಳನ್ನಾಡುವುದರಲ್ಲಿ ಕಾರ್ಯನಿರತರಾಗಿದ್ದಾರೆ. ದಕ್ಷಿಣ ದಲಿತ ವಿಚಾರದಲ್ಲಿ ಇದು ಇನ್ನೂ ಇಕ್ಕಟ್ಟಿನ ಸಂದರ್ಭ ಎನ್ನಬಹುದು. ಬ್ರಾಹ್ಮಣರ ವಿರುದ್ಧ ಸದ್ಯದ ಹೋರಾಟ ಸಾಕಾಗುತ್ತಿಲ್ಲವಂತೆ, ಆದರೂ ದಕ್ಷಿಣದತ್ತಲೇ ಮುಖ ತೋರಿದ್ದಾರೆ. ಬ್ರಾಹ್ಮಣರ ಜನಸಂಖ್ಯೆ ವೃದ್ಧಿಯಾಗುತ್ತಲೇ ನಡೆದಿದೆ. ದಲಿತರ ಶಕ್ತಿ ಬಳಕೆಯಾಗದೆ ಹಾಗೇ ಉಳಿದುಕೊಂಡಿದೆ ಎನ್ನುವುದು ನೋವಿನ ಸಂಗತಿ. ರಾಜಕೀಯ ಅಧಿಕಾರವೇ ಮಾಸ್ಟರ್ ಕೀ. ಮತ್ತು ದಲಿತರೇ ರಾಜಕೀಯ ಕೈ ಕೀಲಿಗಳೂ ಸಹ. ಉತ್ತರ ಪ್ರದೇಶದಲ್ಲಿ ಬಿಎಸ್ಪಿ ರಾಜಕೀಯ ಅಧಿಕಾರ ಎನ್ನುವ ಕೀಲಿಕೈಯನ್ನು ತೆಗೆದುಕೊಂಡಿತ್ತಾದರೂ ಕೀಲಿಕೈ ಅಂತಹ ಹೇಳುವಂತಹ ಕೆಲಸ ಮಾಡಲಿಲ್ಲ ಎನ್ನುವುದೂ ಅಷ್ಟೇ ಸತ್ಯ.**

ಚಳವಳಿ ಇನ್ನಷ್ಟು ಬೆಳೆಯಬೇಕಾದರೆ ಈ ಮಹನೀಯರು ಭಾರತಕ್ಕೆ ಬಂದು ಹೊಸದೊಂದು ವೇದಿಕೆ ಹುಟ್ಟು ಹಾಕಿ ದಲಿತ ಬುದ್ಧಿಜೀವಿಗಳನ್ನು ಒಟ್ಟುಗೂಡಿಸಬೇಕು. ಅದಾಗದ ಹೊರತು ಕೇವಲ ಮಾತು-ಚರ್ಚೆಗಳಲ್ಲಿ ಕಾಲ ದೂಡಿದಂತಾಗುತ್ತದೆ.

ದಲಿತ ಬುದ್ಧಿಜೀವಿಗಳಿಗೆ ಸರಿಯಾದ ಮತ್ತು ಗಟ್ಟಿ ನೆಲೆಯ ವೇದಿಕೆ ಇಲ್ಲದೆ ಚೆಲ್ಲಾಪಿಲ್ಲಿಯಾಗಿ ಕೆಲಸ ಮಾಡು ವಂತಾಗಿದೆ. ಇಡೀ ದಲಿತ ಧ್ವನಿಯಾಗಿ ಕೆಲಸ ಮಾಡಲು ಹೊಸದೊಂದು ವೇದಿಕೆಯ ಜರೂರಿದೆ. ಬಹಳಷ್ಟು ದಲಿತ ಬುದ್ಧಿಜೀವಿಗಳು ವಿವಿಧ ಸಂಘ ಸಂಸ್ಥೆಗಳ ಬೆಂಬಲದೊಂದಿಗೆ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟದಲ್ಲಿ ಸಕ್ರಿಯರಾಗಿದ್ದಾರೆ. ಖಾಸಗೀ ಆರ್ಥಿಕ ಲಾಭದಲ್ಲೂ ಪಾಲು ದೊರೆಯಲಿ ಎಂಬ ಬೇಡಿಕೆ ಇರಿಸಿಕೊಂಡು ಬೀದಿಗಿಳಿದಿದ್ದಾರೆ. ಜಾಗತೀಕರಣ ಕಬಂಧಬಾಹುಗಳು ಬಿಗಿಯಾಗಿ ಅಪ್ಪಿಕೊಂಡಿರುವಾಗ್ಯೂ ಅನೇಕ ಬುದ್ಧಿಜೀವಿಗಳು ಚಳುವಳಿಯಲ್ಲಿ ನಿರತರಾಗಿದ್ದಾರೆ. ಜಾಗತೀಕರಣದ ವಿಷ ಹಲ್ಲುಗಳನ್ನು ಕಿತ್ತೆಸೆಯಬೇಕಾದರೆ ಗಾಂಧೀ ಪ್ರಣೀತ ಸಿದ್ಧಾಂತವಿರಬೇಕು. ಅದು ಮಾತ್ರ ಜನರ ಮತ್ತು ಜಾಗತೀಕರಣದ ಹೃದಯ ಗೆಲ್ಲಬಹುದು. ಇದೊಂತರ ಚೀನಾದಲ್ಲಿ ಆದಂತಹ ಕಮ್ಯೂನಿಸ್ಟ್ ಕ್ರಾಂತಿ ಮಾದರಿಯಲ್ಲಿ ಆಗಬೇಕು. ಇಲ್ಲದೆ ಹೋದರೆ ಕನಿಷ್ಟ ಹಕ್ಕುಗಳಿಗಾದರೂ ಹೋರಾಟ ನಡೆಸಬೇಕು. ಇಂದು ಜಾಗತೀಕರಣ ತನ್ನ ಒಂದು ವೃತ್ತವನ್ನು ನಿರ್ಮಿಸಿದೆ. ಆ ವೃತ್ತದಲ್ಲಿ ನಾವಿದ್ದೇವೆ. ನೂತನ ಆರ್ಥಿಕ ನೀತಿಗಳಡಿ ಜಾಗತೀಕರಣ ವಿರೋಧಿ ದಲಿತರು ಯಾವ ಲಾಭವನ್ನೂ ಪಡೆಯಲಾಗುತ್ತಿಲ್ಲ ಎನ್ನುವುದು ಸತ್ಯ.

ದುರಂತ ಎಂದರೆ ನವ ಸಾಮ್ರಾಜ್ಯವಾದದ ಅಪಾಯದ ವಿರುದ್ಧ ಹೋರಾಡುವಾಗ ಐಕ್ಯತೆ ಇರಬೇಕು. ಇಲ್ಲದೆ ಹೋದರೆ ಈ ಕೈಗಳ ಕೈ ಮೇಲಾಗಿ ಬರಬೇಕಾದ ಹಕ್ಕುಗಳು, ಸಿಗಬೇಕಾದ ಸವಲತ್ತುಗಳು ದೊರೆಯದೇ ಕೈಕೈ ಹಿಸುಕಿಕೊಳ್ಳಬೇಕಾಗುತ್ತದೆ. ದಲಿತ ಶಕ್ತಿ ವ್ಯರ್ಥವಾಗುತ್ತಿದೆಯಾದರೂ ಅದರ ಪುನರ್‌ಬಳಕೆಗೂ ನಾವು ಯೋಚಿಸುತ್ತಿಲ್ಲ. ಬಹಳಷ್ಟು ದಲಿತ ಬುದ್ಧಿಜೀವಿಗಳು, ದಲಿತ ಕಾರ್ಯಕರ್ತರು ನೆಮ್ಮದಿಯ ಜೀವನದೆಡೆಗೆ ಮುಖ ಮಾಡಿ ಕೆಲಸ ಮಾಡುತ್ತಿದ್ದಾರೆ. ಈ ಬೆಳವಣಿಗೆ ಇಡೀ ಒಂದು ಚಳವಳಿಯ ಆಶಯ ಮತ್ತು ಗುರಿಗಳನ್ನು ಹಿಂದೆ ಹಾಕುತ್ತದೆ. ಕೊನೆ ಪಕ್ಷ ದಲಿತರೆಲ್ಲ ಬೌದ್ಧ ತತ್ವದೆಡೆಗೆ ವಾಲುವಂತಾದರೆ ಅಸಮಾನತೆಯ ಕಳಂಕ ಮತ್ತು ಶೋಷಣೆಯಿಂದ ಮುಕ್ತವಾಗಬಹುದೇನೋ.

ದಲಿತ ಸಮುದಾಯದಲ್ಲಿನ ಬಹುತೇಕ ಪ್ರಜ್ಞಾವಂತರು ಬ್ರಾಹ್ಮಣರ ವಿರುದ್ಧ ಹೋರಾಡುವುದರಲ್ಲಿ, ಅವರನ್ನು ತೆಗಳುವುದರಲ್ಲಿ, ಅತಿರೇಕದ ಮಾತುಗಳನ್ನಾಡುವುದರಲ್ಲಿ ಕಾರ್ಯನಿರತರಾಗಿದ್ದಾರೆ. ದೇಶದ ದಕ್ಷಿಣ ಭಾಗದ ದಲಿತ ವಿಚಾರದಲ್ಲಿ ಇದು ಇನ್ನೂ ಇಕ್ಕಟ್ಟಿನ ಸಂದರ್ಭ ಎನ್ನಬಹುದು. ಬ್ರಾಹ್ಮಣರ ವಿರುದ್ಧ ಸಧ್ಯದ ಹೋರಾಟ ಸಾಕಾಗುತ್ತಿಲ್ಲವಂತೆ, ಆದರೂ ಬ್ರಹ್ಮ ದಕ್ಷಿಣದತ್ತಲೇ ಮುಖ ತೋರಿದ್ದಾನೆ. ಬ್ರಾಹ್ಮಣರ ಜನಸಂಖ್ಯೆ ವೃದ್ಧಿಯಾಗುತ್ತಲೇ ನಡೆದಿದೆ. ದಲಿತರ ಶಕ್ತಿ ಬಳಕೆಯಾಗದೆ ಹಾಗೇ ಉಳಿದುಕೊಂಡಿದೆ ಎನ್ನುವುದು ನೋವಿನ ಸಂಗತಿ.

ರಾಜಕೀಯ ಅಧಿಕಾರವೇ ಮಾಸ್ಟರ್ ಕೀ. ಮತ್ತು ದಲಿತರೇ ರಾಜಕೀಯ ಕೀಲಿಕೈಗಳೂ ಸಹ. ಉತ್ತರ ಪ್ರದೇಶದಲ್ಲಿ ಬಿಎಸ್ಪಿ ರಾಜಕೀಯ ಅಧಿಕಾರ ಎನ್ನುವ ಕೀಲಿಕೈಯನ್ನು ತೆಗೆದುಕೊಂಡಿತ್ತಾದರೂ ಕೀಲಿಕೈ ಅಂತಹ ಹೇಳುವಂತಹ ಕೆಲಸ ಮಾಡಲಿಲ್ಲ ಎನ್ನುವುದೂ ಅಷ್ಟೇ ಸತ್ಯ. □

# ಝೆನ್

ಅವಲೋಕನ
ಕಥೆ ಪ್ರಸಂಗ
ಸಂವಾದ
ಬೆಡಗು
ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



## ಪ್ರವಾಹ ಸಾಂಕ್ರಾಮಿಕ ತೃಪ್ತಿ

ತೆತ್‌ಸುಜೆನ್‌ನ ಕಾಲಕ್ಕೆ, ಚೀನಿ ಭಾಷೆಯ ಪವಿತ್ರ ಬೌದ್ಧಗ್ರಂಥಗಳು ಯಾವುವೂ ಜಪಾನಿಯಲ್ಲಿ ಪ್ರಕಟವಾಗಿ ರಲೇ ಇಲ್ಲ. ತನ್ನ ದೇಶದ ಜನಗಳ ಪ್ರಯೋಜನಕ್ಕಾಗಿ ಅವುಗಳನ್ನು ಜಪಾನಿಯಲ್ಲಿ ಪ್ರಕಟಗೊಳಿಸಬೇಕು- ಎಂದು ತೆತ್‌ಸುಜೆನ್ ಯೋಚಿಸಿದ. ಈ ಗ್ರಂಥದ ಮರದ ಕೆತ್ತನೆಯ ಪಡಿಯಚ್ಚುಗಳನ್ನು ಮಾಡಿಕೊಂಡು ಹಲವು ಸಹಸ್ರ ಪ್ರತಿಗಳನ್ನು ಮುದ್ರಿಸಿ ಹಂಚಬೇಕೆಂದು ಆತ ಯೋಚನೆ ಹಾಕಿಕೊಂಡ. ಈ ಬೃಹತ್ ಕಾರ್ಯವನ್ನು ಸಾಧಿಸಲು ದೊಡ್ಡ ಮೊತ್ತದ ಹಣ ಅಗತ್ಯವಾಗಿತ್ತು. ತೆತ್‌ಸುಜೆನ್, ಊರಿಂದ ಊರಿಗೆ ನಗರದಿಂದ ನಗರಕ್ಕೆ ತಿರುಗಿ ಹಣದ ಕಾಣಿಕೆಯನ್ನು ಸಂಗ್ರಹಿಸಲು ತೊಡಗಿದ. ಹತ್ತು ವರ್ಷಕಾಲ ಆತ ಹೀಗೆ ಎಡಬಿಡದೆ ದುಡಿಯುವ ಹೊತ್ತಿಗೆ, ಆ ಕೆಲಸಕ್ಕೆ ಬೇಕಾಗುವಷ್ಟು ಹಣ ಸಂಗ್ರಹವಾಯಿತು. ಒಡನೆಯೇ ಆತ, ಪಡಿಯಚ್ಚುಗಳನ್ನು ಕೆತ್ತಿಸಲು ತೊಡಗಿದ.

ಅದೇ ಸಮಯಕ್ಕೆ ಸರಿಯಾಗಿ, ಉಜಿ ನದಿಯಲ್ಲಿ ಪ್ರವಾಹವುಂಟಾಯಿತು. ರಾಜ್ಯದ ತುಂಬ ಕ್ಷಾಮ ತಲೆದೋರಿತು. ತೆತ್‌ಸುಜೆನ್, ತಾನು ಸಂಗ್ರಹಿಸಿದ ಹಣದಲ್ಲಿ ಅಕ್ಕಿಯನ್ನು ಕೊಂಡು ಹಸಿದವರಿಗೆ ಹಂಚಿದ. ಇದೆಲ್ಲ ಮುಗಿದ ಮೇಲೆ, ಆತ ಮತ್ತೊಮ್ಮೆ ಹೊಸದಾಗಿ ಧನಸಂಗ್ರಹಣೆಗೆ ತೊಡಗಿದ. ಕೆಲವರು ಚಿಲ್ಲರೆಕಾಸು ಕೊಡುತ್ತಿದ್ದರು, ಕೆಲವರು ಚಿನ್ನದ ನಾಣ್ಯವನ್ನೇ ಕೊಡುತ್ತಿದ್ದರು. ತೆತ್‌ಸುಜೆನ್‌ಗೆ ಮಾತ್ರ ಎಲ್ಲರ ಬಗ್ಗೆಯೂ ಒಂದೇ ರೀತಿಯ ಕೃತಜ್ಞತಾಭಾವ ಉಂಟಾಗುತ್ತಿತ್ತು. ಹೀಗೆ ಹಲವಾರು ವರ್ಷ ಸಂಗ್ರಹಣೆಯಾದ ಮೇಲೆ, ಮತ್ತೊಮ್ಮೆ ಅಗತ್ಯವಾದ ಮೊತ್ತದ ಹಣ ಕೂಡಿಬಂತು.

ಆದರೆ ಆ ಹೊತ್ತಿಗೆ, ದೇಶದಲ್ಲಿ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಿತು. ಸಹಸ್ರಾರು ಕುಟುಂಬಗಳು ಅನಾಥವಾದವು. ಆಗ ತೆತ್‌ಸುಜೆನ್, ಆ ಅನಾಥರಿಗೆ ಸಹಾಯ ನೀಡಲಿಕ್ಕಾಗಿ, ತಾನು ಸಂಗ್ರಹಿಸಿದ ಹಣವನ್ನು ವ್ಯಯಿಸಿದ. ಅದೆಲ್ಲವೂ ಮುಗಿಯಿತೆಂದಮೇಲೆ, ಪುನಃ ಧನಸಂಗ್ರಹಣಕ್ಕೆ ತೊಡಗಿದ.

ಕಡೆಗೂ ಒಮ್ಮೆ ಆತನ ಈ ಮಹತ್ ಯೋಜನೆ ಕಾರ್ಯಗತವಾಯ್ತು. ಆತ ತೃಪ್ತನಾಗಿ ತೀರಿಕೊಂಡ.

## ಇದ್ದೀಯಾ-ಇದ್ದೇನೆ



ಜುಯಿಗನ್ ಎಂಬ ಹೆಸರಿನ ಒಬ್ಬ ಭಿಕ್ಷುವಿದ್ದ. ಆತ, ಪ್ರತಿನಿತ್ಯವೂ ಬೆಳಿಗ್ಗೆ ಎದ್ದಕೂಡಲೇ ಮತ್ತೆಲ್ಲದಕ್ಕಿಂತ ಮುಂಚೆ, ತನಗೆ ತಾನೇ ಪ್ರಶ್ನೋತ್ತರ ನಡೆಸಿಕೊಳ್ಳುತ್ತಿದ್ದ. ಇಬ್ಬರ ಮಧ್ಯೆ ಎನ್ನುವ ಹಾಗೆ, ದೊಡ್ಡದಾಗಿ ಪ್ರಶ್ನೆ ಕೇಳಿಕೊಂಡು ಅದಕ್ಕೆ ತಾನೇ ದೊಡ್ಡದಾಗಿ ಉತ್ತರ ಕೊಟ್ಟುಕೊಳ್ಳುತ್ತಿದ್ದ. ಹೀಗೆ-

'ಗುರುವೇ, ಇದ್ದೀರಿ ಅಲ್ಲವೆ?'

'ಹೌದು ಸ್ವಾಮಿ, ಇದ್ದೇನೆ.'

'ಸರಿ, ಜಾಗ್ರತನಾಗಿರಬೇಕು, ಕಂಡೆಯಾ.'

'ಆಗಲಿ, ಸ್ವಾಮಿ' ಜಾಗ್ರತನಾಗುತ್ತೇನೆ.'

'ಸದಾ ಹುಷಾರಾಗಿ ನೋಡಿಕೊಳ್ಳುತ್ತಿರಬೇಕು, ಯಾರೂ ವಂಚಿಸದ ಹಾಗೆ.'

'ಇಲ್ಲ, ಇಲ್ಲ. ಅಂಥದಕ್ಕೆಲ್ಲ ಅವಕಾಶ ಕೊಡುವುದೇ ಇಲ್ಲ. ಎಚ್ಚರವಿರುತ್ತೇನೆ, ಸ್ವಾಮಿ.'

## ಪರಿಮಳ

ಕನ್‌ಫ್ಯೂಸಿಯನ್ ಸನ್ಯಾಸಿಯೊಬ್ಬ ಝೆನ್ ಗುರುವಿನ ಬಳಿಗೆ ಬಂದು, 'ಗುರುವೇ, ನನಗೆ ಝೆನ್ ದೀಕ್ಷೆ ಕೊಡಿ' ಎಂದು ಕೇಳಿಕೊಂಡ.

ಗುರು ಹೀಗಂದ- 'ಕನ್‌ಫ್ಯೂಸಿಯಸ್ ಹೇಳಿದ ಮಾತು ನೆನಪಿದೆಯೆ? ನಾನು ಏನನ್ನೂ ಮುಚ್ಚಿಟ್ಟುಕೊಂಡಿಲ್ಲ ಎಂದಿದ್ದಾನೆ, ಆತ'.

ಸನ್ಯಾಸಿ ಏನನ್ನೋ ಹೇಳಲು ಹೊರಟ. ಗುರು ತಟ್ಟನೆ, 'ಮಾತು ಕೂಡದು' ಎಂದು ಗದರಿಬಿಟ್ಟ.

ಸಂಜೆ, ಅವರಿಬ್ಬರೂ ಕೂಡಿ ಬೆಟ್ಟದ ತಪ್ಪಲಲ್ಲಿ ತಿರುಗಾಡುತ್ತ ನಡೆದಿದ್ದರು. ಒಂದು ಕಡೆ, ಕಾಡುಮಲ್ಲಿಗೆಯ ಹೊದರು ಹೂಬಿಟ್ಟು ಪರಿಮಳ ಸೂಸುತ್ತಿತ್ತು.

ಗುರು ನಿಂತ. ಹೇಳಿದ-

'ಕಂಡೆಯಾ? ನಾನು ಏನನ್ನೂ ಮುಚ್ಚಿಕೊಂಡಿಲ್ಲ ಅಲ್ಲವೆ?

## ಬಂಧನ

ಟಾಓಹ್‌ಸಿನ್, ಚೀನಾದಲ್ಲಿ ಝೆನ್ 'ಗುರುಪಿತ' ಪರಂಪರೆಯಲ್ಲಿ ನಾಲ್ಕನೆಯವನಾಗಿ ಬಂದವನು. ಅವನಿನ್ನೂ ತರುಣನಾಗಿದ್ದಾಗ ಒಮ್ಮೆ, ತನ್ನ ಗುರುವಿನ ಬಳಿಗೆ ಹೋಗಿ ಹೀಗೆ ಪ್ರಾರ್ಥಿಸಿಕೊಂಡ-

'ಗುರುವೇ, ನನ್ನನ್ನು ಅನುಗ್ರಹಿಸಿ; ನನಗೆ ಮುಕ್ತಿದೊರಕುವಂತೆ ಮಾಡಿ.'

ಗುರು, 'ಹೌದೇ? ಯಾರು ನಿನ್ನನ್ನು ಬಂಧಿಸಿಟ್ಟಿದ್ದಾರೆ, ಹೇಳು ಹೇಳು' ಎಂದು ಕೇಳಿದ.

'ಇಲ್ಲ ಇಲ್ಲ, ಯಾರೂ ಬಂಧಿಸಿಟ್ಟಿಲ್ಲ' ಎಂದ, ಟಾಓಹ್‌ಸಿನ್.

'ಮತ್ತೆ? ಯಾರೂ ಬಂಧಿಸಿಟ್ಟಿಲ್ಲ ಎಂದಮೇಲೆ ಮುಕ್ತಗೊಳಿಸುವುದೆಲ್ಲಿ ಬಂತು?' ಎಂದು ಮರುಪ್ರಶ್ನೆ ಹಾಕಿದ ಗುರು.

## ಮೋಡಿಯ ಹಾಡು



ಝೆನ್‌ನಲ್ಲಿ ತುಂಬ ಪ್ರಸಿದ್ಧವಾಗಿರುವ ಒಂದು ಪದ್ಯ ಇದು-

ಬರಿಗೈಯಲ್ಲಿ ಹೊರಡುತ್ತೇನೆ
ಇಕೊ ನೋಡಿ, ಕೈಯಲ್ಲಿ ಗುದ್ದಲಿಯಿದೆ.
ಕಾಲ್ನಡಗೆ ನಡೆಯುತ್ತೇನೆ,
ಇದೇನಯ್ಯ, ಎತ್ತಿನ ಸವಾರಿ ಹತ್ತಿದ್ದೇನೆ.
ಸೇತುವೆಯ ದಾಟುತ್ತೇನೆ, ನೋಡಿ ಇದ ನೋಡಿ,
ನೀರು ಹರಿಯುತ್ತಿಲ್ಲ ಕೆಳಗೆ,
ಸೇತುವೆಯೆ ಹರಿಯುವುದು, ಎಂಥ ಮೋಡಿ.




# ಹೊಸ ಪುಸ್ತಕ

## ಪಾಶುಪತ ದರ್ಶನ

**ಲೇ.: ಎಸ್.ಎಸ್. ಹಿರೇಮಠ**

ಬೆಲೆ: ರೂ. ೩೫/-

ಒಂದು ನಾಡಿನ ಇತಿಹಾಸ ಮತ್ತು ಸಂಸ್ಕೃತಿಗಳ ಶೋಧನೆ ಮತ್ತು ಪ್ರಗತಿಯಲ್ಲಿ 'ದರ್ಶನ'ಗಳ ಪಾತ್ರ ಮಹತ್ವದ್ದು. ಸಿಂಧೂ ನಾಗರೀಕತೆಯಷ್ಟು ಪ್ರಾಚೀನವಾದ ಪುರುಷ ತತ್ವ ಪ್ರಧಾನದ ಈ ಪಾಶುಪತ ಸಿದ್ಧಾಂತವನ್ನು ಲೇಖಕರು ಇಲ್ಲಿ ವಿಶ್ಲೇಷಿಸಿದ್ದಾರೆ. ದಲಿತಾಧ್ಯಯನದ ವಿವಿಧ ಜ್ಞಾನ ಶಿಸ್ತುಗಳ ಚಿಂತನೆ ಮತ್ತು ದಲಿತಪರ ಹೋರಾಟಗಳ ಮುಂಚೂಣಿಯಲ್ಲಿದ್ದು ಸದಾ ಹುಡುಕಾಟದಲ್ಲಿ ತೊಡಗಿಸಿಕೊಂಡಿರುವ ಹಿರೇಮಠರ ಕರ್ನಾಟಕ ದರ್ಶನ ಮಾಲಿಕೆಯ ೨ನೇ ಕೃತಿ ಇದು.

**ಪ್ರಕಾಶಕರು** : ಸಮತಾ ಪ್ರಕಾಶನ, ಹರಪನಹಳ್ಳಿ

## ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು

**ಮೂಲ : ಪ್ರೊ. ಸುನಿಲ್ ಸಹಸ್ರಬುಧೆ,**

ಕನ್ನಡಕ್ಕೆ : **ಕೆ. ಪುಟ್ಟಸ್ವಾಮಿ** ಬೆಲೆ:ರೂ. ೪೦-

ಜಾಗತೀಕರಣ ಮತ್ತು ಖಾಸಗೀಕರಣದ ಕಬಂಧ ಬಾಹುಗಳು ಎಲ್ಲಾ ಕಡೆ ವ್ಯಾಪಿಸುತ್ತಾ ಬಡವರನ್ನು ಕೂಲಿ-ಕಾರ್ಮಿಕರು ಹಾಗೂ ಕುಶಲಕರ್ಮಿಗಳ ಬದುಕನ್ನು ಬರ್ಬಾದು ಮಾಡುತ್ತಿರುವಾಗ ಗಾಂಧಿಯ ಸ್ವದೇಶಿ ಕಲ್ಪನೆಗಳು, ಅವರ ವಿಜ್ಞಾನ-ತತ್ವಜ್ಞಾನ-ನೈತಿಕತೆಗಳನ್ನು ಕುರಿತು ಪ್ರಸಿದ್ಧ ಲೇಖಕ-ಚಿಂತಕ ಪ್ರೊ. ಸಹಸ್ರ ಬುಧೆಯವರ ಕೃತಿಯನ್ನು ಕೆ. ಪುಟ್ಟಸ್ವಾಮಿಯವರು ಅತ್ಯುತ್ತಮವಾಗಿ ಕನಡೀಕರಿಸಿ ಓದುಗರಿಗೆ ನೀಡಿದ್ದಾರೆ.

**ಪ್ರಕಾಶಕರು** : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೫೬೦ ೦೧೮




## ಕುಂಚಿಟಗರ ಸಾಂಸ್ಕೃತಿಕ ಇತಿಹಾಸ

**ಲೇ. : ಎಂ.ಹೆಚ್. ನಾಗರಾಜು**

ಬೆಲೆ : ರೂ. ೨೦೦/-

ಭಾರತೀಯ ಸಮಾಜ ಅನೇಕ ಧರ್ಮ ಜಾತಿ-ಉಪಜಾತಿಗಳ ತವರೂರು. ಹೀಗಾಗಿ ಪ್ರತಿಯೊಂದು ಜಾತಿ-ಜನಾಂಗವೂ ತನ್ನದೇ ಆದ ಸಂಸ್ಕೃತಿ-ಇತಿಹಾಸವನ್ನು ಹೊಂದಿದ್ದು ಅವುಗಳಡಿಯಲ್ಲಿ ತನ್ನ ಜೀವನಕ್ರಮಗಳನ್ನು ಆಚರಣೆಗೆ ತರುತ್ತದೆ. ಏಕ ಸಂಸ್ಕೃತಿಯ ದಬ್ಬಾಳಿಕೆ ಹೆಚ್ಚುತ್ತಿರುವ ಇತ್ತೀಚಿನ ದಿನಗಳಲ್ಲಿ ನಿರ್ಲಕ್ಷಿತ ಜನ ಸಮುದಾಯಗಳು ತಮ್ಮ ನೈಜ ಪರಂಪರೆಯತ್ತ ಮುಖ ಮಾಡಲು ಹಾತೊರೆಯುತ್ತಿದೆ. ಅಂತಹದೊಂದು ಪ್ರಯತ್ನವನ್ನು ಈ ಕೃತಿ ಮಾಡಿದೆ.

**ಪ್ರಕಾಶಕರು** : ಅನಿಕೇತನ ಪ್ರಕಾಶನ, ತುಮಕೂರು







## ಹೀಗೊಂದು ಟಾಪ್ ಪ್ರಯಾಣ

**ಲೇ. : ಈರಪ್ಪ ಎಂ. ಕಂಬಳಿ**

ಬೆಲೆ: ರೂ. ೫೦/-

ಆಧುನಿಕ ಸಾಹಿತ್ಯದ ಅನೇಕ ಬರವಣಿಗೆಗಳು ಕೇವಲ ಮಾಹಿತಿಗಳನ್ನು ಕಲೆಹಾಕುವ ಸರಕಾಗುತ್ತಿರುವ ಸಂದರ್ಭದಲ್ಲಿಯೇ ಅನುಭವದ ಮೊಟ್ಟೆಗಳಿಗೆ ಸೃಜನಶೀಲತೆಯ ಕಾವು ಕೊಡುವ ಬರವಣಿಗೆಯೂ ಜನಪ್ರಿಯವಾಗುತ್ತಿರುವುದರಲ್ಲಿ ಎರಡು ಮಾತಿಲ್ಲ. 'ಹೀಗೊಂದು ಟಾಪ್ ಪ್ರಯಾಣ' ಅಂತಹ ಪ್ರಯೋಗಕ್ಕೆ ಒಳಪಟ್ಟ ಪ್ರಬಂಧಗಳ ಸಂಕಲನ. ಲೇಖಕರು ಹಳ್ಳಿಯ ದಟ್ಟ ಅನುಭವಗಳನ್ನು ಪಡೆದೂ ನಗರದ ಬದುಕನ್ನು ಮಾನವೀಯ ಕಳಕಳಿಯೊಂದಿಗೆ ನೋಡಲು ಪ್ರಯತ್ನಿಸಿದ್ದಾರೆ. ಜತೆಗೆ ವಾಸ್ತವ ಜೀವಪರ ದನಿಯನ್ನೂ ಕೃತಿ ಬಿಂಬಿಸುತ್ತದೆ.

**ಪ್ರಕಾಶಕರು**: ಚಾರ್ವಾಕ ಪ್ರಕಾಶನ, ಡಿ-೧೫೪, ಜೀವನಭೀಮಾನಗರ, ಬೆಂಗಳೂರು -೫೬೦ ೦೭೫

## ಗತಿ-ಚಿತ್ರ

**ಲೇ. : ಪ್ರಮೀಳಾ ಚೊಕ್ಕಾಡಿ**

ಬೆಲೆ: ರೂ. ೪೦/-

ಪ್ರೀತಿ-ಪ್ರೇಮಗಳಾದಿಯಾಗಿ ಮನುಷ್ಯ ಸಂಬಂಧಗಳು ಆಧುನಿಕತೆಯ ಸೋಂಕಿಗೆ ಒಳಗಾಗಿ ವಾಣಿಜ್ಯೀಕರಣಗೊಳ್ಳುತ್ತಿವೆ. ಈ ಸಂಕೀರ್ಣತೆಯನ್ನು ಅರಿತು ಸಹಜ ಸಂವೇದನೆಗಳಿಂದ ದೂರಾಗುತ್ತಿರುವ ಮಾನವನ ಬರಡು ಹೃದಯದಲ್ಲಿ ಪ್ರೀತಿಯ ಹನಿ ಬಿದ್ದು ಹೊಸ ಕನಸುಗಳನ್ನು ಬಿತ್ತಲು ಲೇಖಕರು ಈ ತಮ್ಮ ಚೊಚ್ಚಿಲ ಕವನ ಸಂಕಲನದಲ್ಲಿ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಗಾಢವಾದ ಅಭಿವ್ಯಕ್ತಿ ಈ ಸಂಕಲನದ ಹೆಗ್ಗಳಿಕೆ.

**ಪ್ರಕಾಶಕರು** : ಇಂಚರ ಪ್ರಕಾಶನ, ನಂ. ೧೬೭, ೧೧ನೇ ಮುಖ್ಯರಸ್ತೆ, ೩ನೇ ಫೇಸ್, ಪೀಣ್ಯಾ ಕೈಗಾರಿಕ ಪ್ರದೇಶ, ಬೆಂಗಳೂರು - ೫೬೦ ೦೫೮

## ಭಗತ್‌ಸಿಂಗ್

**ಲೇ. : ಡಾ|| ಜಿ. ರಾಮಕೃಷ್ಣ**

ಬೆಲೆ: ರೂ. ೫೦/-

ತಮ್ಮ ಉಗ್ರದೇಶಪ್ರೇಮದೊಂದಿಗೆ ರಾಷ್ಟ್ರೀಯ ಗುರಿಗಳ ಸಾಕಾರಕ್ಕಾಗಿ ಭಾರತದ ಸ್ವಾತಂತ್ರ್ಯ ಚಳವಳಿಗೆ ಧುಮುಕಿ, ದೇಶದ ಸ್ವಾತಂತ್ರ್ಯದ ಜತೆಗೆ ರಾಜಕೀಯ ಸ್ವಾತಂತ್ರ್ಯದಿಂದ ಮಾತ್ರ ರಾಷ್ಟ್ರೀಯ ವಿಕಾಸ ಸಾಧ್ಯ ಎಂದು ನಂಬಿದವರೆಂದರೆ ಭಗತ್ ಸಿಂಗ್. ಖ್ಯಾತ ಲೇಖಕ, ವಿಚಾರವಾದಿ ಡಾ|| ಜಿ. ರಾಮಕೃಷ್ಣರವರು ಭಗತ್‌ಸಿಂಗ್‌ನ ಕ್ರಾಂತಿಕಾರಿ ಜೀವನ ಸರಣಿಯನ್ನು ಈ ಕೃತಿಯಲ್ಲಿ ಕಣ್ಣಿಗೆ ಕಟ್ಟುವಂತೆ ನಿರೂಪಿಸಿ, ಮತಾಂಧರಿಗೆ ತಕ್ಕ ಉತ್ತರ ಕೊಟ್ಟಿದ್ದಾರೆ.

**ಪ್ರಕಾಶಕರು** : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - ೫೬೦ ೦೦೧



# ಧ್ಯಾನ ಅಗತ್ಯವೇ?, ಅಪಾಯವೇ?

## ಬೋಧಿವೃಕ್ಷ

**ಪರಸ್ಪರ ಪ್ರೀತಿ-ಗೌರವ ಶಾಂತಿ-ಸಮಾನತೆ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧಧಮ್ಮ ಜಗತ್ತಿನಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ , ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ ಪುಸ್ತಕದ ಕನ್ನಡಾನುವಾದವನ್ನು ಓದುಗರಿಗಾಗಿ ನೀಡುತ್ತಿದೆ.**

ಅನುವಾದ:
**ಡಾ|| ಪಿ.ವಿ. ನಾರಾಯಣ್**

**೧) ಧ್ಯಾನ ಎಂದರೇನು?**

ಮನಸ್ಸಿನ ಕಾರ್ಯವಿಧಾನವನ್ನು ಬದಲಾಯಿಸುವ ಪ್ರಜ್ಞಾಪೂರ್ವಕ ಪ್ರಯತ್ನವನ್ನು ಧ್ಯಾನ ಎನ್ನುತ್ತೇವೆ. ಧ್ಯಾನ ಎಂಬುದಕ್ಕೆ ಪಾಳಿಯಲ್ಲಿ 'ಭಾವನಾ' ಎಂಬ ಶಬ್ದವಿದೆ. ಅಂದರೆ, ಬೆಳೆಯುವಂತೆ ಮಾಡುವುದು, ಅಭಿವೃದ್ಧಿಗೊಳಿ ಸುವುದು ಎಂದರ್ಥ.

**೨) ಧ್ಯಾನವು ಮುಖ್ಯವಾದದ್ದೇ?**

ಹೌದು, ಮುಖ್ಯ, ಒಳ್ಳೆಯವರಾಗಿರಲು ನಾವೆಷ್ಟೇ ಆಸೆ ಪಡಲಿ, ನಮ್ಮ ವರ್ತನೆಗಳು ಪ್ರಭಾವಿಸುವ ಆಸೆಗಳನ್ನು ಬದಲಿಸದಿದ್ದರೆ, ಬದಲಾವಣೆ ಕಷ್ಟ ಉದಾಹರಣೆಗೆ, ಒಬ್ಬನಿಗೆ ತಾನು ತನ್ನ ಹೆಂಡತಿಯ ಜೊತೆ ತಾಳ್ಮೆಯಿಂದ ನಡೆದುಕೊಳ್ಳುವುದಿಲ್ಲ ಎಂಬ ಅರಿವಿರುತ್ತದೆ. ಅವನು ತನ್ನಲ್ಲೇ ಪ್ರತಿಜ್ಞೆಯನ್ನೂ ಮಾಡುತ್ತಾನೆ: ' ಈ ಕ್ಷಣದಿಂದ ನಾನು ಅವ ಳೊಡನೆ ಅಷ್ಟು ಅಸಹನೆಯಿಂದ ನಡೆದುಕೊಳ್ಳುವುದಿಲ್ಲ' ಎಂದು. ಆದರೆ ಒಂದೇ ಗಂಟೆಯ ನಂತರ ಹೆಂಡತಿಯನ್ನು ಜೋರಾಗಿ ಬೈಯುತ್ತಿರುತ್ತಾನೆ. ಅದಕ್ಕೆ ಕಾರಣ ಅರಿವಿರದ ರೀತಿಯಲ್ಲಿ ಅವನ ಅಸಹನೆ ಹೊಮ್ಮಿರುತ್ತದೆ. ಹಾಗಾಗಿರು ವುದು ಅವನಿಗೆ ಗೊತ್ತೇ ಇರುವುದಿಲ್ಲ. ಧ್ಯಾನವು ಇಂಥ ಎಚ್ಚರವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸಹಜವಾದ ಮಾನಸಿಕ ಸ್ವರೂಪವನ್ನು ಬದಲಾಯಿಸಲು ಬೇಕಾದ ಸಾಮರ್ಥ್ಯವನ್ನು ನೀಡುತ್ತದೆ.

**೩) ಧ್ಯಾನವು ಅಪಾಯಕಾರಿಯಾಗಬಲ್ಲುದೆಂದು ಕೇಳಿದ್ದೇನೆ. ಇದು ನಿಜವೇ?**

ಬದುಕಲು ನಮಗೆ ಉಪ್ಪು ಬೇಕು. ಆದರೆ ಒಂದು ಕಿಲೋಗ್ರಾಂ ಉಪ್ಪನ್ನು ತಿಂದರೆ ಅದು ನಿಮ್ಮ ಸಾವಿಗೆ ಕಾರಣವಾಗುತ್ತದೆ. ಆಧುನಿಕ ಯುಗದಲ್ಲಿ ಬದುಕಲು ನಿಮಗೆ ಕಾರ್ ಬೇಕು; ಆದರೆ ಸಂಚಾರ ನಿಯಮಗಳನ್ನು ಪಾಲಿಸದೇ ಹೋದರೆ ಅಥವಾ ಮದ್ಯಪಾನ ಮಾಡಿ ಚಾಲನೆ ಮಾಡಿದರೆ, ಕಾರ್ ಒಂದು ಅಪಾಯಕಾರೀ ಯಂತ್ರವಾಗಬಹುದು. ಧ್ಯಾನವೂ ಹಾಗೆಯೇ. ಅದು ನಮ್ಮ ಮಾನಸಿಕ ಆರೋಗ್ಯಕ್ಕೆ ಹಾಗೂ ದೇಹದ ಸುಸ್ಥಿತಿಗೆ ಅವಶ್ಯಕ. ಆದರೆ ಮೂರ್ಖ ಮಾರ್ಗದಿಂದ ಅಭ್ಯಾಸ ಮಾಡಿದರೆ ಅದರಿಂದ ಸಮಸ್ಯೆಗಳು ಉದ್ಭವಿಸಬಹುದು. ಕೆಲವರಿಗೆ ಖಿನ್ನತೆ, ಅಕಾರಣ ಭಯಗಳು ಅಥವಾ ಸಿಜೋಫ್ರೇನಿಯಗಳಂತಹ ಸಮಸ್ಯೆಗಳಿವೆ. ಅವರು ತಮ್ಮೆಲ್ಲ ಸಮಸ್ಯೆಗಳಿಗೆ ಧ್ಯಾನವು ಧಿಡೀರ್ ಪರಿಹಾರವನ್ನು ಒದಗಿಸುತ್ತದೆ ಎಂದು ನಂಬಿದ್ದಾರೆ. ಧ್ಯಾನ ಮಾಡಲು ತೊಡಗಿದಾಗ ಕೆಲವು ಸನ್ನಿವೇಶಗಳಲ್ಲಿ ಸಮಸ್ಯೆ ಉಲ್ಬಣವಾಗುತ್ತದೆ. ನಿಮಗೆ ಅಂಥದ್ದೇನಾದರೂ ಸಮಸ್ಯೆ ಯಿದ್ದರೆ, ಬಲ್ಲವರ ಮಾರ್ಗ ದರ್ಶನವನ್ನು ಪಡೆಯಬೇಕು; ಪರಿಸ್ಥಿತಿ ಉತ್ತಮಗೊಂಡ ಮೇಲೆ ನೀವು ಧ್ಯಾನಕ್ಕೆ ತೊಡಗ ಬಹುದು. ಮತ್ತೆ ಕೆಲವರು ಅವಶ್ಯಕತೆಗಿಂತ ಹೆಚ್ಚು ಮಾಡಲು ಹೋಗುತ್ತಾರೆ. ಧ್ಯಾನದಲ್ಲಿ ತೊಡಗಿ ಕ್ರಮೇಣ ಮೇಲೇರದೆ, ಒಂದಾದ ಮೇಲೊಂದು ಹೆಜ್ಜೆ ಹಾಕದೆ. ವಿಪರೀತ ಶಕ್ತ್ಯವ್ಯಯ ಮಾಡಿ ತುಂಬ ದೀರ್ಘ ಕಾಲ ಧ್ಯಾನಕ್ಕೆ ತೊಡಗುತ್ತಾರೆ. ಇದರಿಂದ ಅವರು ಬಹುಬೇಗ ದಣಿಯುತ್ತಾರೆ. ಆದರೆ, ಧ್ಯಾನದಿಂದ ಉಂಟಾಗುವ ಬಹುತೇಕ ಸಮಸ್ಯೆಗಳು 'ಕಾಂಗರೂ ಧ್ಯಾನ' ಫಲವಾಗಿ ಉದ್ಭವಿಸುವಂತಹವು. ಕೆಲವರು ಒಬ್ಬ ಗುರುವಿನ ಬಳಿ ಹೋಗಿ ಅವರು ತೋರಿಸಿದ ಮಾರ್ಗದಲ್ಲಿ ಸ್ವಲ್ಪ ಕಾಲ ಧ್ಯಾನದಲ್ಲಿ ತೊಡಗಿದ್ದು ಯಾವುದೋ ಪುಸ್ತಕದಲ್ಲಿ ಇನ್ನೇನೋ ಬರೆದಿರುವುದನ್ನು ಓದಿ, ಅದನ್ನು ಅನುಸರಿಸಲು ನಿರ್ಧರಿಸಿ, ಒಂದು ವಾರದ ನಂತರ, ಬಹು ಪ್ರಸಿದ್ಧನಾದ ಧ್ಯಾನ ಗುರು ತಮ್ಮ ನಗರಕ್ಕೆ ಬಂದಾಗ ಅವರು ಹೇಳಿದ ಕೆಲವಂಶಗಳನ್ನು ತಮ್ಮ ಧ್ಯಾನದಲ್ಲಿ ಅಳವಡಿಸಿಕೊಳ್ಳಲು ನಿರ್ಧಾರ ಮಾಡಿ, ಬಹುಬೇಗ ವಿಪರೀತ ಗೊಂದಲಕ್ಕೀಡಾಗುತ್ತಾರೆ. ಒಬ್ಬ ಗುರುವಿನಿಂದ ಮತ್ತೊಬ್ಬ ಗುರುವಿನ ಬಳಿಗೆ ಅಥವಾ ಒಂದು ಮಾರ್ಗದಿಂದ ಮತ್ತೊಂದಕ್ಕೆ ಕಾಂಗರೂವಿನಂತೆ ಜಿಗಿಯುವುದರಿಂದ ತೊಂದರೆಯಾಗುತ್ತದೆ. ಆದರೆ ಯಾವ ಗಂಭೀರ ಮಾನಸಿಕ ಸಮಸ್ಯೆಯೂ ಇಲ್ಲದಿದ್ದು ನೀವು ಧ್ಯಾನಕ್ಕೆ ತೊಡಗಿ ವಿವೇಕದಿಂದ ಅಭ್ಯಾಸ ಮುಂದುವರಿಸಿದರೆ, ಅದು ನಿಮಗೆ ನೀವು ಮಾಡಿಕೊಳ್ಳುವ ಮಹೋಪಕಾರ.

**೪) ಧ್ಯಾನದಲ್ಲಿ ಎಷ್ಟು ಬಗೆಗಳಿವೆ ?**

ಬುದ್ಧ ಧ್ಯಾನದ ಅನೇಕ ಬಗೆಗಳನ್ನು ಬೋಧಿಸಿದ. ಅವುಗಳಲ್ಲಿ ಒಂದೊಂದೂ ಒಂದೊಂದು ಸಮಸ್ಯೆಗೆ ಪರಿಹಾರ ಒದಗಿಸು ವಂಥದು, ಅಥವಾ ಒಂದೊಂದು ಮಾನಸಿಕ ಸ್ಥಿತಿಯನ್ನು ಪ್ರಬಲಗೊಳಿ ಸುವಂಥದು. ಆದರೆ ಧ್ಯಾನದ ಎರಡು ಪ್ರಮುಖ ಹಾಗೂ ಉಪಯುಕ್ತ ವಿಧಗಳೆಂದರೆ, 'ಅನಾಪನ ಸತಿ' (ಉಸಿರಾಟದ ಬಗ್ಗೆ ಅರಿವು) ಮತ್ತು 'ಮೇತ್ತ ಭಾವನಾ' (ಪ್ರೇಮಮಯ ಕರುಣ ಧ್ಯಾನ).

**೫) ಅನಾಪಾನ ಸತಿಯನ್ನು ಅಭ್ಯಾಸ ಮಾಡಬೇಕಾದರೆ ಅದಕ್ಕೆ ಹೇಗೆ ತೊಡಗಬೇಕು?**

ನೀವು ಈ ಮುಂದಿನ ಸುಲಭ ಕ್ರಮಗಳನ್ನು ಅನುಸರಿಸ ಬೇಕು. ಸ್ಥಳ, ಭಂಗಿ, ಅಭ್ಯಾಸ ಮತ್ತು ಸಮಸ್ಯೆ- ಈ ನಾಲ್ಕು. ಮೊದಲನೆಯದಾಗಿ, ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿ ಕೊಳ್ಳಿ. ಹೆಚ್ಚು ಗದ್ದಲವಿಲ್ಲದ ಹಾಗೂ ನಿಮಗೆ ತೊಂದರೆ ಒದಗದ ಒಂದು ಕೊಠಡಿಯಾಗಬಹುದು. ಎರಡನೆಯದಾಗಿ, ಭಂಗಿ, ಆರಾಮದಾಯಕ ರೀತಿಯಲ್ಲಿ ಕುಳಿತು ಕೊಳ್ಳಿರಿ. ಸೂಕ್ತ ಭಂಗಿ ಎಂದರೆ ಕಾಲುಗಳನ್ನು ಚಕ್ಕಳಮಕ್ಕಳ ಹಾಕಿ ಕುಳಿತುಕೊಳ್ಳುವುದು. ಆಸನದ ಕೆಳಗೆ ಒಂದು ಮೆತ್ತನೆಯ ದಿಂಬಿರಬೇಕು. ಬೆನ್ನು ನೇರವಾಗಿರಬೇಕು, ಕೈಗಳನ್ನು ತೊಡೆಗಳ ಮೇಲೆ ಗೂಡಿನಂತೆ ಜೋಡಿಸಿರಬೇಕು, ಕಣ್ಣು ಗಳು ಮುಚ್ಚಿರಬೇಕು. ಅದರ ಬದಲು, ಬೆನ್ನನ್ನು ನೇರವಾಗಿ ರಿಸಿಕೊಂಡು ಒಂದು ಕುರ್ಚಿಯ ಮೇಲೂ ಕುಳಿತುಕೊಳ್ಳ ಬಹುದು. ಮುಂದಿನದು, ನಿಜವಾದ ಅಭ್ಯಾಸಕ್ರಮ. ಕಣ್ಣು ಮುಚ್ಚಿ ಪ್ರಶಾಂತವಾಗಿ ಕುಳಿತ ಮೇಲೆ, ನಿಮ್ಮ ಗಮನವೆಲ್ಲ ಉಸಿರನ್ನು ಒಳಗೆಳೆದುಕೊಂಡು ಹೊರಬಿಡುವ ಕಡೆಗೆ ಕೇಂದ್ರೀಕೃತವಾಗಿರಬೇಕು. ಉಸಿರಾಟವನ್ನು ಎಣಿಸುವ ಮೂಲಕ ಅಥವಾ ಕಿಬ್ಬೊಟ್ಟೆಯ ಏರಿಳಿತಗಳನ್ನು ಗಮನಿಸುವ ಮೂಲಕ ಹೀಗೆ ಮಾಡಬಹುದು. ಇದಾದ ಮೇಲೆ ಕೆಲವು ಸಮಸ್ಯೆಗಳೂ ಕಷ್ಟಗಳೂ ಉಂಟಾಗುತ್ತವೆ. ಮೈ ಮೇಲೆಲ್ಲ ಕಿರಿಕಿರಿಯುಂಟುಮಾಡುವ ನವೆ ಕಾಣಿಸಬಹುದು, ಅಥವಾ ಮಂಡಿಗಳಲ್ಲಿ ಕ್ಲೇಶ ತಲೆದೋರಬಹುದು. ಹೀಗಾದಾಗ, ದೇಹವನ್ನು ಆದಷ್ಟು ಸಡಿಲಗೊಳಿಸಿಕೊಳ್ಳಿ, ಆದರೆ ಚಲಿಸಬೇಡಿ ಮತ್ತು ಗಮನ ಉಸಿರಾಟದ ಕಡೆಗೇ ಇರಲಿ. ನಿಮ್ಮ ಮನಸ್ಸಿನ ಮೇಲೆ ಅನೇಕ ಆಲೋಚನೆಗಳು ದಾಳಿಮಾಡಿ, ಗಮನವನ್ನು ಉಸಿರಾಟದ ಕಡೆಯಿಂದ ವಿಚಲಿತಗೊಳಿಸಬಹುದು. ಈ ಸಮಸ್ಯೆಯನ್ನು ಪರಿಹರಿಸಿ ಕೊಳ್ಳುವ ಏಕೈಕ ಮಾರ್ಗವೆಂದರೆ, ನಿಮ್ಮ ಗಮನವನ್ನು ಮತ್ತೆ ಮತ್ತೆ ಉಸಿರಾಟದ ಕಡೆಗೆ ತಂದುಕೊಳ್ಳುವುದು. ಇದನ್ನು ಮುಂದುವರಿಸಿದರೆ, ಕ್ರಮೇಣ ಆಲೋಚನೆಗಳು ದುರ್ಬಲಗೊಳ್ಳುತ್ತವೆ ಹಾಗೂ ನಿಮ್ಮ ಚೈತನ್ಯಕಾಗ್ರತೆ ಬಲಗೊಳ್ಳುತ್ತದೆ. ಇದರಿಂದ ಆಳವಾದ ಮನಸ್ಸಮಾಧಾನ ಹಾಗೂ ಆಂತರಿಕ ಶಾಂತಿ ಪ್ರಾಪ್ತವಾಗುತ್ತದೆ.

**ನೀವು ಕ್ರಮಬದ್ಧವಾಗಿ ಸಮರ್ಪಕ ಮನಸ್ಸಿನಿಂದ ಮೇತ್ತ ಭಾವನಾವನ್ನು ಅಭ್ಯಾಸ ಮಾಡಿದರೆ, ನಿಮ್ಮೊಳಗೆ ಅಪೇಕ್ಷಣೀಯ ಬದಲಾವಣೆಗಳಾಗುವುದನ್ನು ಗಮನಿಸಬಹುದು. ನೀವು ಇತರರಿಗೆ ಹೆಚ್ಚು ಇಷ್ಟವಾಗುತ್ತೀರಿ, ನಿಮ್ಮ ಬಗ್ಗೆ ಹೆಚ್ಚು ಕ್ಷಮಾಶೀಲರಾಗುತ್ತಿರಿ. ನಿಮ್ಮ ಪ್ರಿಯವ್ಯಕ್ತಿಗಳ ಬಗ್ಗೆ ಮನಸ್ಸು ಹೆಚ್ಚು ಕೋಮಲವಾಗುತ್ತದೆ. ನಿಮ್ಮ ಪ್ರಿಯವ್ಯಕ್ತಿಗಳ ಬಗ್ಗೆ ಮನಸ್ಸು ಹೆಚ್ಚು ಕೋಮಲವಾಗುತ್ತದೆ.**

**೬) ಎಷ್ಟು ಹೊತ್ತು ಧ್ಯಾನ ಮಾಡಬೇಕು ?**

ಮೊದಲ ವಾರ ಪ್ರತಿ ದಿನ ಹದಿನೈದು ನಿಮಿಷಗಳ ಕಾಲ ಧ್ಯಾನ ಮಾಡುವುದು ಒಳ್ಳೆಯದು. ಪ್ರತಿವಾರ ಐದೈದು ನಿಮಿಷಗಳಂತೆ ಅವಧಿಗಳನ್ನು ಹೆಚ್ಚಿಸಿಕೊಳ್ಳಿ. ಗರಿಷ್ಠ ನಲವತ್ತೈದು ನಿಮಿಷಗಳವರೆಗೆ ಧ್ಯಾನ ಮಾಡಿ. ಕೆಲವು ವಾರಗಳವರೆಗೆ ಕ್ರಮಬದ್ಧವಾಗಿ ಹಾಗೂ ನಿಯತವಾಗಿ ಪ್ರತಿ ದಿನ ಧ್ಯಾನ ಮಾಡಿದ ನಂತರ, ನಿಮ್ಮ ಚಿತ್ತೈಕಾಗ್ರತೆ ಮೊನಚುಗೊಂಡಿರುವುದು, ಆಲೋಚನೆಗಳು ಕಡಿಮೆಯಾಗಿರುವುದು ಮತ್ತು ನಿಜವಾದ ಪ್ರಶಾಂತ ಕ್ಷಣಗಳು ಹಾಗೂ ಸ್ಥಿರತೆ ಇವುಗಳು ನಿಮ್ಮ ಅರಿವಿಗೇ ಬರುತ್ತದೆ.

**೭) ಮೇತ್ತ ಭಾವನಾದ ಬಗ್ಗೆ ಏನು ಹೇಳುವಿರಿ? ಅದನ್ನು ಅಭ್ಯಾಸ ಮಾಡುವುದು ಹೇಗೆ?**

ಒಮ್ಮೆ ನಿಮಗೆ ಅನಾಪಾನ ಸತಿಯು ಅಭ್ಯಾಸವಾಗಿ ಅದನ್ನು ಕ್ರಮಬದ್ಧವಾಗಿ ಮಾಡುತ್ತಿದ್ದರೆ ನೀವು ಮೇತ್ತ ಭಾವನಾದ ಅಭ್ಯಾಸಕ್ಕೆ ತೊಡಗಬಹುದು. ಅದನ್ನು ಅನಾಪಾನ ಸತಿ ಯನ್ನು ಮಾಡಿದ ಮೇಲೆ ವಾರಕ್ಕೆ ಎರಡು ಮೂರು ಬಾರಿ ಮಾತ್ರ ಮಾಡಬೇಕು. ಮೊದಲು, ನಿಮ್ಮ ಗಮನವನ್ನು ನಿಮ್ಮೆಡೆಗೆ ತಿರುಗಿಸಿಕೊಂಡು ಹೀಗೆ ಕುಳಿತುಕೊಳ್ಳಿ: ನಾನು ಆರೋಗ್ಯವಂತನೂ ಸುಖಿಯೂ ಆಗುವ ಹಾಗಾಗಲಿ. ನನಗೆ ಶಾಂತಿ ಸಮಾಧಾನಗಳು ದೊರೆಯುವಂತಾಗಲಿ. ನನಗೆ ಹೃದಯದಲ್ಲಿ ಪ್ರೇಮವು ತುಂಬಿರುವಂತಾಗಲಿ. ನಾನು ಆರೋಗ್ಯವಂತನೂ ಸುಖಿಯೂ ಆಗುವ ಹಾಗಾಗಲಿ. ಆಮೇಲೆ ಒಬ್ಬರಾದ ಮೇಲೊಬ್ಬರಂತೆ ನಿಮಗೆ ಪ್ರಿಯ ರಾದವರು, ತಟಸ್ಥ ವ್ಯಕ್ತಿ (ಅಂದರೆ, ನಿಮಗೆ ಯಾರ ಬಗ್ಗೆ ದ್ವೇಷವಾಗಲೀ, ಪ್ರೀತಿಯಾಗಲೀ ಇಲ್ಲವೋ ಅಂತಹವರು) ಹಾಗೂ ಕೊನೆಗೆ ನೀವು ಇಷ್ಟಪಡದ ವ್ಯಕ್ತಿಯನ್ನು ನೆನಪಿಸಿಕೊಳ್ಳಿ. ಹೀಗೆ ನೆನಪಿಸಿಕೊಳ್ಳುವಾಗ ಅವರಿಗೆ ಒಳಿತಾಗಲೆಂದು ಹಾರೈಸುತ್ತಿರಿ.

**೮) ಈ ಬಗೆಯ ಧ್ಯಾನ ಮಾಡುವುದರಿಂದಾಗುವ ಪ್ರಯೋಜನವೇನು?**

ನೀವು ಕ್ರಮಬದ್ಧವಾಗಿ ಸಮರ್ಪಕ ಮನಸ್ಸಿನಿಂದ ಮೇತ್ತ ಭಾವನಾವನ್ನು ಅಭ್ಯಾಸ ಮಾಡಿದರೆ, ನಿಮ್ಮೊಳಗೆ ಅಪೇಕ್ಷಣೀಯ ಬದಲಾವಣೆಗಳಾಗುವುದನ್ನು ಗಮನಿಸಬಹುದು. ನೀವು ಇತರರಿಗೆ ಹೆಚ್ಚು ಇಷ್ಟವಾಗುತ್ತೀರಿ, ನಿಮ್ಮ ಬಗ್ಗೆ ಹೆಚ್ಚು ಕ್ಷಮಾಶೀಲರಾಗುತ್ತಿರಿ. ನಿಮ್ಮ ಪ್ರಿಯವ್ಯಕ್ತಿಗಳ ಬಗ್ಗೆ ಮನಸ್ಸು ಹೆಚ್ಚು ಕೋಮಲವಾಗುತ್ತದೆ. ನೀವು ಅಷ್ಟಾಗಿ ಗಮನಿಸದ ಮತ್ತು ಕಾಳಜಿ ವಹಿಸದ ವ್ಯಕ್ತಿಗಳೊಡನೆ ಹೆಚ್ಚು ಸ್ನೇಹದಿಂದಿರಲು ಪ್ರಯತ್ನಿಸುತ್ತೀರಿ. ಹಾಗೂ, ಕೆಲವು ವ್ಯಕ್ತಿಗಳ ಬಗ್ಗೆ ನೀವು ಇರಿಸಿಕೊಂಡಿದ್ದ ನಿರಸನ ಮತ್ತು ದ್ವೇಷಭಾವನೆಗಳು ಕಡಿಮೆಯಾಗಿ ಕ್ರಮೇಣ ಇಲ್ಲವಾಗುವುದನ್ನು ಕಾಣುತ್ತೀರಿ. ಯಾರಾದರೂ ಕಾಯಿಲೆ ವ್ಯಕ್ತಿಯೋ ಅಸುಖಿಯೋ ಅಥವಾ ಹೊಂದಾಣಿಕೆಯಿಲ್ಲದವರೋ ನಿಮಗೆ ತಿಳಿದಿದ್ದರೆ, ಕೆಲವೊಮ್ಮೆ ಅಂತಹವರನ್ನು ನಿಮ್ಮ ಧ್ಯಾನಸಮಯದಲ್ಲಿ ನೆನಪಿಸಿಕೊಳ್ಳಿ. ಇದರಿಂದ ಅವರ ಪರಿಸ್ಥಿತಿ ಉತ್ತಮಗೊಂಡಿರುವುದು ಕಾಣಬಹುದು.

**೯) ಇದು ಹೇಗೆ ಸಾಧ್ಯ ?**

ಮನಸ್ಸನ್ನು ಸಮಂಜಸವಾಗಿ ಬೆಳೆಸಿಕೊಂಡರೆ ಪ್ರಬಲವಾದ ಸಾಧನವಾಗುತ್ತದೆ. ನಮ್ಮ ಮನಃಶಕ್ತಿಯನ್ನು ಕೇಂದ್ರೀಕರಿಸಿಕೊಂಡು ಇತರರ ಕಡೆ ಹರಿಸಲು ಸಾಧ್ಯವಾದರೆ, ಅದು ಅವರ ಮೇಲೂ ಪ್ರಭಾವವುಂಟುಮಾಡಬಲ್ಲದು. ನಿಮಗೂ ಇಂತಹದೊಂದು ಅನುಭವವಾಗಿರಬೇಕು; ಜನರಿಂದ ತುಂಬಿರುವ ಕೊಠಡಿಯೊಂದರಲ್ಲಿ ನೀವಿದ್ದು ಯಾರೋ ನಿಮ್ಮನ್ನು ಗಮನಿಸುತ್ತಿರುವಂತೆ ಅನ್ನಿಸುತ್ತದೆ. ತಿರುಗಿ ನೋಡಿದರೆ, ಯಾರೋ ನಿಮ್ಮನ್ನೇ ನೋಡುತ್ತಿರುವುದು ಕಾಣುತ್ತದೆ. ಆಗಿದ್ದುದೇನೆಂದರೆ, ನೀವು ಆ ಇನ್ನೊಬ್ಬ ವ್ಯಕ್ತಿಯ ಮನಃಶಕ್ತಿಯನ್ನು ಕಸಿದುಕೊಂಡಿದ್ದೀರಿ. ಮೇತ್ತ ಭಾವನಾ ಧ್ಯಾನದ ಸ್ವರೂಪ ಇಂತಹುದು. ನಾವು ಇತರರ ಕಡೆಗೆ ನಮ್ಮ ಒಳ್ಳೆಯ ಮನಃಶಕ್ತಿಯನ್ನು ಹರಿಸುವುದರಿಂದ ಅವರನ್ನು ಮಾರ್ಪಡಿಸಲು ಸಹಾಯಕವಾಗುತ್ತದೆ.

**೧೦) ಧ್ಯಾನವನ್ನು ಕಲಿಯಲು ಗುರುವಿನ ಅವಶ್ಯಕತೆಯಿದೆಯೇ?**

ಗುರು ಅತ್ಯವಶ್ಯಕವೇನಲ್ಲ. ಆದರೆ ಧ್ಯಾನದ ಬಗ್ಗೆ ತಿಳಿದ ವ್ಯಕ್ತಿಯೊಬ್ಬರ ಖುದ್ದಾದ ಮಾರ್ಗದರ್ಶನದಿಂದ ಖಂಡಿತ ಒಳ್ಳೆಯದಾಗುತ್ತದೆ. ದುರದೃಷ್ಟಕರವೆಂದರೆ, ತಮಗೇ ಏನೂ ತಿಳಿಯದಿದ್ದರೂ, ಕೆಲವು ಸನ್ಯಾಸಿಗಳು ಸಾಮಾನ್ಯರೂ ತಮ್ಮನ್ನು ಧ್ಯಾನ ಗುರುಗಳೆಂದು ಹೇಳಿಕೊಳ್ಳುತ್ತಿರುವುದು. ಒಳ್ಳೆಯ ಹೆಸರಿರುವ, ಸಮತೋಲ ವ್ಯಕ್ತಿತ್ವದ ಹಾಗೂ ಬುದ್ಧನ ಉಪದೇಶಗಳನ್ನು ಚೆನ್ನಾಗಿ ಅನುಸರಿಸುವ ಒಬ್ಬರನ್ನು ಗುರುವಾಗಿ ಆರಿಸಿಕೊಳ್ಳಿ.

**೧೧) ಇಂದು ಮನೋವೈದ್ಯರು ಹಾಗೂ ಮನಃಶಾಸ್ತ್ರಜ್ಞರು ಹೆಚ್ಚು ಹೆಚ್ಚಾಗಿ ಧ್ಯಾನವನ್ನು ಬಳಸುತ್ತಿದ್ದಾರೆಂದು ಕೇಳಿದ್ದೇನೆ. ಇದು ನಿಜವೇ?**

ಹೌದು, ನಿಜ. ಧ್ಯಾನಕ್ಕೆ ಮನಸ್ಸಿನ ಮೇಲೆ ಹೆಚ್ಚಿನ ಚಿಕಿತ್ಸಾ ಪರಿಣಾಮವಿದೆಯೆಂಬುದನ್ನು ಈಗ ಅಂಗೀಕರಿಸಲಾಗಿದೆ. ಮಾನಸಿಕ ಬಿಗಿತವನ್ನು ಕಡಿಮೆ ಮಾಡಲು, ಭಯಗಳನ್ನು ನಿವಾರಿಸಲು ಹಾಗೂ ಚಿತ್ತಜಾಗೃತಿಯನ್ನು ಮೂಡಿಸಲು ಅನೇಕ ವೃತ್ತಿಪರ ಮಾನಸಿಕ ಆರೋಗ್ಯ ಕಾರ್ಯಕರ್ತರು ಧ್ಯಾನದ ನೆರವು ಪಡೆಯುತ್ತಾರೆ. ಮಾನವ ಮನಸ್ಸುಗಳ ಬಗೆಗಿನ ಬುದ್ಧನ ಒಳನೋಟಗಳು ಈಗ ಹೇಗೋ ಹಾಗೆಯೇ ಪ್ರಾಚೀನ ಕಾಲದಲ್ಲೂ ಜನರಿಗೆ ಉಪಯುಕ್ತವಾಗಿವೆ.

(ಮುಂದುವರಿಯುವುದು)

ಪುಸ್ತಕ ಬೇಕಾದಲ್ಲಿ

**ಬುದ್ಧ ಜೋತಿ ಪ್ರಕಾಶನ**
ನೆರೆಗ್ಯಾತನಹಳ್ಳಿ, ಟಿ.ನರಸೀಪುರ ತಾಲೂಕು
ಮೈಸೂರು ಜಿಲ್ಲೆ
ಇವರಿಗೆ ಬರೆದು ತರಿಸಿಕೊಳ್ಳಬಹುದು
ಬೆಲೆ ರೂ. 30/-

## ಕತ್ತಲ ಗರ್ಭದೊಳಗಿನ...



**ನ**ವ ವಸಂತದಲಿ
ದಿನವೂ ಹೊಸತಾಗಿ ಮೂಡಿದ ನಿನ್ನ
ಪ್ರಖರ ಪ್ರೀತಿಯ ಕಿರಣಗಳು
ಅಪ್ಪಿಕೊಳ್ಳುತ್ತಿಲ್ಲವೇಕೆ?
ಅದು ಆಲಂಗಿಸಿದ್ದು ನಿನ್ನ ಹಾಡಿ ಹೊಗಳಿದವರಿಗೆ
ಕೂಡಿ ಮಲಗಿದವರಿಗೆ.
ಆ ಕಾಂತಿಗೆ ಮರುಳಾಗಿ ಹೂವು ಅರಳಿತ್ತು
ಹಸಿರು ಎಲ್ಲೆಡೆಯೂ ಚಾಚಿತ್ತು
ಏಕೆ ನೆನಪಾಗುತ್ತಿಲ್ಲವೆ
ಹೇಳು ಒಲವಲ್ಲಿ ಕೊರತೆಯಿದೆಯೆ?
ಮೋಹಕಗೊಳಿಸಿ ಚುಂಬಿಸುವ ಭುವಿಯನ್ನು
ನಮ್ಮೊಳಗೂ ಬೆಳಗಿಸಿ ಬೆಳಕಾಗಲು ಏಕೆ ಹಿಂಜರಿವೆ
ಏ; ಸೂರ್ಯ ನಿನಗೆ
ಕೇಳು, ಕತ್ತಲ ಗರ್ಭದೊಳಗಣ ಕೂಸ ದನಿಯ
ಅದನು....ಸ್ವಲ್ಪವೇ ಸ್ವಲ್ಪ ಬೆಳಗು ಸಾಕು.

○ ಅಪೂರ್ವ ಡಿಸಿಲ್ವ

'SAMVADA' Kannada Monthly, FEBRUARY- 2004 RNI-KAR KAN/2002/9246 CPMG/KA/BGW-706/2003-05

With Best Compliments From :

**Woollen House**

AUTHORISED WHOLESALE DISTRIBUTORS FOR

**DIGJAM**

**PARAS GANDHI**
Mobile : 36815797
**L.P. GANDHI**
Mobile : 31825225

**# 36, D.S. Lane, Chickpet**
**Bangalore - 560 053**
**Tel : Shop 225 3523**
**Fax : 080- 225 2839**
**E-mail : wollanhouse@mantraonline.com**